ಭಾನುವಾರ, ಫೆಬ್ರುವರಿ 28, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 59 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ದೇವಸ್ಥಾನಗಳಿಗೆ ಪ್ರವಾಸಿಗರ ದಂಡು • ಮಾಯವಾಗದ ಕೋವಿಡ್ ಎರಡನೇ ಅಲೆಯ ಆತಂಕ

ಚೇತರಿಕೆಯಲ್ಲಿ ಪ್ರವಾಸೋದ್ಯಮ

ಪ್ರಜಾವಾಣಿ ವಾರ್ತೆ

ಮೈಸೂರು: ಕೋವಿಡ್ ಲಾಕ್‌ಡೌನ್ ಹೇರಿದ ಮೇಲೆ, ವರ್ಷದಿಂದ ನಷ್ಟಕ್ಕೆ ಒಳಗಾಗಿದ್ದ ರಾಜ್ಯದ ಬಹುತೇಕ ಧಾರ್ಮಿಕ ಕ್ಷೇತ್ರಗಳು, ಪ್ರವಾಸಿ ತಾಣಗಳು ಈಗ ಕಳೆಗಟ್ಟುತ್ತಿದ್ದು, ಚೇತರಿಕೆಯ ಹಾದಿಗೆ ಮರಳುತ್ತಿವೆ. ಪ್ರಮುಖ ಕ್ಷೇತ್ರಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯಲ್ಲಿ ಗಮನಾರ್ಹವಾಗಿ ಏರಿಕೆಯಾಗುತ್ತಿದೆ.

ಆದರೆ, ಹೊಟ್ಟೆಪಾಡಿಗೆ ಪ್ರವಾಸಿಗರನ್ನೇ ನಂಬಿಕೊಂಡಿರುವ ಟ್ಯಾಕ್ಸಿ, ಬೀದಿ ಬದಿ ಅಂಗಡಿಗಳು, ವಸತಿಗೃಹ, ಹೋಟೆಲ್ ಉದ್ಯಮಗಳ ವಹಿವಾಟು ಅಷ್ಟಾಗಿ ಪ್ರಗತಿ ಕಂಡಿಲ್ಲ. ಒಂದು ಕಡೆ ಪ್ರವಾಸಿಗರು ಹಿಂದಿನಂತೆ ವೆಚ್ಚ ಮಾಡಲು ಹಿಂಜರಿಯುತ್ತಿದ್ದಾರೆ. ಇನ್ನೊಂದೆಡೆ, ಕೆಲವು ದಿನಗಳಿಂದ ಕೇಳಿಬರುತ್ತಿರುವ ಎರಡನೇ ಅಲೆಯ ಆತಂಕ ಪ್ರವಾಸೋದ್ಯಮ ಕ್ಷೇತ್ರವನ್ನು ಕಾಡುತ್ತಿದೆ.

ರಾಜ್ಯದಲ್ಲಿ ದೇಗುಲಗಳು ತೆರೆದು ಭಕ್ತರು ಬರುತ್ತಿದ್ದರೂ, ಹಿಂದೆ ಇದ್ದಷ್ಟು ವಹಿವಾಟುಗಳು ಕಾಣುತ್ತಿಲ್ಲ. ಪ್ರವಾಸಿಗರನ್ನು ನಂಬಿಕೊಂಡಿದ್ದ ಸಾವಿರಾರು ಮಂದಿ ವ್ಯಾಪಾರಿಗಳು ನಷ್ಟ ಅನುಭವಿಸಿ, ಜೀವನ ನಿರ್ವಹಣೆಗೆ ಬೇರೆ ಕೆಲಸಗಳ ಮೊರೆ ಹೋಗಿದ್ದಾರೆ. ರಾಜ್ಯದಲ್ಲಿ ಶೇಕಡ 30ರಷ್ಟು ಹೋಟೆಲ್‌ಗಳು ಬಾಗಿಲು ಮುಚ್ಚಿವೆ.

ಲಕ್ಷಾಂತರ ಜನರು ಸೇರುವ ಜಾತ್ರೆಗಳು, ಎರಡನೇ ಅಲೆಯ ಭಯದಿಂದ ರದ್ದುಗೊಳ್ಳುತ್ತಿವೆ. ಕೆಲವು ಜಾತ್ರೆಗಳಿಗೆ ಹೊರ ಜಿಲ್ಲೆಯವರಿಗೆ ನಿರ್ಬಂಧ ಹೇರಲಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಜಾತ್ರೆಗಳನ್ನೇ ನಂಬಿಕೊಂಡು ಬದುಕು ಸಾಗಿಸುವ ಕಲಾವಿದರ ಜೀವನ ದುರ್ಭರವಾಗಿದೆ.

'ಚಾಮುಂಡಿ ಬೆಟ್ಟದಲ್ಲಿ 15 ವರ್ಷಗಳಿಂದ ಹಣ್ಣು– ಕಾಯಿ, ಹೂವು ಮಾರಾಟ ಮಾಡುತ್ತಿದ್ದೆ. ಕೋವಿಡ್‌ಗೂ ಮುನ್ನ ದಿನಕ್ಕೆ ಕನಿಷ್ಠ ₹ 250 ಲಾಭವಾಗುತ್ತಿತ್ತು. ಎರಡು ತಿಂಗಳಿನಿಂದ ಕೇವಲ₹ 150 ಸಿಗುತ್ತಿದೆ. ಕೆಲವೊಮ್ಮೆ ಮಾರಾಟವಾಗದೆ ವಾಪಸ್ ತೆಗೆದುಕೊಂಡು ಹೋಗಿದ್ದಿದೆ' ಎಂದು ಸಮಸ್ಯೆ ಬಿಡಿಸಿಡುತ್ತಾರೆ ಬನ್ನೂರಿನ ಸಾವಿತ್ರಮ್ಮ.

ಕೇರಳ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ಗಡಿಯಲ್ಲಿ ನಿರ್ಬಂಧಗಳನ್ನು ಹೇರಲಾಗಿದೆ.

10ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 10


ಒಳನೋಟ
ಸಹಜತೆಯತ್ತ ಬದುಕು
ಪ್ರತಿಕ್ರಿಯಿಸಿ: 9606038256



ಧಾರವಾಡದ ಜಿಲ್ಲೆಯಲ್ಲಿರುವ 30 ಸಾವಿರಕ್ಕೂ ಅಧಿಕ ಆಟೊ ಚಾಲಕರ ಪೈಕಿ, ಸರ್ಕಾರದ ನೆರವು ಸಿಕ್ಕಿರುವುದು 3,500 ಮಂದಿಗೆ ಮಾತ್ರ
ಪುಂಡಲಿಕ ಬಡಿಗೇರ, ಪ್ರಧಾನ ಕಾರ್ಯದರ್ಶಿ, ಹುಬ್ಬಳ್ಳಿ ಆಟೊ ಮಾಲೀಕರ ಹಾಗೂ ಚಾಲಕರ ಸಂಘ



ಮೈಸೂರಿನ ಚಾಮುಂಡೇಶ್ವರಿ ದೇಗುಲದ ಮುಂದೆ ಸೇರಿರುವ ಭಕ್ತರು –ಚಿತ್ರ: ಬಿ.ಆರ್‌.ಸವಿತಾ



ವಿದೇಶಿಯರು ಕಾಣುತ್ತಿಲ್ಲ!

ವಿದೇಶಿ ಪ್ರವಾಸಿಗರು ಇನ್ನೂ ಕಾಣುತ್ತಿಲ್ಲ. ಮೈಸೂರಿಗೆ ಯೋಗಾಸನ ತರಗತಿ, ಶಿಬಿರಗಳಿಗೆಂದು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರು. ಅರಮನೆಗೆ ಭೇಟಿ ನೀಡುತ್ತಿದ್ದರು. ಕೋವಿಡ್ ಬಳಿಕ ಮೈಸೂರು ನಗರದಲ್ಲಿ ಅವರ ಓಡಾಟ ಇಲ್ಲವಾಗಿದೆ.

2020ರ ಜೂನ್‌ನಿಂದ ಇದುವರೆಗೆ ಅರಮನೆಗೆ ಕೇವಲ 366 ಮಂದಿ ವಿದೇಶಿಯರು ಭೇಟಿ ನೀಡಿದ್ದಾರೆ. 2019ರ ಏಪ್ರಿಲ್‌ನಿಂದ 2020ರ ಏಪ್ರಿಲ್‌ವರೆಗೆ 51 ಸಾವಿರ ಮಂದಿ ಬಂದಿದ್ದರು. ಇನ್ನು ಬೇಲೂರು, ಹಳೇಬೀಡು, ಹಂಪಿಯಲ್ಲೂ ಹೆಚ್ಚಾಗಿ ಕಾಣಿಸುತ್ತಿಲ್ಲ.

ನಿಯಮ ಪಾಲಿಸಲು ಸೂಚನೆ

ಕೋವಿಡ್: ಮುಖ್ಯ ಕಾರ್ಯದರ್ಶಿಗಳ ಜೊತೆ ಸಂವಾದ

ನವದೆಹಲಿ (ಪಿಟಿಐ): ನಿಯಮಾವಳಿ ಪಾಲಿಸುವುದು, ನಿಯಮ ಉಲ್ಲಂಘನೆ ವಿರುದ್ಧ ಕ್ರಮ ಜರುಗಿಸುವುದು ಹಾಗೂ ವೇಗವಾಗಿ ಕೋವಿಡ್ ಹರಡುವ ಸ್ಥಳಗಳಲ್ಲಿ ಕಣ್ಗಾವಲು ಹೆಚ್ಚಿಸುವಂತೆ ಕೇಂದ್ರ ಸರ್ಕಾರ ಶನಿವಾರ ರಾಜ್ಯಗಳಿಗೆ ಸೂಚಿಸಿದೆ.

ಕೆಲವು ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದನ್ನು ಮನಗಂಡ ಕೇಂದ್ರವು ಅಂಥ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಜೊತೆ ಸಂವಾದ ನಡೆಸಿದೆ. ಕೇಂದ್ರದ ಸಂಪುಟ ಕಾರ್ಯದರ್ಶಿ ರಾಜೀವ್ ಗೌಬಾ ಅವರು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳ ಜೊತೆ ಉನ್ನತ ಮಟ್ಟದ ಸಭೆ ನಡೆಸಿದರು. ಮಹಾರಾಷ್ಟ್ರ, ಪಂಜಾಬ್, ಗುಜರಾತ್, ಮಧ್ಯಪ್ರದೇಶ, ಛತ್ತೀಸಗಡ, ಪಶ್ಚಿಮ ಬಂಗಾಳ, ತೆಲಂಗಾಣ ಹಾಗೂ ಜಮ್ಮು–ಕಾಶ್ಮೀರದ ಮುಖ್ಯಕಾರ್ಯದರ್ಶಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

'ಹೆಚ್ಚಿನ ಪ್ರಕರಣ ವರದಿಯಾಗುವ ಜಿಲ್ಲೆಗಳಲ್ಲಿ ಆದ್ಯತೆಯ ಮೇರೆಗೆ ಲಸಿಕಾ ಕಾರ್ಯಕ್ರಮ ಕೈಗೊಳ್ಳಬೇಕು. ಹಾಟ್‌ಸ್ಪಾಟ್ ಗುರುತಿಸಬೇಕು ಮತ್ತು ರೂಪಾಂತರಿತ ವೈರಾಣು ಪ್ರಕರಣಗಳ ಮೇಲೆ ನಿಗಾ ಇರಿಸಬೇಕು' ಎಂದು ಪರಿಶೀಲನಾ ಸಭೆಯಲ್ಲಿ ರಾಜ್ಯಗಳಿಗೆ ಸೂಚಿಸಲಾಯಿತು.

ಜಿಲ್ಲೆಗಳಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಹೆಚ್ಚು ಪ್ರಕರಣಗಳು ದೃಢಪಡುತ್ತಿರುವ ಜಿಲ್ಲೆಗಳಲ್ಲಿ ಕಣ್ಗಾವಲು ವ್ಯವಸ್ಥೆ ಹೆಚ್ಚಿಸಿ, ಕಟ್ಟುನಿಟ್ಟಿನ ನಿಯಂತ್ರಣ ಹೇರಬೇಕು ಎಂದು ಕೇಂದ್ರ ಸೂಚಿಸಿತು.

ಮಹಾರಾಷ್ಟ್ರದಲ್ಲಿ ಶನಿವಾರ 8,333 ಹೊಸ ಪ್ರಕರಣ ವರದಿಯಾಗಿವೆ. ಕೇರಳದಲ್ಲಿ 3,671, ಪಂಜಾಬ್‌ನಲ್ಲಿ 622 ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

ಪರೀಕ್ಷೆ ಮುಂದುವರಿಕೆ: ವಿಮಾನ ಮತ್ತು ರೈಲ್ವೆ ನಿಲ್ದಾಣಗಳಲ್ಲಿ ಕೋವಿಡ್ ಪರೀಕ್ಷೆಗಳನ್ನು ನಿಲ್ಲಿಸುವ ಆದೇಶವನ್ನು ವಾಪಸ್ ಪಡೆದಿರುವ ಅಸ್ಸಾಂ ಸರ್ಕಾರ, ತಪಾಸಣೆ ಮುಂದುವರಿಸಲು ನಿರ್ಧರಿಸಿದೆ. ಐದು ರಾಜ್ಯಗಳಿಂದ ವಿಮಾನ ಅಥವಾ ರೈಲಿನ ಮೂಲಕ ಅಸ್ಸಾಂಗೆ ಬರುವ ಜನರಿಗೆ ವಾರಪೂರ್ತಿ ಏಕಾಂತವಾಸ (ಐಸೊಲೇಷನ್) ಕಡ್ಡಾಯ ಎಂದು ಒಡಿಶಾ ಸರ್ಕಾರ ತಿಳಿಸಿದೆ. ಮಹಾರಾಷ್ಟ್ರ, ಕೇರಳ, ಪಂಜಾಬ್, ಮಧ್ಯಪ್ರದೇಶ ಮತ್ತು ಛತ್ತೀಸಗಡ ರಾಜ್ಯಗಳಿಂದ ಬರುವರಿಗೆ ಇದು ಅನ್ವಯವಾಗಲಿದೆ.

ರಾತ್ರಿ ಕರ್ಫ್ಯೂ ವಿಸ್ತರಣೆ: ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿರುವ ಕಾರಣ ಅಹಮದಾಬಾದ್ ಸೇರಿದಂತೆ ಗುಜರಾತ್‌ನ ನಾಲ್ಕು ಪ್ರಮುಖ ನಗರಗಳಲ್ಲಿ ರಾತ್ರಿ ಕರ್ಫ್ಯೂ ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ. ಅಹಮದಾಬಾದ್, ಸೂರತ್, ವಡೋದರ ಮತ್ತು ರಾಜ್‌ಕೋಟ್‌ನಲ್ಲಿ ಇನ್ನೂ 15 ದಿನಗಳ ಕಾಲ ರಾತ್ರಿ ಕರ್ಫ್ಯೂ ಮುಂದುವರಿಯಲಿದೆ.

ಮಹಾರಾಷ್ಟ್ರದ ಅಮರಾವತಿ ಹಾಗೂ ಅಚಲಾಪುರ ಪಟ್ಟಣಗಳಲ್ಲಿ ಲಾಕ್‌ಡೌನ್ ಅನ್ನು ಮಾರ್ಚ್ 7ರ ವರೆಗೆ ವಿಸ್ತರಿಸಲಾಗಿದೆ.

ಮೂರು ಛತ್ರಗಳ ಮೇಲೆ ಎಫ್‌ಐಆರ್

ಮುಂಬೈ: ಮದುವೆ ಕಾರ್ಯಕ್ರಮದಲ್ಲಿ ನಿಗದಿಗಿಂತ ಹೆಚ್ಚು ಜನರು ಸೇರಲು ಅವಕಾಶ ಮಾಡಿಕೊಟ್ಟ ಮೂರು ಕಲ್ಯಾಣ ಮಂಟಪಗಳ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಸಿಎಸ್‌ಟಿ ರಸ್ತೆಯ ಒಂದು ಛತ್ರದಲ್ಲಿ 200 ಜನರು ಸೇರಿದ್ದರು ಎಂದು ನಗರಾಡಳಿತದ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಸೇರಿದ್ದ ಜನರು ಮಾಸ್ಕ್ ಧರಿಸಿರಲಿಲ್ಲ. ಅಂತರ ಕಾಯ್ದುಕೊಂಡಿರಲಿಲ್ಲ ಎಂದು ತಿಳಿಸಿದ್ದಾರೆ. ವಕೋಲಾ ಪೊಲೀಸ್ ಠಾಣೆಯಲ್ಲಿ ಕೋವಿಡ್ ನಿಯಮ ಉಲ್ಲಂಘನೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

48 ಗಂಟೆಗಳಲ್ಲಿ 1,094 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸತತ ಎರಡನೇ ದಿನ ಕೂಡ 500ಕ್ಕೂ ಹೆಚ್ಚು (523) ಕೋವಿಡ್ ಪ್ರಕರಣಗಳು ದೃಢಪಟ್ಟವೆ. ಇದರಿಂದಾಗಿ 48 ಗಂಟೆಗಳ ಅವಧಿಯಲ್ಲಿ 1,094 ಮಂದಿ ಕೋವಿಡ್ ಪೀಡಿತರಾಗಿದ್ದಾರೆ.

ಕಳೆದ ಅಕ್ಟೋಬರ್ ಬಳಿಕ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿತ್ತು. ಕೋವಿಡ್ ಎರಡನೇ ಅಲೆಯ ಬಗ್ಗೆ ಎಚ್ಚರಿಸಿದ್ದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ, ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಎಂದು ಸೂಚಿಸಿತ್ತು. ಒಂದು ದಿನದ ಅವಧಿಯಲ್ಲಿ 73 ಸಾವಿರ ಪರೀಕ್ಷೆಗಳನ್ನು ನಡೆಸಲಾಗಿದ್ದು, ಹೆಚ್ಚಿನ ಪ್ರಕರಣಗಳು ಪತ್ತೆಯಾಗಿವೆ. ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.50 ಲಕ್ಷ ದಾಟಿದೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಐವರು ಹಾಗೂ ಧಾರವಾಡದಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ 12,326 ಮೃತಪಟ್ಟಿದ್ದಾರೆ. ಸೋಂಕಿತರಲ್ಲಿ 5,638 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 121 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಬೆಂಗಳೂರಿನಲ್ಲಿ 329 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.05 ಲಕ್ಷ ದಾಟಿದೆ. ಮೈಸೂರಿನಲ್ಲಿ ಮತ್ತೆ 31 ಪ್ರಕರಣಗಳು ವರದಿಯಾಗಿವೆ. ಅಲ್ಲಿ ಸೋಂಕಿತರ ಸಂಖ್ಯೆ 54,086ಕ್ಕೆ ಏರಿಕೆಯಾಗಿದೆ. ದಕ್ಷಿಣ ಕನ್ನಡದಲ್ಲಿ 21, ಉಡುಪಿಯಲ್ಲಿ 18, ಕಲಬುರ್ಗಿಯಲ್ಲಿ 17, ಬೆಳಗಾವಿಯಲ್ಲಿ 13, ಚಿಕ್ಕಬಳ್ಳಾಪುರದಲ್ಲಿ 11, ಬಳ್ಳಾರಿಯಲ್ಲಿ 10 ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ.

ಇನ್ನಷ್ಟು ಸುದ್ದಿಗಳು 7

ಹೆಚ್ಚುತ್ತಿದೆ ಕಂಟೈನ್‌ಮೆಂಟ್ ವಲಯ



ಬೆಂಗಳೂರಿನಲ್ಲಿ ಕೋವಿಡ್ ಪ್ರಕರಣ ಮತ್ತಷ್ಟು ಹೆಚ್ಚಾಗಿದ್ದು, ಯಲಹಂಕದಲ್ಲಿ ಐದು ದಿನಗಳಲ್ಲಿ 33 ಜನರಿಗೆ ಕೋವಿಡ್ ದೃಢಪಟ್ಟಿದೆ. ಕಾಲೇಜು, ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡ ಮತ್ತು ಅಪಾರ್ಟ್‌ಮೆಂಟ್ ಸಮುಚ್ಚಯಗಳು ಸೇರಿ ಮೂರು ಪ್ರದೇಶಗಳನ್ನು ಕಂಟೈನ್‌ಮೆಂಟ್ ವಲಯ ಎಂದು ಬಿಬಿಎಂಪಿ ಘೋಷಿಸಿದೆ.

ಯಲಹಂಕದ ಸಂಭ್ರಮ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕಾಲೇಜಿನಲ್ಲಿ ಇದೇ 25ರಂದು 10 ಮತ್ತು 26ರಂದು ಒಬ್ಬ ವಿದ್ಯಾರ್ಥಿಗೆ ಕೋವಿಡ್ ದೃಢಪಟ್ಟಿದೆ. ಅದೇ ಸಂಸ್ಥೆಯ ಪಿ.ಜಿ ಕಟ್ಟಡದಲ್ಲಿ 26ರಂದು ಒಂದೇ ದಿನ 8 ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದೆ. ಕೇರಳಕ್ಕೆ ಹೋಗಿದ್ದ ಇಬ್ಬರು ವಿದ್ಯಾರ್ಥಿಗಳು ವಾಪಸ್ ಬಂದಿದ್ದು, ಅವರಿಂದ ಉಳಿದವರಿಗೆ ಸೋಂಕು ಹರಡಿದೆ. ಪಿ.ಜಿ ಇರುವ ಪ್ರದೇಶವನ್ನು ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಲಾಗಿದೆ. ಯಲಹಂಕ ನ್ಯೂ ಟೌನ್‌ನ ಅಗ್ರಗಾಮಿ ಕಾಲೇಜು ಹಾಗೂ ಪೂರ್ವಾ ವೆನೆಜಿಯಾ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಕೆಲವರಿಗೆ ಕೋವಿಡ್ ಇರುವುದು ದೃಢಪಟ್ಟಿದೆ. ಈ ಎರಡು ಪ್ರದೇಶವನ್ನೂ ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಲಾಗಿದೆ.

ಬರೆಯದ ಕಥೆಗಳು
ಸಿಡಿಲು ಮರದ ಕೆಳಗೆ ಹೊಡೆಯುತ್ತೆ!
ನೋಡಿ...!
ಪತ್ರಕರ್ತರು ಕಂಡು ಕೇಳಿದ, ಆದರೆ ಬರೆಯದ ಕೌತುಕಗಳು ನಿಮ್ಮ Prajavani.net ನಲ್ಲಿ ವಿಶೇಷ ಸರಣಿ
ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ವೈದ್ಯ ಮಿತ್ರ ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast



ಮಹಾರಥೋತ್ಸವ ಉತ್ತರ ಕರ್ನಾಟಕದ ಪ್ರಮುಖ ಜಾತ್ರೆಗಳಲ್ಲಿ ಒಂದಾದ ಜೋಯಿಡಾ ತಾಲ್ಲೂಕಿನ ಉಳವಿ ಚೆನ್ನಬಸವೇಶ್ವರ ಮಹಾರಥೋತ್ಸವಕ್ಕೆ ಶನಿವಾರ ಸಾವಿರಾರು ಭಕ್ತರು ಸಾಕ್ಷಿಯಾದರು

ಪೆಟ್ರೋಲ್, ಡೀಸೆಲ್ ದರ ಏರಿಕೆ

ನವದೆಹಲಿ/ಬೆಂಗಳೂರು (ಪಿಟಿಐ): ಮೂರು ದಿನಗಳ ವಿರಾಮದ ಬಳಿಕ ಮತ್ತೆ ಶನಿವಾರ ದೇಶದಾದ್ಯಂತ ಪೆಟ್ರೋಲ್ ಡೀಸೆಲ್ ದರ ಏರಿಕೆ ಆಗಿದೆ.

ಬೆಂಗಳೂರಿನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ದರ 24 ಪೈಸೆ ಹೆಚ್ಚಾಗಿ ₹ 94.22ಕ್ಕೆ ಏರಿಕೆಯಾಗಿದೆ. ಡೀಸೆಲ್ ದರ ಪ್ರತಿ ಲೀಟರಿಗೆ ₹ 16 ಪೈಸೆ ಹೆಚ್ಚಾಗಿ ₹ 86.37ಕ್ಕೆ ತಲುಪಿದೆ. ಫೆಬ್ರುವರಿ 9ರಿಂದ 27ರವರೆಗಿನ ಅವಧಿಯಲ್ಲಿ 14 ದಿನಗಳಲ್ಲಿ ಒಂದು ಲೀಟರ್ ಪೆಟ್ರೋಲ್ ದರ ₹ 4.24 ರಷ್ಟು ಮತ್ತು ಡೀಸೆಲ್ ದರ ₹ 4.37ರಷ್ಟು ಏರಿಕೆ ಆಗಿದೆ.

ದೆಹಲಿಯಲ್ಲಿ ಪೆಟ್ರೋಲ್ ದರ 40 ಪೈಸೆ ಮತ್ತು ಡೀಸೆಲ್ ದರ 15 ಪೈಸೆ ಹೆಚ್ಚಾಗಿದ್ದು, ಕ್ರಮವಾಗಿ ಒಂದು ಲೀಟರ್ ಪೆಟ್ರೋಲ್ ₹ 91.17 ಮತ್ತು ಒಂದು ಲೀಟರ್ ಡೀಸೆಲ್ ₹ 81.47ಕ್ಕೆ ತಲುಪಿದೆ.

ಕಾರು ಮಾರಾಟ ಪ್ರಕರಣ: ಮತ್ತಷ್ಟು ವಂಚನೆ ಬಯಲಿಗೆ

ಇಬ್ಬರು ಪೊಲೀಸ್ ಅಧಿಕಾರಿಗಳ ಅಮಾನತು

ಪ್ರಜಾವಾಣಿ ವಾರ್ತೆ

ಮಂಗಳೂರು: ವಂಚನೆ ಪ್ರಕರಣದಲ್ಲಿ ವಶಕ್ಕೆ ಪಡೆದಿದ್ದ ಐಷಾರಾಮಿ ಕಾರು ಮಾರಾಟ ಮಾಡಿದ ಪ್ರಕರಣದಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ಅಮಾನತುಗೊಳಿಸಿ ಆದೇಶಿಸಿದ್ದಾರೆ.

ಈ ಹಿಂದೆ ಸಿಸಿಬಿಯಲ್ಲಿದ್ದ ಸಬ್ ಇನ್‌ಸ್ಪೆಕ್ಟರ್ ಕಬ್ಬಾಳ್ ರಾಜ್ ಹಾಗೂ ನಾರ್ಕೊಟಿಕ್ಸ್ ಆಂಡ್ ಎಕನಾಮಿಕ್ಸ್ ಠಾಣೆಯ ಇನ್‌ಸ್ಪೆಕ್ಟರ್ ರಾಮಕೃಷ್ಣ ಅಮಾನತುಗೊಂಡವರು ಎಂದು ಉನ್ನತ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮಂಗಳೂರಿನಲ್ಲಿರುವ ರಾಮಕೃಷ್ಣ ಹಾಗೂ ಚಿಕ್ಕಮಗಳೂರಿನಲ್ಲಿರುವ ಕಬ್ಬಾಳ್‌ರಾಜ್ ಅವರನ್ನು ಸಿಐಡಿ ತಂಡ ವಶಕ್ಕೆ ಪಡೆದಿದೆ. ಪ್ರಕರಣದಲ್ಲಿ ಇನ್ನಷ್ಟು ಹಿರಿಯ ಪೊಲೀಸ್ ಅಧಿಕಾರಿಗಳು ಅಮಾನತು ಆಗುವ ಸಾಧ್ಯತೆ ಇದೆ.

ಮತ್ತಷ್ಟು ವಂಚನೆ ಆರೋಪ: ಈ ಮಧ್ಯೆ ಕಬ್ಬಾಳ್‌ರಾಜ್ ವಿರುದ್ಧ ಮತ್ತಷ್ಟು ವಂಚನೆ ಆರೋಪಗಳು ಬಯಲಿಗೆ ಬಂದಿವೆ. ಮೂವರು ಉದ್ಯಮಿಗಳಿಂದ ಕೋಟ್ಯಂತರ ಹಣ ಸುಲಿಗೆ ಮಾಡಲಾಗಿದೆ ಎಂದು ಆರೋಪ ಇದೆ.

ಮುಂಬೈನಲ್ಲಿರುವ ಉದ್ಯಮಿಯ ಮಂಗಳೂರಿನ ಮನೆಯ ಮೇಲೆ ದಾಳಿ ಮಾಡಿದ ಕಬ್ಬಾಳರಾಜ್ ತಂಡ, ಕ್ರಿಕೆಟ್ ಬೆಟ್ಟಿಂಗ್ ನಡೆಯುತ್ತಿದೆ ಎಂದು ಆರೋಪಿಸಿತ್ತು. ಈ ಬಗ್ಗೆ ಎಫ್‌ಐಆರ್ ದಾಖಲಿಸುವುದಾಗಿ ಬೆದರಿಕೆ ಹಾಕಿತ್ತು. ಹೆದರಿದ ಉದ್ಯಮಿ ₹65 ಲಕ್ಷ ನೀಡಿದ್ದಾರೆ.

ಇದೇ ರೀತಿ ಇನ್ನೂ ಇಬ್ಬರು ಉದ್ಯಮಿಗಳಿಂದ ₹35 ಲಕ್ಷ ಹಾಗೂ ₹25 ಲಕ್ಷ ವಸೂಲಿ ಮಾಡಲಾಗಿದೆ. ನಗದನ್ನು ನೀಡಿಲ್ಲ. ಬ್ಯಾಂಕ್ ಮೂಲಕವೇ ಹಣ ವರ್ಗಾವಣೆ ಮಾಡಲಾಗಿದೆ. ಈ ಬಗ್ಗೆ ನಮ್ಮಲ್ಲಿ ದಾಖಲೆಗಳಿವೆ ಎಂದು ಉದ್ಯಮಿಯ ಸ್ನೇಹಿತರೊಬ್ಬರು ತಿಳಿಸಿದ್ದಾರೆ.

ಹಸಿರು ಪೀಠದಿಂದ ಸ್ವಯಂ ಪ್ರೇರಿತ ಪ್ರಕರಣ ದಾಖಲು

ಗಣಿ ಸ್ಫೋಟ: ಪರಿಶೀಲನೆಗೆ ಎನ್‌ಜಿಟಿ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಚಿಕ್ಕಬಳ್ಳಾಪುರ ಜಿಲ್ಲೆಯ ಹಿರೇನಾಗವಲ್ಲಿ ಬಳಿ ಇತ್ತೀಚೆಗೆ ಸಂಭವಿಸಿದ ಜಿಲೆಟಿನ್ ಸ್ಫೋಟ ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ (ಎನ್‌ಜಿಟಿ), ಈ ಸಂಬಂಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ಘಟನೆಗೆ ಸಂಬಂಧಿಸಿ ಕೇಂದ್ರ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಜ್ಯ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗೆ ಹಸಿರು ಪೀಠವು ನೋಟಿಸ್ ಜಾರಿ ಮಾಡಿದೆ. ಪ್ರಕರಣದ ವಿಚಾರಣೆ ನಿಗದಿಯಾಗಿರುವ ಏಪ್ರಿಲ್ 30ರೊಳಗೆ ಪ್ರಕರಣದ ಕುರಿತು ಪ್ರತಿಕ್ರಿಯೆ ನೀಡುವಂತೆ ಸೂಚಿಸಿದೆ.

ಅಲ್ಲದೆ, ಇಂತಹ ಘಟನೆಗಳು ಮರುಕಳಿಸುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಅಗತ್ಯವಿರುವ ಪರಿಹಾರ ಕ್ರಮಗಳನ್ನು ಸೂಚಿಸಲು ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯೆಲ್ ನೇತೃತ್ವದ ಪೀಠವು ಆರು ಜನರನ್ನು ಒಳಗೊಂಡ ತಜ್ಞರ ಸಮಿತಿಯೊಂದನ್ನು ರಚಿಸಿದೆ.

ಕೇಂದ್ರದ ಗಣಿ ಇಲಾಖೆ ಮಹಾ ನಿರ್ದೇಶಕರು, ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಸ್ಫೋಟಕ ವಿಭಾಗದ ಮುಖ್ಯ ನಿಯಂತ್ರಕರು, ರಾಜ್ಯದ ಗಣಿ ಇಲಾಖೆಯ ನಿರ್ದೇಶಕರು, ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಅವರು ಸಮಿತಿಯಲ್ಲಿ ಇರಲಿದ್ದಾರೆ.

ಸಮಿತಿಯು ಮುಂದಿನ ವಾರ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಘಟನೆಗೆ ಕಾರಣವೇನು ಎಂಬ ಕುರಿತು ಪರಿಶೀಲನೆ ನಡೆಸುವ ಸಾಧ್ಯತೆ ಇದೆ. ಹಾನಿಯ ಪ್ರಮಾಣ, ಪರಿಹಾರೋಪಾಯ ಕುರಿತೂ ಸಮಿತಿಯು ಸಲಹೆ ನೀಡಬೇಕು. ಕನಿಷ್ಠ ಒಮ್ಮೆ ಘಟನಾ ಸ್ಥಳಕ್ಕೆ ಭೇಟಿ ನೀಡಿ, ನಂತರ ಆನ್‌ಲೈನ್ ಮೂಲಕ ಸಭೆ ನಡೆಸಬಹುದು ಎಂದು ನ್ಯಾಯಪೀಠವು ಸಮಿತಿಗೆ ಸೂಚಿಸಿದೆ.

ಈ ಹಿಂದೆ ಕೈಗಾರಿಕಾ ಪ್ರದೇಶದಲ್ಲಿ ಸಂಭವಿಸಿರುವ ಅಪಘಾತ, ಸಾವು–ನೋವು ಘಟನೆಗಳ ಕುರಿತು ತಜ್ಞರ ಸಮಿತಿಗಳು ಎನ್‌ಜಿಟಿಗೆ ಸಲ್ಲಿಸಿರುವ ವರದಿಗಳನ್ನು ಈ ಸಮಿತಿ ಅವಲೋಕಿಸಬಹುದು. ಭವಿಷ್ಯದಲ್ಲಿ ಇಂತಹ ಘಟನೆಗಳನ್ನು ಮರುಕಳಿಸದಂತೆ ತಡೆಗಟ್ಟಲು ಅಗತ್ಯವಿರುವ ಕ್ರಮಗಳ ಕುರಿತೂ ಸಮಿತಿ ಆದ್ಯತೆ ನೀಡಬೇಕು ಎಂದು ನ್ಯಾಯಪೀಠ ಹೇಳಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಹಿರೇನಾಗವಲ್ಲಿ ಬಳಿ ಫೆಬ್ರುವರಿ 22ರಂದು ತಡರಾತ್ರಿ ಜಿಲೆಟಿನ್ ಸ್ಫೋಟಗೊಂಡ ಪರಿಣಾಮ 6 ಮಂದಿ ಸ್ಥಳದಲ್ಲೇ ಸಾವಿಗೀಡಾಗಿದ್ದು, ಒಬ್ಬರು ತೀವ್ರವಾಗಿ ಗಾಯಗೊಂಡಿದ್ದರು.

ಸ್ಫೋಟಕ ಒಪ್ಪಿಸಲು ಗಡುವು: ನಿರಾಣಿ

ಕೊಪ್ಪಳ: 'ಗಣಿಗಾರಿಕೆಗೆ ಬಳಸುವ ಜಿಲೆಟಿನ್ ಸೇರಿದಂತೆ ಯಾವುದೇ ರೀತಿಯ ಸ್ಫೋಟಕಗಳು ಇದ್ದರೆ ಗಣಿ ಮತ್ತು ಕ್ರಶರ್‌ಗಳ ಮಾಲೀಕರು ಅವುಗಳನ್ನು ಮೂರು ದಿನಗಳ ಒಳಗಾಗಿ ಗಣಿ ಇಲಾಖೆ ವಶಕ್ಕೆ ನೀಡಬೇಕು' ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿ ಸೂಚನೆ ನೀಡಿದರು. 'ಸ್ಫೋಟಕಗಳನ್ನು ಒಪ್ಪಿಸುವ ಕುರಿತು ಈ ಹಿಂದೆಯೂ ಸೂಚನೆ ನೀಡಲಾಗಿತ್ತು. ಆತಂಕಗೊಂಡು ಅಕ್ರಮವಾಗಿ ಬೇರೆಡೆ ಸ್ಥಳಾಂತರಿಸಲು ಅವಸರ ಮಾಡಿದ ಕಾರಣಕ್ಕಾಗಿಯೇ ಹುಣಸೋಡು ಅವಘಡ ಸಂಭವಿಸಿದೆ. ಈ ಗಡುವಿನ ನಂತರವೂ ತಮ್ಮ ಬಳಿ ಸ್ಫೋಟಕ ಇಟ್ಟುಕೊಂಡಿದ್ದರೆ ಗಣಿ ಮತ್ತು ಕ್ರಶರ್‌ಗಳ ಪರವಾನಗಿಯನ್ನೇ ರದ್ದು ಮಾಡಬೇಕಾಗುತ್ತದೆ' ಎಂದು ಶನಿವಾರ ಇಲ್ಲಿ ಎಚ್ಚರಿಕೆ ನೀಡಿದರು.

ಚಿನಕುರಳಿ
ಪ್ರಕಾಶ್ ಶೆಟ್ಟಿ



ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ನಂ. 156, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055.

ಸ್ಥಿರಾಸ್ತಿ ಬಹಿರಂಗ-ಹರಾಜು ಮಾರಾಟ ಪ್ರಕಟಣೆ

ಬ್ಯಾಂಕಿನ ಅಧಿಕೃತ ಅಧಿಕಾರಿಯು **ಸೆಕ್ಯೂರಿಟೈಜೇಶನ್ ಅಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್** ಮತ್ತು **ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ಅಧಿಕಾರದನ್ವಯ ಅಧಿನಿಯಮದ ಪ್ರಕರಣ 13(2)** ರನ್ವಯ ಕೆಳಗಿನ ಸಾಲಗಾರರಿಗೆ ಡಿಮ್ಯಾಂಡ್ ನೋಟಿಸ್ ನೀಡಿದ್ದು, ಸಾಲಗಾರರು ಸಾಲದ ಹಣ ಮತ್ತು ಬಡ್ಡಿಯನ್ನು ಮರುಪಾವತಿ ಮಾಡಲು ವಿಫಲರಾದುದ್ದರಿಂದ ಬ್ಯಾಂಕಿಗೆ ಅಡಮಾನ ಮಾಡಿದ್ದ ಸ್ವತ್ತನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಮತ್ತು ಕೆಳ ಸಹಿದಾರರು ಅಧಿಕೃತ ಅಧಿಕಾರಿಯು ನಿಯಮ 13 (4) ಹಾಗೂ ರೂಲ್ 8(6) ರ ಅನ್ವಯ ಸಾಮರ್ಥ್ಯ ಹೊಂದಿರುವುದರಿಂದ ಸಾಲಕ್ಕೆ ಆಧಾರ ಮಾಡಿರುವ ಕೆಳಕಂಡ ಸ್ವತ್ತನ್ನು ರೂಲ್ 8(5)ರಲ್ಲಿರುವ ಯಾವುದಾದರೂ ಒಂದು ರೀತಿಯಲ್ಲಿ 'ಎಲ್ಲಿದೆಯೋ ಹೇಗಿದೆಯೋ ಮತ್ತು ಏನಿದೆಯೊ ಹಾಗೆಯೇ ಅದನ್ನು ಬಹಿರಂಗ- ಹರಾಜು ನಡೆಸಲಾಗುವುದು ಆಸಕ್ತಿ ಹೊಂದಿರುವ ಖರೀದಿದಾರರು ಈ ಕೆಳಕಂಡ ಸ್ವತ್ತಿನ ಖರೀದಿಗಾಗಿ ಹರಾಜಿನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಸಾಲಗಾರರು ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ	 ಶ್ರೀ ಎಂ.ಶ್ರೀನಿವಾಸ್ S/o ಶ್ರೀ ಜಿ. ಮುರುಳಿಧರ್ ವಿಳಾಸ:- #40/16, ಎಂಕೆಕೆ ರಸ್ತೆ, ರಾಜಾಜಿನಗರ, 1ನೇ ಬ್ಲಾಕ್, 12ನೇ ಅಡ್ಡರಸ್ತೆ, ಬೆಂಗಳೂರು–560010.
ಮಾರಾಟದ ದಿನಾಂಕ, ಸಮಯ ಮತ್ತು ಸ್ಥಳ	ದಿನಾಂಕ: 31.03.2021ಮಧ್ಯಾಹ್ನ 12.00 ಘಂಟೆಗೆ ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., # 156, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055.
ಮುಂಗಡ ಠೇವಣಿ	ರೂ.20,00,000/- (ಇಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ)
ಮೀಸಲು ಬೆಲೆ	ರೂ.2,00,00,000/- (ಎರಡು ಕೋಟಿ ರೂಪಾಯಿಗಳು ಮಾತ್ರ)
ಬಿಡ್‌ನ ಏರಿಕೆ ಗುಣಕ	ರೂ.50,000/- (ಐವತ್ತು ಸಾವಿರ ರೂಪಾಯಿಗಳು ಮಾತ್ರ)
ಬಾಕಿ ಬರಬೇಕಾದ ಮೊತ್ತ ದಿ:24.02.2021ರಲ್ಲಿ ಇದ್ದಂತೆ ಹಾಗೂ ದಿ:25.02.2021 ರಿಂದ ಮುಂದುವರೆದ ಬಡ್ಡಿ ಮತ್ತು ಇತರೆ ಖರ್ಚು ಅನ್ವಯಿಸುತ್ತದೆ.	ರೂ.93,41,000/- (ತೊಂಬತ್ತು ಮೂರು ಲಕ್ಷದ ನಲವತ್ತೊಂದು ಸಾವಿರ ರೂಪಾಯಿಗಳು ಮಾತ್ರ)
ಮಾರಾಟಕ್ಕಿಟ್ಟ ಸ್ವತ್ತಿನ ಪರಿವೀಕ್ಷಣೆಯ ದಿನಾಂಕ & ಸಮಯ	ದಿ:30.03.2021 ರ ಎಲ್ಲಾ ವ್ಯವಹಾರದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 6.00 ಘಂಟೆಯವರೆಗೆ

ಮಾರಾಟಕ್ಕಿಟ್ಟ ಸ್ಥಿರಾಸ್ತಿಯ ವಿವರ:

ಸ್ಥಿರಾಸ್ತಿಯ ಸಂಖ್ಯೆ 16, (ಹಳೆ ನಂ.40) 20ನೇ ಅಡ್ಡರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ಬಿಬಿಎಂಪಿ ವಾರ್ಡ್ ನಂ.40 ಪಿಐಡಿ ನಂ.14–34–16 (ಹೊಸ ಪಿಐಡಿ ನಂ.067–ಒ0040–108) ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ, ಉತ್ತರದಿಂದ ದಕ್ಷಿಣಕ್ಕೆ 40 ಅಡಿ ಒಟ್ಟು ಅಳತೆ 1200 ಚದರ ಅಡಿ ಮತ್ತು ಚೆಕ್ ಬಂದಿ.
ಪೂರ್ವಕ್ಕೆ : ಸೈಟ್ ನಂ.39, ಪಶ್ಚಿಮಕ್ಕೆ : ಸೈಟ್ ನಂ.41, ಉತ್ತರಕ್ಕೆ : ಸೈಟ್ ನಂ.47, ದಕ್ಷಿಣಕ್ಕೆ : ರಸ್ತೆ.

ಇತರೆ ನಿಯಮ ಮತ್ತು ನಿಬಂಧನೆಗಳು

1.ಆಸಕ್ತ ಬಿಡ್ಡುದಾರರು ಇಎಂಡಿ **ರೂ. 20,00,000/-** ಗಳನ್ನು ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಹೆಸರಿಗೆ ಡಿಡಿ/ನಗದು ಅಥವಾ **ಅಕೌಂಟ್ ನಂ. 20012004 ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು–560055 ಇವರ ಐ.ಎಫ್.ಎಸ್.ಸಿ ಕೋಡ್ HDFC0CJCBKL ಆನ್‌ಲೈನ್ (ಆರ್.ಟಿ.ಜಿ.ಎಸ್/ ಎನ್.ಇ.ಎಫ್.ಟಿ ವರ್ಗಾವಣೆ) ಅಥವಾ ನಗದು** ಮೂಲಕ ಅವರ ಖಾತೆಗೆ **ದಿನಾಂಕ: 31.03.2021 ಬೆಳಿಗ್ಗೆ 11.00 ಘಂಟೆಯೊಳಗೆ ಜಮೆಯಾಗುವಂತೆ ಪಾವತಿ ಮಾಡಬೇಕು.** ಆಸಕ್ತ ಬಿಡ್ಡುದಾರರು ಅವರ ಗುರುತಿನ ಪುರಾವೆ ಮತ್ತು ಪ್ಯಾನ್‌ಕಾರ್ಡ್‌ನ್ನು ಅಧಿಕೃತ ಅಧಿಕಾರಿ ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು–560055 ಇವರಿಗೆ ತಲುಪಿಸಬೇಕು ಇಎಂಡಿಗೆ ಯಾವುದೇ ಬಡ್ಡಿ ಅನ್ವಯಿಸುವುದಿಲ್ಲ.

2.ಸ್ಥಿರಾಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದಿಲ್ಲ.

3.ಯಶಸ್ವಿಯಾದ ಬಿಡ್ಡುದಾರರು/ಆತನ/ಆಕೆಯ ಪರವಾಗಿ ಬಿಡ್ಡು ತೀರ್ಮಾನವಾದ ಕೂಡಲೇ ಮಾರಾಟ ಬೆಲೆಯ 25 % ಮೊತ್ತವನ್ನು (ಈಗಾಗಲೇ ಪಾವತಿ ಮಾಡಿರುವ ಇಎಂಡಿ ಸೇರಿದಂತೆ) ಪಾವತಿ ಮಾಡಬೇಕು ಬಾಕಿ 75 % ಹಣವನ್ನು ಮಾರಾಟ ದೃಢೀಕರಣವಾದ ದಿನಾಂಕದಿಂದ 15 ದಿನಗಳ ಒಳಗೆ ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು–560055. ಇವರ ಹೆಸರಿಗೆ ಪಡೆದ ಡಿಡಿ ಅಥವಾ **ಅಕೌಂಟ್ ನಂ.20012004 ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು–560055. ಐಎಫ್‌ಎಸ್‌ಸಿ ಕೋಡ್ HDFC0CJCBKL ಆನ್‌ಲೈನ್ (ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ/ ವರ್ಗಾವಣೆ)** ಮೂಲಕ ಜಮೆಯಾಗುವಂತೆ ಪಾವತಿ ಮಾಡಬೇಕು.

4.ಯಶಸ್ವಿಯಾದ ಬಿಡ್ಡುದಾರರು ಮೇಲೆ ತಿಳಿಸಿರುವಂತೆ ಮಾರಾಟ ಬೆಲೆ ಪಾವತಿಸಲು ವಿಫಲವಾದರೆ ಅವರು ಪಾವತಿ ಮಾಡಿರುವ ಮುಂಗಡ ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು,

5.ಮಾರಾಟಕ್ಕಿಟ್ಟಿರುವ ಸ್ಥಿರಾಸ್ತಿಯನ್ನು ಎಲ್ಲಿದೆಯೋ ಹೇಗಿದೆಯೋ ಹಾಗೆಯೇ ಮತ್ತು ಎಲ್ಲಿ ಏನಿದೆಯೋ ಹಾಗೆಯೇ ಆಧಾರದ ಮೇಲೆ ಮಾರಾಟ ಮಾಡಲಾಗುವುದು ಆಸ್ತಿಯ ಒಡೆತನ, ಶಾಸನಬದ್ಧ ಮಾನ್ಯತೆಗಳು, ಋಣಭಾರ, ಕ್ಲೈಮ್/ಹಕ್ಕು/ಬಾಕಿ ಇತ್ಯಾದಿಗಳ ಕುರಿತು ಬಿಡ್ಡು ಸಲ್ಲಿಸುವ ಮೊದಲೇ ಬಿಡ್ಡುದಾರರೇ ವಿಚಾರಣೆ ಮಾಡತಕ್ಕದ್ದು, ನಂತರದ ಯಾವುದೇ ತಕರಾರುಗಳಿಗೆ ಬ್ಯಾಂಕು ಜವಾಬ್ದಾರರಾಗುವುದಿಲ್ಲ ಸ್ವತ್ತಿಗೆ ಸಂಬಂಧಪಟ್ಟಂತೆ ಹಾಲಿಯಿರುವ ಮತ್ತು ಮುಂದೆ ಉಂಟಾಗುವುದು ಸೇರಿದಂತೆ ಸರ್ಕಾರಕ್ಕೆ / ಯಾವುದೇ ಪ್ರಾಧಿಕಾರಕ್ಕೆ ಇತ್ಯಾದಿಯವರಿಗೆ ಪಾವತಿಸಬೇಕಾದ ಮುದ್ರಾಂಕ ಶುಲ್ಕ, ಮಾರಾಟ ಸರ್ಟಿಫಿಕೇಟ್ ನೋಂದಣಿ ಶುಲ್ಕ ಎಲ್ಲಾ ತೆರಿಗೆಗಳು/ದರಗಳು, ಶಾಸನಬದ್ಧ ಬಾಕಿಗಳನ್ನು ಇತ್ಯಾದಿ, ಎಲ್ಲಾ ಇತರೆ ಖರ್ಚುಗಳನ್ನು ಖರೀದಿದಾರರೇ ಪಾವತಿಸಬೇಕು.

6.ಹರಾಜಿನಲ್ಲಿ ಭಾಗವಹಿಸಲು ಬಿಡ್ಡುದಾರುಗಳಿಗೆ ಮಾತ್ರ ಅವಕಾಶ ಬಿಡ್ಡುದಾರರ ಪರವಾಗಿ ಜೆಪಿಎ ಹೊಂದಿರುವವರು/ಏಜಂಟರುಗಳು/ಬೇರೆ ಯಾರಿಗೂ ಅವಕಾಶ ಇರುವುದಿಲ್ಲ. ಹರಾಜಿನ

7.ದಿನಾಂಕಕ್ಕೆ ಮೊದಲು ಮೇಲ್ಕಂಡ ಸಾಲವನ್ನು ಚುಕ್ತಾ ಮಾಡದಿದ್ದಲ್ಲಿ ಮೇಲೆ ತಿಳಿಸಿದ ದಿನಾಂಕದಂದು ನಡೆಯಲಿರುವ ಬಹಿರಂಗ ಹರಾಜಿನ ಬಗ್ಗೆ ಸಾಲಗಾರರಿಗೆ ಇದು ಸೂಚನಾ ಪತ್ರ ಕೂಡ ಆಗಿರುತ್ತದೆ.

8.ಮುಂಚಿತವಾಗಿ ತಿಳಿಸದೆ ಮತ್ತು ಯಾವುದೇ ಕಾರಣ ನೀಡದೇ, ಯಾವುದೇ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಥವಾ ಮಾರಾಟ ಮುಂದೂಡುವ/ರದ್ದು ಪಡಿಸುವ ಹಕ್ಕನ್ನು ಅಧಿಕೃತ ಅಧಿಕಾರಿಯವರು ಹೊಂದಿರುತ್ತಾರೆ.

9.ಅಧಿಕೃತ ಅಧಿಕಾರಿಯವರಿಗೆ ತಿಳಿದಿರುವಂತೆ ಅಡಮಾನ ಮಾಡಿರುವ ಸ್ವತ್ತಿನ ಬಗ್ಗೆ ಮಾಹಿತಿ ಇರುತ್ತದೆ ಹಾಗೂ ಏನಾದರೂ ತಪ್ಪು ಮಾಹಿತಿ ಇದ್ದಲ್ಲಿ ಇದಕ್ಕೆ ಅಧಿಕೃತ ಅಧಿಕಾರಿಯವರು ಜವಾಬ್ದಾರರಲ್ಲ.

<u>ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ</u> **ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದಿ ಜನತಾ ಕೋ-ಆಪರೇಟೀವ್ ಬ್ಯಾಂಕ್ ಲಿ., ಮಲ್ಲೇಶ್ವರಂ, ಬೆಂಗಳೂರು–560055.** ದೂರವಾಣಿ ಸಂಖ್ಯೆ:**–9449842016.** ಸ್ವತ್ತಿನ ಪರಿವೀಕ್ಷಣೆಗೆ ಮತ್ತು ಸಂಪರ್ಕದ ದೂರವಾಣಿ ಸಂಖ್ಯೆ: **080–23449450, 23469560, 23442648** ಇವರನ್ನು ಸಂಪರ್ಕಿಸಬಹುದು.

ದಿನಾಂಕ:25.02.2021
ಸ್ಥಳ: ಬೆಂಗಳೂರು

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಸಹಿ/-ಮುಖ್ಯ ಕಾರ್ಯನಿರ್ವಹಣಾಕಾರಿ

ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಭರವಸೆ

'ಶಾಶ್ವತ ಮಂದಿರ ನಿರ್ಮಾಣ'

ಪ್ರಜಾವಾಣಿ ವಾರ್ತೆ



ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರು ರಾಮ, ಸೀತೆ, ಲಕ್ಷ್ಮಣ ಮತ್ತು ಆಂಜನೇಯನ ವಿಗ್ರಹಕ್ಕೆ ಪೂಜೆ ಸಲ್ಲಿಸಿದರು.

ಬೆಂಗಳೂರು: 'ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಹಮ್ಮಿಕೊಂಡಿದ್ದ ನಿಧಿ ಸಂಗ್ರಹ ಅಭಿಯಾನಕ್ಕೆ ನಿರೀಕ್ಷೆಗೂ ಮೀರಿದ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇದರಿಂದಾಗಿ ಶಾಶ್ವತವಾಗಿ ಉಳಿಯುವಂತಹ ಮಂದಿರವನ್ನು ನಿರ್ಮಾಣ ಮಾಡಲಾಗುತ್ತದೆ' ಎಂದು ಉಡುಪಿಯ ಪೇಜಾವರ ಮಠದ ವಿಶ್ವ-ಪ್ರಸನ್ನ ತೀರ್ಥ ಸ್ವಾಮೀಜಿ ತಿಳಿಸಿದರು.

ರಾಷ್ಟ್ರ ಧರ್ಮ ಸಂಘಟನೆಯು ಲಾಲ್‌ಬಾಗ್ ಪಶ್ಚಿಮ ದ್ವಾರದ ಬಳಿ ನಾಣ್ಯಗಳಿಂದ ನಿರ್ಮಿಸಿರುವ ರಾಮ ಮಂದಿರದ ಪ್ರತಿಕೃತಿಯನ್ನು ಶನಿವಾರ ವೀಕ್ಷಿಸಿದ ಅವರು, ನಿಧಿ ಸಂಗ್ರಹ ಅಭಿಯಾನದ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದರು.

'ಮಂದಿರ ನಿರ್ಮಾಣಕ್ಕೆ ದೇಶದಾದ್ಯಂತ ಹಮ್ಮಿಕೊಂಡಿದ್ದ ನಿಧಿ ಸಂಗ್ರಹ ಅಭಿಯಾನದಲ್ಲಿ ₹ 1,500 ಕೋಟಿ ಸಂಗ್ರಹವಾಗುವ ನಿರೀಕ್ಷೆಯನ್ನು ಹೊಂದಿದ್ದೆವು. ಆದರೆ, ಈಗಾಗಲೇ ₹ 2,100 ಕೋಟಿ ಸಂಗ್ರಹವಾಗಿದೆ. ಭಕ್ತಾದಿಗಳು ಸ್ವಯಂಪ್ರೇರಿತರಾಗಿ ಹಣ ನೀಡುತ್ತಿದ್ದಾರೆ. ಹೀಗಾಗಿ ₹ 2,500 ಕೋಟಿ ಸಂಗ್ರಹವಾಗುವ ಸಾಧ್ಯತೆಯಿದೆ. ಈ ಮಂದಿರಕ್ಕೆ ಎಲ್ಲರು ಕೈಲಾದ ಕೊಡುಗೆಯನ್ನು ನೀಡಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಶ್ವ ಹಿಂದೂ ಪರಿಷತ್ತಿನ ಕ್ಷೇತ್ರೀಯ ಸಂಘಟನಾ ಕಾರ್ಯದರ್ಶಿ ಕೇಶವ ಹೆಗ್ಡೆ ಮಾತನಾಡಿ, 'ನಿಧಿ ಸಂಗ್ರಹಕ್ಕೆ ರಾಜ್ಯದಲ್ಲಿ 20 ಸಾವಿರ ತಂಡಗಳನ್ನು ಗುರುತಿಸ-ಲಾಗಿತ್ತು. 1.50 ಲಕ್ಷ ಕಾರ್ಯಕರ್ತರು ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿ-ಕೊಂಡಿದ್ದು, ಸುಮಾರು ₹ 150 ಕೋಟಿ ದೇಣಿಗೆ ಸಂಗ್ರಹ ಮಾಡಿದ್ದಾರೆ. ಇನ್ನೂ ಹಲವರು ಚೆಕ್ ಮೂಲಕ ಹಣವನ್ನು ಸಂದಾಯ ಮಾಡುತ್ತಿದ್ದಾರೆ' ಎಂದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ, 'ಎಲ್ಲರ ಆರಾಧ್ಯ ದೇವತೆಯಾಗಿರುವ ರಾಮನ ಜನ್ಮ ಸ್ಥಳದಲ್ಲಿಯೇ ಮಂದಿರ ನಿರ್ಮಾಣ ಮಾಡುತ್ತಿರುವುದು ನಮ್ಮ ಸೌಭಾಗ್ಯ. ಸುದೀರ್ಘ ಹೋರಾಟ ಮತ್ತು ಸಂಕಲ್ಪದಿಂದ ಮಂದಿರ ನಿರ್ಮಾಣ ಕಾರ್ಯ ಆರಂಭವಾಗಿದೆ' ಎಂದರು.

70 ಸಾವಿರ ನಾಣ್ಯದಲ್ಲಿ ರಾಮಮಂದಿರ

ಕಲಾವಿದರಾದ ರಘು ಮತ್ತು ಮಂಜುನಾಥ ಲಕ್ಷಣ ಅವರು ಶ್ರೀ ದುರ್ಗಾ ಕ್ರಿಯೇಷನ್ಸ್ ಆಶ್ರಯದಲ್ಲಿ 70 ಸಾವಿರ ನಾಣ್ಯಗಳನ್ನು ಬಳಸಿ, ರಾಮ ಮಂದಿರದ ಪ್ರತಿಕೃತಿಯನ್ನು ನಿರ್ಮಿಸಿದ್ದಾರೆ. ಈ ನಾಣ್ಯಗಳು ₹ 1 ಮತ್ತು ₹ 5 ಮೌಲ್ಯದವು. ಒಟ್ಟು ₹ 2 ಲಕ್ಷ ಮೌಲ್ಯದ ನಾಣ್ಯಗಳನ್ನು ಇದಕ್ಕೆ ಬಳಸಲಾಗಿದೆ. 30X40 ಅಡಿ ಅಳತೆಯ ಈ ಪ್ರತಿಕೃತಿಯನ್ನು 13 ದಿನಗಳಲ್ಲಿ ಅವರು ರಚಿಸಿದ್ದಾರೆ.

'ಕೆ.ಸಿ. ರೆಡ್ಡಿ ಧೀಮಂತ ನಾಯಕ'

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಪುಣ್ಯತಿಥಿ ಅಂಗವಾಗಿ ವಿಧಾನಸೌಧದ ಪಶ್ಚಿಮದ್ವಾರದಲ್ಲಿರುವ ಕೆ.ಸಿ. ರೆಡ್ಡಿ ಪ್ರತಿಮೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶನಿವಾರ ಮಾಲಾರ್ಪಣೆ ಮಾಡಿ, ನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಮುಖ್ಯಮಂತ್ರಿ, 'ರಾಜ್ಯದ ಮೊದಲ ಮುಖ್ಯಮಂತ್ರಿ ಆಗಿದ್ದ ಕೆ.ಸಿ. ರೆಡ್ಡಿಯವರು ಧೀಮಂತ ನಾಯಕರಾಗಿದ್ದರು' ಎಂದು ಬಣ್ಣಿಸಿದರು.

'ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಸಂದರ್ಭದಲ್ಲಿ ರಾಜ್ಯದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಅವರು ಬಹಳ ಶ್ರಮಿಸಿದ್ದರು' ಎಂದೂ ಹೇಳಿದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್. ಅಶೋಕ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಇದ್ದರು.

ಆರೋಗ್ಯ ಶಿಬಿರ ಇಂದು

ಹೆಸರಘಟ್ಟ: ದಾಸನಪುರ ನಗರದ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಮಾಧವ ಸದಾಶಿವ ರಾವ್ ಗೋಳ್ವಲ್ಕರ್ ಅವರ ಜನ್ಮದಿನದ ನಿಮಿತ್ತ ಆರೋಗ್ಯ ಭಾರತೀ ಸಹಯೋಗದೊಂದಿಗೆ ಭಾನುವಾರ (ಫೆ. 28) ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಿದೆ.

ನಗರೂರು ಬಿ.ಜಿ.ಎಸ್.ಆಸ್ಪತ್ರೆ, ಪಿಳ್ಳಹಳ್ಳಿ ಗ್ರಾಮ ಹಾಗೂ ಶಿವನಪುರದ ರಾಜೀವ ಗಾಂಧಿ ಕಾಲೊನಿಯಲ್ಲಿ ಶಿಬಿರ ಆಯೋಜಿಸಲಾಗಿದೆ. ಮಾಹಿತಿಗೆ, ಯಲಹಂಕ ಗ್ರಾಮಾಂತರ ಮಾಧ್ಯಮ ಸಂಚಾಲಕ ಅಭಿನಾಶ್ ಗಣೇಶ್ (99860 33321) ಅವರನ್ನು ಸಂಪರ್ಕಿಸಬಹುದು.

ನಗರದಲ್ಲಿ ಶೇ 25ರಷ್ಟು ಪ್ರಕರಣಗಳು ಕಡಿಮೆಯಾಗಿವೆ: ಆರೋಗ್ಯ ಇಲಾಖೆ ಮಾಹಿತಿ

ಕೋವಿಡ್: ಬೀದಿ ನಾಯಿ ಕಡಿತ ಇಳಿಕೆ

• ವರುಣ್ ಹೆಗಡೆ

ಬೆಂಗಳೂರು: ಕೋವಿಡ್ ಮತ್ತು ಲಾಕ್‌ಡೌನ್‌ನಿಂದಾಗಿ ನಗರದಲ್ಲಿ ಬೀದಿ ನಾಯಿ ಕಡಿತ ಪ್ರಕರಣಗಳ ಸಂಖ್ಯೆ ಕಳೆದ ಒಂದು ವರ್ಷದಲ್ಲಿ ಶೇ 25ರಷ್ಟು ಇಳಿಕೆಯಾಗಿದೆ.

ನಗರದ ಜನತೆಯನ್ನು ಕಾಡುತ್ತಿರುವ ಸಮಸ್ಯೆಗಳಲ್ಲಿ ಬೀದಿ ನಾಯಿ ಕಡಿತ ಕೂಡ ಒಂದು. ಹೆಚ್ಚಾಗಿ ಮಕ್ಕಳು ಮತ್ತು ವೃದ್ಧರು ನಾಯಿ ಕಡಿತಕ್ಕೆ ಒಳಗಾಗುತ್ತಿದ್ದರು. ಎಲ್ಲ ನಾಯಿಗಳು ಆ್ಯಂಟಿ ರೇಬಿಸ್ ಲಸಿಕೆಗೆ ಒಳಪಡದ ಪರಿಣಾಮ ನಾಯಿ ಕಚ್ಚಿದಲ್ಲಿ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳುವ ಸಾಧ್ಯತೆಗಳಿದ್ದವು. ನಗರದಲ್ಲಿ 3 ಲಕ್ಷಕ್ಕೂ ಅಧಿಕ ಬೀದಿ ನಾಯಿಗಳಿವೆ. ಕಳೆದ ಮೂರು ವರ್ಷದ ಅವಧಿಯಲ್ಲಿ 2.55 ಲಕ್ಷ ಬೀದಿ ನಾಯಿಗಳಿಗೆ ಆ್ಯಂಟಿ ರೇಬಿಸ್ ಲಸಿಕೆ ನೀಡಲಾಗಿದೆ.

ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಯಾವುದೇ ನಾಯಿಯನ್ನು ಸಾಯಿಸುವಂತಿಲ್ಲ. ಅದೇ ರೀತಿ, ಒಂದು ಪ್ರದೇಶದಲ್ಲಿ ಹಿಡಿದ ಬೀದಿನಾಯಿಯನ್ನು ಮತ್ತೊಂದು ಪ್ರದೇಶಕ್ಕೆ ಕೊಂಡೊಯ್ದು ಬಿಡುವಂತಿಲ್ಲ. ಇದರಿಂದಾಗಿ ಬೀದಿ ನಾಯಿ ಹಾವಳಿ ನಿಯಂತ್ರಣ ಸವಾಲಿನಿಂದ ಕೂಡಿದೆ.

ಕೋವಿಡ್ ಹಾಗೂ ಲಾಕ್‌ಡೌನ್‌ನಿಂದಾಗಿ ಕಳೆದ ವರ್ಷ ಜನತೆ ಹೆಚ್ಚಾಗಿ ಮನೆಯಲ್ಲಿಯೇ ಸಮಯ ಕಳೆದಿದ್ದರು. ಶಾಲಾ– ಕಾಲೇಜುಗಳು ರಜೆಯಿದ್ದ ಕಾರಣ ಬೀದಿಗಳಲ್ಲಿ ಮಕ್ಕಳ ಓಡಾಟ ಕೂಡ ಕಡಿಮೆಯಾಗಿತ್ತು. ಇದರಿಂದಾಗಿ ನಾಯಿ ಕಡಿತ ಪ್ರಕರಣಗಳು ಕೂಡ ಇಳಿಕೆ ಕಂಡಿವೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ 2020ರಲ್ಲಿ 6,606 ನಾಯಿ ಕಡಿತ ಪ್ರಕರಣಗಳು ದೃಢಪಟ್ಟಿವೆ. ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. ಈ ವರ್ಷ ಜನವರಿ ತಿಂಗಳಲ್ಲಿ 662 ಮಂದಿ ಮೇಲೆ ನಾಯಿಗಳು ದಾಳಿ ನಡೆಸಿವೆ.

ರಾತ್ರಿ ಓಡಾಟ ಕಡಿಮೆ: ‘ಪ್ರಮುಖ ರಸ್ತೆ, ಬಡಾವಣೆಗಳಲ್ಲಿ ತಂಡಗಳಾಗಿ ಕಾಣಿಸಿಕೊಳ್ಳುವ ಬೀದಿ ನಾಯಿಗಳು ಬೈಕ್ ಸವಾರರು ಹಾಗೂ ಪಾದಾಚಾರಿಗಳ ಮೇಲೆ ದಾಳಿ ಮಾಡುತ್ತವೆ. ಅದರಲ್ಲೂ ರಾತ್ರಿ ವೇಳೆ ಬೀದಿ ನಾಯಿ ಕಾಟ ಜಾಸ್ತಿಯಾಗಿರುತ್ತದೆ. ಆಟವಾಡುತ್ತಿರುವ ಮಕ್ಕಳ ಮೇಲೆ ದಾಳಿಮಾಡಿ, ಗಾಯಗೊಳಿಸಿದ ಪ್ರಕರಣಗಳು ಈ ಹಿಂದೆ ವರದಿಯಾಗಿವೆ. ಆದರೆ, ಕಳೆದ ವರ್ಷ ಕೋವಿಡ್‌ಕಾರಣ ಜನರ ಸಂಚಾರ ಹೊರಗಡೆ ಕಡಿಮೆಯಿತ್ತು. ಅದರಲ್ಲೂ ರಾತ್ರಿ ವೇಳೆ ಓಡಾಟ ವಿರಳವಾಗಿತ್ತು. ಇದರಿಂದಾಗಿ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದೆ. ಅಗತ್ಯ ಪ್ರಮಾಣದಲ್ಲಿ ರೇಬಿಸ್ ನಿರೋಧಕ ಚುಚ್ಚುಮದ್ದು ಲಭ್ಯವಿದೆ’ ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಬೀದಿ ನಾಯಿ ಹಾವಳಿ ಕಡಿಮೆ ಮಾಡಲು ಬಿಬಿಎಂಪಿ ನಾಯಿಗಳಿಗೆ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆ ನಡೆಸುತ್ತಿದೆ. 2018–19ನೇ ಸಾಲಿನಲ್ಲಿ 46,151 ನಾಯಿಗಳು, 2019–20ನೇ ಸಾಲಿನಲ್ಲಿ 38,035 ನಾಯಿಗಳು ಹಾಗೂ 2020–21ನೇ ಸಾಲಿನಲ್ಲಿ (ಜನವರಿ ಅಂತ್ಯಕ್ಕೆ) 32,066 ನಾಯಿಗಳಿಗೆ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಮೂರು ವರ್ಷದ ಅವಧಿಯಲ್ಲಿ ಈ ಚಿಕಿತ್ಸೆಗೆ 1.16 ಲಕ್ಷ ನಾಯಿಗಳು ಒಳಪಟ್ಟಿವೆ.



ಅಂಕಿ ಅಂಶಗಳು

37,517 5 ವರ್ಷಗಳಲ್ಲಿ ವರದಿಯಾದ ನಾಯಿ ಕಡಿತ ಪ್ರಕರಣಗಳು

3.10 ಲಕ್ಷ ನಗರದಲ್ಲಿರುವ ಬೀದಿ ನಾಯಿಗಳು

1.16 ಲಕ್ಷ 3 ವರ್ಷಗಳಲ್ಲಿ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ಒಳಪಟ್ಟ ನಾಯಿಗಳು

2.55 ಲಕ್ಷ 3 ವರ್ಷಗಳಲ್ಲಿ ರೇಬಿಸ್ ನಿರೋಧಕ ಲಸಿಕೆ ಪಡೆದ ನಾಯಿಗಳು

‘ನಾಯಿ ಕಡಿತ– ಚಿಕಿತ್ಸೆ ಪಡೆಯದಿದ್ದಲ್ಲಿ ಅಪಾಯ’

‘ಯಾವುದೇ ನಾಯಿ ಕಚ್ಚಿದರೂ ನಿರ್ಲಕ್ಷ್ಯ ಮಾಡಬಾರದು. ನಾಯಿ ಕಡಿತದಿಂದಲೇ ರೇಬಿಸ್ ಕಾಣಿಸಿಕೊಳ್ಳುವುದು ಜಾಸ್ತಿ. ರೇಬಿಸ್ ಸೋಂಕು ದೇಹದ ನರವ್ಯೂಹ ಸೇರಿದ ಬಳಿಕ ಬಲಿಷ್ಠಗೊಂಡು ವ್ಯಕ್ತಿಯನ್ನು ಘಾಸಿಗೊಳಿಸುತ್ತದೆ. ಕಚ್ಚಿದ ಗಾಯವನ್ನು ಮೊದಲು ಶುದ್ಧ ನೀರಿನಿಂದ ತೊಳೆಯಬೇಕು. ಸಾಬೂನಿನಿಂದ ಗಾಯವನ್ನು ಶುಭ್ರಗೊಳಿಸಿದಲ್ಲಿ ಸೋಂಕು ದೇಹದ ನರವ್ಯೂಹವನ್ನು ಸೇರುವುದನ್ನು ತಡೆಯಲು ಸಾಧ್ಯವಾಗಲಿದೆ’ ಎಂದು ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯ ವೈದ್ಯ ಅಧೀಕ್ಷಕ ಡಾ. ಅನ್ಸರ್ ಅಹಮದ್ ತಿಳಿಸಿದರು.

‘ಗಾಯ ದೊಡ್ಡದಾಗಿದ್ದರೆ ಅಥವಾ ರಕ್ತಸ್ರಾವ ಅಧಿಕವಾಗಿದ್ದಲ್ಲಿ ಶುದ್ಧ ಬಟ್ಟೆಯನ್ನು ಕಟ್ಟಿಕೊಳ್ಳಬೇಕು. ಬಳಿಕ ಹತ್ತಿರದ ಆಸ್ಪತ್ರೆಗೆ ತೆರಳಿ ರೇಬಿಸ್ ನಿರೋಧಕ ಚುಚ್ಚುಮದ್ದನ್ನು ಪಡೆಯಬೇಕು. ಕಚ್ಚಿದ ನಾಯಿ ಮೇಲೆ ಕೂಡ ನಿಗಾ ಇಡಬೇಕಾಗುತ್ತದೆ. ಯಾವುದೇ ಕಾರಣಕ್ಕೂ ನಾಯಿಯನ್ನು ಸಾಯಿಸಬಾರದು’ ಎಂದರು.

ಪ್ರಜಾವಾಣಿ ವಿಶೇಷ

ನಗರದಲ್ಲಿ ನಾಯಿ ಕಡಿತ ಪ್ರಕರಣಗಳು

ವರ್ಷ	ಪ್ರಕರಣಗಳು
2017	11,340
2018	10,110
2019	8,799
2020	6,606
2021 (ಜನವರಿ ಅಂತ್ಯಕ್ಕೆ)	662


ಕುರಿಗಾರರ ಶ್ರೇಯೋಭಿವೃದ್ಧಿ ಯೋಜನೆಗಳಿಗೆ ಕತ್ತರಿ

ಕುರಿಗಾರರಿಗೆ ಅರಣ್ಯ ಇಲಾಖೆಯ ಸಿಬ್ಬಂದಿ ನೀಡುತ್ತಿರುವ ಕಿರುಕುಳವನ್ನು ತಪ್ಪಿಸಬೇಕು. ಅರಣ್ಯದಲ್ಲಿ ಕುರಿ ಮೇಯಿಸಲು ಅವಕಾಶ ನೀಡಬೇಕು ಎಂದರು.

ಸರ್ಕಾರದ ಧೋರಣೆ ಖಂಡಿಸಿ ಉಪವಾಸ: ಎಚ್‌.ಎಂ. ರೇವಣ್ಣ

ಬೆಂಗಳೂರು: ‘ಕುರಿಗಾರರ ಶ್ರೇಯೋಭಿವೃದ್ಧಿಗಾಗಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಜಾರಿಗೊಳಿಸಿದ್ದ ಅನೇಕ ಯೋಜನೆಗಳನ್ನು ಈಗಿನ ಸರ್ಕಾರ ರದ್ದು ಪಡಿಸಿದೆ. ಸರ್ಕಾರದ ಈ ಧೋರಣೆಯನ್ನು ಖಂಡಿಸಿ ಮಾರ್ಚ್ 1ರಂದು ಉಪವಾಸ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದ್ದೇವೆ’ ಎಂದು ವಿಧಾನ ಪರಿಷತ್ ಸದಸ್ಯ ಎಚ್‌.ಎಂ.ರೇವಣ್ಣ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕುರಿ ಸಾಕಾಣಿಕೆಯು ಹಲವರ ಬದುಕಿಗೆ ಆಧಾರವಾಗಿದೆ. ಇದು ರೈತರ ಉಪ ಕಸುಬು ಕೂಡ. ಇದ್ದಂತಹ ಸವಲತ್ತುಗಳನ್ನು ರದ್ದು ಮಾಡಿರುವುದರಿಂದ ಕುರಿ ಸಾಕುವವರೆಲ್ಲಾ ಬೀದಿಗೆ ಬರುವಂತಹ ಪರಿಸ್ಥಿತಿ ನಿರ್ಮಾಣಗೊಂಡಿದೆ. ಸರ್ಕಾರವು ಕೂಡಲೇ ತನ್ನ ನಿರ್ಧಾರ ಹಿಂದಕ್ಕೆ ಪಡೆಯಬೇಕು. ಇದಕ್ಕಾಗಿ ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘಗಳ ಮಹಾಮಂಡಳದ (ಕೆಸಿಎಸ್‌ಜಿಆರ್‌ಎಸ್‌ಎಫ್‌ಎಲ್) ನೇತೃತ್ವದಲ್ಲಿ ಮೌರ್ಯ ವೃತ್ತದ ಗಾಂಧಿ ಪ್ರತಿಮೆ ಬಳಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ’ ಎಂದರು.



‘ಸತ್ತ ಕುರಿಗಳಿಗೆ ₹5 ಸಾವಿರ ಪರಿಹಾರ ನೀಡುವ ಅನುಗ್ರಹ ಯೋಜನೆಯನ್ನು ಹಿಂದಿನ ಸರ್ಕಾರ ಜಾರಿಗೆ ತಂದಿತ್ತು. ಇದನ್ನೂ ಈಗಿನ ಸರ್ಕಾರ ರದ್ದು ಪಡಿಸಿದೆ. ಈ ಯೋಜನೆಯನ್ನು ಮುಂದುವರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಕೃಷಿ ಸಾಲದ ಮಾದರಿಯಲ್ಲಿ ನಬಾರ್ಡ್, ಡಿ.ಸಿ.ಸಿ ಬ್ಯಾಂಕ್ ಮೂಲಕ ಕುರಿಗಾರರಿಗೆ ಬಡ್ಡಿರಹಿತ ಸಾಲ ಒದಗಿಸಬೇಕು. ಕುರಿ ಮತ್ತು ಮೇಕೆ ಮಹಾಮಂಡಳಕ್ಕೆ ಪ್ರತಿ ವರ್ಷ ಅನುದಾನ ನೀಡುವ ಸಂಬಂಧ ನಿಯಮ ರೂಪಿಸಬೇಕು’ ಎಂದು ಅವರು ಒತ್ತಾಯಿಸಿದರು.

ಉಪಮುಖ್ಯಮಂತ್ರಿ ಅಶ್ವತ್ಥನಾರಾಯಣ ಭರವಸೆ

ಕೃಷಿ ವಿ.ವಿ.ಗೂ ಯುವಿಸಿಇ ಮಾದರಿಯ ಆಡಳಿತ ಮಂಡಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು (ಯುವಿಸಿಇ) ಮಾದರಿಯಲ್ಲಿಯೇ ಕೃಷಿ ವಿಶ್ವವಿದ್ಯಾಲಯದ ಆಡಳಿತ, ಶೈಕ್ಷಣಿಕ, ಆರ್ಥಿಕ ಸ್ವರೂಪವನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಕೃಷಿ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಗಳ ಸಂಘವು ನಗರದಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಯುವಿಸಿಇಗೆ ಆರ್ಥಿಕ, ಆಡಳಿತ ಮತ್ತು ಶೈಕ್ಷಣಿಕವಾಗಿ ಸ್ವಾಯತ್ತತೆ ನೀಡುವ ಮೂಲಕ ಅದನ್ನು ಜಾಗತಿಕ ಶಿಕ್ಷಣ ಸಂಸ್ಥೆಯನ್ನಾಗಿ ರೂಪಿಸಲಾಗುತ್ತಿದೆ. ಕೃಷಿ ವಿಶ್ವವಿದ್ಯಾಲಯದಲ್ಲಿಯೂ ‘ಬೋರ್ಡ್ ಆಫ್ ಗವರ್ನನ್ಸ್’ ವ್ಯವಸ್ಥೆಯೇ ಬರಲಿದೆ’ ಎಂದು ಹೇಳಿದರು.

‘ವಿಶ್ವವಿದ್ಯಾಲಯಗಳಿಗೆ ರಾಜಕೀಯ ನೇಮಕಾತಿ ಮಾಡುವುದು, ಶಿಷ್ಯಂದಿರನ್ನು ತಂದು ಕೂರಿಸುವುದು, ಸ್ವಹಿತಾಸಕ್ತಿಗಳು ಮುಂತಾದವುಗಳಿಂದ ಹೊರಬರಲೇಬೇಕಿದೆ. ಅರ್ಹರು ಯಾರಿದ್ದಾರೋ ಅವರಷ್ಟೇ ಇಲ್ಲಿನ ಉನ್ನತ ಸ್ಥಾನಗಳಲ್ಲಿ ಇರಬೇಕು. ಇದೇ ಮಾರ್ಗಸೂಚಿಯನ್ನು ಪ್ರತೀ ಕಾಲೇಜಿಗೂ ಅನ್ವಯ ಮಾಡುತ್ತಿದ್ದೇವೆ’ ಎಂದರು.

‘ಸದ್ಯ ಒಂದು ಎಂಜಿನಿಯರಿಂಗ್ ಕಾಲೇಜು ನಡೆಸಲು ವರ್ಷಕ್ಕೆ ₹30 ಕೋಟಿ, ಒಂದು ಐಐಟಿಗೆ ₹1,200 ಕೋಟಿ ಖರ್ಚು ಮಾಡಲಾಗುತ್ತಿದೆ. ಯುವಿಸಿಇ ಅಭಿವೃದ್ಧಿಗೆ ವಾರ್ಷಿಕ ₹150 ಕೋಟಿ ವೆಚ್ಚ ಮಾಡಲು ಉದ್ದೇಶಿಸಲಾಗಿದೆ’ ಎಂದರು.

ಲೈಸೆನ್ಸ್ ರಾಜ್ ವ್ಯವಸ್ಥೆ ನಿರ್ಮೂಲನೆ: ‘ರಾಜ್ಯ ಕೃಷಿ ವ್ಯವಸ್ಥೆಯಲ್ಲಿ ತುಂಬಿಹೋಗಿದ್ದ ಲೈಸೆನ್ಸ್ ರಾಜ್ ವ್ಯವಸ್ಥೆಯ ನಿರ್ಮೂಲನೆ ಮಾಡಲು ಹಾಗೂ ಕೃಷಿಯಲ್ಲಿ ನವೋದ್ಯಮ, ಆವಿಷ್ಕಾರಗಳಿಗೆ ಒತ್ತು ನೀಡಲು ಸರ್ಕಾರ ಅನೇಕ ಸುಧಾರಣೆಗಳನ್ನು ಜಾರಿಗೆ ತಂದಿದೆ’ ಎಂದರು.

‘ಮೊದಲು ರೈತರು ಎಪಿಎಂಪಿಯಲ್ಲಿ ನಡೆಸುತ್ತಿದ್ದ ಒಟ್ಟು ವಹಿವಾಟಿನ ಮೇಲೆ ಶೇ 1.5ರಷ್ಟು ಸೆಸ್ ಹಾಕಲಾಗುತ್ತಿತ್ತು. ಅದನ್ನೀಗ ಕೇವಲ 60 ಪೈಸೆಗೆ ಇಳಿಸಿದ್ದೇವೆ. ಹಾಗೆ ನೋಡಿದರೆ ಸರ್ಕಾರದ ಆದಾಯನ್ನೇ ಕಡಿಮೆ ಮಾಡಿಕೊಂಡು ರೈತರು ಹಾಗೂ ಮಾರುಕಟ್ಟೆ ವ್ಯವಸ್ಥೆಯನ್ನು ಬಲಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ’ ಎಂದರು.

ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ರಾಜೇಂದ್ರ ಪ್ರಸಾದ್, ಡೀನ್ ಡಾ.ಡಿ.ಎಲ್.ಸಾವಿತ್ರಮ್ಮ, ಹಳೆಯ ವಿದಾರ್ಥಿಗಳ ಸಂಘದ ಅಧ್ಯಕ್ಷ ಡಾ.ಕೆ. ನಾರಾಯಣ ಗೌಡ, ಕಾರ್ಯದರ್ಶಿ ಡಾ. ಹರಿಣಿಕುಮಾರ್ ಇದ್ದರು.



ಕಾರ್ಯಕ್ರಮದಲ್ಲಿ ಡಾ.ಸಿ.ಎನ್‌ ಅಶ್ವತ್ಥನಾರಾಯಣ ಅವರನ್ನು ಸನ್ಮಾನಿಸಲಾಯಿತು. ಡಾ.ಎಸ್‌.ರಾಜೇಂದ್ರ ಪ್ರಸಾದ್, ಡಾ.ಕೆ.ನಾರಾಯಣ ಗೌಡ ಇತರರು ಇದ್ದರು

ನಮ್ಮವರಿಂದಲೇ ನಿರ್ಲಕ್ಷ್ಯ: ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರದಲ್ಲಿರುವ ನಮ್ಮವರೇ ನಮ್ಮನ್ನು ನಿರ್ಲಕ್ಷಿಸುತ್ತಿದ್ದಾರೆ. ಪಂಚಮಸಾಲಿ ಲಿಂಗಾಯತರಿಗೆ ಪ್ರವರ್ಗ 2ಎ ಮೀಸಲಾತಿ ನೀಡುವಂತೆ ಒತ್ತಾಯಿಸಿ ನಡೆಸುತ್ತಿರುವ ಧರಣಿ ಸತ್ಯಾಗ್ರಹ ಏಳು ದಿನ ಪೂರೈಸಿದರೂ ಯಾವ ಸಚಿವರೂ ಸ್ಥಳಕ್ಕೆ ಬಂದಿಲ್ಲ’ ಎಂದು ಪಂಚಮಸಾಲಿ ಸಮುದಾಯದ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದರು.

ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರವೂ ಧರಣಿ ಮುಂದುವರಿಯಿತು. ಈ ಸಂದರ್ಭದಲ್ಲಿ ಮುಖಂಡರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬೆಳಗಾವಿ ಜಿಲ್ಲೆಯ ಸಮುದಾಯದ ಹಲವು ಮುಖಂಡರು, ರಾಜಕೀಯ ನಾಯಕರು ಪಾಲ್ಗೊಂಡಿದ್ದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ‘ಧರಣಿ ಸತ್ಯಾಗ್ರಹ ಆರಂಭವಾಗಿ ವಾರವೇ ಆಯಿತು. ಆದರೂ ಸರ್ಕಾರದ ಪ್ರತಿನಿಧಿಗಳು ಸ್ಥಳಕ್ಕೆ ಬಂದು ಮನವಿ ಆಲಿಸಿಲ್ಲ. ನಮ್ಮ ಸಮುದಾಯದ ಸಚಿವರೇ ನಿರ್ಲಕ್ಷಿಸುತ್ತಿದ್ದಾರೆ’ ಎಂದು ಹೇಳಿದರು.

ಸರ್ಕಾರದ ಮೇಲೆ ಒತ್ತಡ ತನ್ನಿ: ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿ, ‘ನಮ್ಮ ಸಮುದಾಯದ ಎಲ್ಲ ಶಾಸಕರೂ ವಿಧಾನಮಂಡಲ ಅಧಿವೇಶನದ ಸಂದರ್ಭದಲ್ಲಿ ಸರ್ಕಾರದ ಮೇಲೆ ಒತ್ತಡ ಹೇರಬೇಕು. ನಮ್ಮ ಹೋರಾಟಕ್ಕೆ ಶಕ್ತಿ ತುಂಬಬೇಕು’ ಎಂದರು.

ದ್ರೌಪದಿ ಅವಹೇಳನ: ಸಾಹಿತಿ ಭೈರಪ್ಪ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಸಾಹಿತಿ ಎಸ್‌.ಎಲ್ ಭೈರಪ್ಪ ಅವರು ತಿಗಳ ಸಮುದಾಯದ ಆರಾಧ್ಯ ದೇವತೆ ದ್ರೌಪದಿಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ತಿಗಳ ವಹ್ನಿಕುಲ ಸಂಘ ಶನಿವಾರ ಸ್ಥಳೀಯ ಪೊಲೀಸ್ ಠಾಣೆಗೆ ದೂರು ನೀಡಿದೆ. ಭೈರಪ್ಪನವರ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವಂತೆ ಒತ್ತಾಯಿಸಿದೆ.

ಮೈಸೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ ಭೈರಪ್ಪನವರು ತಿಗಳ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ರೀತಿಯಲ್ಲಿ ಹೇಳಿಕೆ ನೀಡಿದ್ದಾರೆ. ಅವರು ಸಾರ್ವಜನಿಕವಾಗಿ ತಿಗಳ ಸಮುದಾಯದ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ಅವರ ಮನೆಯ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಸಮುದಾಯದ ನಾಯಕರು ಎಚ್ಚರಿಕೆ ನೀಡಿದ್ದಾರೆ.

‘ಪ್ರತಿ ಸಮುದಾಯಕ್ಕೂ ಅದರದೇ ಆದ ಪುರಾಣ ಮತ್ತು ಐತಿಹಾಸಿಕ ನಂಟು ಇರುತ್ತದೆ. ಆ ನಂಬಿಕೆಗಳ ಮೇಲೆ ಆಯಾ ಸಮುದಾಯದ ಧಾರ್ಮಿಕ ಭಾವನೆ, ಸಂಪ್ರದಾಯ, ಆಚರಣೆಗಳಿರುತ್ತವೆ. ಒಂದು ಸಮುದಾಯದ ಸಂಪ್ರದಾಯದ ಬಗ್ಗೆ ಕೀಳಾಗಿ ಮಾತನಾಡುವುದು ಭೈರಪ್ಪನವರಂಥ ಹಿರಿಯ ಸಾಹಿತಿಗೆ ಶೋಭೆ ತರುವುದಿಲ್ಲ’ ಎಂದು ತಿಗಳ ವಹ್ನಿಕುಲ ಸಂಘದ ತಾಲ್ಲೂಕು ಅಧ್ಯಕ್ಷ ಗೋಪಾಲಕೃಷ್ಣ ಹೇಳಿದ್ದಾರೆ.

ತಿಗಳ ಸಂಘ ರಾಜ್ಯ ಸಂಘದ ನಿರ್ದೇಶಕ ಎಸ್‌.ಸಿ.ಚಂದ್ರಪ್ಪ, ಸದಸ್ಯ ಲಕ್ಷ್ಮಣ್, ಸಂಚಾಲಕ ಮುನಿವೀರಣ್ಣ, ತಾಲ್ಲೂಕು ಗೌರವಾಧ್ಯಕ್ಷ ಕೇಶವಪ್ಪ, ಉಪಾಧ್ಯಕ್ಷ ಶಿವರಾಮಪ್ಪ ಮುಂತಾದವರು ಠಾಣೆಗೆ ತೆರಳಿ ದೂರು ನೀಡಿದ ತಂಡದಲ್ಲಿದ್ದರು.

ಇಂದು ಬೃಹತ್ ಉದ್ಯೋಗ ಮೇಳ

ಬೆಂಗಳೂರು: ಸಂಸದ ತೇಜಸ್ವಿ ಸೂರ್ಯ ಅವರ ‘ಸಂಸದ್ ಉದ್ಯೋಗ ಮಿತ್ರ’ ಕಾರ್ಯಕ್ರಮದಡಿ ‘ಬೃಹತ್ ಉದ್ಯೋಗ ಮೇಳ’ವನ್ನು ಇದೇ 28ರಂದು (ಭಾನುವಾರ) ಬೆಳಿಗ್ಗೆ 9.30ರಿಂದ ಬಿಟಿಎಂ ಬಡಾವಣೆಯ ಶಾಂತಿನಿಕೇತನ ಶಾಲೆಯಲ್ಲಿ ಆಯೋಜಿಸಲಾಗಿದೆ.

ಮೇಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಿ.ರಿಚರ್ಡ್, ಕೂ ಸಂಸ್ಥೆಯ ಅಪ್ರಮೇಯ, ಪ್ರಾಕ್ಟೊ ಸಂಸ್ಥೆಯ ಎನ್‌.ಡಿ.ಶಶಾಂಕ್, ಜೆಟುಡಬ್ಲ್ಯು ಸಂಸ್ಥೆಯ ಪ್ರೀತಿ ಸಾವಂತ್ ಭಾಗವಹಿಸಲಿದ್ದಾರೆ.

50ಕ್ಕೂ ಹೆಚ್ಚು ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸುತ್ತಿದ್ದು, ಆಸಕ್ತರು ಇದರ ಪ್ರಯೋಜನ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಶಾಂತಿನಿಕೇತನ ಸ್ಕೂಲ್, ವೈಶ್ಯ ಬ್ಯಾಂಕ್ ಕಾಲೊನಿ, ಬಿಟಿಎಂ ಬಡಾವಣೆ 2ನೇ ಹಂತ.

ಸಂಪರ್ಕ: 9916844844

‘ರೇವಾ ನೆಸ್ಟ್’ ಯೋಜನೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ರೇವಾ ವಿಶ್ವವಿದ್ಯಾಲಯದಲ್ಲಿ ನವೋದ್ಯಮಗಳನ್ನು ಆರಂಭಿಸಲು ವೇದಿಕೆ ಕಲ್ಪಿಸುವ ಹಾಗೂ ವಿದ್ಯಾರ್ಥಿಗಳಿಗೆ ಉದ್ಯೋಗ ತರಬೇತಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ‘ರೇವಾ ನೆಸ್ಟ್’ ಯೋಜನೆಗೆ ಚಾಲನೆ ನೀಡಲಾಯಿತು.

ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು, ಕಂಪನಿಗಳ ಪ್ರತಿನಿಧಿಗಳೊಂದಿಗೆ ಈ ನಿಟ್ಟಿನಲ್ಲಿ ಒಪ್ಪಂದ ಮಾಡಿಕೊಂಡಿತು.

ಕುಲಾಧಿಪತಿ ಡಾ.ಪಿ. ಶ್ಯಾಮರಾಜು, ‘ಎರಡೂವರೆ ವರ್ಷಗಳ ಹಿಂದೆಯೇ ಈ ಯೋಜನೆಯನ್ನು ಆರಂಭಿಸಲಾಗಿತ್ತು. ಇಂದು 10 ನವೋದ್ಯಮಗಳ ಜೊತೆಗೆ ಒಡಂಬಡಿಕೆ ಮಾಡಿಕೊಂಡು ಅಧಿಕೃತವಾಗಿ ಚಾಲನೆ ನೀಡಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಸಂಸ್ಥೆಗಳ ಮೂಲಕ ‘ರೇವಾ ನೆಸ್ಟ್’ನ ನವೋದ್ಯಮಗಳು ₹1ಕೋಟಿಯಷ್ಟು ನಿಧಿ ಪಡೆದುಕೊಂಡಿದ್ದು, ಕಂಪನಿಗಳಿಗೆ ಅಗತ್ಯ ವ್ಯವಸ್ಥೆ, ಜಾಗ ಹಾಗೂ ಪ್ರೋತ್ಸಾಹ ನೀಡಲಾಗುವುದು’ ಎಂದರು.

‘ನೂತನವಾಗಿ ಉದ್ಯಮ ಆರಂಭಿಸುವವರಿಗೆ ಕಡಿಮೆ ಬಂಡವಾಳದಲ್ಲಿ ತಾವು ಸಿದ್ಧಪಡಿಸಬೇಕು ಎಂದು ಕೊಂಡಿರುವ ಯೋಜನೆಯನ್ನು ಅನುಷ್ಠಾನಗೊಳಿಸಲು ಇದರಿಂದ ಅನುಕೂಲವಾಗಲಿದೆ’ ಎಂದು ಅವರು ಹೇಳಿದರು.

‘ವಿಶ್ವವಿದ್ಯಾಲಯದಲ್ಲಿ ತಾಂತ್ರಿಕ ವಿಷಯಗಳ ಅಧ್ಯಯನದಲ್ಲಿ ತೊಡಗಿರುವ 7 ಸಾವಿರ ವಿದ್ಯಾರ್ಥಿಗಳೂ ಸೇರಿದಂತೆ ನಿರ್ವಹಣೆ, ವಿಜ್ಞಾನ, ಕಾನೂನು, ವಾಸ್ತುಶಿಲ್ಪ ಮತ್ತಿತರ ವಿಷಯಗಳನ್ನು ಕಲಿಯುತ್ತಿರುವ ಸುಮಾರು 15 ಸಾವಿರ ವಿದ್ಯಾರ್ಥಿಗಳಿದ್ದಾರೆ. ಇವರೆಲ್ಲರಿಗೂ ಅನುಕೂಲವಾಗುವ ಉದ್ದೇಶದಿಂದ ಈ ಯೋಜನೆ ಆರಂಭಿಸಲಾಗಿದೆ’ ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಡಾ.ಎನ್.ರಮೇಶ್, ‘ರೇವಾ ನೆಸ್ಟ್’ ಯೋಜನೆಯ ನಿರ್ದೇಶಕಿ ಡಾ.ಕಿರಣ್ ಕುಮಾರಿ ಪಾಟೀಲ ಇದ್ದರು.

ಬೈಕ್‌ನಲ್ಲಿದ್ದ ಹಣ ಕದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್‌ನಲ್ಲಿ ಇಟ್ಟಿದ್ದ ಲಕ್ಷಗಟ್ಟಲೆ ಹಣ ಕದ್ದು ಇಬ್ಬರು ಕಳ್ಳರು ಪರಾರಿಯಾಗಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಫೆ.14ರಂದು ಕೆ.ಆರ್.ಪುರದ ದೇವಸಂದ್ರದ ಬಳಿ ಕಳ್ಳತನ ನಡೆದಿತ್ತು. ವೆಂಕಟಸ್ವಾಮಿ ಎಂಬುವರು ₹7 ಲಕ್ಷ ಹಣ ತೆಗೆದುಕೊಂಡು ಬ್ಯಾಂಕ್‌ಗೆ ಜಮಾ ಮಾಡಲು ಬೈಕ್‌ನಲ್ಲಿ ತೆರಳಿದ್ದರು. ಮಾರ್ಗ ಮಧ್ಯೆ ಬೈಕ್ ನಿಲ್ಲಿಸಿ, ಬಾಕ್ಸ್‌ನಲ್ಲಿ ಹಣ ಇಟ್ಟು ಅಂಗಡಿಗೆ ತೆರಳಿದ್ದರು.

ಈ ವೇಳೆ ಪಲ್ಸರ್ ಬೈಕ್‌ನಲ್ಲಿ ಬಂದಿದ್ದ ಇಬ್ಬರು ಕಳ್ಳರು, ಡಿಕ್ಕಿಯಲ್ಲಿದ್ದ ಹಣ ಕದ್ದು ಪರಾರಿಯಾಗಿದ್ದರು. ಈ ಸಂಬಂಧ ಕೆ.ಆರ್.ಪುರ ಠಾಣೆಗೆ ವೆಂಕಟಸ್ವಾಮಿ ದೂರು ನೀಡಿದ್ದರು.

‘ಆರೋಪಿಗಳು ಕಳ್ಳತನ ಮಾಡಿರುವ ಕುರಿತು ಸಿಸಿಟಿವಿ ದೃಶ್ಯಾವಳಿಗಳು ಸುಳಿವು ಲಭ್ಯವಾಗಿದೆ. ಇದನ್ನು ಆಧರಿಸಿ ಆರೋಪಿಗಳನ್ನು ಶೀಘ್ರವೇ ಪತ್ತೆ ಮಾಡಲಾಗುವುದು’ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ಆತ್ಮಹತ್ಯೆ: ಎಸ್‌ಐ ಅಮಾನತು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ‘ಪೊಲೀಸ್ ಕಸ್ಟಡಿಯಲ್ಲಿದ್ದ ಆರೋಪಿ ಮಹಜರು ವೇಳೆ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡ ಪ್ರಕರಣದಲ್ಲಿ ಕರ್ತವ್ಯ ಲೋಪದ ಆರೋಪದಡಿ ಹನುಮಂತ ನಗರ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಮಂಜುನಾಥ್ ಅವರನ್ನು ಅಮಾನತು ಮಾಡಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದರು.

ಮಾಧ್ಯಮಗಳಿಗೆ ಶನಿವಾರ ಪ್ರತಿಕ್ರಿಯಿಸಿದ ಅವರು, ‘ಆರೋಪಿ ಪೊಲೀಸರ ವಶದಿಂದ ತಪ್ಪಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅಧಿಕಾರಿಗಳ ನಿರ್ಲಕ್ಷ್ಯವೂ ಇದಕ್ಕೆ ಕಾರಣ. ಹಾಗಾಗಿ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಮಂಜುನಾಥ್ ಅವರನ್ನು ಅಮಾನತುಗೊಳಿಸಲಾಗಿದೆ’ ಎಂದರು.

‘ಘಟನೆ ನಡೆದ ವೇಳೆ ನಾಲ್ವರು ಪೊಲೀಸ್ ಸಿಬ್ಬಂದಿ ಸ್ಥಳದಲ್ಲಿದ್ದರು. ಆದರೂ ಇಂತಹ ಪ್ರಕರಣ ನಡೆದಿದೆ. ಅಧಿಕಾರಿಗಳ ನಿರ್ಲಕ್ಷ್ಯದ ಕುರಿತು ತನಿಖೆ ನಡೆಯುತ್ತಿದೆ. ಇದರಿಂದ ಬರುವ ವರದಿ ಆಧರಿಸಿ ಮುಂದಿನ ಕ್ರಮ ಜರುಗಿಸಲಾಗುವುದು. ಸದ್ಯಕ್ಕೆ ಇಲಾಖೆಯ ಮಟ್ಟದಲ್ಲಿ ತನಿಖೆಯಾಗುತ್ತಿದೆ’ ಎಂದು ಹೇಳಿದರು.

ಏನಿದು ಪ್ರಕರಣ?: ಬಿಡಿಎ ನಿವೇಶನ ಕೊಡಿಸುವುದಾಗಿ ವಂಚನೆ ಮಾಡಿದ್ದ ಪ್ರಕರಣದಲ್ಲಿ ಸಿದ್ಧಲಿಂಗಸ್ವಾಮಿ ಎಂಬುವರನ್ನು ಹನುಮಂತ ನಗರ ಠಾಣೆಯ ಪೊಲೀಸರು ಇತ್ತೀಚೆಗೆ ಬಂಧಿಸಿ, ಕಸ್ಟಡಿಗೆ ಪಡೆದಿದ್ದರು. ತನಿಖೆ ವೇಳೆ ತನ್ನ ಮನೆಯಲ್ಲಿ ಕೆಲವು ಪ್ರಕರಣಕ್ಕೆ ಸಂಬಂಧಿಸಿದ ಕೆಲವು ವಸ್ತುಗಳು ಇರುವುದಾಗಿ ಆರೋಪಿ ಹೇಳಿದ್ದ.

ಇದಕ್ಕಾಗಿ ಮಹಜರು ನಡೆಸಲು ಸಿದ್ದಲಿಂಗಸ್ವಾಮಿಯನ್ನು ವಿದ್ಯಾರಣ್ಯಪುರದಲ್ಲಿದ್ದ ಮನೆಗೆ ಶುಕ್ರವಾರ (ಫೆ.26) ಕರೆ ತಂದಿದ್ದರು. ಈ ವೇಳೆ ಎರಡನೇ ಮಹಡಿಯಿಂದ ಆರೋಪಿ ಜಿಗಿದು, ಆತ್ಮಹತ್ಯೆಗೆ ಯತ್ನಿಸಿದ್ದರು. ರಕ್ತಸ್ರಾವ ಸ್ಥಿತಿಯಲ್ಲೇ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದರು.

ಆತ್ಮಹತ್ಯೆ ಸಂಬಂಧ ವಿದ್ಯಾರಣ್ಯಪುರ ಠಾಣೆಯಲ್ಲೂ ಪ್ರಕರಣ ದಾಖಲಾಗಿದೆ. ಆರೋಪಿ ಆತ್ಮಹತ್ಯೆಯ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸುವ ಸಾಧ್ಯತೆಗಳಿವೆ ಎನ್ನಲಾಗಿದೆ.

ಖೋಟಾನೋಟು ದಂಧೆ ಆರೋಪಿ ಬಂಧನ

ಬೆಂಗಳೂರು: ಖೋಟಾನೋಟು ಚಲಾವಣೆ ದಂಧೆಯಲ್ಲಿ ತೊಡಗಿದ್ದ ಆರೋಪಿಯನ್ನು ಚಿಕ್ಕಜಾಲ ಪೊಲೀಸರು ಬಂಧಿಸಿದ್ದಾರೆ.

‘ಚಿಕ್ಕಜಾಲದ ರವಿ ಬಂಧಿತ ಆರೋಪಿ. ಈತನಿಂದ ₹1.40 ಲಕ್ಷದಷ್ಟು ಖೋಟಾನೋಟು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಚಿಕ್ಕಜಾಲದ ಬಳಿ ಇರುವ ಕೃಷ್ಣ ಸಾಗರ್ ಹೋಟೆಲ್ ಸಮೀಪ ಆರೋಪಿ ನಕಲಿ ನೋಟು ಚಲಾವಣೆ ಮಾಡುತ್ತಿರುವ ಕುರಿತು ಪೊಲೀಸರಿಗೆ ಮಾಹಿತಿ ಸಿಕ್ಕಿತ್ತು. ಕಾರ್ಯಾಚರಣೆ ವೇಳೆ ಆರೋಪಿ ಸಿಕ್ಕಿಬಿದ್ದ. ₹500 ಹಾಗೂ ₹100 ಮುಖಬೆಲೆಯ ಖೋಟಾನೋಟುಗಳು ಆರೋಪಿ ಬಳಿ ಪತ್ತೆಯಾಗಿವೆ’ ಎಂದು ಮಾಹಿತಿ ನೀಡಿದರು.

‘ಕೃತ್ಯದಲ್ಲಿ ಮತ್ತೊಬ್ಬ ಭಾಗಿಯಾಗಿದ್ದು, ಬಂಧನದ ವೇಳೆ ಪರಾರಿಯಾಗಿರುವುದಾಗಿ ವಿಚಾರಣೆ ವೇಳೆ ಆರೋಪಿ ತಿಳಿಸಿದ್ದಾನೆ. ಆತನ ಪತ್ತೆಗೂ ಶೋಧ ಕೈಗೊಳ್ಳಲಾಗಿದೆ’ ಎಂದೂ ಹೇಳಿದರು.

ಹೃದಯಾಘಾತದಿಂದ ಎಎಸ್‌ಐ ಸಾವು



ಬೆಂಗಳೂರು: ಜೆ.ಸಿ. ನಗರ ಪೊಲೀಸ್ ಠಾಣೆಯ ಎಎಸ್‌ಐ ರಂಗಸ್ವಾಮಿ (59) ಠಾಣೆಯಲ್ಲಿ ಕರ್ತವ್ಯನಿರತರಾಗಿದ್ದಾಗಲೇ ಹೃದಯಾಘಾತದಿಂದ ಶನಿವಾರ ನಿಧನರಾದರು.

ಇವರು ಜೆ.ಸಿ.ನಗರ ಠಾಣೆಯಲ್ಲಿ ಹಲವು ವರ್ಷಗಳಿಂದ ಎಎಸ್‌ಐ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಮಧ್ಯಾಹ್ನ ಎಂದಿನಂತೆ ಊಟ ಮುಗಿಸಿ, ಶೂ ಧರಿಸುತ್ತಿದ್ದ ವೇಳೆ ಏಕಾಏಕಿ ಕುಸಿದು ಬಿದ್ದಿದ್ದರು. ಠಾಣೆಯಲ್ಲಿದ್ದ ಸಿಬ್ಬಂದಿ ಕೂಡಲೇ ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದರು. ಅವರು ಹೃದಯಾಘಾತದಿಂದ ಮತಪಟ್ಟಿರುವುದಾಗಿ ವೈದ್ಯರು ತಿಳಿಸಿದರು.

‘ಪೀಣ್ಯ ಎರಡನೇ ಹಂತದಲ್ಲಿ ವಾಸವಿದ್ದ ಇವರಿಗೆ ಪತ್ನಿ ಹಾಗೂ ಮೂವರು ಮಕ್ಕಳು ಇದ್ದಾರೆ. ಮುಂದಿನ ಅಕ್ಟೋಬರ್‌ನಲ್ಲಿ ರಂಗಸ್ವಾಮಿ ಅವರು ನಿವೃತ್ತಿ ಹೊಂದಬೇಕಿತ್ತು’ ಎಂದು ಸಹೋದ್ಯೋಗಿಗಳು ತಿಳಿಸಿದರು.

ನಗರದಲ್ಲಿ ಇಂದು

ಪ್ರತಿಭಾ ಪುರಸ್ಕಾರ: ದ.ರಾ. ಬೇಂದ್ರೆ 125ನೇ ಜಯಂತಿ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ: ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಅಧ್ಯಕ್ಷತೆ: ವಿ. ಸೋಮಣ್ಣ, ಅತಿಥಿಗಳು: ನರಹಳ್ಳಿ ಬಾಲಸುಬ್ರಹ್ಮಣ್ಯ, ಕೆ.ಬಿ. ಅರಸಪ್ಪ, ಶೈಲಜಾ ಸೋಮಣ್ಣ, ಆಯೋಜನೆ: ವಿ. ಸೋಮಣ್ಣ ಪ್ರತಿಷ್ಠಾನ, ಸ್ಥಳ: ಕಾಸಿಯಾ ಸಭಾಂಗಣ, ವಿಜಯನಗರ, ಬೆಳಿಗ್ಗೆ 10.30

ಸಂಗೀತ ಸ್ಪರ್ಧೆ: ಕೆ. ಮೋಹನ್ ದೇವ್ ಆಳ್ವ–ಡಾ.ಎಂ.ಕೆ. ಶೈಲಜ ಆಳ್ವ ದತ್ತಿ ಪ್ರಯುಕ್ತ ಕರ್ನಾಟಕ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಸ್ಪರ್ಧೆ: ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಬೆಳಿಗ್ಗೆ 10.30


ಉದ್ಯೋಗ ಮೇಳ: ತೇಜಸ್ವಿ ಸೂರ್ಯ ನೇತೃತ್ವದಲ್ಲಿ ಸಂಸದ್ ಉದ್ಯೋಗ ಮಿತ್ರ, ಸ್ಥಳ: ಶಾಂತಿನಿಕೇತನ ಶಾಲೆ, ಬಿಟಿಎಂ ಬಡಾವಣೆ, ಬೆಳಿಗ್ಗೆ 9.30ರಿಂದ

ಟ್ಯಾಬ್ ವಿತರಣೆ: ಆರ್ಯ ವೈಶ್ಯ ಜನಾಂಗದ ಅರ್ಹ ಬಡ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ ವಿತರಣೆ ಹಾಗೂ ಗ್ರಾಮ ಪಂಚಾಯಿತಿ ಚುನಾವಣೆ ವಿಜೇತರಿಗೆ ಸನ್ಮಾನ, ಉದ್ಘಾಟನೆ: ವಿನಯ್ ಗುರೂಜಿ, ಆಶೀರ್ವಚನ: ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಮುಖ್ಯ ಅತಿಥಿ: ಆರ್. ಗಿರೀಶ್, ಅಧ್ಯಕ್ಷತೆ: ಟಿ.ಎ. ಶರವಣ, ಆಯೋಜನೆ: ಕರ್ನಾಟಕ ಆರ್ಯ ವೈಶ್ಯ ಮಹಾಮಂಡಲ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10.30

ಬಹುಮಾನ ವಿತರಣೆ ಸಮಾರಂಭ: ಬಿ ಗುಡ್ ಡು ಗುಡ್ ಚಾಂಪಿಯನ್ಸ್ 2021, ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಿದ ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣೆ, ಉಪಸ್ಥಿತಿ: ಅರವಿಂದ ಲಿಂಬಾವಳಿ, ಡಾ.ಎಲ್. ಗೋಮತಿ ದೇವಿ, ವಿ. ನಾಗರಾಜ್, ಆಯೋಜನೆ: ಮಿಥಿಕ್ ಸೊಸೈಟಿ, ಸಮರ್ಥ ಭಾರತ, ಸ್ಥಳ: ಮಿಥಿಕ್ ಸೊಸೈಟಿ ಸಭಾಂಗಣ, ನೃಪತುಂಗ ರಸ್ತೆ, ಬೆಳಿಗ್ಗೆ 10

ಕಿರುಚಿತ್ರ ಸ್ಪರ್ಧೆಯ ವಿಜೇತರಿಗೆ ಪ್ರಶಸ್ತಿ ಪ್ರದಾನ: ಸಿ.ಪಿ. ಯೋಗೇಶ್ವರ್, ಟಿ.ಕೆ. ಅನಿಲ್ ಕುಮಾರ್, ಕೆ. ರಾಕೇಶ್ ಕುಮಾರ್, ಗಿರೀಶ್ ಕಾಸರವಳ್ಳಿ, ಜೈಜಗದೀಶ್, ಆಯೋಜನೆ: ನಿಗ್ಲಿಸ್ ಅಡ್ವರ್ಟೈಸಿಂಗ್ ಸಂಸ್ಥೆ, ಪ್ರವಾಸೋದ್ಯಮ ಇಲಾಖೆ, ಸ್ಥಳ: ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಸಂಜೆ 4.30

ಕು.ರ. ಸೀತಾರಾಮಶಾಸ್ತ್ರಿ ಜನ್ಮ ಶತಮಾನೋತ್ಸವ: ಉದ್ಘಾಟನೆ: ಬಿ. ಸರೋಜಾದೇವಿ, ಚಲನಚಿತ್ರ ಪ್ರದರ್ಶನ: ಮಹಾಕವಿ ಕಾಳಿದಾಸ, ಕು.ರ.ಸೀ. ಚಿತ್ರ ಪಯಣದ ಬಗ್ಗೆ ಮಾತನಾಡುವವರು: ಗಂಗಾಧರ್ ಮೊದಲಿಯಾರ್, ಎನ್.ಎಸ್. ಶ್ರೀಧರ ಮೂರ್ತಿ, ಎಸ್. ಶಿವರಾಮ್, ಕು.ರ.ಸೀ. ಚಿತ್ರಗೀತೆಗಳ ಕಾರ್ಯಕ್ರಮ ಉದ್ಘಾಟನೆ: ರಮೇಶ್ ಅರವಿಂದ್, ಆಯೋಜನೆ ಮತ್ತು ಸ್ಥಳ: ಸುಚಿತ್ರಾ, ಬನಶಂಕರಿ, ಬೆಳಿಗ್ಗೆ 10.30ರಿಂದ


ರಮೇಶ್ ಅರವಿಂದ್

ಎಬಿಪಿ ಸಿ–ವೋಟರ್ ಸಮೀಕ್ಷೆ: ಬಂಗಾಳದಲ್ಲಿ ಹಣಾಹಣಿ

ಪುದುಚೇರಿ, ಅಸ್ಸಾಂನಲ್ಲಿ ಬಿಜೆಪಿ

ಪ್ರಜಾವಾಣಿ ವಾರ್ತೆ

ನವದೆಹಲಿ: ತೀವ್ರ ಕುತೂಹಲ ಕೆರಳಿಸಿರುವ ಕೇರಳ, ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು ಹಾಗೂ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯ ವಿಧಾನಸಭೆ ಚುನಾವಣೆ ಘೋಷಣೆಯಾದ ಬೆನ್ನಲೇ ಚುನಾವಣಾ ಪೂರ್ವ ಸಮೀಕ್ಷೆಗಳು ಹೊರ ಬಿದ್ದಿವೆ.

ಎಬಿಪಿ ಸಿ–ವೋಟರ್ ಸಮೀಕ್ಷೆ ಪ್ರಕಾರ, ಪುದುಚೇರಿಯಲ್ಲಿ ಮೊದಲ ಬಾರಿಗೆ ಕಮಲ ಅರಳಲಿದ್ದು, ಅಸ್ಸಾಂನಲ್ಲಿ ಬಿಜೆಪಿ ಮತ್ತೆ ಅಧಿಕಾರ ಉಳಿಸಿಕೊಳ್ಳಲಿದೆ. ಕುತೂಹಲ ಕೆರಳಿಸಿರುವ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಹಾಗೂ ಬಿಜೆಪಿ ನಡುವೆ ತೀವ್ರ ಹಣಾಹಣಿ ನಡೆಯಲಿದೆ. ಕೇರಳದಲ್ಲಿ ಮತ್ತೆ ಎಡರಂಗ ಅಧಿಕಾರ ಹಿಡಿದರೆ, ತಮಿಳುನಾಡು ಡಿಎಂಕೆ ಪಾಲಾಗಲಿದೆ ಎಂದು ಈ ಸಮೀಕ್ಷೆ ತಿಳಿಸಿದೆ.

ಕರ್ನಾಟಕ ಹೊರತುಪಡಿಸಿ ದಕ್ಷಿಣದ ಇತರ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ಹಿಡಿಯುವ ಆಸೆಗೆ ಮತ್ತೆ ಹಿನ್ನಡೆ ಆಗಲಿದೆ. ತಮಿಳುನಾಡಿನಲ್ಲಿ ಎಐಎಡಿಎಂಕೆ ಮೈತ್ರಿಯೊಂದಿಗೆ ಪಕ್ಷದ ವರ್ಚಸ್ಸು ವೃದ್ಧಿಯಾಗಲಿದೆ. ಕೇರಳದಲ್ಲಿ ಬಿಜೆಪಿ ಎರಡಂಕಿ ಸ್ಥಾನಗಳನ್ನು ಪಡೆಯದೇ ಹೋದರೂ ಮತಗಳಿಕೆ ಪ್ರಮಾಣ ಹೆಚ್ಚಲಿದೆ ಎಂದೂ ಸಮೀಕ್ಷೆ ವಿಶ್ಲೇಷಿಸಿದೆ.

ತಮಿಳುನಾಡು: ಒಟ್ಟು 234 ವಿಧಾನ ಸಭಾ ಸ್ಥಾನಗಳಲ್ಲಿ ಡಿಎಂಕೆ, ಕಾಂಗ್ರೆಸ್ ಮತ್ತು ಎಡಪಕ್ಷಗಳು 154ರಿಂದ 162 ಸ್ಥಾನಗಳು, ಎಐಎಡಿಎಂಕೆ ಮತ್ತು ಬಿಜೆಪಿ 58ರಿಂದ 66, ಇತರ ಪಕ್ಷಗಳು 8ರಿಂದ 20 ಸ್ಥಾನ ಪಡೆಯಬಹುದು.

ಪಶ್ಚಿಮಬಂಗಾಳ: ಒಟ್ಟು 294 ವಿಧಾನ ಸಭಾ ಸ್ಥಾನಗಳಲ್ಲಿ ಟಿಎಂಸಿ 148ರಿಂದ 164, ಬಿಜೆಪಿ 92ರಿಂದ 108, ಕಾಂಗ್ರೆಸ್ ಮತ್ತು ಎಡಪಕ್ಷಗಳು 31ರಿಂದ 39 ಸ್ಥಾನಗಳನ್ನು ಪಡೆಯಬಹುದು.

ಕೇರಳ: ಒಟ್ಟು 140 ವಿಧಾನಸಭಾ ಸ್ಥಾನಗಳಲ್ಲಿ ಎಲ್‌ಡಿಎಫ್ 83ರಿಂದ 91, ಯುಡಿಎಫ್ 47ರಿಂದ 55, ಬಿಜೆಪಿ ಹಾಗೂ ಇತರ ಪಕ್ಷಗಳು ತಲಾ 2 ಸ್ಥಾನಗಳನ್ನು ಪಡೆಯುವ ಸಾಧ್ಯತೆ ಇದೆ.

ಅಸ್ಸಾಂ: ಒಟ್ಟು 126 ವಿಧಾನಸಭಾ ಸ್ಥಾನಗಳಲ್ಲಿ ಬಿಜೆಪಿ 68ರಿಂದ 76, ಕಾಂಗ್ರೆಸ್ 43ರಿಂದ 51, ಇತರ ಪಕ್ಷಗಳು 5ರಿಂದ 10 ಸ್ಥಾನಗಳನ್ನು ಪಡೆಯಬಹುದು.

ಪುದುಚೇರಿ: ಒಟ್ಟು 30 ವಿಧಾನ ಸಭಾ ಸ್ಥಾನಗಳಲ್ಲಿ ಬಿಜೆಪಿ 17ರಿಂದ 21, ಕಾಂಗ್ರೆಸ್ 8ರಿಂದ 12 ಹಾಗೂ ಇತರ ಪಕ್ಷಗಳು 1ರಿಂದ 3 ಸ್ಥಾನಗಳನ್ನು ಪಡೆಯುವ ಸಾಧ್ಯತೆ ಇದೆ ಎಂದು ಎಬಿಪಿ ಸಿ–ವೋಟರ್ ಸಮೀಕ್ಷೆಯು ತಿಳಿಸಿದೆ.

ಮುಖ್ಯಾಂಶಗಳು

- ಕೇರಳದಲ್ಲಿ ಎಡರಂಗ, ತಮಿಳುನಾಡಿನಲ್ಲಿ ಡಿಎಂಕೆ?
- ವಿಧಾನಸಭೆ ಚುನಾವಣೆ ಘೋಷಣೆಯಾದ ಬೆನ್ನಲೇ ಹೊರ ಬಿದ್ದ ಸಮೀಕ್ಷೆ

‘ಶ್ರವಣ ಸಾಧನ ಉಚಿತ ವಿತರಣೆ’

ಬೆಂಗಳೂರು: ‘ವಿಶ್ವ ಶ್ರವಣ ದಿನದ ಅಂಗವಾಗಿ ದೋಷವುಳ್ಳ 10 ಮಕ್ಕಳಿಗೆ ಶ್ರವಣ ಸಾಧನಗಳನ್ನು ಸೊನೊವಾ ಸಂಸ್ಥೆಯ ಸಹಯೋಗದಲ್ಲಿ ಉಚಿತವಾಗಿ ವಿತರಿಸಲು ಡಾ.ಎಸ್.ಆರ್. ಚಂದ್ರಶೇಖರ್ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ಧರಿಸಿದೆ’ ಎಂದು ಸಂಸ್ಥೆಯ ಮುಖ್ಯಸ್ಥ ಕೃಷ್ಣ ರೆಡ್ಡಿ ಶನಿವಾರ ತಿಳಿಸಿದರು.

‘ಶ್ರವಣ ದೋಷದ ಕುರಿತು ಜಾಗೃತಿ ಮೂಡಿಸಲು ವಿವಿಧ ಚಟುವಟಿಕೆ ಹಮ್ಮಿಕೊಳ್ಳಲಾಗಿದೆ. ಕಲ್ಯಾಣನಗರದ ಕೆಎಫ್‌ಸಿ ಸಿಗ್ನಲ್, ಎಂ.ಜಿ.ರಸ್ತೆಯ ಕುಂಬ್ಳೆ ವೃತ್ತ ಹಾಗೂ ಇಂದಿರಾನಗರದ ಕೆಎಫ್‌ಸಿ ವೃತ್ತಗಳಲ್ಲಿ ಕ್ರಮವಾಗಿ ಮಾರ್ಚ್ 1, 3 ಮತ್ತು 5ರಂದು ಮಾನವ ಸರಪಳಿ ನಿರ್ಮಿಸಲು ತೀರ್ಮಾನಿಸಿದ್ದೇವೆ’ ಎಂದು ಹೇಳಿದರು.

‘ವಾಣಿವಿಲಾಸ ಆಸ್ಪತ್ರೆಯಲ್ಲಿ 2013ರಿಂದಲೂ ನವಜಾತ ಶಿಶುಗಳಿಗೆ ಶ್ರವಣ ತಪಾಸಣೆಯನ್ನು ಉಚಿತವಾಗಿ ನಡೆಸಲಾಗುತ್ತಿದೆ. ಮಾರ್ಚ್ 3ರಂದು ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ’ ಎಂದರು.

ಅಗರ: ಸಂಗ್ರಹವಾಯಿತು 5 ಲೋಡ್ ಪ್ಲಾಸ್ಟಿಕ್ ಕಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್.ಎಸ್.ಆರ್ ಬಡಾವಣೆಯ ಅಗರ ಕೆರೆ ಪರಿಸರದಲ್ಲಿ ಶನಿವಾರ ಸ್ವಯಂಸೇವಕರು ಪ್ಲಾಗ್ ರನ್ ನಡೆಸಿ ಆಟೊಟಿಪ್ಪರ್‌ನಲ್ಲಿ ಐದು ಲೋಡ್ ಆಗುವಷ್ಟು ಪ್ಲಾಸ್ಟಿಕ್ ಕವರ್ ಹಾಗೂ ಪ್ಲಾಸ್ಟಿಕ್ ಬಾಟಲಿಗಳನ್ನು ಸಂಗ್ರಹಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ 'ಸ್ವಚ್ಛ ಸರ್ವೇಕ್ಷಣ್ ಅಭಿಯಾನ-2021'ರ ಅಂಗವಾಗಿ ಶನಿವಾರ ಏರ್ಪಡಿಸಿದ್ದ ಪ್ಲಾಗ್ ರನ್ ಅನ್ನು ಶಾಸಕ ಸತೀಶ್ ರೆಡ್ಡಿ ಉದ್ಘಾಟಿಸಿದರು.

ಬಿಡಿಎ ಕಾಂಪ್ಲೆಕ್ಸ್ ಬಳಿಯ ಅಗರ ದ್ವಾರದಿಂದ ಜಗನ್ನಾಥ ದೇವಸ್ಥಾನದವರೆಗೆ ಬೆಳಗ್ಗೆ 6.45 ರಿಂದ ಬೆಳಗ್ಗೆ 9.30ರವರೆಗೆ ಪ್ಲಾಗ್ ರನ್ ನಡೆಯಿತು. ಸುಮಾರು 150 ಮಂದಿ ಸ್ವಯಂಸೇವಕರು ಈ ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿದರು.

ಬಿಬಿಎಂಪಿ ವಿಶೇಷ ಆಯುಕ್ತ (ಕಸ ವಿಲೇವಾರಿ) ಡಿ. ರಂದೀಪ್, 'ಸ್ವಚ್ಛ ಸರ್ವೇಕ್ಷಣ್ ಅಭಿಯಾನದಲ್ಲಿ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಕ್ಕೆ ವಿಶೇಷ ಮಹತ್ವ ಇದೆ. ನಗರದಲ್ಲಿ ಇದುವರೆಗೆ ನಾಗರಿಕರಿಂದ 97 ಸಾವಿರ ಪ್ರತಿಕ್ರಿಯೆಗಳು ಬಂದಿದ್ದು, ಮಾರ್ಚ್ ಅಂತ್ಯದಲ್ಲಿ ಇದು 1.5 ಲಕ್ಷ ತಲುಪುವ ನಿರೀಕ್ಷೆ ಇದೆ' ಎಂದರು.

'ಬಿಬಿಎಂಪಿ ಅಧಿಕಾರಿಗಳು, ಪೌರಕಾರ್ಮಿಕರು ಹಾಗೂ ಮಾರ್ಷಲ್‌ಗಳಿಂದ ಮಾತ್ರ ನಗರವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಸಾಧ್ಯವಿಲ್ಲ. ಇದಕ್ಕೆ ನಾಗರಿಕರ ಬೆಂಬಲವೂ ಅಗತ್ಯ. ಸ್ವಚ್ಛ ಬೆಂಗಳೂರು ನಿರ್ಮಾಣಕ್ಕೆ ಪ್ರತಿಯೊಬ್ಬರೂ ಪಣ ತೊಡಬೇಕು. ಎಷ್ಟೆಲ್ಲಾ ಅನಗತ್ಯ ವಸ್ತುಗಳನ್ನು ಬಳಸುತ್ತಿದ್ದೇವೆ ಎಂಬ ಅರಿವು ಪ್ಲಾಗ್ ರನ್ ವೇಳೆ ಸಾರ್ವಜನಿಕರಿಗೆ ಮನವರಿಕೆ ಆಗುತ್ತದೆ. ಮರುಬಳಕೆ ಮಾಡುವ ವಸ್ತುಗಳನ್ನು ಮಾತ್ರ ಹೆಚ್ಚಾಗಿ ಬಳಸಲು ಇದರಿಂದ ಉತ್ತೇಜನ ಸಿಗಲಿದೆ' ಎಂದರು.


ಪ್ಲಾಗ್ ರನ್ ಕಾರ್ಯಕ್ರಮದಲ್ಲಿ ಸ್ವಯಂಸೇವಕರು ಪ್ಲಾಸ್ಟಿಕ್ ಕಸ ಹೆಕ್ಕಿದರು

'ಭವಿಷ್ಯದ ಬೆರಗು' ರೇಡಿಯೊ ಸರಣಿ ಇಂದಿನಿಂದ ಪ್ರಸಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಬುದ್ಧಿಮತ್ತೆಯ ಬೆಳವಣಿಗೆ ಹಾಗೂ ಆ ಕ್ಷೇತ್ರದಲ್ಲಿ ಆಗುತ್ತಿರುವ ಆವಿಷ್ಕಾರಗಳ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಸಲುವಾಗಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿಯು (ಕೆಎಸ್‌ಸಿಎಸ್‌ಟಿ) ಆಕಾಶವಾಣಿ ಬೆಂಗಳೂರು ಸಹಯೋಗದಲ್ಲಿ 'ಭವಿಷ್ಯದ ಬೆರಗು' ರೇಡಿಯೊ ಸರಣಿ ಆರಂಭಿಸಿದೆ. ಇದು ಫೆಬ್ರುವರಿ 28ರಿಂದ (ಭಾನುವಾರದಿಂದ) ಪ್ರಸಾರವಾಗಲಿದೆ.

'ಒಟ್ಟು 52 ಕಂತುಗಳನ್ನು ಒಳಗೊಂಡಿರುವ ಈ ಸರಣಿಯು ಪ್ರತಿ ಭಾನುವಾರ ಬೆಳಿಗ್ಗೆ 9.05ರಿಂದ 9.35ರವರೆಗೆ ಬೆಂಗಳೂರು, ಮೈಸೂರು, ಭದ್ರಾವತಿ, ಧಾರವಾಡ ಹಾಗೂ ಕಲಬುರ್ಗಿ ನಿಲಯಗಳಿಂದ ಪ್ರಸಾರಗೊಳ್ಳಲಿದೆ. ಈ ಕಾರ್ಯಕ್ರಮವನ್ನು ಪ್ರಸಾರ ಭಾರತಿಯ 'ನ್ಯೂಸ್ ಆನ್ ಏರ್' ಆ್ಯಪ್ ಮೂಲಕವೂ ಆಲಿಸಬಹುದು' ಎಂದು ಆಕಾಶವಾಣಿಯ ಬೆಂಗಳೂರು ಕೇಂದ್ರದ ನಿರ್ದೇಶಕಿ ನಿರ್ಮಲಾ ಸಿ.ಎಲಿಗಾರ ತಿಳಿಸಿದರು.

'ಪ್ರತಿ ಕಂತಿನ ಕೊನೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಲಾಗುತ್ತದೆ. ಸರಿ ಉತ್ತರ ನೀಡುವ ಅದೃಷ್ಟಶಾಲಿಗಳಿಗೆ ಆಕರ್ಷಕ ಬಹುಮಾನ ನೀಡಲಾಗುತ್ತದೆ. ಪ್ರಶ್ನೆಗಳಿಗೆ ಸರಿ ಉತ್ತರವನ್ನು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ, ಭಾರತೀಯ ವಿಜ್ಞಾನ ಸಂಸ್ಥೆ ಆವರಣ, ಬೆಂಗಳೂರು–560012 ಈ ವಿಳಾಸಕ್ಕೆ ಅಂಚೆ ಅಥವಾ ಇ–ಮೇಲ್ (educell.kscst@gmail.com) ಮೂಲಕ ಕಳುಹಿಸಬಹುದು. 8277293742 ಸಂಖ್ಯೆಗೆ ಎಸ್.ಎಂ.ಎಸ್ ಹಾಗೂ ವಾಟ್ಸ್ಆ್ಯಪ್ ಕೂಡ ಮಾಡಬಹುದು' ಎಂದು ಹೇಳಿದರು.

'ಇಸ್ರೊದ ನಿವೃತ್ತ ಅಧ್ಯಕ್ಷರಾದ ಎ.ಎಸ್.ಕಿರಣ್‌ಕುಮಾರ್, ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಚಿದಾನಂದ ಗೌಡ ಸೇರಿದಂತೆ ಎಂಟು ಮಂದಿ ಸಂಪನ್ಮೂಲ ವ್ಯಕ್ತಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದು ಸುಮಂಗಲಾ ಮುಮ್ಮಿಗಟ್ಟಿ ತಿಳಿಸಿದರು. ಕೆಎಸ್‌ಸಿಎಸ್‌ಟಿ ಕಾರ್ಯದರ್ಶಿ ಅಶೋಕ್ ಎಂ.ರಾಯಚೂರ ಹಾಗೂ ಹೇಮಂತ್ ಕುಮಾರ್ ಇದ್ದರು.

ಸಮರ ಸೇನಾನಿಗಳಿಗೆ ಗೌರವ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನದ ವಿರುದ್ಧ 1971ರಲ್ಲಿ ನಡೆದಿದ್ದ ಯುದ್ಧದಲ್ಲಿ ಪರಾಕ್ರಮ ಮೆರೆದಿದ್ದ ಸೇನಾನಿಗಳಿಗೆ ಜಾಲಹಳ್ಳಿಯಲ್ಲಿರುವ ವಾಯುಪಡೆ ಕೇಂದ್ರದಲ್ಲಿ ಶನಿವಾರ ಗೌರವ ಸಲ್ಲಿಸಲಾಯಿತು.

ಪಾಕಿಸ್ತಾನದ ಎದುರಿನ ಸಮರದಲ್ಲಿ ಭಾರತ ಗೆದ್ದಿತ್ತು. ಇದರ ಸ್ವರ್ಣಿಮ ವಿಜಯ ವರ್ಷಾಚರಣೆಯ (50ನೇ ವರ್ಷಾಚರಣೆ) ಅಂಗವಾಗಿ ನವದೆಹಲಿಯ ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಬೆಳಗಿಸಿದ್ದ 'ವಿಜಯ ಜ್ಯೋತಿ'ಯನ್ನು ಶನಿವಾರ ವಾಯುಪಡೆ ಕೇಂದ್ರದ ಕಮಾಂಡರ್ ಎಸ್.ಎ. ವರ್ಗೀಸ್ ಸ್ವೀಕರಿಸಿದರು. ಭಾರತೀಯ ವಾಯುಸೇನೆಯ ಮಾಜಿ ಮುಖ್ಯಸ್ಥ ಫಾಲಿ ಹೋಮಿ ಮೇಜರ್ ಅವರು ವೀರ ಯೋಧರನ್ನು ಹಾಗೂ ಅವರ ಕುಟುಂಬದವರನ್ನು ಅಭಿನಂದಿಸಿದರು.

ಏರ್ ಮಾರ್ಷಲ್ ಆರ್. ಡಿ.ಮಾಥುರ್, '1971ರ ಯುದ್ಧದಲ್ಲಿ ಅನೇಕ ಯೋಧರು ಕೆಚ್ಚೆದೆಯಿಂದ ಹೋರಾಡಿ ದೇಶಕ್ಕಾಗಿ ಮಡಿದರು. ಅವರ ತ್ಯಾಗ ಮತ್ತು ಬಲಿದಾನ ಎಲ್ಲರಿಗೂ ಮಾದರಿ. ಈಗಿನ ಪೀಳಿಗೆಯ ಸೇನಾನಿಗಳು ಅವರನ್ನು ಅನುಕರಿಸಬೇಕು' ಎಂದು ತಿಳಿಸಿದರು.

ನಿವೃತ್ತ ಏರ್ ಮಾರ್ಷಲ್‌ಗಳಾದ ಎಚ್.ಬಿ.ರಾಜಾರಾಂ, ಎಸ್.ಪಿ.ಸಿಂಗ್, ವೈಸ್ ಮಾರ್ಷಲ್ ಪಿ.ಜೆ.ವಾಲಿಯಾ ಹಾಗೂ ಇತರ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. 1971ರ ಯುದ್ಧದ ವೇಳೆ ವಿಂಗ್ ಕಮಾಂಡರ್ ಆಗಿ ಕೆಲಸ ಮಾಡಿದ್ದ ಎ.ರಘುನಾಥ್ ಅವರಿಗೆ ವೀರ ಚಕ್ರ ಪ್ರದಾನ ಮಾಡಿ ಗೌರವಿಸಲಾಯಿತು.

ವಾಯುಪಡೆ ಕೇಂದ್ರದ ಅಧಿಕಾರಿಗಳು ಯುದ್ಧ ಸಾಹಸಿಗಳ ಮನೆಗಳಿಂದ ಹಿಡಿ ಮಣ್ಣು ಸಂಗ್ರಹಿಸಿದರು. ಇದನ್ನು ನವದೆಹಲಿಯಲ್ಲಿ ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಗಿಡ ನೆಡಲು ಬಳಸಲಾಗುತ್ತದೆ.

ಸಮಾರಂಭದ ವೇಳೆ ಏರ್ ವಾರಿಯರ್ ಸಿಂಫೋನಿ ಆರ್ಕೆಸ್ಟ್ರಾ ವತಿಯಿಂದ ವಾದ್ಯವೃಂದ ನಡೆಯಿತು. ಇದೇ ವೇಳೆ 1971ರ ಯುದ್ಧದಲ್ಲಿ ಪರಾಕ್ರಮ ಮೆರೆದಿದ್ದ ಸೇನಾನಿಗಳ ಕುರಿತ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು.


ಜಾಲಹಳ್ಳಿಯಲ್ಲಿರುವ ವಾಯುಪಡೆ ಕೇಂದ್ರದ ಅಧಿಕಾರಿಗಳು ವಿಜಯ ಜ್ಯೋತಿ ಸ್ವೀಕರಿಸಿದರು

ಹೂಡಿಕೆದಾರ ಸ್ನೇಹಿ ವಾತಾವರಣ ನಿರ್ಮಾಣಕ್ಕೆ ಅಗತ್ಯ ಕ್ರಮ: ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿಕೆ

‘ಬ್ರ್ಯಾಂಡ್ ಕರ್ನಾಟಕ’ ಅಭಿವೃದ್ಧಿಯ ಸಂಕಲ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಶ್ವ ಮಾರುಕಟ್ಟೆಯಲ್ಲಿ ‘ಬ್ರ್ಯಾಂಡ್ ಕರ್ನಾಟಕ’ವನ್ನು ಅಭಿವೃದ್ಧಿಪಡಿಸುವ ಮಹತ್ವಾಕಾಂಕ್ಷೆಯನ್ನು ನಮ್ಮ ಸರ್ಕಾರ ಹೊಂದಿದೆ. ಇದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಹೂಡಿಕೆದಾರ ಸ್ನೇಹಿ ವಾತಾವರಣ ನಿರ್ಮಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ’ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಬಿಬಿಎಂಪಿ ವತಿಯಿಂದ ವಿಂಡ್ಸರ್ ಮ್ಯಾನರ್ ವೃತ್ತದಲ್ಲಿ ಸ್ಥಾಪಿಸಲಾಗಿರುವ ‘ಮೇಕ್ ಇನ್ ಇಂಡಿಯಾ’ ಲಾಂಛನವನ್ನು ಶನಿವಾರ ಅನಾವರಣಗೊಳಿಸಿ ಅವರು ಮಾತನಾಡಿದರು.

‘ಕೈಗಾರಿಕಾ ಕ್ಷೇತ್ರದಲ್ಲಿ ರಾಜ್ಯದ ಜಿಡಿಪಿ ಕೊಡುಗೆಯನ್ನು ಶೇ 20ಕ್ಕೆ ಹೆಚ್ಚಿಸಲು ಆದ್ಯತೆ ನೀಡಲಾಗುತ್ತದೆ. ಇದರಲ್ಲಿ ಬೆಂಗಳೂರು ನಗರದ ಪಾಲು ಹೆಚ್ಚಿರಲಿದೆ. ಉದ್ಯಾನನಗರಿಯು ಜೈವಿಕ ವಿಜ್ಞಾನ, ದೂರ ಸಂಪರ್ಕ, ಆಹಾರ ಸಂಸ್ಕರಣೆ, ವೈಮಾನಿಕ ಕೈಗಾರಿಕೆ ಹೀಗೆ ವಿವಿಧ ಉದ್ಯಮಗಳ ನೆಲೆಯಾಗಿದೆ. ಇಂತಹ ವಿಶ್ವ ಪ್ರಸಿದ್ಧ ನಗರವನ್ನು ವಿಶ್ವ ಮಾನವತೆಯ ನಗರವನ್ನಾಗಿ ರೂಪಿಸಲು ‘ಬೆಂಗಳೂರು ಮಿಷನ್-2022’ ಕಾರ್ಯಕ್ರಮ ರೂಪಿಸಲಾಗಿದೆ. ಸುಗಮ ಸಂಚಾರ ಸೌಕರ್ಯ, ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಬಳಕೆಗೆ ಪ್ರೋತ್ಸಾಹ ನೀಡುವುದು, ವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಮುಂತಾದ ಅಂಶಗಳು ಈ ಕಾರ್ಯಕ್ರಮದಲ್ಲಿ ಅಡಕವಾಗಿವೆ’ ಎಂದರು.



ವಿಂಡ್ಸರ್ ಮ್ಯಾನರ್ ವೃತ್ತದಲ್ಲಿ ನಿರ್ಮಿಸಿರುವ ಮೇಕ್ ಇನ್ ಇಂಡಿಯಾ ಲಾಂಛನ –ಪ್ರಜಾವಾಣಿ ಚಿತ್ರ

‘ಬೆಂಗಳೂರು ನಗರವನ್ನು ಎಲ್ಲಾ ವಯೋಮಾನದ ಜನರ ನೆಚ್ಚಿನ ವಾಸ ಸ್ಥಾನವಾಗಿ ಅಭಿವೃದ್ಧಿಪಡಿಸಲು ನಮ್ಮ ಸರ್ಕಾರ ಶ್ರಮಿಸಿದೆ. ಮೇಕ್ ಇನ್ ಇಂಡಿಯಾ ಕಲಾಕೃತಿಯು ಕರ್ನಾಟಕದ ಆರ್ಥಿಕ ಪ್ರಗತಿಯ ಪ್ರತೀಕವಾಗಿದೆ. ನಗರದ ಹೃದಯಭಾಗದಲ್ಲಿ ಈ ಲಾಂಛನ ಸ್ಥಾಪಿಸಿರುವುದು ಅರ್ಥಪೂರ್ಣವಾಗಿದೆ. ಸ್ವಾವಲಂಬಿ ರಾಷ್ಟ್ರ ನಿರ್ಮಾಣಕ್ಕೆ ನಮ್ಮ ಗಣನೀಯ ಕೊಡುಗೆ ಮುಂದುವರಿಯಲಿದೆ’ ಎಂದು ನುಡಿದರು.

‘ಈ ರಾಜ್ಯವನ್ನು ಮಾದರಿ ರಾಜ್ಯವನ್ನಾಗಿ ರೂಪಿಸಲು ಶ್ರಮಿಸುತ್ತೇನೆ. ಈ ನಾಡಿನ ರೈತ ಸಮುದಾಯ ನೆಮ್ಮದಿ ಹಾಗೂ ಸ್ವಾಭಿಮಾನದಿಂದ ಬದುಕಲು ಅಗತ್ಯವಿರುವ ಎಲ್ಲಾ ಕಾರ್ಯಕ್ರಮಗಳನ್ನು ಮುಂದಿನ ಎರಡು ವರ್ಷಗಳಲ್ಲಿ ರೂಪಿಸಲಾಗುತ್ತದೆ. ಮಾರ್ಚ್ 8ರಂದು ಜನಪರ ಬಜೆಟ್ ಮಂಡಿಸಲಿದ್ದೇನೆ’ ಎಂದು ತಿಳಿಸಿದರು.

ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ‘ಫೈಬರ್ ಬಲವರ್ಧಿತ ಪ್ಲಾಸ್ಟಿಕ್ ಬಳಸಿ ಮೇಕ್ ಇನ್ ಇಂಡಿಯಾ (ಸಿಂಹದ ಕಲಾಕೃತಿ) ಲಾಂಛನ ನಿರ್ಮಿಸಲಾಗಿದೆ. ಒಂದು ಟನ್ ತೂಕವಿರುವ ಈ ಕಲಾಕೃತಿಯನ್ನು ಘಾಜಿಯಾಬಾದ್‌ನಲ್ಲಿ ತಯಾರಿಸಲಾಗಿದೆ. ಇದಕ್ಕಾಗಿ ₹7 ಲಕ್ಷ ವೆಚ್ಚ ಮಾಡಲಾಗಿದೆ. ‘ಮೇಕ್ ಇನ್ ಇಂಡಿಯಾ’ ಕಲ್ಪನೆಯ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದು ಈ ಲಾಂಛನ ನಿರ್ಮಾಣದ ಉದ್ದೇಶ. ಇದು ನಮ್ಮ ನಗರದ ಹೆಮ್ಮೆಯ ಪ್ರತೀಕ’ ಎಂದು ಹೇಳಿದರು.

ನೀಲಸಂದ್ರ ವಾರ್ಡ್‌ನ ವೃತ್ತಕ್ಕೆ ಹ್ಯಾರಿಸ್ ಹೆಸರು: ಕಿಡಿಗೇಡಿಗಳ ವಿರುದ್ಧ ಎಫ್‌ಐಆರ್

‘ಶಾಂತಿನಗರ ಕ್ಷೇತ್ರದ ನೀಲಸಂದ್ರ ವಾರ್ಡ್‌ನ ವೃತ್ತಕ್ಕೆ ಸ್ಥಳೀಯ ಶಾಸಕ ಎನ್.ಎ.ಹ್ಯಾರಿಸ್ ಅವರ ಹೆಸರಿಟ್ಟಿರುವುದು ಅಕ್ಷಮ್ಯ ಅಪರಾಧ. ಪಾಲಿಕೆಯ ಅನುಮತಿಯಿಲ್ಲದೇ ಅನಧಿಕೃತವಾಗಿ ವೃತ್ತಕ್ಕೆ ಹೆಸರಿಟ್ಟು ಶಾಸಕರ ಚಿತ್ರವನ್ನು ಅಳವಡಿಸಲಾಗಿತ್ತು. ಈ ವಿಷಯ ನಮ್ಮ ಗಮನಕ್ಕೆ ಬಂದ ಕೂಡಲೇ ಅದನ್ನು ತೆರವುಗೊಳಿಸಲಾಗಿದೆ. ಈ ಕೃತ್ಯದಲ್ಲಿ ಭಾಗಿಯಾದವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದೇವೆ. ಪೊಲೀಸರು ಕಿಡಿಗೇಡಿಗಳನ್ನು ಪತ್ತೆ ಹಚ್ಚಿ ಅವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಿದ್ದಾರೆ’ ಎಂದು ಮಂಜುನಾಥ್ ಪ್ರಸಾದ್ ತಿಳಿಸಿದರು.

‘ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಸಂಸ್ಥೆಗಳಿಗೆ ನೋಟಿಸ್ ಜಾರಿಗೊಳಿಸಲಾಗಿತ್ತು. ಹೀಗಾಗಿ ಕೋವಿಡ್ ಸಮಯದಲ್ಲೇ ಅತಿಹೆಚ್ಚು ತೆರಿಗೆ ಸಂಗ್ರಹವಾಗಿದೆ. ಮಂತ್ರಿ ಮಾಲ್‌ನವರು ಮೂರು ವರ್ಷಗಳಿಂದ ₹20 ಕೋಟಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದರು. ದಂಡ ಮತ್ತು ಬಡ್ಡಿ ಸೇರಿ ಒಟ್ಟು ₹30 ಕೋಟಿ ಕಟ್ಟಬೇಕಿತ್ತು. ಹೀಗಾಗಿ ಮಾಲ್‌ಗೆ ಬೀಗ ಹಾಕಲಾಗಿತ್ತು. ತೆರಿಗೆ ಪಾವತಿಗೆ ಅವರು ಒಂದು ವಾರ ಕಾಲವಕಾಶ ಕೇಳಿದ್ದಾರೆ. ತಡ ಮಾಡಿದಷ್ಟೂ ದಂಡದ ಮೊತ್ತ ಹೆಚ್ಚುತ್ತಾ ಹೋಗುತ್ತದೆ’ ಎಂದರು.

ಕೆಎಸ್‌ಪಿಸಿಬಿ ಅಧ್ಯಕ್ಷರ ಆಯ್ಕೆಗೆ ಹೊಸ ಪ್ರಕ್ರಿಯೆ ಆರಂಭಿಸಲು ನಿರ್ದೇಶನ

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಯನ್ನು ಹೊಸದಾಗಿ ಆರಂಭಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

‘ಕೇವಲ ಶೈಕ್ಷಣಿಕ ಅರ್ಹತೆ ಹೊಂದಿದ್ದರೆ ಸಾಕಾಗುವುದಿಲ್ಲ. ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಅನುಭವ ಹೊಂದಿರಬೇಕು’ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತು. ‘ವಾಯುಮಾಲಿನ್ಯ, ನೀರಿನ ಮಾಲಿನ್ಯ, ಇ-ತ್ಯಾಜ್ಯ, ವೈದ್ಯಕೀಯ ತ್ಯಾಜ್ಯ, ನಿರ್ಮಾಣ ತ್ಯಾಜ್ಯ ಮತ್ತು ಮುಖ್ಯವಾಗಿ ಘನತ್ಯಾಜ್ಯ ನಿಭಾಯಿಸುವ ಜ್ಞಾನ ಹೊಂದಿದವರು ಮಂಡಳಿಯಲ್ಲಿ ಇರಬೇಕು ಎಂದು ಪೀಠ 2020ರ ಅಕ್ಟೋಬರ್ 8ರಂದು ನೀಡಿರುವ ಆದೇಶ ಮಾರ್ಪಡಿಸಬೇಕು’ ಎಂದು ರಾಜ್ಯ ಸರ್ಕಾರ ಮಧ್ಯಂತರ ಅರ್ಜಿ ಸಲ್ಲಿಸಿತು.

ಮಾರ್ಪಾಡು ಮಾಡಲು ನಿರಾಕರಿಸಿದ ಪೀಠ, ‘ಅಧ್ಯಕ್ಷರಾದವರು ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳು ಎದುರಾದಾಗ ನಿಭಾಯಿಸಬೇಕಾಗುತ್ತದೆ. ಹೀಗಾಗಿ ಅವರಿಗೆ ಪರಿಸರಕ್ಕೆ ಸಂಬಂಧಿಸಿದ ಜ್ಞಾನ ಇರಬೇಕು. ಪರಿಸರಕ್ಕೆ ಸಂಬಂಧಿಸಿದ ಸರ್ಕಾರ ಹುದ್ದೆ ಅಥವಾ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವಾದರೂ ಇರಬೇಕಾಗುತ್ತದೆ’ ಎಂದು ಹೇಳಿತು. ‘ಸದಸ್ಯರ ನೇಮಕಕ್ಕೂ ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳು ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಮಾನದಂಡಗಳಿಗೆ ಅನ್ವಯವಾಗಿಲ್ಲ’ ಎಂದು ಪೀಠ ಪುನರುಚ್ಚರಿಸಿತು.

ಪಿ.ಎಂ.ಸ್ವನಿಧಿ: 1,520 ಮಂದಿಗೆ ಕಿರುಸಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಿ.ಎಂ ಸ್ವ-ನಿಧಿ’ ಯೋಜನೆಯಡಿ ಬೀದಿ ಬದಿ ವ್ಯಾಪಾರಿಗಳಿಗೆ ಕಿರು ಸಾಲ ವಿತರಿಸಲು ಬಿಬಿಎಂಪಿ ವತಿಯಿಂದ ಶನಿವಾರ ಏರ್ಪಡಿಸಿದ್ದ ವಿಶೇಷ ಶಿಬಿರಗಳಲ್ಲಿ ಒಟ್ಟು 1,520 ಫಲಾನುಭವಿಗಳಿಗೆ ಸಾಲ ಮಂಜೂರು ಮಾಡಲಾಯಿತು.

ಬಿಬಿಎಂಪಿ ವ್ಯಾಪ್ತಿಯ ಎಂಟೂ ವಲಯಗಳಲ್ಲಿ ಹಾಗೂ ಕೇಂದ್ರ ಕಚೇರಿಯಲ್ಲಿ ಏರ್ಪಡಿಸಿದ್ದ ಶಿಬಿರಗಳಲ್ಲಿ 4,049 ಬೀದಿ ವ್ಯಾಪಾರಿಗಳು ಭಾಗವಹಿಸಿದರು. ಸಮರ್ಪಕ ದಾಖಲೆಗಳನ್ನು ಹೊಂದಿದ್ದ ಫಲಾನುಭವಿಗಳಿಗೆ ವಿವಿಧ ಬ್ಯಾಂಕ್‌ಗಳ ಅಧಿಕಾರಿಗಳು ಸ್ಥಳದಲ್ಲೇ ₹ 10 ಸಾವಿರ ಸಾಲ ಮಂಜೂರು ಮಾಡಿದರು.

ಶಿಬಿರದಲ್ಲಿ ಕೆನರಾ ಬ್ಯಾಂಕ್, ಭಾರತೀಯ ಸ್ಟೇಟ್ ಬ್ಯಾಂಕ್, ಯೂನಿಯನ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಕರ್ನಾಟಕ ಬ್ಯಾಂಕ್ ಸೇರಿದಂತೆ ಹಲವು ಬ್ಯಾಂಕ್ ಸಿಬ್ಬಂದಿ ಬೀದಿ ಬದಿ ವ್ಯಾಪಾರಿಗಳು ಸಾಲಕ್ಕೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದರು. ಮಂಜೂರಾತಿ ದೃಢೀಕರಣ ಪತ್ರವನ್ನು ನೀಡಿದ ನಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣವನ್ನು ಪಾವತಿಸಲಾಗುತ್ತದೆ.



ವಿಶೇಷ ಶಿಬಿರದಲ್ಲಿ ಸಾಲ ಪಡೆಯಲು ಬೀದಿ ವ್ಯಾಪಾರಿಗಳು ಸಲ್ಲಿಸಿದ ದಾಖಲಾತಿಗಳನ್ನು ಬ್ಯಾಂಕ್ ಅಧಿಕಾರಿಗಳು ಶನಿವಾರ ಪರಿಶೀಲಿಸಿದರು

ಬೀದಿ ವ್ಯಾಪಾರಿಗಳು ವರ್ಷದೊಳಗೆ ತಿಂಗಳ ಕಂತಿನಲ್ಲಿ ಪೂರ್ತಿ ಸಾಲ ಮರುಪಾವತಿ ಮಾಡಿದರೆ ಬಡ್ಡಿದರದಲ್ಲಿ ಶೇ 7ರಷ್ಟು ಸಬ್ಸಿಡಿ ನೀಡಲಾಗುತ್ತದೆ. ಡಿಜಿಟಲ್ ವಹಿವಾಟಿನ ಮೇಲೆ ಪ್ರತಿ ತಿಂಗಳು ಕ್ಯಾಶ್ ಬ್ಯಾಕ್ ನೀಡಲಾಗುತ್ತದೆ. ಅವಧಿಯೊಳಗೆ ಸಾಲಮರುಪಾವತಿ ಮಾಡಿದವರು ₹ 20 ಸಾವಿರ ಸಾಲ ಪಡೆಯಲು ಅರ್ಹತೆ ಗಳಿಸುತ್ತಾರೆ.

ಮಾರ್ಚ್ 6 ಮತ್ತು 13 ರಂದು ಕೂಡಾ ಶಿಬಿರ ಆಯೋಜಿಸಿದ್ದು, ಬೀದಿ ಬದಿ ವ್ಯಾಪಾರಿಗಳು ಅದರ ಸದುಪಯೋಗ ಪಡೆದುಕೊಳ್ಳಬಹುದು ಎಂದು ಬಿಬಿಎಂಪಿ ತಿಳಿಸಿದೆ.

ಶಿಬಿರದಲ್ಲಿ ಬಿಬಿಎಂಪಿಯ ವಿಶೇಷ ಆಯುಕ್ತ (ಕಲ್ಯಾಣ) ರವೀಂದ್ರ, ಕೌಶಲ್ಯಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಸೆಲ್ವ ಕುಮಾರ್, ರಾಷ್ಟ್ರೀಯ ಅಭಿಯಾನದ ವ್ಯವಸ್ಥಾಪಕ ಅನುಶ್ ಕುಮಾರ್, ಬೆಂಗಳೂರು ನಗರ ಜಿಲ್ಲೆಯ ಲೀಡ್ ಬ್ಯಾಂಕ್‌ನ ವ್ಯವಸ್ಥಾಪಕ ಸುಬ್ಬಾ ನಾಯಕ್ ಅಧಿಕಾರಿಗಳು ಭಾಗವಹಿಸಿದರು.

ಕಿರು ಸಾಲ ಮಂಜೂರಾತಿ ವಿವರ

ಸ್ಥಳ	ಹಾಜರು ಆದವರು	ಸಾಲ ಮಂಜೂರು ಆದವರು
ಬಿಬಿಎಂಪಿ ಕೇಂದ್ರ ಕಚೇರಿ	250	162
ಪೂರ್ವ ವಲಯ	815	321
ಪಶ್ಚಿಮ ವಲಯ	450	183
ದಕ್ಷಿಣ ವಲಯ	618	276
ಆರ್.ಆರ್‌ನಗರ ವಲಯ	387	145
ದಾಸರಹಳ್ಳಿ ವಲಯ	130	66
ಬೊಮ್ಮನಹಳ್ಳಿ ವಲಯ	485	191
ಮಹದೇವಪುರ ವಲಯ	725	22
ಯಲಹಂಕ ವಲಯ	189	154

ಮಾಹಿತಿಗೆ: https://pmsvanidhi.mohua.gov.in/Home/Schemes



ಕಾರ್ಯಾಗಾರದಲ್ಲಿ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ಅವರು ಡಾ. ಸಿ.ಪಿ. ಗ್ರೇಸಿ ಅವರೊಡನೆ ಮಾತನಾಡಿದರು –ಪ್ರಜಾವಾಣಿ ಚಿತ್ರ

‘ಕನಿಷ್ಠ ಖರೀದಿ ದರ ಶಾಸನಬದ್ಧವಾಗಿ ನಿಗದಿ’

ಬೆಂಗಳೂರು: ‘ರೈತರು ಬೆಳೆದ ಬೆಳೆಗಳನ್ನು ಖರೀದಿಸಲು ಸರ್ಕಾರ ಕನಿಷ್ಠ ಖರೀದಿ ದರವನ್ನು ಶಾಸನಬದ್ಧವಾಗಿ ನಿಗದಿ ಮಾಡಬೇಕು. ಆ ದರಕ್ಕಿಂತ ಕಡಿಮೆಗೆ ಕೃಷಿ ಉತ್ಪನ್ನ ಖರೀದಿಸಲು ಅವಕಾಶವಿರಬಾರದು’ ಎಂದು ಕೃಷಿ ತಜ್ಞ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಹೇಳಿದರು.

‘ರೈತರ ಹಿತರಕ್ಷಣೆಗೆ ಸರ್ಕಾರದ ಮಧ್ಯ ಪ್ರವೇಶ ಅಗತ್ಯ’ ಎಂಬ ಕುರಿತು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಮಾತನಾಡಿದರು.

‘ಎಪಿಎಂಸಿ, ಕಾಫಿ ಮಂಡಳಿಗಳಂತಹ ಮಾರಾಟ ಮಂಡಳಿಗಳು, ಹಾಪ್‌ಕಾಮ್ಸ್‌ನಂತಹ ಸಹಕಾರಿ ವ್ಯವಸ್ಥೆಗಳು ಗಟ್ಟಿಯಾಗಬೇಕು. ರೈತರ ಭಯ–ಆತಂಕಗಳು ದೂರ ಆಗಬೇಕಾದರೆ ಸರ್ಕಾರದ ಮಧ್ಯಪ್ರವೇಶ ಇರಬೇಕು’ ಎಂದು ಪ್ರತಿಪಾದಿಸಿದರು.

ನಿವೃತ್ತ ಪ್ರಾಧ್ಯಾಪಕಿ, ಕೃಷಿ ತಜ್ಞೆ ಡಾ. ಸಿ.ಪಿ. ಗ್ರೇಸಿ, ‘ಬೆಳೆ ಪದ್ಧತಿ ಬದಲಾಗುತ್ತಿದೆ. ಕಳೆದ ದಶಕಕ್ಕೆ ಹೋಲಿಸಿದರೆ, ಕೃಷಿ ಉತ್ಪಾದನೆ ಮತ್ತು ಕೃಷಿ ಕ್ಷೇತ್ರದ ವಿಸ್ತೀರ್ಣದಲ್ಲಿ ಬದಲಾವಣೆ ಆಗಿದೆ. ಅದರಲ್ಲಿಯೂ ಆಹಾರ ಬೆಳೆಗಳ ಉತ್ಪಾದನೆ ಕಡಿಮೆಯಾಗಿದ್ದರೆ, ತೋಟಗಾರಿಕೆ ಬೆಳೆಗಳ ಉತ್ಪಾದನೆ ಜಾಸ್ತಿಯಾಗಿದೆ’ ಎಂದರು.

‘ನಾವು ಭಾರತೀಯರು’ ಸಂಸ್ಥೆಯ ವಿನಯ್ ಶ್ರೀನಿವಾಸ್, ‘ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನೀಡುವುದನ್ನು ಕಾನೂನುಬದ್ಧಗೊಳಿಸಿದರೆ ರೈತರ ಬಹುತೇಕ ಸಮಸ್ಯೆಗಳು ಪರಿಹಾರವಾಗುತ್ತವೆ. ಈ ನಿಟ್ಟಿನಲ್ಲಿ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತರಬೇಕಾಗಿದೆ. ಕೇಂದ್ರ ಸರ್ಕಾರ ತಿದ್ದುಪಡಿ ಮಾಡುವುದಕ್ಕೂ ಮುನ್ನವೇ, ರಾಜ್ಯಸರ್ಕಾರವೇ ತಿದ್ದುಪಡಿ ತರಲು ಅವಕಾಶವಿದೆ’ ಎಂದರು.

‘ರಾಜ್ಯದಲ್ಲಿ ಎಲ್ಲ ಪ್ರಮುಖ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸಿದರೂ ಸರ್ಕಾರಕ್ಕೆ ವರ್ಷಕ್ಕೆ ₹11 ಸಾವಿರ ಕೋಟಿಗಿಂತ ಹೆಚ್ಚು ಖರ್ಚಾಗುವುದಿಲ್ಲ. ಎಂಎಸ್‌ಪಿ ಪರಿಹಾರವನ್ನು ಈ ಮೊತ್ತದಿಂದ ನೀಡಬಹುದು’ ಎಂದು ಸಲಹೆ ನೀಡಿದರು.

ಪೃಥ್ವಿ ಪ್ರತಿಷ್ಠಾನ, ಮಳೆ ಆಶ್ರಿತ ಕೃಷಿ ಪುನರುಜ್ಜೀವನ ಜಾಲ, ಪರ್ಯಾಯ ಕಾನೂನು ವೇದಿಕೆಗಳು ಕಾರ್ಯಾಗಾರವನ್ನು ಆಯೋಜಿಸಿದ್ದವು. ಭಾರತೀಯ ಕಿಸಾನ್ ಸಂಘ, ರಾಜ್ಯ ರೈತ ಸಂಘ, ಕಬ್ಬು ಬೆಳೆಗಾರರ ಸಂಘ ಸೇರಿದಂತೆ ಹಲವು ಸಂಘಟನೆಗಳ ಸದಸ್ಯರು ಪಾಲ್ಗೊಂಡರು.

‘ಕ್ಷೇತ್ರದ ಮೂಲ ಸೌಕರ್ಯ ಅಭಿವೃದ್ಧಿಗೆ ಒತ್ತು’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ಕ್ಷೇತ್ರದಲ್ಲಿ ಕುಡಿಯುವ ನೀರು, ಚರಂಡಿ, ರಸ್ತೆ ನಿರ್ಮಾಣ ಸೇರಿದಂತೆ ಎಲ್ಲ ಮೂಲಸೌಕರ್ಯ ಕಲ್ಪಿಸುವ ಕಾರ್ಯಗಳನ್ನು ಹಂತ–ಹಂತವಾಗಿ ಕೈಗೆತ್ತಿಕೊಳ್ಳಲಾಗುವುದು’ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ಹೇಳಿದರು.

ಕೆ.ಆರ್.ಪುರದ ಹೊರಮಾವು ವಾರ್ಡ್ ಹಾಗೂ ಕೆ.ಆರ್.ಪುರ ವಾರ್ಡ್‌ನಲ್ಲಿ ₹10 ಕೋಟಿ ವೆಚ್ಚದ ರಸ್ತೆ, ಚರಂಡಿ ನಿರ್ಮಾಣದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

‘ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹಲವು ಜನಪರ ಯೋಜನೆಗಳನ್ನು ರೂಪಿಸುತ್ತಿದ್ದು ಕುಡಿಯುವ ನೀರು ಸರಬರಾಜು, ಚರಂಡಿ, ರಸ್ತೆ, ಸಮುದಾಯ ಭವನ, ಬಡಾವಣೆಗಳಿಗೆ ಸಂಪರ್ಕ ರಸ್ತೆ ನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಂಡು ಸೌಲಭ್ಯ ಒದಗಿಸಲಾಗುತ್ತದೆ. ಪರಿಸರವನ್ನು ಪರಿಣಾಮಕಾರಿಯಾಗಿ ಉಳಿಸಲು ಕೆರೆ ಅಭಿವೃದ್ಧಿ, ರಸ್ತೆ ಬದಿ ಗಿಡ ನೆಡುವ ಕಾರ್ಯ, ಸ್ವಚ್ಛ ಭಾರತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಾದರಿ ಕ್ಷೇತ್ರ ಮಾಡುವ ಗುರಿ ಹೊಂದಲಾಗಿದೆ’ ಎಂದರು.



ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ಅವರು ಕೆ.ಆರ್.ಪುರ ವಾರ್ಡ್‌ನ ಪಿಯರ್‌ಲೆಸ್ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು. ಪಾಲಿಕೆ ಮಾಜಿ ಸದಸ್ಯ ಪಿ.ಜೆ.ಅಂತೋಣಿಸ್ವಾಮಿ, ಶ್ರೀಕಾಂತ್, ಭಟ್ಟರಹಳ್ಳಿ ಮಂಜುನಾಥ್ ಇದ್ದರು.

ಪಾಲಿಕೆ ಮಾಜಿ ಸದಸ್ಯ ಪಿ.ಜೆ. ಅಂತೋಣಿಸ್ವಾಮಿ, ‘ಸಾರ್ವಜನಿಕರ ಒತ್ತಾಯದಂತೆ ಪಿಯರ್‌ಲೆಸ್ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಸಚಿವ ಭೈರತಿ ಬಸವರಾಜ ಅವರ ಮಾರ್ಗದರ್ಶನದಲ್ಲಿ ಕೆ.ಆರ್.ಪುರ ವಾರ್ಡ್ ಅಭಿವೃದ್ಧಿಪಡಿಸಲಾಗುತ್ತದೆ’ ಎಂದು ಹೇಳಿದರು.

ಪಾಲಿಕೆ ಮಾಜಿ ಸದಸ್ಯ ಶ್ರೀಕಾಂತ್, ಭಟ್ಟರಹಳ್ಳಿ ಮಂಜುನಾಥ್, ಕೆ.ಆರ್.ಪುರ ಬಿಜೆಪಿ ಉಪಾಧ್ಯಕ್ಷರಾದ ರವಿಕುಮಾರ್, ಶಿವಪ್ಪ, ಮುಖಂಡರಾದ ರಮೇಶ್, ಕೃಷ್ಣ, ಶ್ರೀನಿವಾಸ್ ಇದ್ದರು.

ಗೊಂಬೆ ತಯಾರಕರೊಂದಿಗೆ ಪ್ರಧಾನಿ ಮೋದಿ ಸಂವಾದ

ರಾಮನಗರ: ‘ಇಂಡಿಯಾ ಟಾಯ್‌ಫೇರ್-2021’ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ವರ್ಚುಯಲ್ ಕಾರ್ಯಕ್ರಮದ ಮೂಲಕ ಚಾಲನೆ ನೀಡಿದರು. ಈ ಸಂದರ್ಭ ಅವರು ಚನ್ನಪಟ್ಟಣದ ಗೊಂಬೆ ಕರಕುಶಲ ಕರ್ಮಿಗಳ ಜೊತೆ ಸಂವಾದ ನಡೆಸಿದ್ದು ವಿಶೇಷವಾಗಿತ್ತು.

‘ಚನ್ನಪಟ್ಟಣ ಬೊಂಬೆಗಳು ಇಡೀ ಜಗತ್ತಿನ ಮಕ್ಕಳಿಗೆ ಸಿಗುವಂತೆ ಮಾಡಲು ನಾನು ನಿಮ್ಮೊಂದಿಗೆ ನಿಂತು ಕೆಲಸ ಮಾಡುತ್ತೇನೆ’ ಎಂದು ಮೋದಿ ತಮ್ಮ ಮಾತುಗಳ ಮೂಲಕ ಕುಶಲಕರ್ಮಿಗಳಲ್ಲಿ ಭರವಸೆ ತುಂಬಿದರು. ಬೆಂಗಳೂರು ಸಮೀಪದಲ್ಲೇ ಇರುವ ಚನ್ನಪಟ್ಟಣದ ಬೊಂಬೆ ಉದ್ಯಮವನ್ನು ಜಾಗತಿಕ ಮಟ್ಟದಲ್ಲಿ ವಿಸ್ತರಿಸಲು ಕರ್ನಾಟಕ ಸರ್ಕಾರದ ಜೊತೆಗೂಡಿ ಯೋಜನೆ ರೂಪಿಸುವುದಾಗಿ ಪ್ರಧಾನಿ ಇದೇ ಸಂದರ್ಭ ಅವರು ಹೇಳಿದರು.

ಮಹದೇವಪುರ ವಲಯ: ಒಎಫ್‌ಸಿ ತೆರವು

ಬೆಂಗಳೂರು: ಮಹದೇವಪುರ ವಲಯದ ವಿವಿಧ ವಾರ್ಡ್‌ಗಳಲ್ಲಿ ಅನಧಿಕೃತವಾಗಿ ಅಳವಡಿಸಲಾಗಿದ್ದ ಒಟ್ಟು 32.9 ಕಿ.ಮೀ ಉದ್ದದ ಆಪ್ಟಿಕ್ ಫೈಬರ್ ಕೇಬಲ್‌ಗಳನ್ನು (ಒಎಫ್‌ಸಿ) ಬಿಬಿಎಂಪಿ ಶನಿವಾರ ತೆರವುಗೊಳಿಸಿತು.

‘ಕೆ.ಆರ್.ಪುರ ಉಪ ವಿಭಾಗದಲ್ಲಿ 3 ಕಿ.ಮೀ, ಹೊರಮಾವು ಉಪ ವಿಭಾಗದಲ್ಲಿ 5 ಕಿ.ಮೀ, ಹೂಡಿ ಉಪ ವಿಭಾಗದಲ್ಲಿ 13.4 ಕಿ.ಮೀ, ವೈಟ್ ಫೀಲ್ಡ್ ಉಪ ವಿಭಾಗದಲ್ಲಿ 6 ಕಿ.ಮೀ ಮತ್ತು ಮಾರತ್ತಹಳ್ಳಿ ಉಪ ವಿಭಾಗದಲ್ಲಿ 5.5 ಕಿ.ಮೀ ಉದ್ದದ ಒಎಫ್‌ಸಿ ತೆರವುಗೊಳಿಸಲಾಗಿದೆ. ವಿದ್ಯುತ್ ಕಂಬಗಳು ಹಾಗೂ ಮರಗಳ ಮೇಲೆ ಜೋತಾಡುತ್ತಿದ್ದ ಈ ಕೇಬಲ್‌ಗಳು ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದವು’ ಎಂದು ಮಹದೇವಪುರ ವಲಯದ ಮುಖ್ಯ ಎಂಜಿನಿಯರ್ ಆರ್.ಎಲ್. ಪರಮೇಶ್ವರಯ್ಯ ತಿಳಿಸಿದರು.

‘ಅನಧಿಕೃತವಾಗಿ ಅಳವಡಿಸಿರುವ ಕೇಬಲ್‌ಗಳನ್ನು ಇನ್ನು ಮುಂದೆಯೂ ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕುತ್ತೇವೆ. ಇವುಗಳನ್ನು ಅಳವಡಿಸಿದ ಸಂಸ್ಥೆಗಳ ಮೇಲೆ ಮೊಕದ್ದಮೆಗಳನ್ನು ದಾಖಲಿಸುವುದಲ್ಲದೇ ದಂಡವನ್ನೂ ವಿಧಿಸುತ್ತೇವೆ’ ಎಂದರು.

ಚಿತ್ರಾವಳಿ



ಕೇಂದ್ರ ಸರ್ಕಾರದ ಅಧೀನದ ಸಂಸ್ಥೆಗಳ ಖಾಸಗೀಕರಣ ನೀತಿ ಖಂಡಿಸಿ ಬೆಂಗಳೂರು ನಗರ ಕಾಂಗ್ರೆಸ್ ಪ್ರಚಾರ ಸಮಿತಿ ಸದಸ್ಯರು ಮೌರ್ಯ ವೃತ್ತದ ಬಳಿ ಶನಿವಾರ ಪ್ರತಿಭಟಿಸಿದರು. ಮುಖಂಡರಾದ ಎಸ್.ಮನೋಹರ್, ಜಿ.ಜನಾರ್ದನ್ ಇದ್ದರು



ಬಿಬಿಎಂಪಿ ಮತ್ತು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳ 500ಕ್ಕೂ ಹೆಚ್ಚು ಕಾರ್ಯಕರ್ತರು ಶನಿವಾರ ಬಹುಜನ ಸಮಾಜ ಪಕ್ಷಕ್ಕೆ (ಬಿಎಸ್‌ಪಿ) ಸೇರ್ಪಡೆಯಾದರು. ಪಕ್ಷ ಸೇರಿದ ವೆಂಕಟೇಶ್, ಶಿವಕುಮಾರ್, ಗುರುಪ್ರಸಾದ್, ಗೋವಿಂದರಾಜ್ ಜತೆಯಲ್ಲಿ ಪಕ್ಷದ ರಾಜ್ಯ ಉಸ್ತುವಾರಿ ಆರ್. ಮುನಿಯಪ್ಪ ಅವರಿಗೆ ಕಾರ್ಯಕರ್ತರು ಪುಷ್ಪಹಾರ ಹಾಕಿದರು. ಬೆಂಗಳೂರು ಉತ್ತರ ಘಟಕದ ಅಧ್ಯಕ್ಷ ಬೈಲಪ್ಪ, ಬಿಬಿಎಂಪಿ ವ್ಯಾಪ್ತಿ ಅಧ್ಯಕ್ಷ ಸಂದೀಪ್, ಉಪಾಧ್ಯಕ್ಷ ಮನ್ಸೂರ್, ಯಲಹಂಕ ತಾಲ್ಲೂಕು ಘಟಕದ ಅಧ್ಯಕ್ಷ ನಟರಾಜ್, ಬೆಂಗಳೂರು ಉತ್ತರ ಘಟಕದ ಉಪಾಧ್ಯಕ್ಷ ಮುನಿರಾಜು, ಸತೀಶ್, ಸೈಫ್, ಸುಜಿತ್, ಚಿಕ್ಕಣ್ಣ, ಗಂಗನರಸಪ್ಪ ಇದ್ದರು.

ಕಾಲೇಜುಗಳಿಗೆ 12,500 ‘ಡಿಬಾಂಡೆಡ್ ಡೆಸ್ಕ್ ಟಾಪ್’

ಸರ್ಕಾರದ ಜೊತೆ ಕೈಜೋಡಿಸಿದ ಕಾಗ್ನಿಜೆಂಟ್, ರೋಟರಿ

ಬೆಂಗಳೂರು: ಸಾರ್ವಜನಿಕ- ಖಾಸಗಿ ಸಹಭಾಗಿತ್ವದಲ್ಲಿ ‘ಶಿಕ್ಷಣಕ್ಕೆ ಸಹಾಯ’ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ 12,500 (ಡಿ- ಬಾಂಡೆಡ್ ಡೆಸ್ಕ್ ಟಾಪ್) ಕಂಪ್ಯೂಟರ್‌ಗಳನ್ನು ನೀಡುವ ಸಂಬಂಧ ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯು (ಡಿಸಿಟಿಇ) ಕಾಗ್ನಿಜೆಂಟ್ ಟೆಕ್ನಾಲಜಿ ಸಲ್ಯೂಷನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು ರೋಟರಿ ಕ್ಲಬ್ ವೈಟ್‌ಫೀಲ್ಡ್ ಸೆಂಟ್ರಲ್ (ಜಿಲ್ಲೆ 1390) ಜೊತೆ ಶುಕ್ರವಾರ ಒಪ್ಪಂದ ಮಾಡಿಕೊಂಡಿದೆ.

ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಸಮ್ಮುಖದಲ್ಲಿ ಡಿಸಿಟಿಇ ಆಯುಕ್ತ ಪಿ. ಪ್ರದೀಪ್, ಕಾಗ್ನಿಜೆಂಟ್ ಸಂಸ್ಥೆಯ ಬೆಂಗಳೂರು ಕೇಂದ್ರದ ಮುಖ್ಯಸ್ಥ ನವೀನ್ ರಾವ್ ಮತ್ತು ರೋಟರಿ ಕ್ಲಬ್ ಜಿಲ್ಲಾ ಗವರ್ನರ್ ನಾಗೇಂದ್ರ ಪ್ರಸಾದ್ ಒಪ್ಪಂದಕ್ಕೆ ಸಹಿ ಹಾಕಿದರು.

ಬಳಿಕ ಮಾತನಾಡಿದ ಅಶ್ವತ್ಥನಾರಾಯಣ, ‘ನಗರ- ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳ ನಡುವೆ ಡಿಜಿಟಲ್ ಅಂತರ ಅಳಿಸಿ ಹಾಕಲು ಈ ಕಾರ್ಯಕ್ರಮ ಪೂರಕವಾಗಲಿದೆ. ಇದರಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ’ ಎಂದರು.



ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ.ಪ್ರದೀಪ್ ಮತ್ತು ಕಾಗ್ನಿಜೆಂಟ್ ಬೆಂಗಳೂರು ಕೇಂದ್ರದ ಮುಖ್ಯಸ್ಥ ನವೀನ್ ರಾವ್ ಅವರು ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರ ಸಮ್ಮುಖದಲ್ಲಿ ಒಪ್ಪಂದ ಪತ್ರಗಳನ್ನು ವಿನಿಮಯ ಮಾಡಿಕೊಂಡರು.

30 ಸಾವಿರ ಕಂಪ್ಯೂಟರ್ ಅಗತ್ಯ: ‘ಸರ್ಕಾರಿ ಕಾಲೇಜುಗಳಿಗೆ ಸುಮಾರು 30 ಸಾವಿರ ಕಂಪ್ಯೂಟರ್‌ಗಳು ಅಗತ್ಯವಿದ್ದು, ಈ ಪೈಕಿ, ಕಾಗ್ನಿಜೆಂಟ್ ಸಂಸ್ಥೆ 12,500 ಕಂಪ್ಯೂಟರ್‌ಗಳನ್ನು ಒದಗಿಸಿದೆ. ಸುಮಾರು ₹ 50 ಕೋಟಿ ಯೋಜನೆ ಇದಾಗಿದೆ. ಕಾಗ್ನಿಜೆಂಟ್ ಸಂಸ್ಥೆ ಡಿ-ಬಾಂಡೆಡ್, ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳನ್ನು ಒದಗಿಸಲು ಸ್ವಯಂಪ್ರೇರಿತವಾಗಿ ಮುಂದೆ ಬಂದಿದೆ. ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಂಪ್ಯೂಟರ್ ಲ್ಯಾಬ್ ಸ್ಥಾಪಿಸಲು ಉದ್ದೇಶಿಸಲಾಗಿದೆ. ರೋಟರಿ ಕ್ಲಬ್‌ನವರು ವಿಂಡೋಸ್ ಒಎಸ್ ಒದಗಿಸಲಿದ್ದಾರೆ. ನಂತರ ಕಂಪ್ಯೂಟರ್‌ಗಳನ್ನು ನಿಗದಿತ ಕಾಲೇಜುಗಳಿಗೆ ತಲುಪಿಸಲಿದ್ದಾರೆ’ ಎಂದು ಮಾಹಿತಿ ನೀಡಿದರು.

ಮಂಟಿ ಬಿಳಗೂಲಿ ಗ್ರಾಮದಲ್ಲಿ ಬಿರುಕು ಬಿಟ್ಟ ಗೋಡೆಗಳು • ಕಮರಿದ ಬೆಳೆ • ಅನಾರೋಗ್ಯಕ್ಕೀಡಾಗುತ್ತಿರುವ ಗ್ರಾಮಸ್ಥರು

ಗಣಿ ದೂಳು: ಕೇಳೋರಿಲ್ಲ ಗೋಳು!

• ಕೆ.ಓಂಕಾರ ಮೂರ್ತಿ/ ಪ್ರಸನ್ನ ಕುಮಾರ್ ಬಿ.ಎಸ್.

ಬೆಟ್ಟದಪುರ/ಮೈಸೂರು: ಬಿರುಕು ಬಿಟ್ಟ ಗೋಡೆ, ಗುಂಡಿಬಿದ್ದ ರಸ್ತೆ, ನಿತ್ಯ ದೂಳಿನ ಸ್ನಾನದಿಂದ ಕಮರಿದ ಬೆಳೆ, ಮೂಗಿಗೆ ಅಡರುವ ಸ್ಫೋಟಕದ ಘಾಟು ವಾಸನೆಯಿಂದ ಉಸಿರಾಡಲು ಏದುಸಿರು ಬಿಡುತ್ತಿರುವ ಮಕ್ಕಳು ಹಾಗೂ ವೃದ್ಧರು.

ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಹೋಬಳಿಯ ಮಂಟಿ ಬಿಳಗೂಲಿ ಗ್ರಾಮದ ಚಿತ್ರಣವಿದು. ಇದು ಇಂದು, ನಿನ್ನೆಯ ಕತೆಯಲ್ಲ. ಹಲವು ವರ್ಷಗಳಿಂದ ಗ್ರಾಮಸ್ಥರು ಅನುಭವಿಸುತ್ತಿರುವ ಗೋಳು. ಇದಕ್ಕೆ ಕಾರಣ ಗ್ರಾಮದ ಎರಡು ಕಿ.ಮೀ ವ್ಯಾಪ್ತಿಯಲ್ಲಿರುವ ಬೆಟ್ಟಗುಡ್ಡಗಳಲ್ಲಿ ವರ್ಷಗಳಿಂದ ನಡೆಯುತ್ತಿರುವ ಕಲ್ಲು ಗಣಿಗಾರಿಕೆ.

ಜಿಲ್ಲೆಯ ಪ್ರಭಾವಿ ರಾಜಕಾರಣಿಗಳು, ಕೇರಳ ಮೂಲದ ಉದ್ಯಮಿಗಳು ಹಾಗೂ ಕುಶಾಲನಗರದ ಉದ್ಯಮಿಯೊಬ್ಬರು ಈ ಭಾಗದ ಸೀತೆಬೆಟ್ಟದಲ್ಲಿ ನಡೆಸುತ್ತಿರುವ ಕ್ರಷರ್ ಸುತ್ತಮುತ್ತಲಿನ ಗ್ರಾಮಗಳಿಗೆ ಸಂಕಷ್ಟ ತಂದೊಡ್ಡಿದೆ.

ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳನ್ನು ವಿಚಾರಿಸಿದರೆ, 'ಜಿಲ್ಲೆಯಲ್ಲಿ ಗಣಿಗಾರಿಕೆ ನಿಯಮಬದ್ಧವಾಗಿ ನಡೆಯುತ್ತಿದೆ. ಇದರಿಂದ ಗ್ರಾಮಸ್ಥರಿಗೆ ಯಾವುದೇ ತೊಂದರೆ ಆಗಿಲ್ಲ' ಎನ್ನುತ್ತಾರೆ. 'ಪೊಲೀಸ್ ಠಾಣೆಯಲ್ಲಿ ಅನುಮತಿ ಪಡೆದು, ಸುರಕ್ಷಿತ ಕ್ರಮ ಅನುಸರಿಸಿಯೇ ಸ್ಫೋಟ ನಡೆಸಲಾಗುತ್ತಿದೆ' ಎನ್ನುವುದು ಪೊಲೀಸರ ಸಮರ್ಥನೆ.

ಮೈಸೂರು ಜಿಲ್ಲೆಯಲ್ಲಿ 20 ಕ್ರಷರ್‌ಗಳಿವೆ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಎಂಟು ಕಲ್ಲು ಗಣಿ, ಹುಣಸೂರು ಹಾಗೂ ಎಚ್.ಡಿ.ಕೋಟೆ ತಾಲ್ಲೂಕಿನಲ್ಲಿ ತಲಾ ಒಂದು ಗಣಿಗಳಿವೆ.

ಕಲ್ಲು ಗಣಿಯಲ್ಲಿ ನಿತ್ಯ ನಡೆಯುತ್ತಿರುವ ಸ್ಫೋಟದ ತೀವ್ರತೆಗೆ ಮಂಟಿ ಬಿಳಗೂಲಿ ಗ್ರಾಮದ ಹೆಚ್ಚಿನ ಮನೆಗಳು ಬಿರುಕು ಬಿಟ್ಟಿವೆ. ಗಣಿಗಳಿಂದಾಗಿ ಹರಡುವ ದೂಳಿನಿಂದಾಗಿ ಅಂದಾಜು 300 ಎಕರೆಯಲ್ಲಿ ಬೆಳೆ ಬೆಳೆಯಲು ಸಾಧ್ಯವಾಗುತ್ತಿಲ್ಲ. ಬಿರುಕು ಬಿಟ್ಟ ಶಾಲೆಯ ಗೋಡೆ, ಕಾಂಪೌಂಡ್ ಅನ್ನು ಕೆಲವು ದಿನದ ಹಿಂದೆ ದುರಸ್ತಿ ಮಾಡಲಾಗಿದೆ.



ಮಂಗಳೂರಿನ ಗುಂಡವಪದವು ಕೊರಗರ ಕಾಲೊನಿ ಬಳಿ ನಡೆಯುತ್ತಿರುವ ಗಣಿಗಾರಿಕೆ

> ನಿಗದಿಪಡಿಸಿದ ಜಾಗದ ಮಿತಿ ದಾಟಿ ಕಲ್ಲು ಗಣಿಗಾರಿಕೆ ನಡೆದಿದ್ದುಂಟು. ಈಗ ಅವಕಾಶ ನೀಡುತ್ತಿಲ್ಲ. ಮೈಸೂರು ಜಿಲ್ಲೆಯಲ್ಲಿ ಎಲ್ಲೂ ಅಕ್ರಮ ನಡೆಯುತ್ತಿಲ್ಲ
>
> **–ದ್ವಿತೀಯಾ,** ಹಿರಿಯ ಭೂವಿಜ್ಞಾನಿ, ಗಣಿ ಇಲಾಖೆ, ಮೈಸೂರು



ಗೋಡೆ ಬಿರುಕು ಬಿಟ್ಟಿರುವುದನ್ನು ತೋರಿಸುತ್ತಿರುವ ಗ್ರಾಮಸ್ಥರು

'ಬಹಳ ಹಿಂದಿನಿಂದಲೂ ಗ್ರಾಮದ ಸುತ್ತಮುತ್ತ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು, ಈಗ ಮಿತಿಮೀರಿದೆ. ರಾತ್ರಿ ಹತ್ತು ಗಂಟೆಯವರೆಗೂ ಪಟಾಕಿಯಂತೆ ಗ್ರಾಮದಲ್ಲಿ ಸ್ಫೋಟದ ಸದ್ದು ಕೇಳುತ್ತಿರುತ್ತದೆ. ಮನೆಯೊಳಗೆ ಇದ್ದವರು ಬೆಚ್ಚಿ ಬೀಳುವಷ್ಟು ಶಬ್ದ ಬರುತ್ತದೆ. ಮನೆಯ ಗೋಡೆಗಳು ಆಗಲೋ, ಈಗಲೋ ಬಿದ್ದು ಹೋಗುವ ಸ್ಥಿತಿಯಲ್ಲಿವೆ. ಕ್ವಾರಿ ನಡೆಸುವವರು ಎಲ್ಲೋ ಕುಳಿತಿರುತ್ತಾರೆ. ನಮ್ಮ ಗೋಳು ಕೇಳೋರು ಯಾರೂ ಇಲ್ಲ. ಸ್ಫೋಟಕದ ವಾಸನೆ ಇಡೀ ಊರಿಗೆ ಹರಡುತ್ತದೆ. ಸಣ್ಣ ಮಕ್ಕಳು ಅನಾರೋಗ್ಯಕ್ಕೆ ಒಳಗಾಗುತ್ತಿವೆ' ಎಂದು ಗ್ರಾಮಸ್ಥರಾದ ಸುಬ್ಬನಾಯಕ ಮತ್ತು ಕೆಂಗನಾಯಕ ಸಂಕಟ ಬಿಚ್ಚಿಟ್ಟರು.

'ಜಿಲ್ಲೆಯಲ್ಲಿ ರಾತ್ರಿ ವೇಳೆ ಎಲ್ಲೂ ಸ್ಫೋಟ ನಡೆಸುತ್ತಿಲ್ಲ.ಸಣ್ಣಪುಟ್ಟ ತೊಂದರೆ ಸಹಜ. ಈ ಬಗ್ಗೆ ವಿಚಾರಿಸಿ ನೋಡುತ್ತೇವೆ' ಎನ್ನುತ್ತಾರೆ ಗಣಿ ಇಲಾಖೆ ಹಿರಿಯ ಭೂವಿಜ್ಞಾನಿ ದ್ವಿತೀಯಾ.

ಅಬ್ಬರ ನಿಂತರೂ ತೊಂದರೆ ತಪ್ಪಿಲ್ಲ!

ಮಂಗಳೂರು: ಕರಾವಳಿ ಹಾಗೂ ಮಲೆನಾಡಿನ ಭಾಗದಲ್ಲಿ ಕಲ್ಲು ಗಣಿಗಾರಿಕೆ, ಕ್ರಷರ್‌ಗಳ ಅಬ್ಬರ ಸ್ವಲ್ಪ ಕಡಿಮೆಯಾಗಿದ್ದರೂ, ತೆರೆಯಮರೆಯಲ್ಲಿ ಚಟುವಟಿಕೆ ಮಾತ್ರ ನಿಂತಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 120 ಕ್ವಾರಿಗಳಿವೆ. ಬಾಕ್ಸೈಟ್, ಕೆಂಪು ಕಲ್ಲು ಹಾಗೂ ಮರಳು ಗಣಿಗಾರಿಕೆಯೂ ನಡೆಯುತ್ತಿದೆ. ಉಡುಪಿ ಜಿಲ್ಲೆಯಲ್ಲಿ 116 ಕರಿಕಲ್ಲು ಕ್ವಾರಿಗಳಿವೆ. ಚಿಕ್ಕಮಗಳೂರಿನಲ್ಲಿ 88 ಕಲ್ಲು ಗಣಿಗಾರಿಕೆ ಮತ್ತು 40 ಕ್ರಷರ್ ಇವೆ. ನಗರ ಹೊರವಲಯದ ಮಳವೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಂಡವಪದವು ಕೊರಗರ ಕಾಲೊನಿಯಲ್ಲಿ ನಿಯಮ ಉಲ್ಲಂಘಿಸಿ ಗಣಿಗಾರಿಕೆ ನಡೆಯುತ್ತಿದೆ ಎನ್ನುವುದು ಸ್ಥಳೀಯರ ದೂರು.

'ಸಾರ್ವಜನಿಕರಿಗೆ ತೊಂದರೆಯಾಗದಂತೆ ಗಣಿಗಾರಿಕೆ ನಡೆಸಲು ಷರತ್ತು ವಿಧಿಸಿದ್ದರೂ, ಇಲ್ಲಿ ರಾತ್ರಿಯಿಡೀ ಕೆಲಸ ಮಾಡಲಾಗುತ್ತಿದೆ. ಬೆಳಿಗ್ಗೆ 5 ಗಂಟೆಯಿಂದಲೇ ಆರಂಭವಾಗುವ ಗಣಿಗಾರಿಕೆ ರಾತ್ರಿ 8 ಗಂಟೆಯವರೆಗೂ ನಡೆಯುತ್ತದೆ. ನಂತರ ಲಾರಿಗಳ ಮೂಲಕ ಸಾಗಣೆ ಮಾಡಲಾಗುತ್ತಿದೆ. ಇದರಿಂದ ರಾತ್ರಿ ನಿದ್ದೆ ಮಾಡಲಾಗುತ್ತಿಲ್ಲ' ಎಂದು ಕಾಲೊನಿ ನಿವಾಸಿ ನಾರಾಯಣ ಹೇಳುತ್ತಾರೆ.

'ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆಗೆ ಅವಕಾಶ ನೀಡುತ್ತಿಲ್ಲ. ಸರ್ಕಾರದಿಂದಲೂ ಕಟ್ಟುನಿಟ್ಟಿನ ಆದೇಶ ಬಂದಿದ್ದು, ಅದನ್ನು ಪಾಲಿಸಲಾಗುತ್ತಿದೆ. ನಿಯಮ ಉಲ್ಲಂಘಿಸಿದರೆ ಕ್ರಮಕೈಗೊಳ್ಳಲಾಗುವುದು' ಎನ್ನುತ್ತಾರೆ ಜಿಲ್ಲಾ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪ ನಿರ್ದೇಶಕ ನಿರಂಜನ್.

ಸಂಗ್ರಹಕ್ಕೆ ಅವಕಾಶವಿಲ್ಲ

ಮೈಸೂರು ಜಿಲ್ಲೆಯಲ್ಲಿ ಎಲ್ಲೂ ಸ್ಫೋಟಕ ಸಂಗ್ರಹ ಮಾಡುವಂತಿಲ್ಲ. ಪೂರೈಕೆ ಹಾಗೂ ಸ್ಫೋಟ ಮಾಡಲು ಪ್ರತ್ಯೇಕ ಏಜೆನ್ಸಿಗಳಿವೆ. ಅವರೇ ಬಂದು ಸ್ಫೋಟ ಮಾಡಿ ಹೋಗಬೇಕು. ಈ ಬಗ್ಗೆ ಪೊಲೀಸ್ ಠಾಣೆಗೂ ಮಾಹಿತಿ ನೀಡಬೇಕು.

ಈ ವಿಚಾರವಾಗಿ ಕಲ್ಲು ಗಣಿಗಾರಿಕೆ ನಡೆಸುವವರಿಗೆ ನೋಟಿಸ್ ನೀಡಿದ್ದೇವೆ. ಸ್ಫೋಟಕಕ್ಕೆ ಅನುಮತಿ ಪಡೆದವರ ಮಾಹಿತಿ ಕಲೆಹಾಕಿದ್ದೇವೆ. ಸಂಜೆ 6 ಗಂಟೆ ಒಳಗಾಗಿ ಸ್ಫೋಟ ನಡೆಸಬೇಕು. ರಾತ್ರಿ ಸ್ಫೋಟ ಮಾಡಿದರೆ ಕ್ರಮ ಜರುಗಿಸಲಾಗುವುದು

–ಸಿ.ಬಿ.ರಿಷ್ಯಂತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಮೈಸೂರು

ಸುದ್ದಿ 2 ನಿಮಿಷ

ಬಿಸಿಯೂಟ ಆರಂಭಕ್ಕೆ ಕೇಂದ್ರದ ಸಮ್ಮತಿ ಸಿಕ್ಕಿಲ್ಲ: ಸುರೇಶ್ ಕುಮಾರ್

ಮಂಗಳೂರು:'ಬಿಸಿಯೂಟ ಆರಂಭಕ್ಕೆ ಶಿಕ್ಷಣ ಇಲಾಖೆ ಸಿದ್ಧವಾಗಿದೆ. ಆದರೆ, ಕೇಂದ್ರ ಸರ್ಕಾರದಿಂದ ಸಮ್ಮತಿ ದೊರೆತಿಲ್ಲ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್ ಕುಮಾರ್ ಹೇಳಿದರು.

ನಗರದ ಪುರಭವನದಲ್ಲಿ ಶನಿವಾರ ಮುಖ್ಯ ಶಿಕ್ಷಕರೊಂದಿಗೆ ಸಚಿವರ ಸಂವಾದ ಕಾರ್ಯಕ್ರಮಲ್ಲಿ ಅವರು ಮಾತನಾಡಿದರು.

'1ನೇ ತರಗತಿಯಿಂದಲೇ ಶಾಲೆ ಆರಂಭಿಸಲು ಇಲಾಖೆಯು ಸಿದ್ಧತೆ ನಡೆಸಿದೆ. ಆದರೆ, ಆರೋಗ್ಯ ಇಲಾಖೆಯ ತಾಂತ್ರಿಕ ಸಲಹಾ ಸಮಿತಿಯ ಸಮ್ಮತಿ ದೊರೆತಿಲ್ಲ' ಎಂದ ಅವರು, 'ಇನ್ನೆರಡು ದಿನಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷಾ ವೇಳಾಪಟ್ಟಿ ಪ್ರಕಟಿಸಲಾಗುವುದು' ಎಂದು ತಿಳಿಸಿದರು.



ಆ್ಯಪ್: 'ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕಾಗಿ ಇಲಾಖೆಯು ಆ್ಯಪ್ ಹೊರತರಲಿದೆ. ಬಳಿಕ ಶಿಕ್ಷಕರು ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ, ಉಪ ನಿರ್ದೇಶಕರ ಕಚೇರಿಗಳಿಗೆ ಅಲೆದಾಡಬೇಕಾಗಿಲ್ಲ' ಎಂದರು.

'ಕೆಲವು ಅಧಿಕಾರಿಗಳ ಕಚೇರಿಗಳಲ್ಲಿ ಕಡತಗಳು ವಿನಾಕಾರಣ ಬಾಕಿ ಉಳಿದಿರುವ ಬಗ್ಗೆ ದೂರುಗಳಿದ್ದು, ಪರಿಶೀಲನೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷೆಗೆ ಗುರಿ ಮಾಡಲಾಗುವುದು. ಶೀಘ್ರವೇ ಬೆಳಗಾವಿಯಿಂದ ಆರಂಭಿಸಿ, ವಿಭಾಗೀಯ ಮಟ್ಟದಲ್ಲಿ ಕಡತ ವಿಲೇವಾರಿ ಅದಾಲತ್ ನಡೆಸುತ್ತೇವೆ' ಎಂದು ತಿಳಿಸಿದರು.

ಶಕುಂತಲಾ ಜಯದೇವ ಶರಣ ಪ್ರಶಸ್ತಿಗೆ ಆಯ್ಕೆ

ಮೈಸೂರು: ಅಖಿಲ ಭಾರತ ಶರಣ ಪರಿಷತ್ ನೀಡುವ ಶಕುಂತಲಾ ಜಯದೇವ ಶರಣ ಪ್ರಶಸ್ತಿಗೆ ಬಾಗಲಕೋಟೆಯ ಡಾ.ಈಶ್ವರ ಮಂಟೂರ ಮತ್ತು ಹಾವೇರಿಯ ಬಸಮ್ಮ ಹಳಕೊಪ್ಪ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು, ತಲಾ ₹ 10 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ.

ಮಾರ್ಚ್ 2ರಂದು ಇಲ್ಲಿನ ಜೆಎಸ್‌ಎಸ್ ಆಸ್ಪತ್ರೆಯ ಆವರಣದಲ್ಲಿರುವ ರಾಜೇಂದ್ರ ಭವನದಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಶರಣ ಪರಿಷತ್ತಿನ ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಾವಿಯಲ್ಲಿ ಜಿಲೆಟಿನ್ ಸ್ಫೋಟಕ್ಕೆ ಯತ್ನ: ಬಂಧನ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ: ತಾಲ್ಲೂಕಿನ ಹತ್ತರವಾಟ ಗ್ರಾಮ ವ್ಯಾಪ್ತಿಯಲ್ಲಿ ಶುಕ್ರವಾರ ಅಕ್ರಮವಾಗಿ ಬಾವಿಯಲ್ಲಿ ಜಿಲೆಟಿನ್ ಮತ್ತು ಡಿಟೊನೇಟರ್ ಬಳಸಿ ಸ್ಫೋಟಿಸಲು ಸಿದ್ಧತೆ ನಡೆಸಿದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಅವರಿಂದ ಸ್ಫೋಟಕ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಗೋಕಾಕ ತಾಲ್ಲೂಕಿನ ಘಟಪ್ರಭಾದ ನಿವಾಸಿ ಶಾಂತಿಲಾಲ ಗಣೇಶಲಾಲ ದುಗ್ಗರ ಮತ್ತು ವಿಜಯಪುರ ಜಿಲ್ಲೆ ಬಸವನಬಾಗೇವಾಡಿಯ ತ್ಯಾಗರಾಜ್ ಸೋಮ ರಾಠೋಡ ಅವರನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿತರಿಂದ ಮೆಗ್ಗರ್, 90 ಮೀ. ಉದ್ದದ ಪ್ಲಾಸ್ಟಿಕ್ ವೈರ್, ಸಣ್ಣ ಎಳೆಯ ವೈರ್ ತುಂಡುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ತಾಲ್ಲೂಕಿನ ಹತ್ತರವಾಟ ಗ್ರಾಮ ವ್ಯಾಪ್ತಿಯಲ್ಲಿ ಇರುವ ಹುಕ್ಕೇರಿ ತಾಲ್ಲೂಕಿನ ನಿಡಸೋಸಿಯ ಕಲ್ಲಪ್ಪ ನಿಂಗಪ್ಪ ಸೂಜಿ ಅವರ ಮಾಲೀಕತ್ವದ ಬಾವಿಯ 20 ರಂಧ್ರಗಳಲ್ಲಿ ಜಿಲೆಟಿನ್ ಮತ್ತು ಡಿಟೊನೇಟರ್‌ಗಳನ್ನು ಜೋಡಿಸಿ ಅಕ್ರಮವಾಗಿ ಸ್ಫೋಟ ಮಾಡಲು ಸಿದ್ಧತೆ ನಡೆಸಿರುವುದನ್ನು ಕಂಡ ಪೊಲೀಸರು, ತಜ್ಞರ ಸಹಾಯದಿಂದ ಸುರಕ್ಷಿತವಾಗಿ ಸ್ಫೋಟಗೊಳಿಸಿದ್ದಾರೆ. ಚಿಕ್ಕೋಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿ.ಯು ಅತಿಥಿ ಉಪನ್ಯಾಸಕರ ನಿಯೋಜನೆಗೆ ಒತ್ತಾಯ

ಬೆಂಗಳೂರು: ದ್ವಿತೀಯ ಪಿ.ಯು ಪರೀಕ್ಷೆ ಮೇ 24ರಿಂದ ಪ್ರಾರಂಭವಾಗಲಿದೆ. ಆದರೆ, ಹೆಚ್ಚು ಉಪನ್ಯಾಸಕರಿಲ್ಲದೆ ಪಠ್ಯಕ್ರಮದಲ್ಲಿರುವ ಎಲ್ಲ ಪಾಠಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ ಎಂದು ವಿದ್ಯಾರ್ಥಿಗಳು ಅಳಲು ತೋಡಿಕೊಂಡಿದ್ದಾರೆ.

'ಕಾಯಂ ಉಪನ್ಯಾಸಕರ ಸಂಖ್ಯೆ ಹೆಚ್ಚಾಗಿಲ್ಲ. ವಿಜ್ಞಾನ, ಗಣಿತ ಹಾಗೂ ಇಂಗ್ಲಿಷ್ ಉಪನ್ಯಾಸಕರು ವಾರದ ಮೂರು ದಿನ ಮಾತ್ರ ಪಾಠ ಮಾಡುತ್ತಿದ್ದಾರೆ. ಪರೀಕ್ಷೆ ದಿನಾಂಕ ಈಗಾಗಲೇ ಘೋಷಿಸಲಾಗಿದೆ. ಆದರೆ, ನಿಗದಿತ ಪಠ್ಯಕ್ರಮ ಇನ್ನೂ ಮುಗಿದಿಲ್ಲ' ಎಂದು ದ್ವಿತೀಯ ಪಿ.ಯು ವಿದ್ಯಾರ್ಥಿಗಳು ಹೇಳಿದರು.

ಸರ್ಕಾರಿ ಪದವಿ ಕಾಲೇಜುಗಳಲ್ಲಿ ಹಾಗೂ ಸರ್ಕಾರಿ ಪ್ರೌಢಶಾಲೆಗಳಲ್ಲಿ ಅತಿಥಿ ಉಪನ್ಯಾಸಕರ ನೇಮಕಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ. ಆದರೆ, ಪಿ.ಯು ಕಾಲೇಜುಗಳಲ್ಲಿ ಮಾತ್ರ ಅತಿಥಿ ಉಪನ್ಯಾಸಕರ ಸೇವೆ ಮುಂದುವರಿಸಿಲ್ಲ ಎಂದು ಉಪನ್ಯಾಸಕರೊಬ್ಬರು ಹೇಳಿದರು.

'ಕಳೆದ ಶೈಕ್ಷಣಿಕ ವರ್ಷದಲ್ಲಿ 3,043 ಅತಿಥಿ ಉಪನ್ಯಾಸಕರು ಕೆಲಸ ಮಾಡಿದ್ದರು. 1,203 ಕಾಯಂ ಉಪನ್ಯಾಸಕರನ್ನು ಸರ್ಕಾರ ನೇಮಕ ಮಾಡಿಕೊಂಡಿದೆ. ಹೀಗಾಗಿ, ಅತಿಥಿ ಉಪನ್ಯಾಸಕರ ಸೇವೆ ಮುಂದುವರಿಸಿಲ್ಲ' ಎಂದು ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಎ.ಎಚ್. ನಿಂಗೇಗೌಡ ಹೇಳಿದರು.

'ಕಾಯಂ ಉಪನ್ಯಾಸಕರಿಗೇ ಎರಡು–ಮೂರು ಕಾಲೇಜುಗಳ ಹೆಚ್ಚುವರಿ ಹೊಣೆ ನೀಡಲಾಗಿದೆ. ವಾರದಲ್ಲಿ ಮೂರು ದಿನ ಒಂದು ಕಾಲೇಜಿನಲ್ಲಿ, ಇನ್ನುಳಿದ ಮೂರು ದಿನ ಬೇರೆ ಕಾಲೇಜಿನಲ್ಲಿ ಪಾಠ ಮಾಡುತ್ತಿದ್ದಾರೆ. ಎರಡೂ ಕಾಲೇಜುಗಳಲ್ಲಿಯೂ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗುತ್ತಿದೆ' ಎಂದರು.

'ಶೈಕ್ಷಣಿಕ ವರ್ಷದ ಅವಧಿಯೂ ಕಡಿತಗೊಂಡಿದೆ. ಈ ಶೈಕ್ಷಣಿಕ ವರ್ಷ ಮುಗಿಯುವವರೆಗಾದರೂ ಒಂದು ಸಾವಿರ ಅತಿಥಿ ಉಪನ್ಯಾಸಕರನ್ನು ನಿಯೋಜಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಅವರು ಮನವಿ ಮಾಡಿದರು.

'ರೈತ ಯೋಜನೆಗಳಿಗೆ ಜಾತಿ ಬೇಡ'

ಬೆಂಗಳೂರು: 'ರೈತರ ಪರ ಯೋಜನೆಗಳನ್ನು ಜಾರಿ ಮಾಡುವಾಗ ರೈತರಲ್ಲಿ ಜಾತಿ ವರ್ಗೀಕರಣ ಮಾಡದೇ, ಎಲ್ಲ ಕೃಷಿಕರಿಗೂ ಯೋಜನೆಗಳ ಲಾಭ ಸಿಗುವಂತೆ ಅವಕಾಶ ಕಲ್ಪಿಸಬೇಕು' ಎಂದು ಬಿಜೆಪಿ ರೈತ ಮೋರ್ಚಾ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಸಲ್ಲಿಸಿದ ಮನವಿಯಲ್ಲಿ ಪ್ರತಿಪಾದಿಸಿದೆ.

ರಾಜ್ಯದಾದ್ಯಂತ ಪ್ರವಾಸ ಮಾಡಿ, ರೈತರ ಅಹವಾಲು ಆಲಿಸಿದ ರೈತ ಮೋರ್ಚಾದ ತಂಡ, ಈ ಕುರಿತ ಪ್ರಸ್ತಾವನೆಯನ್ನು ಮುಖ್ಯಮಂತ್ರಿಗೆ ಶನಿವಾರ ಸಲ್ಲಿಸಿದೆ.

ರೈತ ಮೋರ್ಚಾ ಅಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್, ಉಪಾಧ್ಯಕ್ಷರಾದ ಲೋಕೇಶ್ ಗೌಡ, ನಂಜುಂಡೇಗೌಡ, ಷಣ್ಮುಖ ಗುರಿಕಾರ ಹಾಜರಿದ್ದರು.

ಪ್ರಸ್ತಾವನೆಯಲ್ಲಿರುವ ಪ್ರಮುಖ ಅಂಶಗಳು

- ಕೃಷಿ ಉತ್ಪನ್ನಗಳಿಗೆ ಬೆಲೆ ಕುಸಿತವಾದ ಕೂಡಲೇ ಬೆಂಬಲ ಬೆಲೆ ಘೋಷಿಸಿ, ಖರೀದಿ ಕೇಂದ್ರ ತೆರೆಯಬೇಕು. ರೈತರಿಗೆ ವೈಜ್ಞಾನಿಕ ಬೆಲೆ ಸಿಗುವಂತೆ ನೋಡಿಕೊಳ್ಳಬೇಕು.
- ಎಂ–ನರೇಗಾ ಯೋಜನೆಯಡಿ ಕೃಷಿ ಚಟುವಟಿಕೆಗಳಿಗೆ ಉದ್ಯೋಗ ಚೀಟಿ ನೀಡುವ ಮುಖೇನ ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಅನುವು ಮಾಡಿಕೊಡಬೇಕು. ತೋಟಗಾರಿಕೆ ಸೇರಿಸಿದಂತೆಯೇ ಆಹಾರಧಾನ್ಯ ಹಾಗೂ ವಾಣಿಜ್ಯ ಬೆಳೆಗಳನ್ನೂ ಸೇರಿಸಬೇಕು.
- 1964ರಿಂದ ಈಚೆಗೆ ಭೂಮಿಯ ಸರ್ವೆ ಸಾಮೂಹಿಕವಾಗಿ ನಡೆದಿಲ್ಲ. ಇದರಿಂದ ಜಮೀನಿನ ಗಡಿ ತಕರಾರು ಹೆಚ್ಚಳವಾಗಿದ್ದು ರೈತರಿಗೆ ತೊಂದರೆಯಾಗಿದೆ. ರಾಜ್ಯದಾದ್ಯಂತ ಸರ್ವೆ ಅಭಿಯಾನ ನಡೆಸಿ ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.
- ಹಾಪ್‌ಕಾಮ್ಸ್ ಮಳಿಗೆಗಳಲ್ಲಿ ಸಾವಯವ ಹಣ್ಣು ಮತ್ತು ತರಕಾರಿಗಳನ್ನು ಪ್ರತ್ಯೇಕವಾಗಿ ಮಾರಾಟ ಮಾಡಲು ಅವಕಾಶ ಮಾಡಿಕೊಡಬೇಕು.

ಆಸ್ತಿ ವೈಷಮ್ಯ: ವಕೀಲನ ಹತ್ಯೆ



ವೆಂಕಟೇಶ್



ಮನೋಜ್

ವಿಜಯನಗರ (ಹೊಸಪೇಟೆ): ಇಲ್ಲಿನ ನ್ಯಾಯಾಲಯಗಳ ಸಂಕೀರ್ಣದ ಆವರಣದಲ್ಲಿ ಶನಿವಾರ ವಕೀಲ ತಾರಿಹಳ್ಳಿ ವೆಂಕಟೇಶ್ (48) ಅವರನ್ನು ಅವರ ಸಂಬಂಧಿ ಯುವಕನೊಬ್ಬ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ್ದಾನೆ.

ಆಸ್ತಿ ವೈಷಮ್ಯದ ಹಿನ್ನೆಲೆಯಲ್ಲಿ ಕೊಲೆ ನಡೆದಿದೆ ಎನ್ನಲಾಗಿದೆ.

ಮೃತ ವೆಂಕಟೇಶ್ ಅವರ ಸಂಬಂಧಿ ಮನೋಜ್ (22) ಕೊಲೆ ಆರೋಪಿ. ಸ್ಥಳದಲ್ಲೇ ಇದ್ದ ಪೊಲೀಸರು ಆರೋಪಿಯನ್ನು ಬಂಧಿಸಿದರು.

ವಕೀಲ ವೆಂಕಟೇಶ್ ಅವರು ಬೆಳಿಗ್ಗೆ ನ್ಯಾಯಾಲಯಗಳ ಸಂಕೀರ್ಣದ ಆವರಣದಲ್ಲಿ ನೋಟರಿ ಮಾಡಿಸುತ್ತಿದ್ದರು. ಆ ಸಂದರ್ಭ ಬೈಕಿನಲ್ಲಿ ಬಂದ ಆರೋಪಿ, ತಾನು ತಂದಿದ್ದ ಮಚ್ಚಿನಿಂದ ವೆಂಕಟೇಶ್ ಅವರ ಕುತ್ತಿಗೆಯ ಭಾಗಕ್ಕೆ ಬಲವಾಗಿ ಹೊಡೆದು ಹತ್ಯೆಗೈದಿದ್ದಾನೆ. ಘಟನೆಯಿಂದಾಗಿ ನ್ಯಾಯಾಲಯ ಸಂಕೀರ್ಣದ ಆವರಣದಲ್ಲಿ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

'ತಾನು ಮಾಡುತ್ತಿದ್ದ ಕೆಲಸವನ್ನು ವೆಂಕಟೇಶ್ ಬಿಡಿಸಿದ್ದರು ಎಂದು ಆರೋಪಿ ನಂಬಿದ್ದರು. ಇದರ ಜೊತೆಗೆ ಕುಟುಂಬದ ಆಸ್ತಿಯ ಬಗ್ಗೆಯೂ ಆರೋಪಿಗೆ ವೈಷಮ್ಯ ಇತ್ತು ಎಂಬುದಾಗಿ ತಿಳಿದು ಬಂದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೈದುಲು ಅಡಾವತ್ ಸುದ್ದಿಗಾರರಿಗೆ ತಿಳಿಸಿದರು.

ಕಾರ್ಮಿಕರ ಕಣ್ಮಣಿ ಶಿವರಾಮ ಹೆಬ್ಬಾರ

ವಲಸೆ ಕಾರ್ಮಿಕರಿಗೆ ವಸತಿ ಸೌಕರ್ಯಕ್ಕೆ ಕ್ರಮ

ಕಾರ್ಮಿಕರು –ಉದ್ಯಮಿಗಳ ಜೊತೆಯಲಿ...



ಕಾರವಾರ: ಯಲ್ಲಾಪುರ ವಿಧಾನಸಭಾ ಕ್ಷೇತ್ರದ ಬಿ.ಜೆ.ಪಿ ಶಾಸಕ ಶಿವರಾಮ ಹೆಬ್ಬಾರ ಅವರು ಕಾರ್ಮಿಕ ಸಚಿವರಾಗಿ ಅಧಿಕಾರ ಸ್ವೀಕರಿಸಿ ಒಂದು ವರ್ಷವಾಯಿತು. ಈ ಅವಧಿಯಲ್ಲಿ ತಮ್ಮ ಇಲಾಖೆಯಲ್ಲಿ ಕೈಗೊಂಡ ಯೋಜನೆಗಳು, ಕಾರ್ಮಿಕರ ಅಭಿವೃದ್ಧಿಗೆ ಹಮ್ಮಿಕೊಂಡಿರುವ ಕಾರ್ಯಗಳು, ಮುಂಬರುವ ಬಜೆಟ್‌ನಲ್ಲಿ ಇಲಾಖೆಗೆ ಇರುವ ನಿರೀಕ್ಷೆಗಳು ಮುಂತಾದ ವಿಚಾರದಲ್ಲಿ 'ಪ್ರಜಾವಾಣಿ' ಜೊತೆ ಮನದಾಳ ಹಂಚಿಕೊಂಡಿದ್ದಾರೆ. ಅವರ ಸಂದರ್ಶನ ಇಲ್ಲಿದೆ.

● ಕೋವಿಡ್ ಬಳಿಕ ಕಾರ್ಮಿಕರು ಮತ್ತೆ ಕೆಲಸದ ಹುಡುಕಾಟದಲ್ಲಿದ್ದಾರೆ. ಅವರಲ್ಲಿ ರಾಜ್ಯದ ಬಗ್ಗೆ ಭರವಸೆ ಮೂಡಿಸಲು ಯಾವ ಯೋಜನೆಗಳನ್ನು ಹಮ್ಮಿಕೊಂಡಿದ್ದೀರಿ?

ಕಳೆದ ವರ್ಷ ಬಜೆಟ್‌ನಲ್ಲಿ ಘೋಷಣೆ ಮಾಡಿದಂತೆ ಕಾರ್ಮಿಕರಿಗೆ ಸಂಚಾರಿ ಚಿಕಿತ್ಸಾಲಯಗಳನ್ನು ಆರಂಭಿಸಲಾಗುತ್ತಿದೆ. ಆರಂಭಿಕ ಹಂತದಲ್ಲಿ ರಾಜ್ಯದ 12 ಕಡೆಗಳಲ್ಲಿ ಶುರು ಮಾಡಲಾಗುತ್ತಿದೆ. ಈ ವರ್ಷ ಬಜೆಟ್‌ನಲ್ಲಿ ಹೆಚ್ಚುವರಿಯಾಗಿ 25 ಪ್ರಕಟಿಸುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿದ್ದೇನೆ.

● ಬಹಳ ಹಿಂದಿನಿಂದಲೂ ಇರುವ, ವಲಸೆ ಕಾರ್ಮಿಕರಿಗೆ ವಸತಿಯ ಸಮಸ್ಯೆ ಬಗೆಹರಿಸಲು ಏನು ಕ್ರಮ ಕೈಗೊಳ್ಳುತ್ತೀರಿ?

ಹೊರ ರಾಜ್ಯಗಳಿಂದ ಬರುವ ವಲಸೆ ಕಾರ್ಮಿಕರಿಗೆ ದುಡಿಯಲು ಬೆಂಗಳೂರು, ಮಂಗಳೂರು, ಉಡುಪಿ, ಮೈಸೂರು, ಹುಬ್ಬಳ್ಳಿ- ಧಾರವಾಡ ಹಾಗೂ ಕಲಬುರ್ಗಿ ಮುಖ್ಯವಾದ ಕೇಂದ್ರಗಳು. ಅವರಿಗೆ ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿ ತಾತ್ಕಾಲಿಕ ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಇದೇ ರೀತಿ ಇತರ ನಗರಗಳಲ್ಲೂ ಆರಂಭಿಸುವ ಚಿಂತನೆಯಿದೆ. ಈ ಯೋಜನೆಯು ಈಗಾಗಲೇ ಅಂತಿಮ ಘಟ್ಟದಲ್ಲಿದೆ.

* ಕಾರ್ಮಿಕ ಇಲಾಖೆಯಲ್ಲಿ ಆಗುತ್ತಿರುವ ಆದಾಯ ಸೋರಿಕೆ ತಡೆಯಲು ಕ್ರಮವೇನು?

ನಿರ್ಮಾಣ ಇಲಾಖೆಯಲ್ಲಿ ಆದಾಯದ ದೊಡ್ಡ ಸೋರಿಕೆಯಿದೆ. ಇಷ್ಟು ವರ್ಷದಲ್ಲಿ ನಮ್ಮ ಇಲಾಖೆಗೆ ₹ 1,700 ಕೋಟಿಯಿಂದ ₹ 1,800 ಕೋಟಿ ಆದಾಯವಿತ್ತು. ಈ ವರ್ಷ ಕೋವಿಡ್‌ನಿಂದಾಗಿ ₹ 1,300 ಕೋಟಿಯಿಂದ ₹ 1,400 ಕೋಟಿಯಾಗಬಹುದು. ರಾಜ್ಯದಲ್ಲಿ ಶೇ 60ರಷ್ಟು ಆದಾಯ ಬಂದರೂ ₹ 3,000 ಕೋಟಿ ಆಗಬೇಕು. ಅದಕ್ಕಾಗಿ ಉತ್ತರ ಪ್ರದೇಶದ ನೊಯ್ಡಾ ಮತ್ತು ಹರಿಯಾಣದ ಗುರುಗ್ರಾಮದಲ್ಲಿರುವಂತೆ, ದೊಡ್ಡ ನಗರಗಳನ್ನು 'ಟ್ಯಾಬ್' ಆಧಾರಿತ ವ್ಯವಸ್ಥೆಯಡಿ ತರಲು ಹೊಸ ನೀತಿ ರೂಪಿಸಲು ಯೋಜಿಸಲಾಗಿದೆ. ಇದು ಬಜೆಟ್‌ನಲ್ಲಿ ಘೋಷಣೆಯಾಗುವ ನಿರೀಕ್ಷೆಯಿದೆ.

ವಲಸೆ ಕಾರ್ಮಿಕರು ಎಲ್ಲಿಗೆ ತೆರಳುತ್ತಾರೆ ಎಂಬ ಬಗ್ಗೆ ತಮ್ಮ ರಾಜ್ಯದ ಸರ್ಕಾರಕ್ಕೆ ತಿಳಿಸುವುದಿಲ್ಲ. ಅದೇರೀತಿ, ಎಲ್ಲಿಂದ ಬಂದವರು ಎಂದು ನಮ್ಮ ರಾಜ್ಯಕ್ಕೂ ಮಾಹಿತಿ ಕೊಡುವುದಿಲ್ಲ. ಇದರಿಂದ ಇಲಾಖೆಯು ಕಾರ್ಮಿಕರಿಗೆ ಕೊಡಬೇಕಾದ ಸವಲತ್ತುಗಳನ್ನು ತಲುಪಿಸಲು ಸಾಧ್ಯವಾಗುತ್ತಿಲ್ಲ. ಇದನ್ನು ಕೂಡ ವ್ಯವಸ್ಥಿತಗೊಳಿಸಲು ಸಿದ್ಧತೆ ಮಾಡಲಾಗುತ್ತಿದೆ.

* ರಾಜ್ಯವನ್ನು 'ಕಾರ್ಮಿಕ ಸ್ನೇಹಿ' ಎಂದು ಹೇಗೆ ಮಾಡುತ್ತೀರಿ?

ರಾಜ್ಯಕ್ಕೆ ಉದ್ಯಮಗಳು ಬರದಿದ್ದರೆ ನಿರುದ್ಯೋಗ ಸಮಸ್ಯೆ ದೂರವಾಗದು. ಕಾರ್ಮಿಕ ಮತ್ತು ಉದ್ದಿಮೆ ಒಂದು ನಾಣ್ಯದ ಎರಡು ಮುಖಗಳು. ಹಾಗಾಗಿ ಕಾರ್ಮಿಕ ಸ್ನೇಹಿ ವಾತಾವರಣ ನಿರ್ಮಿಸುವುದು ನಮ್ಮ ಆದ್ಯತೆಯಾಗಿದೆ. ಇದರ ಜೊತೆಗೇ ಉದ್ಯಮ ಸ್ನೇಹಿ ರಾಜ್ಯ ಎಂಬ ಭಾವನೆ ಬಾರದಿದ್ದರೆ ವಿದೇಶಿ ಬಂಡವಾಳ ಬರುವುದಿಲ್ಲ. ಆದ್ದರಿಂದ, ಕಾರ್ಮಿಕರು ಕೂಡ ಉದ್ಯಮಗಳ ಆಡಳಿತದೊಂದಿಗೆ ಸ್ವಲ್ಪ ತಾಳ್ಮೆಯಿಂದ ಹೋಗಬೇಕಿದೆ. ಈಗಿನ ಪರಿಸ್ಥಿತಿ ಸರಿಯಿಲ್ಲ. ಕಾರ್ಮಿಕ ಸಚಿವನಾಗಿ ನಾನು ಕಾರ್ಖಾನೆಗಳನ್ನು ವಿರೋಧಿಸುವುದಿಲ್ಲ. ಆದರೆ, ಕಾರ್ಖಾನೆಗಳಿದ್ದರೆ ಮಾತ್ರ ಕಾರ್ಮಿಕರಿಗೆ ಉದ್ಯೋಗ ಸಿಗುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

* ಸರೋಜಿನಿ ಮಹಿಷಿ ವರದಿ ಪ್ರಕಾರ ಸ್ಥಳೀಯರಿಗೆ ಎಷ್ಟು ಪ್ರಮಾಣದಲ್ಲಿ ಉದ್ಯೋಗ ನೀಡಲಾಗಿದೆ?

ನಾನು ವಿವಿಧ ಕಾರ್ಖಾನೆಗಳಿಂದ ತರಿಸಿಕೊಂಡ ವರದಿಗಳನ್ನು ಪರಾಮರ್ಶಿಸಿದಾಗ 'ಸಿ' ಮತ್ತು 'ಡಿ' ದರ್ಜೆಯಲ್ಲಿ ಶೇ 90ರಷ್ಟು ಉದ್ಯೋಗವನ್ನು ಕೊಡಬೇಕು ಸ್ಥಳೀಯರಿಗೆ ನೀಡಲಾಗಿದೆ. 'ಬಿ' ವರ್ಗದಲ್ಲಿ ಶೇ 70ರಷ್ಟು ಕೊಟ್ಟಿರುವ ಉದಾಹರಣೆಗಳಿವೆ. 'ಎ' ದರ್ಜೆಯಲ್ಲಿ ತಾಂತ್ರಿಕ ನಿಪುಣತೆ, ಉದ್ಯೋಗಿಯ ಅನುಭವಗಳು ಹಾಗೂ ಆಡಳಿತಕ್ಕೆ ಬೇಕಾದ ವಿಶ್ವಾಸದ ಆಧಾರದಲ್ಲಿ ಅವರದ್ದೇ ಆದ ತಂಡವನ್ನು ರಚಿಸಿರುವುದು ಗಮನಕ್ಕೆ ಬಂದಿದೆ.

* ಕಾರ್ಮಿಕರ ಮಧ್ಯವರ್ತಿಗಳ ಹಾವಳಿ ನಿಯಂತ್ರಣಕ್ಕೆ ಏನು ಮಾಡುತ್ತೀರಿ?

ಗುತ್ತಿಗೆ ಆಧಾರದಲ್ಲಿ ಕಾರ್ಮಿಕರನ್ನು ಪೂರೈಕೆ ಮಾಡುವವರು ಕನಿಷ್ಠ ವೇತನ ನೀಡುತ್ತಿಲ್ಲ ಎಂಬ ಬಗ್ಗೆ ಸಾಕಷ್ಟು ದೂರುಗಳು ಬಂದಿವೆ. ಈ ವಿಚಾರದಲ್ಲಿ ಹೈಕೋರ್ಟ್ ಮತ್ತು ಲೋಕಾಯುಕ್ತ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿವೆ. ಈ ಬಗ್ಗೆ ಕಾರ್ಮಿಕ ಇಲಾಖೆಗೂ ನೋಟಿಸ್ ಜಾರಿಯಾಗಿದೆ. ಇದರ ಕುರಿತು ಇಲಾಖೆಯ ಆಯುಕ್ತರೊಂದಿಗೂ ಚರ್ಚಿಸಿದ್ದು, ಯಾವ ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರದ ಸದ್ಯದಲ್ಲೇ ನಿರ್ಧರಿಸಲಿದೆ.

* ಉದ್ಯಮಗಳಲ್ಲಿ ದಾಂಧಲೆಯಂಥ ಪ್ರಕರಣಗಳ ನಿಯಂತ್ರಣಕ್ಕೆ ಏನು ಕ್ರಮಕ್ಕೆ ಚಿಂತಿಸಲಾಗಿದೆ?

ವೇತನಕ್ಕಾಗಿ, ಉದ್ಯೋಗದ ಭದ್ರತೆಗಾಗಿ ಕಾರ್ಖಾನೆಗಳಲ್ಲಿ ದಾಂಧಲೆಗಳಂಥ ಸನ್ನಿವೇಶಗಳು ಹೆಚ್ಚುತ್ತಿವೆ. ಇಂಥ ಸಂದರ್ಭಗಳಲ್ಲಿ ಸರ್ಕಾರಕ್ಕೆ ಉದ್ಯಮಗಳ ಆಡಳಿತವೇ ಉತ್ತರಿಸಬೇಕಾಗುತ್ತದೆ. ಆ ಜವಾಬ್ದಾರಿಯನ್ನು ಕಾರ್ಮಿಕರನ್ನು ಪೂರೈಕೆ ಮಾಡಿದ ಗುತ್ತಿಗೆದಾರರ ಮೇಲೆ ಹೇರಲು ಸಾಧ್ಯವಿಲ್ಲ. ಹಾಗಾಗಿ ಇನ್ನುಮುಂದೆ ಪ್ರತಿ ಕಾರ್ಮಿಕನ ಹಿನ್ನೆಲೆಯ ಬಗ್ಗೆ ಪೊಲೀಸ್ ಪರಿಶೀಲನೆಯನ್ನು ಕಡ್ಡಾಯ ಮಾಡಲು ಚಿಂತಿಸಲಾಗಿದೆ.

ಮಹಿಳೆಯರಿಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅವಕಾಶ ನೀಡಿದ್ದೇವೆ. ಕೆಲಸದ ಸ್ಥಳದಲ್ಲಿ ವ್ಯವಸ್ಥೆ ಹೇಗಿರಬೇಕು ಎಂದು ಆದೇಶ ನೀಡಲಾಗಿದೆ. ಅದೇರೀತಿ, ಎಂಥವವರನ್ನು ನೇಮಕ ಮಾಡಬೇಕು ಎಂಬ ಕುರಿತೂ ಮಾರ್ಗಸೂಚಿ ಬೇಕಲ್ಲ? ಇದು ಮಹಿಳಾ ಕಾರ್ಮಿಕರು, ಉದ್ಯಮದ ಭದ್ರತೆಯ ಪ್ರಶ್ನೆಯೂ ಆಗುತ್ತದೆ. ಆದ್ದರಿಂದ ಇದಕ್ಕೊಂದು ನೀತಿಯನ್ನು ಸಿದ್ಧ ಪಡಿ ಸಲಾಗುತ್ತಿದೆ.

* ಕೋವಿಡ್ ನಂತಹ ಕಠಿಣ ಸಂದರ್ಭದಲ್ಲಿ ಸಚಿವರಾಗಿ ಅಧಿಕಾರ ಸ್ವೀಕರಿಸಿದಿರಿ. ಸಾಂಕ್ರಾಮಿಕ ಸೋಂಕಿಗೆ ಬೆದರಿ ನಗರಗಳಿಂದ ಕಾರ್ಮಿಕರು ಸಾಲು ಸಾಲಾಗಿ ಗುಳೆ ಹೋಗುವುದನ್ನೂ ಕಂಡಿದ್ದೀರಿ. ಆ ಸಂದರ್ಭದಲ್ಲಿ ಕಾರ್ಮಿಕರ ಸಲುವಾಗಿ ಕೈಗೊಂಡ ಕಾರ್ಯಗಳು ತೃಪ್ತಿ ಕೊಟ್ಟಿವೆಯೇ?


ನಾನು ಆರಂಭದಲ್ಲಿ ಕಾರ್ಮಿಕ ಇಲಾಖೆ ಮತ್ತು ಸಕ್ಕರೆ ಖಾತೆಯನ್ನೂ ನಿಭಾಯಿಸಿದ್ದೇನೆ. ಕೋವಿಡ್ ಅನ್ನು ಯಾರೂ ನಿರೀಕ್ಷಿಸಿರದಿದ್ದ ಕಾರಣ ಪರಿಸ್ಥಿತಿಯನ್ನು ಎದುರಿಸಲು ಪೂರ್ವಭಾವಿ ಸಿದ್ಧತೆಯೂ ಇರಲಿಲ್ಲ. ಅನಿರೀಕ್ಷಿತ ಸಂದರ್ಭವನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅವರ ನಾಯಕತ್ವದಲ್ಲಿ ದೊಡ್ಡ ಸವಾಲಾಗಿ ಸ್ವೀಕರಿಸಿದ್ದೆವು. ಆ ಸಂದರ್ಭದಲ್ಲಿ ಇಲಾಖೆಯ ಕಾರ್ಯಗಳು ಕಾರ್ಮಿಕರಿಗೆ ಸಂಪೂರ್ಣವಾಗಿ ನೆಮ್ಮದಿ ತಂದಿದೆ ಎಂದು ಸತ್ಯಕ್ಕೆ ದೂರವಾದ ಸಂಗತಿಗಳನ್ನು ಹೇಳಲು ನಾನು ಸಿದ್ಧನಿಲ್ಲ. ಆದರೆ, ನೆರೆಯ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಎಷ್ಟೋ ಉತ್ತಮ ರೀತಿಯಲ್ಲಿ ನಿಭಾಯಿಸಿದ ಸಂತೃಪ್ತಿಯಿದೆ. ಕಾರ್ಮಿಕರ ವಿಶ್ವಾಸಕ್ಕೆ ಧಕ್ಕೆಯಾಗದಂತೆ ಕೆಲಸ ಮಾಡಿದ್ದೇವೆ.

* ಲಾಕ್‌ಡೌನ್ ಸಂದರ್ಭದಲ್ಲಿ ಅತಿಹೆಚ್ಚು ಸಮಸ್ಯೆಗೆ ಒಳಗಾದವರು ವಲಸೆ ಕಾರ್ಮಿಕರು. ಅವರಲ್ಲಿ ಯಾವ ರೀತಿ ಭರವಸೆ ಮೂಡಿಸಲಾಯಿತು?

ವಲಸೆ ಕಾರ್ಮಿಕರನ್ನು ಅವರ ಊರುಗಳಿಗೆ ಕಳುಹಿಸಲು ಮತ್ತು ಅವರು ಉಪವಾಸ ಇರದಂತೆ ನೋಡಿಕೊಳ್ಳಲು ವಲಸೆ ಕಾರ್ಮಿಕರಿರುವ ಜಾಗವನ್ನು ಗುರುತಿಸುವುದು, ಎಷ್ಟು ಪ್ರಮಾಣದಲ್ಲಿ ಇದ್ದಾರೆ ಎಂಬುದನ್ನು ಪತ್ತೆ ಹಚ್ಚುವುದು ಮುಖ್ಯವಾಗಿತ್ತು. ಅದಕ್ಕೆ ಅನುಕೂಲವಾಗುವಂತೆ ಬೆಂಗಳೂರನ್ನು ಎಂಟು ವಿಭಾಗಗಳನ್ನಾಗಿ ವಿಭಾಗಿಸಿ ಇಲಾಖೆಯ ಅಧಿಕಾರಿಗಳಿಗೆ ಜವಾಬ್ದಾರಿ ಹಂಚಿದೆವು.

ಕಾರ್ಮಿಕರ ಸಲುವಾಗಿ ಎಷ್ಟಾದರೂ ವೆಚ್ಚವಾಗಲಿ, ಒಂದು ಹೊತ್ತಿನ ಊಟವಿಲ್ಲದೇ ಮೃತಪಟ್ಟರೆಂಬ ತಪ್ಪು ಸಂದೇಶ ದೇಶಕ್ಕೆ ನಮ್ಮ ರಾಜ್ಯದಿಂದ ಹೋಗಬಾರದು ಎಂದು ಮುಖ್ಯಮಂತ್ರಿ ಸ್ಪಷ್ಟವಾದ ನಿರ್ದೇಶನ ನೀಡಿದ್ದರು. ಆ ನಿಟ್ಟಿನಲ್ಲಿ ನಮ್ಮ ತಂಡ ಬಹಳ ಜವಾಬ್ದಾರಿಯುತವಾಗಿ ಕೆಲಸ ಮಾಡಿತು.

ನಾಲ್ಕು ತಿಂಗಳ ಅವಧಿಯಲ್ಲಿ 86 ಲಕ್ಷ ಮಂದಿಗೆ ಇಲಾಖೆಯಿಂದ ಊಟ ನೀಡಿದ್ದೇವೆ. 7 ಲಕ್ಷಕ್ಕೂ ಅಧಿಕ ಮಂದಿಗೆ ಆಹಾರದ ಪೊಟ್ಟಣಗಳನ್ನು ವಿತರಿಸಿದ್ದೇವೆ. ವಲಸೆ ಕಾರ್ಮಿಕರನ್ನು ಅವರ ಊರುಗಳಿಗೆ ಕಳುಹಿಸಲು ಬಿ.ಎಂ.ಟಿ.ಸಿ ಬಸ್‌ಗಳನ್ನು ಬಾಡಿಗೆ ಪಡೆದೆವು. ರೈಲುಗಳಲ್ಲೂ ಕಳುಹಿಸಿಕೊಟ್ಟೆವು. 16.86 ಲಕ್ಷ ನಿರ್ಮಾಣ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ತಲಾ ₹ 5 ಸಾವಿರ ಜಮೆ ಮಾಡಲಾಯಿತು. ಈ ರೀತಿ ಹಲವು ಕಾರ್ಯಗಳಿಗೆ ಸುಮಾರು ₹ 986 ಕೋಟಿಯನ್ನು ವ್ಯಯಿಸಲಾಯಿತು. ಇದರಿಂದ ರಾಜ್ಯದಲ್ಲಿ ಕಾರ್ಮಿಕರು ಆತಂಕವಿಲ್ಲದೇ ಉಳಿದರು. ನಮ್ಮ ಕಾರ್ಯಕ್ಕೆ ಅನೇಕ ಉದ್ಯಮಿಗಳು, ಮಠಾಧಿಪತಿಗಳು, ಸಂಘ ಸಂಸ್ಥೆಗಳು ಕೈ ಜೋಡಿಸಿದರು.



● ಕಾರ್ಮಿಕ ಇಲಾಖೆಯಲ್ಲಿವ್ಯಯವಾಗದೇ ಉಳಿದಿರುವ ₹ 7 ಸಾವಿರ ಕೋಟಿಯಷ್ಟು ಹಣವನ್ನು ಸರ್ಕಾರ ಅನ್ಯ ಯೋಜನೆಗಳಿಗೆ ಬಳಸಿಕೊಳ್ಳಲು ಸಿದ್ಧತೆ ನಡೆಸಿದೆ ಎಂಬ ಆರೋಪದ ಬಗ್ಗೆ ಏನು ಹೇಳುತ್ತೀರಿ?

ಆ ಹಣವನ್ನು ಸರ್ಕಾರ ಬಳಕೆ ಮಾಡುವುದು ಅಸಾಧ್ಯವಾದ ಮಾತು. ಯಾವ ಕಾರಣಕ್ಕೂ ಯಾರೂ ದುರ್ಬಳಕೆ ಮಾಡಲಾಗುವುದಿಲ್ಲ. ಅಕಸ್ಮಾತ್ ಆಗುವುದಿದ್ದರೆ ಈ ಹಿಂದಿನ ಯಾವ ಸರ್ಕಾರಗಳೂ ಬಿಡುತ್ತಿರಲಿಲ್ಲ (ನಗು). ಕಾರ್ಮಿಕ ಕಲ್ಯಾಣ ಮಂಡಳಿಯು ಕೇಂದ್ರ ಸರ್ಕಾರದ ಕಾಯ್ದೆಯಡಿ ಕೆಲಸ ನಿರ್ವಹಿಸುತ್ತದೆ. ಆಯಾ ರಾಜ್ಯಗಳಲ್ಲಿ ಮಂಡಳಿಗೆ ಕಾರ್ಮಿಕ ಸಚಿವರೇ ಅದಕ್ಕೆ ಅಧ್ಯಕ್ಷರು. ಕಾರ್ಮಿಕರ ಕಲ್ಯಾಣದ ಯಾವ ಉದ್ದೇಶಕ್ಕಾಗಿ ಹಣವನ್ನು ಬಳಕೆ ಮಾಡಬಹುದು ಎಂದು ಅಧ್ಯಕ್ಷರು ನಿರ್ಧರಿಸಬಹುದೇ ವಿನಾ ಬೇರಾವುದೇ ಅನ್ಯ ಉದ್ದೇಶಗಳಿಗೆ ಸಾಧ್ಯವಿಲ್ಲ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

'ಕಾರ್ಮಿಕ ಸ್ನೇಹಿ' ಕಾರ್ಯಗಳ ಮೂಲಕ ಶ್ರಮಜೀವಿಗಳಿಗೆ ಸ್ಪಂದಿಸಿದ ಸಚಿವ ಶಿವರಾಮ ಹೆಬ್ಬಾರ

ವರ್ಷದಲ್ಲಿ ಕಾರ್ಮಿಕ ಇಲಾಖೆಗೆ ಹೈಟೆಕ್ ಸ್ಪರ್ಶ

ಕಾರವಾರ: ಜಡ್ಡುಗಟ್ಟಿದ್ದ ಕಾರ್ಮಿಕ ಇಲಾಖೆಗೆ ಹೈಟೆಕ್ ಸ್ಪರ್ಶ, ಸ್ತ್ರೀ ಸಬಲೀಕರಣ, ಹೊಸ ಮಂಡಳಿಗಳ ರಚನೆ, ಸಾಮಾಜಿಕ ಭದ್ರತಾ ಯೋಜನೆಗೆ 43 ವರ್ಗಗಳ ಕಾರ್ಮಿಕರ ಸೇರ್ಪಡೆ, ಕೋವಿಡ್ ಸಮಯದಲ್ಲಿ ಕಂಗೆಟ್ಟಿದ್ದ ಕಾರ್ಮಿಕರಿಗೆ ನೆರವು...

ಈ ರೀತಿ ಹಲವು ಯೋಜನೆಗಳು, ಕಾರ್ಯಗಳ ಮೂಲಕ ಮೆಚ್ಚುಗೆ ಗಳಿಸಿದವರು ಕಾರ್ಮಿಕ ಸಚಿವ ಅರಬೈಲ್ ಶಿವರಾಮ ಹೆಬ್ಬಾರ. 'ಶ್ರಮಮೇವ ಜಯತೇ' (ಶ್ರಮಿಕರಿಗೆ ಜಯವಾಗಲಿ) ಎಂಬ ಧ್ಯೇಯದೊಂದಿಗೆ ಶ್ರಮಜೀವಿಗಳ ಕಲ್ಯಾಣಕ್ಕಾಗಿ ಅವಿರತ ಶ್ರಮಿಸುತ್ತ ಗಮನ ಸೆಳೆಯುತ್ತಿದ್ದಾರೆ. ಸಚಿವರಾಗಿ ಅಧಿಕಾರ ವಹಿಸಿಕೊಂಡ ಒಂದು ವರ್ಷದ ಅವಧಿಯಲ್ಲೇ ಇಲಾಖೆಯನ್ನು 'ಕಾರ್ಮಿಕ ಸ್ನೇಹಿ'ಯನ್ನಾಗಿ ಬದಲಾಯಿಸಿದ ಹೆಗ್ಗಳಿಕೆ ಅವರದ್ದಾಗಿದೆ.

'ಕಾರ್ಮಿಕ ಇಲಾಖೆಯು ಸಂಘಟಿತ ಮತ್ತು ಅಸಂಘಟಿತ ವಿಭಾಗಗಳ ಎಲ್ಲ ಶ್ರಮಿಕರನ್ನೂ ಒಳಗೊಳ್ಳಬೇಕಿದೆ. ಇಲಾಖೆಯ ಕಾರ್ಯವಿಧಾನವು ಸರ್ವವ್ಯಾಪಿಯಾಗಿದ್ದು, ಯೋಜನೆಗಳು ಮತ್ತು ಕಾರ್ಯಕ್ರಮಗಳು ಸರ್ವರ ಹಿತದಲ್ಲಿರಬೇಕು' ಎಂದು ಹೇಳುತ್ತಾರೆ.

ಈ ನಿಟ್ಟಿನಲ್ಲಿ ಕಾರ್ಮಿಕರು ಮತ್ತು ಉದ್ಯಮ, ಎರಡೂ ಕಡೆಗಳಿಗೆ ಅನುಕೂಲವಾಗುವಂತೆ ಕಾರ್ಮಿಕ ಕಾನೂನುಗಳನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಬೇಕು. ಇಲಾಖೆಯನ್ನು ತಂತ್ರಜ್ಞಾನ ಆಧಾರಿತ ವ್ಯವಸ್ಥೆಯಡಿ ತರುವುದು ಅಗತ್ಯ ಎಂದು ಅಭಿಪ್ರಾಯ ಪಡುತ್ತಾರೆ.

ಅವಿಸ್ಮರಣೀಯ ಸಹಾಯ: ಹಿಂದೆಂದೂ ಕಂಡು ಕೇಳರಿಯದಂಥ ಸಾಂಕ್ರಾಮಿಕ ಸೋಂಕಾಗಿ ಕೋವಿಡ್ ಕಾಣಿಸಿಕೊಂಡಾಗ, ವಿಶೇಷವಾಗಿ ವಲಸೆ ಕಾರ್ಮಿಕರು ಬಹಳ ತೊಂದರೆಗೆ ಸಿಲುಕಿದರು. ಆ ಸಂದರ್ಭದಲ್ಲಿ ಅವರ ಜೊತೆಯಾಗಿ ನಿಂತ ಇಲಾಖೆಯು ಅವರ ಕಷ್ಟಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸಿದೆ ಎಂದು ಸಚಿವ ಹೆಬ್ಬಾರ ಹೆಮ್ಮೆಯಿಂದ ಹೇಳುತ್ತಾರೆ.

ಕಟ್ಟಡ ಕಾರ್ಮಿಕರಿಗೆ ನೀಡುತ್ತಿದ್ದ ₹ 2 ಸಾವಿರ ಸಹಾಯಧನವನ್ನು ₹ 5 ಸಾವಿರಕ್ಕೆ ಹೆಚ್ಚಿಸಲಾಯಿತು. 16 ಲಕ್ಷಕ್ಕೂ ಅಧಿಕ ಕಾರ್ಮಿಕರು ಒಂದು ಬಾರಿ ಇದರಿಂದ ಪ್ರಯೋಜನ ಪಡೆದುಕೊಂಡರು. ಕಾರ್ಮಿಕರಿಗೆ ತಮ್ಮ ಊರುಗಳಿಗೆ ತೆರಳಲು ಬಸ್, ರೈಲು ವ್ಯವಸ್ಥೆ ಮಾಡಲಾಯಿತು. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ನಗರಗಳಲ್ಲಿ, ಪಟ್ಟಣಗಳಲ್ಲಿ ಸಂಕಷ್ಟದಲ್ಲಿದ್ದ ಕಾರ್ಮಿಕರಿಗೆ ಆಹಾರದ ಕಿಟ್‌ಗಳನ್ನು ವಿತರಣೆ ಮಾಡಲಾಯಿತು. ಒಬ್ಬ ಕಾರ್ಮಿಕನೂ ಹಸಿವಿನಿಂದ ಬಳಲಬಾರದು ಎಂಬುದೇ ಇಲಾಖೆಯ ಧ್ಯೇಯವಾಗಿತ್ತು. ಅದರಂತೆ ಕೆಲಸ ಮಾಡಲಾಗಿದೆ ಎಂದು ಅವರು ಸಂತೃಪ್ತಿ ವ್ಯಕ್ತಪಡಿಸುತ್ತಾರೆ.

'ರಾಜ್ಯದಲ್ಲಿರುವ 22 ಲಕ್ಷ ಕಟ್ಟಡ ಕಾರ್ಮಿಕರ ಪೈಕಿ 16 ಲಕ್ಷಕ್ಕೂ ಹೆಚ್ಚಿನವರಿಗೆ ಇಲಾಖೆಯಿಂದ ₹ 800 ಕೋಟಿಯನ್ನು ಪರಿಹಾರವಾಗಿ ನೀಡಲಾಗಿದೆ. ಗುರುತಿನ ಚೀಟಿ ನವೀಕರಣ ಆಗದಿರುವ ಕಾರ್ಮಿಕರನ್ನೂ ಈ ಸಹಾಯದಿಂದ ಹೊರಗಿಟ್ಟಿರಲಿಲ್ಲ. ಹಣ ವಿತರಣೆಯಲ್ಲಿ ವಿಳಂಬ ಹಾಗೂ ಅವ್ಯವಹಾರ ಆಗದಂತೆ ನೋಡಿಕೊಳ್ಳಲು ಫಲಾನಭವಿಗಳ ಬ್ಯಾಂಕ್ ಖಾತೆಗಳಿಗೇ ನೇರವಾಗಿ ಹಣವನ್ನು ಜಮೆ ಮಾಡಲಾಯಿತು. ಎಲ್ಲೂ ತೊಂದರೆಯಾಗದಂತೆ ಕೆಲಸ ಮಾಡಿದ ಹಿರಿಮೆ ಇಲಾಖೆಯದ್ದಾಗಿದೆ. ಒಟ್ಟಿನಲ್ಲಿ ಕೋವಿಡ್ ತಂದಿಟ್ಟ ಸಮಸ್ಯೆಯನ್ನು ಇಲಾಖೆಯು ಅತ್ಯಂತ ದಿಟ್ಟತನದಿಂದ ಎದುರಿಸಿತು' ಎಂದು ಹೆಮ್ಮೆಯಿಂದ ಹೇಳುತ್ತಾರೆ.

ನೋಂದಣಿ ಅಭಿಯಾನ: 'ಅಸಂಘಟಿತ ಕಾರ್ಮಿಕರ ನೋಂದಣಿ ಅಭಿಯಾನಕ್ಕೆ ಚಿಂತನೆ ನಡೆಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಈ ಅಭಿಯಾನ ನಡೆಸಲಾಗುವುದು. ಈ ಅಭಿಯಾನವನ್ನು ಜಿಲ್ಲಾ ಮಟ್ಟದಿಂದ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟಕ್ಕೂ ವಿಸ್ತರಿಸುವ ಆಲೋಚನೆ ಕೂಡ ನಮ್ಮ ಮುಂದಿದೆ' ಎಂದೂ ಅವರು ಕಾರ್ಯಯೋಜನೆಯನ್ನು ಮುಂದಿಡುತ್ತಾರೆ.

ಎಲ್ಲ ವರ್ಗಗಳ ಕಾರ್ಮಿಕರ ಹಿತ ಕಾಯಲು ಹಲವು ಕಲ್ಯಾಣ ಮಂಡಳಿಗಳನ್ನು ಸ್ಥಾಪಿಸಲಾಗುತ್ತಿದೆ. ಈ ಮೂಲಕ ಇಲಾಖೆಯ ಕಾರ್ಯಕ್ಷಮತೆ ಹೆಚ್ಚಿಸುವ ಚಿಂತನೆಗೂ ಮುಂದಡಿ ಇಡಲಾಗಿದೆ. ಅಸಂಘಟಿತ ಕಾರ್ಮಿಕರ ರಕ್ಷಣೆ, ಕಟ್ಟಡ ಕಾರ್ಮಿಕರಿಗೆ ಅನುಕೂಲ ಕಲ್ಪಿಸಲು ಯೋಜನೆಗಳನ್ನು ಜಾರಿಗೆ ತರಲು ಚಿಂತಿಸಲಾಗಿದೆ.

ದುರ್ಲಾಭಕ್ಕೆ ಕಡಿವಾಣ: 'ಬದಲಾದ ವ್ಯವಸ್ಥೆಗಳಲ್ಲಿ ವಿವಿಧ ಕಾರ್ಮಿಕ ಸೇವೆಗಳಿಗೆ ಮಾನವ ಸಂಪನ್ಮೂಲ ಒದಗಿಸುತ್ತಿರುವ ಹೊರಗುತ್ತಿಗೆ ಸಂಸ್ಥೆಗಳನ್ನು ಮುಖ್ಯವಾಹಿನಿಗೆ ತರಲಾಗುವುದು. ಕಾರ್ಮಿಕರ ಪರಿಸ್ಥಿತಿಯ ದುರ್ಲಾಭಕ್ಕೂ ಕಡಿವಾಣ ಹಾಕುವ ಪ್ರಯತ್ನಗಳು ಆರಂಭವಾಗಿವೆ' ಎಂದು ಶಿವರಾಮ ಹೆಬ್ಬಾರ ತಿಳಿಸುತ್ತಾರೆ.

'ಹೊರಗುತ್ತಿಗೆಯ ನೆಪದಲ್ಲಿ ಕಾರ್ಮಿಕರನ್ನು ಶೋಷಣೆ ಮಾಡುವುದನ್ನು ನಿಯಂತ್ರಿಸಲು ನಮ್ಮ ಇಲಾಖೆ ಮುಂದಾಗಿದೆ. ವಿಳಾಸವೇ ಇಲ್ಲದೆ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಸಂಸ್ಥೆಗಳು, ವೇತನ ನೀಡುವಲ್ಲಿ ತಾರತಮ್ಯ ಮಾಡುತ್ತಿರುವ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ. ಕಾರ್ಮಿಕ ಕಾಯ್ದೆಯ ಪ್ರಕಾರವೇ ವೇತನ ಮತ್ತು ಇತರ ಸೌಲತ್ತುಗಳನ್ನು ಕಾರ್ಮಿಕರಿಗೆ ನೀಡಬೇಕು. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಮಾರ್ಗದರ್ಶನದಲ್ಲಿ ಕಾರ್ಯೋನ್ಮುಖರಾಗಿದ್ದೇವೆ' ಎಂದು ಹೆಬ್ಬಾರ ಹೇಳುತ್ತಾರೆ.

ಪ್ರತ್ಯೇಕ ಮಂಡಳಿ: 'ಸಚಿವರ ಅಧ್ಯಕ್ಷತೆಯಲ್ಲಿ ವಾಹನ ಚಾಲಕರಿಗೆ ಪ್ರತ್ಯೇಕ ಮಂಡಳಿಯನ್ನು ರಚಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ವಾಹನ ತೆರಿಗೆಯಲ್ಲಿ ಶೇ 1ರಷ್ಟು ಸೆಸ್ ಅನ್ನು ಈ ಮಂಡಳಿಗೆ ಸೇರುವಂತೆ ಮಾಡಲಾಗುವುದು. ವಾಹನ ಚಾಲಕರಿಗೆ ಹಾಗೂ ಅವರ ಕುಟುಂಬಕ್ಕೆ ತುರ್ತು ಪರಿಸ್ಥಿತಿಯಲ್ಲಿ ಆರ್ಥಿಕ ಸಹಾಯ ದೊರೆಯುವಂತೆ ಮಾಡಲಾಗುವುದು' ಎಂದು ಅವರು ಉದ್ದೇಶವನ್ನು ವಿವರಿಸುತ್ತಾರೆ.

'ಬೆಂಗಳೂರಿನಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿರುವವ ಗಾರ್ಮೆಂಟ್ ಕಾರ್ಖಾನೆಗಳ ನೌಕರರು, ರಾಜ್ಯದಾದ್ಯಂತ ಇರುವ ಕೃಷಿ ಕಾರ್ಮಿಕರು, ಹೊರಗುತ್ತಿಗೆ ನೌಕರರ ಕಲ್ಯಾಣ ಮಂಡಳಿ ಸ್ಥಾಪಿಸಲೂ ಪ್ರಸ್ತಾವಗಳಿವೆ. ಮನೆಗೆಲಸದವರ ಕಲ್ಯಾಣ ಮಂಡಳಿ ಸ್ಥಾಪನೆ ವಿಚಾರವನ್ನೂ ಮಾನವೀಯ ದೃಷ್ಟಿಯಿಂದ ಪರಿಶೀಲಿಸಲಾಗುತ್ತಿದೆ. ಅಸಂಘಟಿತ ಕಾರ್ಮಿಕರ ನೆರವಿಗೆ ಕಸುಬು ಆಧಾರಿತ ಮಂಡಳಿಗಳನ್ನು ಸ್ಥಾಪಿಸಲು ಕೂಡ ಉದ್ದೇಶಿಸಲಾಗಿದೆ' ಎಂದು ಅವರು ಭವಿಷ್ಯದ ಯೋಜನೆಗಳನ್ನೂ ಮುಂದಿಟ್ಟರು.

ಸಹಾಯಧನ: 'ಅಪಘಾತ ಪರಿಹಾರ ಸೌಲಭ್ಯ ಯೋಜನೆಯಡಿ, ಸಾರಿಗೆ ಇಲಾಖೆಯ ಸಹಕಾರದಿಂದ ಒಟ್ಟು 7,78,485 ಚಾಲಕರನ್ನು ಯೋಜನೆಯ ವ್ಯಾಪ್ತಿಗೆ ತರಲಾಗಿದೆ. ಈ ಯೋಜನೆಯಡಿ 2020ನೇ ಸಾಲಿನಲ್ಲಿ ಒಟ್ಟು ₹ 22.24 ಕೋಟಿಗೂ ಅಧಿಕ ಮೊತ್ತದ ಕ್ಲೇಮುಗಳನ್ನು ವಿತರಿಸಲಾಗಿದೆ.

'2018–19ನೇ ಸಾಲಿನಿಂದ, ಅಪಘಾತದಿಂದ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ಅಂಗವಿಕಲರಾದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ₹ 10 ಸಾವಿರದ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ. ಈವರೆಗೆ 410 ಫಲಾನುಭವಿ ವಿದ್ಯಾರ್ಥಿಗಳಿಗೆ ಒಟ್ಟು ₹ 41 ಲಕ್ಷವನ್ನು ವಿತರಿಸಲಾಗಿದೆ. ಎಲ್ಲ ಖಾಸಗಿ ವಾಣಿಜ್ಯ ಸಾರಿಗೆ ವಾಹನಗಳ ಚಾಲಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ. ಈಗಾಗಲೇ 90,315 ಚಾಲಕರು ಪಡೆದುಕೊಂಡಿದ್ದಾರೆ ಎಂದು ಅಂಕಿ ಅಂಶ ಮುಂದಿಡುತ್ತಾರೆ.

'ಪ್ರತಿ ವರ್ಷ ಮಾರ್ಚ್ 1ರಂದು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ಸಮ್ಮಾನ ದಿನಾಚರಣೆ ಆಚರಿಸಲಾಗುತ್ತಿದೆ. ಉತ್ತಮ ಹಾಗೂ ಸುರಕ್ಷತೆಯಿಂದ ಚಾಲನೆ ಮಾಡಿದ ತ್ರಿಚಕ್ರ ಹಾಗೂ ನಾಲ್ಕು ಚಕ್ರದ ವಾಹನಗಳ ಚಾಲಕರಿಗೆ ಪ್ರತಿ ಜಿಲ್ಲೆಗೆ ಪ್ರತ್ಯೇಕವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿ ಮತ್ತು ಎಂಟು ವಿಶೇಷ ಪುರಸ್ಕಾರ ನೀಡಲಾಗುತ್ತಿದೆ. ಒಟ್ಟು 660 ಚಾಲಕರಿಗೆ 'ಶ್ರಮ ಸಮ್ಮಾನ ಪ್ರಶಸ್ತಿ' ನೀಡಿ ಗೌರವಿಸಲಾಗುತ್ತಿದೆ' ಎಂದೂ ಅವರು ತಿಳಿಸುತ್ತಾರೆ.

ಈ ರೀತಿ ಹತ್ತಾರು ಕಾರ್ಯಗಳ ಮೂಲಕ ರಾಜ್ಯದಲ್ಲಿ ಕಾರ್ಮಿಕ ಇಲಾಖೆಯನ್ನು ಮತ್ತೆ ಮುನ್ನೆಲೆಗೆ ತರುವಲ್ಲಿ ಶಿವರಾಮ ಹೆಬ್ಬಾರ ಅವಿರತ ಶ್ರಮಿಸುತ್ತಿದ್ದಾರೆ. ಕಾರ್ಮಿಕ ಸ್ನೇಹಿ ರಾಜ್ಯವಾದರೆ ಉದ್ಯಮ ಸ್ನೇಹಿ ರಾಜ್ಯವಾಗಲು ಸಾಧ್ಯವಾಗುತ್ತದೆ. ಎರಡೂ ಜೊತೆಯಾಗಿ ಸಾಗಿದಾಗ ಅದರ ಪ್ರಯೋಜನ ರಾಜ್ಯದ್ದಾಗುತ್ತದೆ ಎಂದು ಅವರು ಅಭಿಪ್ರಾಯ ಪಡುತ್ತಾರೆ.

ಒಂದು ವರ್ಷದ ಸಾಧನೆ

- ₹ 721.63 ಕೋಟಿ 6,34,178 ಕಾರ್ಮಿಕರು ಪಡೆದ ಸೌಲಭ್ಯ
- 5,18,795 ಶೈಕ್ಷಣಿಕ ಸಹಾಯ ಪಡೆದ ಕಾರ್ಮಿಕರ ಮಕ್ಕಳು
- 4,346 ವೈದ್ಯಕೀಯ ಸಹಾಯಧನ ಪಡೆದ ಕಾರ್ಮಿಕರು
- 15,283 ಅಂತ್ಯಕ್ರಿಯೆಗೆ ಸಹಾಯಧನ ಪಡೆದ ಕುಟುಂಬಗಳು
- 645 ಅಪಘಾತ ಪರಿಹಾರ ಪಡೆದವರು
- 2,193 ಪಿಂಚಣಿ ಸೌಲಭ್ಯ ಪಡೆದವರು
- 3,210 ಹೆರಿಗೆ ಸೌಲಭ್ಯ ಪಡೆದವರು
- 5,129 ವಸತಿ ಸೌಲಭ್ಯ ಪಡೆದವರು
- 56,037 ಮದುವೆ ಸಹಾಯಧನ ಪಡೆದವರು

ಇಷ್ಟು ದಿನ ಎಲ್ಲವೂ ಸೌಖ್ಯವಾಗಿತ್ತು. ಹಾಗಾಗಿ ಕಾರ್ಮಿಕರು ಸಮಸ್ಯೆಗಳನ್ನು ಹೇಳಲಿಲ್ಲ, ಇಲಾಖೆಯೂ ಕೇಳಲಿಲ್ಲ. ಕೊರೊನಾದಿಂದ ಈಗ ಇಬ್ಬರಿಗೂ ಜ್ಞಾನೋದಯವಾಗಿದೆ.

ಎ.ಶಿವರಾಮ ಹೆಬ್ಬಾರ, ಕಾರ್ಮಿಕ ಸಚಿವ





'ಪ್ರಜಾವಾಣಿ'ಯ 'ಒಳನೋಟ'ಕ್ಕೆ ಶ್ಲಾಘನೆ

ವಲಸೆ ಕಾರ್ಮಿಕರಿಗೆ ಮಧ್ಯವರ್ತಿಗಳ ಕಾಟದ ಬಗ್ಗೆ 'ಪ್ರಜಾವಾಣಿ'ಯ ಫೆ.21ರ ಸಂಚಿಕೆಯಲ್ಲಿ ಪ್ರಕಟವಾದ 'ಒಳನೋಟ'ಕ್ಕೆ ಸಚಿವ ಶಿವರಾಮ ಹೆಬ್ಬಾರ ಶ್ಲಾಘಿಸಿದರು.

'ಕಾರ್ಮಿಕರ ಬಗೆಗಿನ ಲೇಖನವು ಇಲಾಖೆಯ ಕಣ್ಣು ತೆರೆಸಿದೆ. ಇಲಾಖೆಯ ಜವಾಬ್ದಾರಿಯನ್ನು ಹೆಚ್ಚು ಮಾಡಲು ಬಲುದೊಡ್ಡ ಸಹಕಾರಿಯಾಗಲಿದೆ ಎಂದು ಭಾವಿಸಿದ್ದೇನೆ. ವರದಿಯಲ್ಲಿ ಅನೇಕ ಸತ್ಯ ಸಂಗತಿಗಳು ಇವೆ. ನಾನು ಅಧಿಕಾರ ವಹಿಸಿಕೊಂಡ ಬಳಿಕ ಪರೀಕ್ಷೆಯ ಕಾಲ ಬಂತು. ಕೋವಿಡ್ ಅನ್ನು ಯಾರೂ ನಿರೀಕ್ಷಿಸಿರಲಿಲ್ಲ' ಎಂದು ಪ್ರತಿಕ್ರಿಯಿಸಿದರು.

'ಈ ಅನಿರೀಕ್ಷಿತ ಸಂದರ್ಭದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ನಾಯಕತ್ವದಲ್ಲಿ ನನ್ನ ಇಲಾಖೆಯು ದೊಡ್ಡ ಸವಾಲನ್ನೇ ಸ್ವೀಕರಿಸಿತು. ಕಾರ್ಮಿಕರ ಒಳಿತಿಗೆ ಶ್ರಮಿಸಿತು. ಅದರರ್ಥ ಇಡೀ ಕಾರ್ಮಿಕರಿಗೆ ಪೂರ್ತಿ ನೆಮ್ಮದಿ ತಂದಿದೆ ಎಂದರ್ಥವಲ್ಲ. ಪತ್ರಿಕೆಯ ವರದಿಗಳನ್ನು ಎರಡೆರಡು ಬಾರಿ ಅವಲೋಕಿಸಿದ್ದೇನೆ. ಎಲ್ಲೆಲ್ಲಿ ತಿದ್ದಿಕೊಳ್ಳಲು ಅವಕಾಶವಿದೆ ಎಂದೂ ಗಮನಕ್ಕೆ ಬಂದಿದೆ. ಪತ್ರಿಕೆಗೆ ಅಭಿನಂದನೆಗಳು' ಎಂದು ಶಿವರಾಮ ಹೆಬ್ಬಾರ ತಿಳಿಸಿದರು.

ರಾತ್ರಿ ಪಾಳಿ: ಕ್ರಾಂತಿಕಾರಿ ಹೆಜ್ಜೆ

ವಾಣಿಜ್ಯ ಮಳಿಗೆ ಮತ್ತು ಅಂಗಡಿಗಳಲ್ಲಿ ಮಹಿಳೆಯರು ರಾತ್ರಿ ಪಾಳಿಗಳಲ್ಲಿ ಕೆಲಸ ಮಾಡಲು ಅವಕಾಶ ನೀಡುವ ಮೂಲಕ ಕರ್ನಾಟಕವು ದೇಶದಲ್ಲೇ ಕ್ರಾಂತಿಕಾರಿ ನಿರ್ಧಾರವನ್ನು ತೆಗೆದುಕೊಂಡಿದೆ. ಇದಕ್ಕಾಗಿ ಕೆಲವು ನಿಬಂಧನೆಗಳನ್ನೂ ಉದ್ಯಮಗಳ ಮಾಲೀಕರಿಗೆ ವಿಧಿಸಲಾಗಿದೆ.

'2002ರಲ್ಲಿ ಐ.ಟಿ – ಬಿ.ಟಿ ಕ್ಷೇತ್ರದ ಮಹಿಳಾ ಉದ್ಯೋಗಿಗಳಿಗೆ ರಾತ್ರಿ ಕೆಲಸ ಮಾಡಲು ಅವಕಾಶ ನೀಡಲಾಗಿತ್ತು. ಇದೀಗ ಇತರ ಕ್ಷೇತ್ರಗಳಲ್ಲೂ ಮಹಿಳೆಯರು ಸುರಕ್ಷತೆ ಮತ್ತು ಸೌಕರ್ಯದ ಖಾತ್ರಿಯೊಂದಿಗೆ ರಾತ್ರಿ 8ರಿಂದ ಬೆಳಿಗ್ಗೆ 6ರವರೆಗೆ ಉದ್ಯೋಗ ನಿರ್ವಹಿಸಲು ಅವಕಾಶ ನೀಡಲಾಗಿದೆ. ಅವರು ಕೆಲಸ ಮಾಡಲು ಬೇಕಾಗುವ ಮೂಲಸೌಕರ್ಯದ ಜತೆಗೆ ಅವರಿಗೆ ಕಡ್ಡಾಯವಾಗಿ ಭದ್ರತೆ ಒದಗಿಸಬೇಕು ಎಂಬ ಷರತ್ತನ್ನು ವಿಧಿಸಲಾಗಿದೆ. ಈ ನಿರ್ಧಾರದಿಂದ ಉದ್ಯಮಶೀಲತೆ ಬೆಳವಣಿಗೆಗೆ ಅವಕಾಶ ಸಿಗಲಿದೆ' ಎಂದು ಶಿವರಾಮ ಹೆಬ್ಬಾರ ವಿಶ್ವಾಸ ವ್ಯಕ್ತಪಡಿಸುತ್ತಾರೆ.

ಚಿತ್ರಹಿಂಸೆ ನೀಡಿ ಬಾಲಕನ ಕೊಲೆ

ಕಲಬುರ್ಗಿ: ಜೇವರ್ಗಿ ತಾಲ್ಲೂಕಿನ ನರಿಬೋಳ ಗ್ರಾಮದಲ್ಲಿ 14 ವರ್ಷದ ಬಾಲಕನ ಮರ್ಮಾಂಗ ಕತ್ತರಿಸಿ ಕೊಲೆ ಮಾಡಲಾಗಿದೆ.

ಮಹೇಶ ಕೊಳ್ಳಿ (14) ಕೊಲೆಯಾದ ಬಾಲಕ. 7ನೇ ತರಗತಿ ಓದಿದ್ದ ಈತ ಕೊರೊನಾ ಕಾರಣದಿಂದ ಶಾಲೆಗೆ ಹೋಗದೇ ಮನೆಯಲ್ಲಿ ಇರುತ್ತಿದ್ದ. ಸೋಮವಾರ ಸಂಜೆ ಮನೆಯಿಂದ ಹೊರ ಹೋಗಿದ್ದ. ಶುಕ್ರವಾರ ಶವ ಪತ್ತೆಯಾಗಿದೆ. 'ಕೊಲೆ ಮಾಡುವ ಮುನ್ನ ಬಾಲಕನಿಗೆ ಮದ್ಯ ಕುಡಿಸಿದ್ದಾರೆ. ಮತ್ತು ಬರಿಸುವ ಔಷಧಿ ನೀಡಿ, ಆತನ ಮೂಗು ಹಾಗೂ ಮರ್ಮಾಂಗವನ್ನು ಕತ್ತರಿಸಿದ್ದಾರೆ. ಮುಖಕ್ಕೆ ಗುದ್ದಿ, ಹಲ್ಲುಗಳನ್ನು ಕಿತ್ತು ಚಿತ್ರಹಿಂಸೆ ನೀಡಿದ್ದಾರೆ. ಕೊಲೆ ಮಾಡಿದ ನಂತರ ಶವವನ್ನು ಗೋಣಿಚೀಲದಲ್ಲಿ ಕಟ್ಟಿ ಭೀಮಾ ನದಿಯಲ್ಲಿ ಎಸೆದಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮಹೇಶ, ಅನ್ಯಕೋಮಿನ ಬಾಲಕಿಯೊಬ್ಬಳಿಗೆ ಮೊಬೈಲ್ ಕೊಡಿಸಿದ್ದ. ಇಬ್ಬರೂ ಆಗಾಗ ಮಾತನಾಡುತ್ತಿದ್ದರು. ಈ ವಿಷಯ ಬಾಲಕಿಯ ತಾಯಿಗೆ ಗೊತ್ತಾಗಿ, ಆಕೆ ತನ್ನ ಮನೆಯವರಿಗೆ ತಿಳಿಸಿದ್ದಳು. ಆಕೆಯ ಮೇಲೆಯೇ ಅನುಮಾನವಿದೆ ಎಂದು ಹತ್ಯೆಗೀಡಾದ ಬಾಲಕನ ತಾಯಿ ಭೀಮಾಬಾಯಿ ದೂರು ನೀಡಿದ್ದಾರೆ.



ಪುಣ್ಯಸ್ನಾನ ಕೊಪ್ಪಳ ಜಿಲ್ಲೆ ಮುನಿರಾಬಾದ್‌ನ ಹುಲಿಗಿಯ ಶ್ರೀಹುಲಿಗೆಮ್ಮದೇವಿ ದೇವಸ್ಥಾನಕ್ಕೆ ಭಾರತ ಹುಣ್ಣಿಮೆ ಅಂಗವಾಗಿ ಭಾನುವಾರ ಆಗಮಿಸಿದ ಲಕ್ಷಾಂತರ ಭಕ್ತರು ತುಂಗಭದ್ರಾ ನದಿಯಲ್ಲಿ ಪುಣ್ಯಸ್ನಾನ ಮಾಡಿದರು

ಸುದ್ದಿ 2 ನಿಮಿಷ

ತುಂಡಾದ ಬೆರಳುಗಳ ಮರುಜೋಡಣೆ

ಬೆಂಗಳೂರು: ಮಹಿಳೆಯೊಬ್ಬರ ತುಂಡಾದ ಕೈ ಬೆರಳುಗಳನ್ನು ಎಸಿಇ ಸುಹಾಸ್ ಆಸ್ಪತ್ರೆಯ ವೈದ್ಯರು ಮತ್ತೆ ಜೋಡಿಸಿದ್ದಾರೆ.

ಜಿಗಣಿಯ ಆಹಾರ ಸಂಸ್ಕರಣೆ ಕಾರ್ಖಾನೆಯೊಂದರಲ್ಲಿ ಕಾರ್ಯನಿರ್ವಹಿಸುವ ವೇಳೆ ಭಾರತಿ (32 ವರ್ಷ) ಅವರ ಕೈ ಬೆರಳುಗಳು ಫೆ.19ರಂದು ಯಂತ್ರಕ್ಕೆ ಸಿಲುಕಿ ತುಂಡಾಗಿದ್ದವು. ಭಾರಿ ರಕ್ತಸ್ರಾವವೂ ಉಂಟಾಗಿತ್ತು. ಅದೇ ದಿನ ಮಧ್ಯಾಹ್ನ 3 ಗಂಟೆ ವೇಳೆಗೆ ಅವರನ್ನು ಆಸ್ಪತ್ರೆಗೆ ಕರೆತರಲಾಯಿತು. ರಕ್ತಸ್ರಾವವನ್ನು ತಡೆಯಲು ಅಗತ್ಯ ಚಿಕಿತ್ಸೆ ನೀಡಲಾಯಿತು. ಅವರು ತುಂಡಾದ ಬೆರಳುಗಳನ್ನು ತಂದಿರಲಿಲ್ಲ. ಕಾರ್ಖಾನೆಯಲ್ಲಿ ಬಿದ್ದಿದ್ದ ಬೆರಳುಗಳನ್ನು ಕೂಡಲೇ ತರಿಸಿ, 9 ಗಂಟೆ ಅವಧಿಯಲ್ಲಿ ಶಸ್ತ್ರಚಿಕಿತ್ಸೆಯನ್ನು ನಡೆಸಲಾಯಿತು. ಈ ಮೂಲಕ ಬೆರಳುಗಳನ್ನು ಯಶಸ್ವಿಯಾಗಿ ಜೋಡಿಸಲಾಯಿತು ಎಂದು ಆಸ್ಪತ್ರೆ ತಿಳಿಸಿದೆ.

'ಕತ್ತರಿಸಿದ ಬೆರಳುಗಳನ್ನು ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ಮಹಿಳೆಯ ಕುಟುಂಬದವರಿಗೆ ಮಾಹಿತಿ ಇರಲಿಲ್ಲ. ಇದರಿಂದಾಗಿ ಸಮಸ್ಯೆ ಇನ್ನಷ್ಟು ಸಂಕೀರ್ಣ ಸ್ವರೂಪ ಪಡೆದುಕೊಂಡಿತ್ತು. ಪ್ಲಾಸ್ಟಿಕ್ ಕವರ್‌ನಲ್ಲಿ ಶುದ್ಧ ನೀರನ್ನು ಹಾಕಿ, ಕತ್ತರಿಸಿದ ಬೆರಳುಗಳನ್ನು ಆ ಕವರ್‌ನಲ್ಲಿ ಹಾಕಿ ಸುತ್ತಬೇಕು. ಅದನ್ನು ಮಂಜುಗಡ್ಡೆ ನಡುವೆ ಇಡಬೇಕು. ಹೀಗೆ ಮಾಡಿದಲ್ಲಿ ಕತ್ತರಿಸಿದ ಬೆರಳುಗಳನ್ನು ಸಂರಕ್ಷಿಸಲು ಸಾಧ್ಯ' ಎಂದು ಆಸ್ಪತ್ರೆ ಮುಖ್ಯಸ್ಥ ಡಾ. ಜಗದೀಶ್ ಹಿರೇಮಠ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಟೊ ಜಖಂಗೊಳಿಸಿದ ಕಾಡಾನೆ ಹಿಂಡು; ಚಾಲಕನಿಗೆ ಗಾಯ



ಸೋಮವಾರಪೇಟೆ (ಕೊಡಗು): ಸಮೀಪದ ಅಬ್ಬೂರುಕಟ್ಟೆ ಗ್ರಾಮದಲ್ಲಿ ಶನಿವಾರ ಬೆಳಿಗ್ಗೆ, ಆಟೊವೊಂದರ ಮೇಲೆ ಕಾಡಾನೆ ಹಿಂಡು ದಾಳಿ ನಡೆಸಿದ್ದು, ಚಾಲಕ ಗಂಭೀರವಾಗಿ ಗಾಯಗೊಂಡಿದ್ದಾರೆ.

ಹಿತ್ಲುಮಕ್ಕಿ ಗ್ರಾಮದ ಕುಟ್ಟಪ್ಪ ಅವರು ಬೆಳಿಗ್ಗೆ 5 ಗಂಟೆ ಸುಮಾರಿಗೆ ಆಟೊದಲ್ಲಿ ಹೊಸಳ್ಳಿ ಗ್ರಾಮಕ್ಕೆ ತೆರಳುತ್ತಿದ್ದರು. ಈ ವೇಳೆ ಅಬ್ಬೂರುಕಟ್ಟೆ ಚರ್ಚ್ ಬಳಿಯಲ್ಲಿದ್ದ ಕಾಡಾನೆ ಹಿಂಡು ಆಟೊ ಮೇಲೆ ಏಕಾಏಕಿ ದಾಳಿ ಮಾಡಿದೆ. ಮಗುಚಿ ಬಿದ್ದಿದ್ದ ಆಟೊ ಜಖಂಗೊಂಡಿದ್ದರೆ, ಕುಟ್ಟಪ್ಪ ಅವರು ಗಾಯಗೊಂಡು ರಸ್ತೆಯಲ್ಲಿ ಬಿದ್ದಿದ್ದರು. ಸ್ಥಳೀಯರು, ಅವರನ್ನು ರಕ್ಷಿಸಿ ಚರ್ಚ್‌ನ ಕಾಂಪೌಂಡ್ ಒಳಗೆ ಕರೆತಂದಿದ್ದಾರೆ. ಕೆರಳಿದ್ದ ಆನೆಗಳು ಚರ್ಚ್ ಕಾಂಪೌಂಡ್ ಅನ್ನೂ ಉರುಳಿಸಿವೆ.

ಸೋಮವಾರಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಕುಟ್ಟಪ್ಪ ಅವರಿಗೆ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಾಫಿ ಟೇಬಲ್ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ.ಎಸ್‌.ಯಡಿಯೂರಪ್ಪ

ಸರ್ಕಾರಿ ವಿವಾದ ನಿರ್ವಹಣೆಗೆ ಐಟಿ ಘಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ವಿವಾದಗಳ ನಿರ್ವಹಣೆಗೆ ತಾಂತ್ರಿಕ ಸೌಲಭ್ಯಗಳನ್ನು ಒಳಗೊಂಡ ಮಾಹಿತಿ ತಂತ್ರಜ್ಞಾನ (ಐಟಿ) ಘಟಕ ಸ್ಥಾಪಿಸಲಾಗುವುದು' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ 'ಕರ್ನಾಟಕ ರಾಜ್ಯ ವಿವಾದ ಪರಿಹಾರ ನೀತಿ- 2021' ಮತ್ತು ಅಡ್ವೊಕೇಟ್ ಜನರಲ್ ಕಚೇರಿಗೆ 75 ವರ್ಷ ಪೂರ್ಣಗೊಂಡಿರುವ ಸಂದರ್ಭದಲ್ಲಿ ಹೊರತರಲಾದ ಕಾಫಿ ಟೇಬಲ್ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಸರ್ಕಾರಿ ವ್ಯಾಜ್ಯಗಳ ವ್ಯವಸ್ಥೆಯಲ್ಲಿ ದತ್ತಾಂಶ ನಿರ್ವಹಣೆ ಮುಖ್ಯ ಪಾತ್ರ ವಹಿಸುತ್ತದೆ. ಈ ಉದ್ದೇಶದಿಂದ ಪ್ರತ್ಯೇಕ ಐಟಿ ಘಟಕ ಸ್ಥಾಪಿಸಲಾಗುವುದು. ಪ್ರತಿ ಇಲಾಖೆಯಲ್ಲಿ ವಿವಾದ ಪರಿಹಾರ ಮಂಡಳಿ ರಚನೆ ಸೇರಿದಂತೆ ನೀತಿಯಲ್ಲಿ ಶಿಫಾರಸು ಮಾಡಿರುವ ಅಂಶಗಳನ್ನು ಜಾರಿಗೊಳಿಸಲಾಗುವುದು. ವಿವಾದಗಳನ್ನು ಪರಿಹರಿಸುವ ಉದ್ದೇಶದಿಂದ ಹೊಣೆಗಾರಿಕೆ, ಉತ್ತರದಾಯಿತ್ವ, ದಕ್ಷತೆ ಹೆಚ್ಚಿಸಲು ಈ ನೀತಿ ಅವಕಾಶ ನೀಡಲಿದೆ' ಎಂದರು.



'ಕರ್ನಾಟಕ ರಾಜ್ಯ ವಿವಾದ ಪರಿಹಾರ ನೀತಿ ಮತ್ತು ಕಾಫಿ ಟೇಬಲ್ ಬುಕ್ ಅನ್ನು ಬಿ.ಎಸ್‌. ಯಡಿಯೂರಪ್ಪ ಬಿಡುಗಡೆ ಮಾಡಿದರು. ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವಡಗಿ, ಲೋಕಾಯುಕ್ತ ನ್ಯಾಯಮೂರ್ತಿ ಪಿ. ವಿಶ್ವನಾಥ್ ಶೆಟ್ಟಿ, ಕಾನೂನು ಸಚಿವ ಬಸವರಾಜ ಬೊಮ್ಮಾಯಿ, ರಾಜ್ಯ ಕಾನೂನು ಆಯೋಗ ಅಧ್ಯಕ್ಷ ನ್ಯಾಯಮೂರ್ತಿ ಎಸ್‌.ಆರ್‌.ಬನ್ನೂರಮಠ ಇದ್ದರು ಪ್ರಜಾವಾಣಿ ಚಿತ್ರ

'ನ್ಯಾಯಾಲಯಗಳಲ್ಲಿ ವಿವಿಧ ಇಲಾಖೆಗಳ ನಡುವೆ ಸಾವಿರಾರು ಪ್ರಕರಣಗಳು ದಾಖಲಾಗಿವೆ. ಕಾನೂನುಗಳಲ್ಲಿನ ಅಸ್ಪಷ್ಟತೆ ಇದಕ್ಕೆ ಕಾರಣವಾಗಿದ್ದು, ಅವುಗಳನ್ನು ಸರಿಪಡಿಸಲಾಗುವುದು' ಎಂದು ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

'ನ್ಯಾಯಾಲಯಗಳಲ್ಲಿ ಸರ್ಕಾರದ ಪ್ರಕರಣಗಳ ಸಂಖ್ಯೆ ಹೆಚ್ಚಿದೆ. ಕಾನೂನಿನಲ್ಲಿಯೇ ಕೆಲವು ನ್ಯೂನತೆಗಳಿವೆ. ಆ ನ್ಯೂನತೆಗಳನ್ನು ಸರಿಪಡಿಸಬೇಕಾಗಿದೆ. ಅದಕ್ಕಾಗಿಯೇ ಈ ವಿವಾದ ಪರಿಹಾರ ನೀತಿ ಜಾರಿಗೆ ತರಲಾಗಿದೆ' ಎಂದರು.

ಲೋಕಾಯುಕ್ತ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ಮಾತನಾಡಿ, 'ರಾಜ್ಯ ವಿವಾದ ಪರಿಹಾರ ನೀತಿಯು ಪರಿಣಾಮಕಾರಿಯಾಗಿ ಪಾಲನೆಯಾದರೆ ಲೋಕಾಯುಕ್ತ ಸಂಸ್ಥೆಯ ಕಾರ್ಯಭಾರ ಕಡಿಮೆ ಆಗಬಹುದು. ಮುಖ್ಯ ಕಾರ್ಯದರ್ಶಿ ಕಚೇರಿಯಿಂದ ಕಂದಾಯ ನಿರೀಕ್ಷಕರ ಕಚೇರಿವರೆಗೆ ನೀತಿ ಪರಿಣಾಮಕಾರಿಯಾಗಿ ಪಾಲನೆ ಆಗಬೇಕು' ಎಂದು ಆಶಿಸಿದರು.

'2020ರ ಅಂಕಿಸಂಖ್ಯೆ ಪ್ರಕಾರ ರಾಜ್ಯದ ನ್ಯಾಯಾಲಯಗಳಲ್ಲಿ 20 ಲಕ್ಷಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಇವೆ. ಹೈಕೋರ್ಟ್‌ನಲ್ಲಿ 4.42 ಲಕ್ಷ, ಅಧೀನ ನ್ಯಾಯಾಲಯಗಳಲ್ಲಿ 15 ಲಕ್ಷ ಪ್ರಕರಣಗಳು ಬಾಕಿ ಇವೆ. ಹೊಸ ನೀತಿಯು ಹಲವು ಇಲಾಖೆಗಳಲ್ಲಿ ಉತ್ತರದಾಯಿತ್ವ, ದಕ್ಷತೆ ಹೆಚ್ಚಿಸಲು ಸಹಕಾರಿಯಾಗುವ ನಿರೀಕ್ಷೆ ಇದೆ' ಎಂದು ರಾಜ್ಯ ಕಾನೂನು ಆಯೋಗದ ಅಧ್ಯಕ್ಷ ಎಸ್. ಆರ್. ಬನ್ನೂರಮಠ ಹೇಳಿದರು.

'ವಿವಾದಗಳ ಇತ್ಯರ್ಥಕ್ಕಾಗಿ ರಾಜ್ಯ ವಿವಾದ ಪರಿಹಾರ ನೀತಿ ರೂಪಿಸಲಾಗಿದೆ. ಅದರ ಪರಿಣಾಮಕಾರಿ ಜಾರಿಗೆ ಸಂಬಂಧಪಟ್ಟ ಇಲಾಖೆಗಳ ಉತ್ತರದಾಯಿತ್ವ, ಜವಾಬ್ದಾರಿ ನಿರ್ವಹಣೆ ಬಹಳ ಮುಖ್ಯ' ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವಡಗಿ ಹೇಳಿದರು. ಶಾಸಕ ರಿಜ್ವಾನ್ ಅರ್ಷದ್ ಇದ್ದರು.

ಮಂಜುನಾಥ ಗೌಡ ವಿರುದ್ಧ ಪ್ರಕರಣ



ಶಿವಮೊಗ್ಗ: ನಕಲಿ ಬಂಗಾರ ಅಡಮಾನ ಸಾಲದ ಬಹುಕೋಟಿ ರೂಪಾಯಿಯ ಹಗರಣಕ್ಕೆ ಸಂಬಂಧಿಸಿ ಶಿವಮೊಗ್ಗ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಆರ್.ಎಂ. ಮಂಜುನಾಥ ಗೌಡ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಸಿ.ರಾಜಣ್ಣ ರೆಡ್ಡಿ ವಿರುದ್ಧ ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿಸಿಸಿ ಬ್ಯಾಂಕ್‌ನಲ್ಲಿ ₹ 62.75 ಕೋಟಿ ಮೌಲ್ಯದ ನಕಲಿ ಬಂಗಾರ ಅಡವಿಟ್ಟಿದ್ದ ಅವ್ಯವಹಾರ ಪ್ರಕರಣದಲ್ಲಿ ಆಡಳಿತಾತ್ಮಕ ಕರ್ತವ್ಯ ಲೋಪವೆಸೆಗಿರುವುದು ಸಾಬೀತಾಗಿರುವುದರಿಂದ ಇವರಿಬ್ಬರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಬೆಂಗಳೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕ ಡಿ.ಪಾಂಡುರಂಗ ಗರಗ್ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಶಿವಮೊಗ್ಗದ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು ಪ್ರಕರಣವನ್ನು ದಾಖಲಿಸಿದ್ದಾರೆ.

ನಕಲಿ ಬಂಗಾರ ಅಡಮಾನ ಪ್ರಕರಣ 2014ರಲ್ಲಿ ಬೆಳಕಿಗೆ ಬಂದಿತ್ತು. 2004ರಿಂದ 2014ರ ಅವಧಿಯಲ್ಲಿ 490 ಸಾಲದ ಖಾತೆಗಳ ಮೂಲಕ ನಕಲಿ ಬಂಗಾರವನ್ನು ಅಡವಿಟ್ಟುಕೊಂಡು ಮತ್ತು 171 ಖಾತೆಗಳಲ್ಲಿ ಡಿಸಿಸಿ ಬ್ಯಾಂಕ್ ನಗರ ಶಾಖೆಯಲ್ಲಿ ₹ 62.75 ಕೋಟಿ ಸಾಲ ನೀಡುವ ಮೂಲಕ ಅವ್ಯವಹಾರ ನಡೆಸಲಾಗಿತ್ತು.

ಚುನಾವಣೆ ಸೀಟು ಹಂಚಿಕೆ ಎಐಎಡಿಎಂಕೆಗೆ ತಲೆನೋವು

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ಚುನಾವಣೆಯ ದಿನಾಂಕ ಘೋಷಣೆಯಾದ ಬೆನ್ನಲೇ ರಾಜಕೀಯ ಚಟುವಟಿಕೆಗಳು ಗರಿಗೆದರಿದ್ದು ಎಐಎಡಿಎಂಕೆಗೆ ಸೀಟು ಹಂಚಿಕೆ ತಲೆನೋವಾಗಿ ಪರಿಣಮಿಸಿದೆ.

ವನ್ನಿಯಾರ್ ಸಮುದಾಯಕ್ಕೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇ 10. 5ರಷ್ಟು ಮೀಸಲಾತಿ ಘೋಷಿಸಿರುವ ಆಡಳಿತಾರೂಢ ಎಐಡಿಎಂಕೆ, ಆ ಸಮುದಾಯದ ಮತಗಳನ್ನು ಸೆಳೆಯಲು ಮುಂದಾಗಿದೆ. ಉತ್ತರ ತಮಿಳುನಾಡಿನಲ್ಲಿ ವನ್ನಿಯಾರ್ ಸಮುದಾಯ ಪ್ರಬಲವಾಗಿದ್ದು ಇವರ ಮತಗಳು ನಿರ್ಣಾಯಕವಾಗಿವೆ.

ಎಐಎಡಿಎಂಕೆಯ ಅಂಗ ಪಕ್ಷ ರಾಮದಾಸ್ ಸ್ಥಾಪಿತ ಪಿಎಂಕೆ ಉತ್ತರ ತಮಿಳುನಾಡಿನಲ್ಲಿ ಪ್ರಬಲವಾಗಿದೆ. ಈ ಭಾಗದಲ್ಲಿ ಪಿಎಂಕೆಗೆ 10 ರಿಂದ 15 ಕ್ಷೇತ್ರಗಳನ್ನು ಬಿಟ್ಟುಕೊಡುವ ಲೆಕ್ಕಚ್ಚಾರ ಎಐಎಡಿಎಂಕೆ ಪಕ್ಷದ್ದಾಗಿದೆ. ಆದರೆ ಪಿಎಂಕೆ ಮುಖಂಡ ಜಿ.ಕೆ.ಮಣಿ 25 ಕ್ಷೇತ್ರಗಳನ್ನು ಬಿಟ್ಟುಕೊಡಬೇಕು ಎಂದು ಪಟ್ಟು ಹಿಡಿದಿದ್ದಾರೆ.

ತಮಗೆ 60 ಸ್ಥಾನಗಳನ್ನು ಬಿಟ್ಟುಕೊಡಬೇಕು ಎಂದು ಬಿಜೆಪಿ ಮನವಿ ಮಾಡಿದೆ. ಈಗಾಗಲೇ ಬಿಜೆಪಿ ಸುಲಭವಾಗಿ ಗೆಲ್ಲಬಹುದಾದಂತಹ 60 ಕ್ಷೇತ್ರಗಳನ್ನು ಗುರುತಿಸಿದೆ ಎಂದು ಬಿಜೆಪಿ ಮುಖಂಡ ಮುರುಗನ್ ಹೇಳಿದ್ದಾರೆ. ಆದರೆ ಎಐಎಡಿಎಂಕೆ ಬಿಜೆಪಿಗೆ 25 ರಿಂದ 30 ಸ್ಥಾನಗಳನ್ನು ನೀಡಲು ಸಿದ್ಧವಿದೆ. ಅಮಿತ್ ಶಾ ಭೇಟಿಯ ಬಳಿಕವೇ ಸ್ಪಷ್ಟ ಚಿತ್ರಣ ತಿಳಿಯಲಿದೆ.

ಬಿಜೆಪಿ, ಪಿಎಂಕೆ ಸೇರಿದಂತೆ ಡಿಎಂಡಿಕೆ, ಟಿಎಂಸಿ ಜತೆಯೂ ಎಐಎಡಿಎಂಕೆ ಮೈತ್ರಿ ಮಾಡಿಕೊಂಡಿದ್ದು ಆ ಪಕ್ಷಗಳಿಗೂ ಕೆಲವು ಸ್ಥಾನಗಳನ್ನು ಬಿಟ್ಟುಕೊಡಬೇಕಿದೆ.

ಮುಖ್ಯಮಂತ್ರಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರ ಮುಂದೆ ಸವಾಲುಗಳ ಸಾಲೇ ಇದೆ. ಎರಡು ಅವಧಿಯ ಆಡಳಿತವಿರೋಧಿ ಅಲೆಯನ್ನು ಅವರು ಮೆಟ್ಟಿನಿಲ್ಲಬೇಕಿದೆ. ಇತ್ತ ಡಿಎಂಕೆ ಅಧಿಕಾರಕ್ಕೆ ಬರಲೇಬೇಕು ಎಂದು ಶತಪಯತ್ನ ಮಾಡುತ್ತಿದೆ. ಡಿಎಂಕೆಯು ಕಾಂಗ್ರೆಸ್, ಎಡಪಕ್ಷಗಳು, ವಿಸಿಕೆ, ಐಯುಎಂಎಲ್, ಎಂಎನ್‌ಎಂಕೆ ಪಕ್ಷಗಳ ಜತೆ ಮೈತ್ರಿ ಮಾಡಿಕೊಂಡಿದೆ.

ಕಲಾವಿದ ಬಿ.ಕೆ.ಎಸ್‌. ವರ್ಮಾ ಅಭಿಮತ

'ಅನುಭವಿಸಿ ಚಿತ್ರಿಸಿದಲ್ಲಿ ಸುಂದರ ಕಲಾಕೃತಿ ಸೃಷ್ಟಿ'

ಬೆಂಗಳೂರು: 'ನಾವು ನೋಡಿದ್ದನ್ನು ಇದ್ದ ಹಾಗೇ ಬರೆದರೆ ಅದು ಕೇವಲ ರೇಖೆಗಳ ಚಾರ್ಟ್ ಆಗುತ್ತದೆ. ಅದನ್ನೇ ಅನುಭವಿಸಿ ಸೃಷ್ಟಿಸಿದಲ್ಲಿ ಸುಂದರ ಕಲಾಕೃತಿಯಾಗಿ ಹೊರಹೊಮ್ಮುತ್ತದೆ' ಎಂದು ಕಲಾವಿದ ಬಿ.ಕೆ.ಎಸ್. ವರ್ಮಾ ತಿಳಿಸಿದರು.

ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಮುಂಬೈನ ದಿ ಆರ್ಟ್ ಸೊಸೈಟಿ ಆಫ್ ಇಂಡಿಯಾವು ಅವರಿಗೆ 'ಕಲಾ ಸೃಜನಶೀಲ ಪುರಸ್ಕಾರ' ನೀಡಿ ಗೌರವಿಸಿತು.

'ಕಲಾ ಕ್ಷೇತ್ರವು ಕೈ ಹಿಡಿಯಲು ಕೆಲವು ವರ್ಷಗಳೇ ಬೇಕಾಗುತ್ತವೆ. ಬೀಜವು ಗಿಡವಾಗಿ ಮರವಾದಂತೆ ಕಲೆ ಕೂಡ ನಮ್ಮನ್ನು ಆವರಿಸಿಕೊಳ್ಳುತ್ತಾ ಹೋಗುತ್ತದೆ. ಭಾರತೀಯ ಕಲೆಯಲ್ಲಿ ದೈವಿಕ ಅಂಶಗಳಿವೆ. ಕಲಾಕೃತಿಯನ್ನು ನೋಡಿದಲ್ಲಿ ನಮಿಸಬೇಕೆನಿಸುತ್ತದೆ. ವಿದೇಶಿ ಕಲೆಗೆ ಮಾರು ಹೋಗುವ ಬದಲು ನಮ್ಮಲ್ಲಿನ ಕಲೆಯನ್ನು ಇನ್ನಷ್ಟು ಬೆಳೆಸಬೇಕಿದೆ' ಎಂದು ವರ್ಮಾ ಹೇಳಿದರು.



ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ದಿ ಆರ್ಟ್ ಸೊಸೈಟಿ ಆಫ್ ಇಂಡಿಯಾದ ಕಾರ್ಯದರ್ಶಿ ವಿಕ್ರಾಂತ್ ಶಿಟೋಲ್ ಅವರು ಕಲಾವಿದ ಬಿ.ಕೆ.ಎಸ್‌. ವರ್ಮಾ ಅವರಿಗೆ 'ಕಲಾ ಸೃಜನಶೀಲ ಪುರಸ್ಕಾರ' ನೀಡಿ ಗೌರವಿಸಿದರು. ಶಾಂತ ವರ್ಮಾ ಇದ್ದಾರೆ ಪ್ರಜಾವಾಣಿ ಚಿತ್ರ

'ಮಾಡುವ ಕೆಲಸದ ಬಗ್ಗೆ ಶ್ರದ್ಧೆ, ಭಕ್ತಿ ಮತ್ತು ಪ್ರೀತಿ ಇರಬೇಕು. ನಮ್ಮ ತಾಯಿ ₹ 10 ತೆಗೆದುಕೊಂಡರೆ ₹ 20ರಷ್ಟು ಕೆಲಸ ಮಾಡು ಎನ್ನುತ್ತಿದ್ದರು. ನಾನು ಅದೇ ಹಾದಿಯಲ್ಲಿ ಸಾಗಿದೆ. ಬಾಲ್ಯದಿಂದಲೂ ಕಲೆಯ ಬಗ್ಗೆ ಆಸಕ್ತಿಯಿತ್ತು. 14ನೇ ವಯಸ್ಸಿನಲ್ಲಿ ಎರಡು ಬಾರಿ ಭಾರತ ಪ್ರವಾಸ ಕೈಗೊಂಡಿದ್ದೆ. ಆ ವೇಳೆ ಕೆಲ ಮಹಾನ್ ಕಲಾವಿದರನ್ನು ಭೇಟಿ ಮಾಡಿ, ಕಲೆಯ ಬಗ್ಗೆ ತಿಳಿದುಕೊಂಡೆ. ಅಜಂತಾ, ಎಲ್ಲೋರದ ಕಲಾಕೃತಿಗಳನ್ನು ನೋಡಿ ಬೆರಗಾದೆ. ನಿರಂತರ ಪರಿಶ್ರಮ ಹಾಗೂ ಹಲವರ ಮಾರ್ಗದರ್ಶನದಿಂದ ಕಲೆ ಕೈಹಿಡಿಯಿತು' ಎಂದು ತಿಳಿಸಿದರು.

'ಈ ಕ್ಷೇತ್ರದಲ್ಲಿ ಇನ್ನಷ್ಟು ಸೇವೆ ಮಾಡುವ ಹಂಬಲವಿದೆ. ನನ್ನ ಕಾರ್ಯವನ್ನು ಮೆಚ್ಚಿ, ಪುರಸ್ಕರಿಸಿದರೆ ಇನ್ನಷ್ಟು ಪ್ರೇರಣೆ ದೊರೆಯುತ್ತದೆ. ಜತೆಗೆ ನನ್ನಲ್ಲಿ ಉತ್ಸಾಹವೂ ಜಾಸ್ತಿಯಾಗಿದೆ' ಎಂದು ಸಂತಸ ವ್ಯಕ್ತಪಡಿಸಿದರು.

ಸಿರಿಗೆರೆ ಮಠದಲ್ಲಿ ತರಳಬಾಳು ಹುಣ್ಣಿಮೆ ಸಂಪನ್ನ

'ಸದ್ಧರ್ಮ ಸಿಂಹಾಸನಾರೋಹಣ' ಮಾಡಿದ ಸಿರಿಗೆರೆಶ್ರೀ

ಪ್ರಜಾವಾಣಿ ವಾರ್ತೆ

ಸಿರಿಗೆರೆ/ ಭರಮಸಾಗರ: ಇಲ್ಲಿನ ತರಳಬಾಳು ಬೃಹನ್ಮಠದಲ್ಲಿ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಶನಿವಾರ ಸಂಜೆ 'ಸದ್ಧರ್ಮ ಸಿಂಹಾಸನಾರೋಹಣ' ಮಾಡುವುದರೊಂದಿಗೆ ಕೋವಿಡ್ ಕಾರಣಕ್ಕೆ ಒಂಬತ್ತು ದಿನಗಳಿಂದ ಸರಳವಾಗಿ ನಡೆಯುತ್ತಿದ್ದ ತರಳಬಾಳು ಹುಣ್ಣಿಮೆ ಮಹೋತ್ಸವಕ್ಕೆ ತೆರೆ ಬಿತ್ತು.

ಬಳ್ಳಾರಿ ಜಿಲ್ಲೆಯ ಕೊಟ್ಟೂರಿನಲ್ಲಿ ವೈಭವದಿಂದ ನಡೆಯಬೇಕಾಗಿದ್ದ ತರಳಬಾಳು ಹುಣ್ಣಿಮೆಯನ್ನು ಕೋವಿಡ್ ಕಾರಣಕ್ಕೆ ಮುಂದೂಡಿ, ಮಠದ ಆವರಣದಲ್ಲೇ ಫೆ. 19ರಿಂದ ಆನ್‌ಲೈನ್ ಮೂಲಕ ನಡೆಯುತ್ತಿದ್ದ ಹುಣ್ಣಿಮೆ ಕಾರ್ಯಕ್ರಮ ಸಂಪನ್ನಗೊಂಡಿತು. ಒಂಬತ್ತು ದಿನಗಳ ಕಾಲ ಅಂತರ್ಜಾಲದಲ್ಲಿ ತರಳಬಾಳು ಹುಣ್ಣಿಮೆಗಳ ಸಿಂಹಾವಲೋಕನದ ಆಯ್ದ ತುಣುಕುಗಳನ್ನು ಬಿತ್ತರಿಸಲಾಯಿತು.

ಕೊನೆಯ ದಿನವಾಗಿದ್ದ ಶನಿವಾರ ಸಂಜೆ ನೂತನ ಗುರುಶಾಂತೇಶ್ವರ ಸಭಾಭವನದ ಮುಂಭಾಗದಲ್ಲಿ ವೇದಿಕೆ ಸಜ್ಜುಗೊಳಿಸಲಾಗಿತ್ತು. ಸೀಮಿತ ಸಂಖ್ಯೆಯ ಸಾರ್ವಜನಿಕರು ಹಾಗೂ ಭಕ್ತರಿಗೆ ಅವಕಾಶ ಕಲ್ಪಿಸಲಾಗಿತ್ತು. ವೇದಿಕೆ ಮೇಲೆ ಸ್ಥಾಪಿಸಲಾಗಿದ್ದ ಸಿಂಹಾಸನಕ್ಕೆ ಮಠದ ಅರ್ಚಕರು ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿದರು. ಕಾರ್ಯಕ್ರಮಕ್ಕೆ ಮೊದಲು ದಾವಣಗೆರೆಯ ಸಂಗೀತ ಶಾಲೆಯ ಯಶ್ ದಿನೇಶ್ ವಚನಗೀತೆ ಕಾರ್ಯಕ್ರಮ ನಡೆಸಿಕೊಟ್ಟರು.

ಬೃಹನ್ಮಠದ ಐಕ್ಯಮಂಟಪದಲ್ಲಿ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರ ಕಂಚಿನ ಪುತ್ಥಳಿಗೆ ಪುಷ್ಪ ಅರ್ಪಿಸಿದ ಬಳಿಕ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರನ್ನು ಶಾಲಾ ವಿದ್ಯಾರ್ಥಿಗಳು ಬ್ಯಾಂಡ್ ವಾದ್ಯಗಳೊಂದಿಗೆ ಸಭೆಗೆ ಕರೆತಂದರು. ಬಳಿಕ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಗುರುಶಾಂತ ರಾಜದೇಶಿಕೇಂದ್ರ ಸ್ವಾಮೀಜಿ ಹಾಗೂ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, 'ಸದ್ಧರ್ಮ ಸಿಂಹಾಸನ' ಪೀಠಕ್ಕೆ ಪುಷ್ಪನಮನ ಸಲ್ಲಿಸಿ ಆಸೀನರಾದರು.



ಸಿರಿಗೆರೆಯಲ್ಲಿ ಶನಿವಾರ ನಡೆದ ತರಳಬಾಳು ಹುಣ್ಣಿಮೆ ಕಾರ್ಯಕ್ರಮದಲ್ಲಿ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸದ್ಧರ್ಮ ಸಿಂಹಾಸನಾರೋಹಣ ಮಾಡಿದರು.

ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ, ಜಿ.ಎಸ್.ಅನಿತ್, ವಿದ್ಯಾ ಸಂಸ್ಥೆಯ ಆಡಳಿತಾಧಿಕಾರಿ ಎಸ್.ಬಿ.ರಂಗನಾಥ್, ವಿಶೇಷಾಧಿಕಾರಿ ಎಚ್.ಎ.ವಾಮದೇವಪ್ಪ, ಸಾಧು ಸದ್ಧರ್ಮ ವೀರಶೈವ ಸಂಘದ ಪದಾಧಿಕಾರಿಗಳು ಹಾಜರಿದ್ದರು. ಮಾಘ ಶುದ್ಧ ಹುಣ್ಣಿಮೆ ಚಂದ್ರನನ್ನು ಸ್ವಾಮೀಜಿ ವೀಕ್ಷಿಸಿದರು.



ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ ಜನೌಷಧಿ ಮಳಿಗೆ ಉದ್ಘಾಟಿಸಿ, ಔಷಧ ಪರಿಶೀಲಿಸಿದರು. ಮಾಜಿ ಶಾಸಕ ಎಸ್‌.ಮುನಿರಾಜು, ಕಿರಣ್ ಇದ್ದರು.

'ದೇಶದ ಔಷಧೋದ್ಯಮ 3 ವರ್ಷಗಳಲ್ಲಿ ಸ್ವಾವಲಂಬಿ'

ಪೀಣ್ಯ ದಾಸರಹಳ್ಳಿ: 'ಎಲ್ಲ ನಮೂನೆಯ ಔಷಧ ಮತ್ತು ವೈದ್ಯಕೀಯ ಉಪಕರಣಗಳ ಉತ್ಪಾದನೆಯಲ್ಲಿ ಮುಂದಿನ ಮೂರು ವರ್ಷಗಳಲ್ಲಿ ದೇಶವನ್ನು ಸಂಪೂರ್ಣ ಸ್ವಾವಲಂಬಿ ಮಾಡುವ ಗುರಿಯೊಂದಿಗೆ ಕೇಂದ್ರ ಸರ್ಕಾರವು ಹಲವು ಯೋಜನೆಗಳನ್ನು ಜಾರಿಗೆ ತಂದಿದೆ' ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ.ಸದಾನಂದ ಗೌಡ ಹೇಳಿದರು.

ಚಿಕ್ಕಬಾಣಾವರದ ಆರ್.ಆರ್. ಇನ್‌ಸ್ಟಿಟ್ಯೂಟ್ ಹಾಗೂ ಲಯನ್ಸ್ ಕ್ಲಬ್ ವತಿಯಿಂದ ಆಯೋಜಿಸಲಾಗಿದ್ದ ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ ಹಾಗೂ ರಕ್ತದಾನ ಶಿಬಿರದಲ್ಲಿ ಮಾತನಾಡಿದ ಅವರು, 'ದೇಶವು ಜೆನರಿಕ್ ಔಷಧ ಉತ್ಪಾದನೆಯಲ್ಲಿ ಜಾಗತಿಕ ಮಟ್ಟದಲ್ಲಿ ಮೂರನೇ ಸ್ಥಾನದಲ್ಲಿದೆ' ಎಂದರು.

'ಕೋವಿಡ್ ಸಂದರ್ಭದಲ್ಲೂ ಜಗತ್ತಿನ 120 ದೇಶಗಳಿಗೆ ಹೈಡ್ರಾಕ್ಸಿಕ್ಲೋರೋಕ್ವಿನ್, ಪ್ಯಾರಾಸಿಟಮಾಲ್ ಮುಂತಾದ ಮಾತ್ರೆಗಳನ್ನು ಪೂರೈಸಿದೆವು. ಆದರೆ ಬಹುತೇಕ ಔಷಧ ಉತ್ಪಾದನೆಗೆ ಬೇಕಾಗುವ ಮೂಲ ರಾಸಾಯನಿಕಗಳಿಗಾಗಿ (ಎಪಿಐ, ಕೆಎಸ್‌ಎಂ ಮುಂತಾದವು) ಚೀನಾ ಮತ್ತಿತರ ದೇಶಗಳ ಮೇಲೆ ಅವಲಂಬಿತವಾಗಿದ್ದೇವೆ' ಎಂದರು.

ಆರ್. ಆರ್. ಕಾಲೇಜು ಕಂಪ್ಯೂಟರ್ ವಿಭಾಗ ಅಭಿವೃದ್ಧಿಪಡಿಸಿರುವ 'ಬ್ಲಡ್ ಡೋನರ್ಸ್' ಆ್ಯಪ್ ಬಿಡುಗಡೆ ಮಾಡಲಾಯಿತು. ಸಂಸ್ಥೆಯ ಅಧ್ಯಕ್ಷ ರಾಜಾರೆಡ್ಡಿ, ಕಾರ್ಯದರ್ಶಿ ಕಿರಣ್ , ಪ್ರಾಂಶುಪಾಲ ನಾರಾಯಣ ಸ್ವಾಮಿ, ಜಂಟಿ ಆಯುಕ್ತ ನರಸಿಂಹಮೂರ್ತಿ , ಲಯನ್ ಮನೋಜ್ , ಮೋಹನ್ ಕುಮಾರ್, ರವೀಂದ್ರ ಮುಂತಾದವರಿದ್ದರು.

ಕಣ್ವ ಬ್ಯಾಂಕ್: ₹84.40 ಕೋಟಿ ಮೌಲ್ಯದ ಆಸ್ತಿ ಜಪ್ತಿ

ಬೆಂಗಳೂರು: ಬಹುಕೋಟಿ ವಂಚನೆ ಪ್ರಕರಣದಲ್ಲಿ ಬಂಧನದಲ್ಲಿರುವ ಕಣ್ವ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಸಂಸ್ಥಾಪಕ ಅಧ್ಯಕ್ಷ ಎನ್. ನಂಜುಂಡಯ್ಯ ಮತ್ತು ಸ್ಥಾಪಕ ನಿರ್ದೇಶಕ ಹರೀಶ್ ಕುಟುಂಬಗಳಿಗೆ ಸೇರಿದ ₹84.40 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ(ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ. ಈ ಪ್ರಕರಣದಲ್ಲಿ ಇ.ಡಿ ಈವರೆಗೆ ಜಪ್ತಿ ಮಾಡಿದ ಒಟ್ಟು ಆಸ್ತಿ ಮೌಲ್ಯ ₹339.57 ಕೋಟಿ ಆಗಿದೆ.

ನೆಲಮಂಗಲ, ಕೊರಟಗೆರೆ, ಚಿಕ್ಕಬಳ್ಳಾಪುರ, ಶ್ರೀರಂಗಪಟ್ಟಣ, ಬೆಂಗಳೂರು ಮತ್ತು ಆಂಧ್ರಪ್ರದೇಶದ ಮಡಕಾಶಿರದಲ್ಲಿ ಕೃಷಿ, ಕೃಷಿಯೇತರ ಭೂಮಿ, ಕಟ್ಟಡಗಳು, ವಸತಿ ಫ್ಲಾಟ್, ಕಾರ್ಖಾನೆಗಳನ್ನು ಒಳಗೊಂಡ ಸ್ಥಿರಾಸ್ತಿಯನ್ನು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್‌ಎ) ಪ್ರಕಾರ ವಶಕ್ಕೆ ಪಡೆಯಲು ಇ.ಡಿ ಆದೇಶಿಸಿದೆ. ಈ ಹಿಂದೆ ₹255.17 ಕೋಟಿ ಮೌಲ್ಯದ ಸ್ವತ್ತನ್ನು ಜಪ್ತಿ ಮಾಡಿತ್ತು. ಹೆಚ್ಚಿನ ಬಡ್ಡಿದರದ ಆಮಿಷ ಒಡ್ಡಿ ಏಜೆಂಟ್‌ಗಳ ಮೂಲಕ ₹650 ಕೋಟಿ ಸಂಗ್ರಹಿಸಿ ಮೋಸ ಮಾಡಿದ್ದ ಆರೋಪದಲ್ಲಿ ಬಸವೇಶ್ವರ ನಗರ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು.

ಮಠಗಳ ಹಂಗಿನಲ್ಲಿ ಸರ್ಕಾರ: ಟೀಕೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಧಾರ್ಮಿಕ ಸಂಸ್ಥೆಗಳು, ಮಠಗಳು ಸಂವಿಧಾನಬದ್ಧವಾಗಿ ರಚನೆಯಾಗಿರುವ ಸರ್ಕಾರಗಳಿಗೆ ಬೆದರಿಕೆಯೊಡ್ಡುತ್ತಿವೆ. ಜನರಿಂದ ಆಯ್ಕೆಯಾದ ಸರ್ಕಾರಗಳು ಮಠಗಳ ಸೇವಕರಂತೆ ವರ್ತಿಸುತ್ತಿವೆ' ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ. ಮಹದೇವಪ್ಪ ಹರಿಹಾಯ್ದರು.

ಮೈಸೂರು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಎನ್.ರಾಚಯ್ಯ ಅಧ್ಯಯನ ಪೀಠ ಆಯೋಜಿಸಿದ್ದ 'ದಲಿತ ಚಳವಳಿ ಮತ್ತು ರೈತ ಚಳವಳಿ ಒಂದು ಮುಖಾಮುಖಿ' ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ಹೀಗಾದರೆ, ಪ್ರಜಾಪ್ರಭುತ್ವದ ಭವಿಷ್ಯವೇನು? ಸಂವಿಧಾನದ ಪಾಡೇನು? ಪ್ರಜಾಪ್ರಭುತ್ವದ ಆಧಾರ ಸ್ತಂಭಗಳೇ ವಿಫಲವಾದರೆ ಸರ್ವಾಧಿಕಾರದ ಆಡಳಿತ ಆರಂಭವಾಗುತ್ತದೆ. ಸಂವಿಧಾನ ಇಲ್ಲದಿದ್ದರೆ ವೈವಿಧ್ಯದ ಭಾರತ ಛಿದ್ರವಾಗುತ್ತದೆ. ದಲಿತ, ರೈತ ಹಾಗೂ ಇತರ ಚಳವಳಿಗಳು ಶಕ್ತಿಯುತವಾಗಿ ಮತ್ತೊಮ್ಮೆ ಮುಂಚೂಣಿಗೆ ಬರಬೇಕಿದೆ. ಇಲ್ಲದಿದ್ದರೆ ಕಷ್ಟಪಟ್ಟು ಪಡೆದುಕೊಂಡಿರುವ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗಬಹುದು' ಎಂದು ಆತಂಕ ವ್ಯಕ್ತಪಡಿಸಿದರು.

'ರಾಜೇಂದ್ರ ಪ್ರಸಾದ್ ಅವರು ರಾಷ್ಟ್ರಪತಿಯಾಗಿದ್ದಾಗ ಸ್ವಾಮೀಜಿಯ ಕಾಲು ಮುಟ್ಟಿದ್ದರು. ಆಗ ದೇಶದಲ್ಲಿ ಪ್ರತಿಭಟನೆ ನಡೆದವು. ಏಕೆಂದರೆ ಸಂವಿಧಾನದ ಪಾಲಕರು ರಾಷ್ಟ್ರಪತಿ. ಸಂವಿಧಾನಕ್ಕಿಂತ ಯಾರೂ ಮೇಲಲ್ಲ' ಎಂದು ನುಡಿದರು.

'ಇವತ್ತು ದೇಶ ಹಾಗೂ ರಾಜ್ಯದಲ್ಲಿ ದಲಿತ ರಾಜಕಾರಣ ಶೂನ್ಯವಾಗಿದೆ. ಯಾವುದೇ ಸಮುದಾಯದಲ್ಲಿ ಗುಣಾತ್ಮಕ ನಾಯಕ ಇಲ್ಲದಿದ್ದರೆ ಕವಲುದಾರಿಯಲ್ಲಿ, ಅಸಹಾಯಕತೆಯಿಂದ ಇರಬೇಕಾಗುತ್ತದೆ' ಎಂದು ಹೇಳಿದರು.

'ಅಂಬೇಡ್ಕರ್ ಅವರು ಮನುಸ್ಮೃತಿ ಸುಟ್ಟು ಹಾಕಿದರು. ಆದರೆ, ಮನು ಈಗಲೂ ಹೋಟೆಲ್, ಮಠ, ದೇವಸ್ಥಾನ, ಸಲೂನ್, ಕೊನೆಗೆ ಸ್ಮಶಾನದಲ್ಲೂ ಇದ್ದಾನೆ. ಹೀಗಾದರೆ, ದೇಶ ಕಟ್ಟುವುದು ಹೇಗೆ? ದಲಿತರು, ಕೃಷಿಕರು, ಕಾರ್ಮಿಕರು, ಮಹಿಳೆಯರು ಒಗ್ಗೂಡಿ ಸಾಮಾಜಿಕ ಚಳವಳಿ ಹುಟ್ಟುಹಾಕದಿದ್ದರೆ ಪ್ರಜಾಪ್ರಭುತ್ವದ ಬಲವರ್ಧನೆ ಸಾಧ್ಯವಿಲ್ಲ' ಎಂದು ಹೇಳಿದರು.

ಅನುಸಂಧಾನ ಅಗತ್ಯ: 'ರೈತ ಚಳವಳಿ, ದಲಿತ ಚಳವಳಿ ಮುಖಾಮುಖಿಯಾಗುತ್ತಿವೆ. ಆದರೆ, ಅಪಾಯದಲ್ಲಿರುವ ಪ್ರಜಾಪ್ರಭುತ್ವದ ಉಳಿವಿಗಾಗಿ ಈ ಎರಡೂ ಚಳವಳಿಗಳ ಅನುಸಂಧಾನ ನಡೆಯಬೇಕಿದೆ. ಇಲ್ಲದಿದ್ದರೆ ನಮ್ಮ ಅಸ್ತಿತ್ವವೇ ಹೋಗಿ ಬಿಡಬಹುದು' ಎಂದು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಮುಜಾಫರ್ ಅಸಾದಿ ಹೇಳಿದರು.

ಕೆಲವೆಡೆ ಮಾತ್ರ ಕೋವಿಡ್ ಮಾರ್ಗಸೂಚಿ ಪಾಲನೆ, ನೆಗೆಟಿವ್ ವರದಿ ಕಡ್ಡಾಯ ಬಗ್ಗೆ ಜನರಲ್ಲಿ ಗೊಂದಲ

ಗಡಿ ಚೆಕ್‌ಪೋಸ್ಟ್‌ಗಳಲ್ಲಿ ಇಲ್ಲ ತಪಾಸಣೆ

ಪ್ರಜಾವಾಣಿ ವಾರ್ತೆ

ಕಲಬುರ್ಗಿ, ಮಂಗಳೂರು, ಚಿಕ್ಕೋಡಿ: ನೆರೆಯ ಕೇರಳ ಮತ್ತು ಮಹಾರಾಷ್ಟ್ರದಲ್ಲಿ ಕೋವಿಡ್ ಹಾವಳಿ ಹೆಚ್ಚುತ್ತಿದ್ದರೂ, ಕಲಬುರ್ಗಿ ಮತ್ತು ಮಂಗಳೂರಿನ ತಲಪಾಡಿ ಗಡಿಯಲ್ಲಿ ಆರಂಭಿಸಿರುವ ಚೆಕ್‌ಪೋಸ್ಟ್‌ಗಳಲ್ಲಿ ಇನ್ನೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿಲ್ಲ.

‘ಮಹಾರಾಷ್ಟ್ರದ ಗಡಿ ಮೂಲಕ ರಾಜ್ಯ ಪ್ರವೇಶ ಮಾಡುವವರಿಗೆ ಥರ್ಮಲ್ ಸ್ಕ್ರೀನಿಂಗ್ ಮಾಡಲಾಗುತ್ತಿದೆ. ಶೇ 50ರಷ್ಟು ಮಂದಿ ಮಾತ್ರ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ತರುತ್ತಿದ್ದಾರೆ. ಅನಿವಾರ್ಯ ಕಾರಣಗಳಿದ್ದರೆ, ಮುಂಜಾಗ್ರತಾ ಕ್ರಮ ಕೈಗೊಂಡು ಒಳಗೆ ಬಿಡಲಾಗುತ್ತಿದೆ’ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಾಜಶೇಖರ ಮಾಲಿ ತಿಳಿಸಿದರು.

‘ಗಡಿಯ ಚೆಕ್‌ಪೋಸ್ಟ್‌ಗಳಲ್ಲಿ ಈವರೆಗೂ ಕೋವಿಡ್ ತಪಾಸಣೆ ಮಾಡುವ ಅನಿವಾರ್ಯ ಬಂದಿಲ್ಲ. ಯಾರಿಗಾದರೂ ಅನಾರೋಗ್ಯ ಲಕ್ಷಣಗಳು ಕಂಡು ಬಂದರೆ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಳುಹಿಸಿ ತಪಾಸಣೆ ಮಾಡಿಸಲಾಗುತ್ತಿದೆ. ಜ್ವರದ ಲಕ್ಷಣಗಳಿದ್ದರೆ ಮರಳಿ ಕಳುಹಿಸಿ ಹೋಂ ಕ್ವಾರಂಟೈನ್ ಆಗಲು ಸೂಚಿಸಲಾಗುತ್ತಿದೆ. ಅದರ ವರದಿಯನ್ನು ಮಹಾರಾಷ್ಟ್ರಕ್ಕೆ ನೀಡಲಾಗುತ್ತಿದೆ. ವೈದ್ಯಕೀಯ ತುರ್ತು, ನ್ಯಾಯಾಲಯ ಕೆಲಸಗಳಿಗೆ ಬರುವವರನ್ನು ಸ್ಕ್ರೀನಿಂಗ್ ಮಾಡಿ, ಲಕ್ಷಣ ಇಲ್ಲದಿದ್ದರೆ ಬಿಡಲಾಗುತ್ತಿದೆ. ಅವರು ಮರಳಿ ಹೋಗುವವರೆಗೂ ಪೂರ್ಣ ವಿವರ ಕಲೆ ಹಾಕಲಾಗುತ್ತಿದೆ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

ಆಳಂದ ತಾಲ್ಲೂಕಿನ ಖಜೂರಿ, ಹಿರೊಳ್ಳಿ, ನಿಂಬಾಳ ಮೂಲಕ ರಾಜ್ಯ ಪ್ರವೇಶಿಸುವವರ ಸಂಖ್ಯೆ ಯಥಾಪ್ರಕಾರ ಇದ್ದರೆ, ಅಫಜಲಪುರ ತಾಲ್ಲೂಕಿನ ಬಳೂರ್ಗಿ, ಮಣ್ಣೂರ, ಅರ್ಜುಣಗಿ ಮಾರ್ಗದ ಮೂಲಕ ಬರುವವರ ಸಂಖ್ಯೆ ಕಡಿಮೆಯಾಗಿದೆ.

ಬೀದರ್ ವರದಿ: ಲಾತೂರ್ ಜಿಲ್ಲೆಯಲ್ಲಿ ಶನಿವಾರ ಮತ್ತು ಭಾನುವಾರ ಜನತಾ ಕರ್ಫ್ಯೂ ಜಾರಿಗೊಳಿಸಲಾಗಿದೆ. ಮಹಾರಾಷ್ಟ್ರದ ಬಸ್‌ಗಳು ಶನಿವಾರ ಜಿಲ್ಲೆಗೆ ಬರಲಿಲ್ಲ. ಔರಾದ್ ಸಾರಿಗೆ ಘಟಕದ ಒಂದು ಬಸ್ ಲಾತೂರ್‌ಗೆ ಹೋಗಿ ಬಂದಿದೆ. ಬೆರಳೆಣಿಕೆಯಷ್ಟು ಮಾತ್ರ ಪ್ರಯಾಣಿಕರು ಇದ್ದರು.

ಮಂಗಳೂರು ವರದಿ: ತಲಪಾಡಿಯ ಗಡಿಯಲ್ಲಿ ಕಟ್ಟುನಿಟ್ಟಿನ ತಪಾಸಣೆ ಸಾಧ್ಯವಾಗಿಲ್ಲ. ಎರಡೂ ಬದಿಯಲ್ಲಿ ವಾಹನಗಳು ಎಂದಿನಂತೆಯೇ ಸಂಚಾರ ನಡೆಸುತ್ತಿವೆ. ಕೋವಿಡ್ ನಿಯಂತ್ರಣಕ್ಕಾಗಿ ಕೇರಳ– ಕರ್ನಾಟಕ ಗಡಿಗಳಲ್ಲಿ ಪ್ರಯಾಣಕ್ಕೆ ನಿರ್ಬಂಧ ವಿಧಿಸಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದರು. ಅದರಂತೆ 13 ರಸ್ತೆಗಳ ಪೈಕಿ, ನಾಲ್ಕು ಕಡೆಗಳಲ್ಲಿ ಮಾತ್ರ ರಾಜ್ಯ ಪ್ರವೇಶಿಸಲು ಅನುಮತಿ ನೀಡಲಾಗಿದೆ. ಈ ಪ್ರದೇಶದಲ್ಲಿ ಚೆಕ್‌ಪೋಸ್ಟ್ ನಿರ್ಮಿಸಿದ್ದು, ತಪಾಸಣೆ ಕೇಂದ್ರವನ್ನೂ ಆರಂಭಿಸಲಾಗಿದೆ. ತಲಪಾಡಿಯ ಕೇಂದ್ರದಲ್ಲಿ ಸೋಮವಾರದಿಂದ ಇಲ್ಲಿಯವರೆಗೆ ಒಟ್ಟು 2,216 ಮಂದಿಯ ತಪಾಸಣೆ ನಡೆಸಲಾಗಿದ್ದು, 10 ಮಂದಿಗೆ ಕೋವಿಡ್–19 ದೃಢವಾಗಿದೆ. ಇವರೆಲ್ಲರೂ ಮಂಗಳೂರಿನಲ್ಲಿ ವ್ಯಾಸಂಗ ಮಾಡುವವರಾಗಿದ್ದಾರೆ.

ಗೊಂದಲ: ನಗರಕ್ಕೆ ಭೇಟಿ ನೀಡಿದ್ದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ನೀಡಿದ ಹೇಳಿಕೆಯಿಂದ ನೆಗೆಟಿವ್ ವರದಿ ಕಡ್ಡಾಯವೋ ಇಲ್ಲವೋ ಎಂಬುದರ ಬಗ್ಗೆ ಜನರಲ್ಲಿ ಗೊಂದಲ ಉಂಟಾಗಿದೆ.

‘ನಿತ್ಯ ಪ್ರಯಾಣಿಕರಿಗೆ ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಕಡ್ಡಾಯ ಬೇಡ. ಕೇರಳದಿಂದ ಬಂದು ಇಲ್ಲಿಯೇ ವಾಸಿಸುವವರಿಗೆ ಮಾತ್ರ ಕಡ್ಡಾಯ ಮಾಡಬೇಕು. ನಿತ್ಯ ಓಡಾಡುವವರ ಮೇಲೆ ಆರೋಗ್ಯ ಸೇತು ಆ್ಯಪ್ ಮೂಲಕ ನಿಗಾ ವಹಿಸಬೇಕು. ಈ ಬಗ್ಗೆ ಆರೋಗ್ಯ ಸಚಿವ ಡಾ. ಸುಧಾಕರ ಅವರೊಂದಿಗೆ ಚರ್ಚಿಸುತ್ತೇನೆ’ ಎಂದು ಡಾ.ಅಶ್ವತ್ಥನಾರಾಯಣ ತಿಳಿಸಿದ್ದರು.

> ತಲಪಾಡಿ ಸೇರಿದಂತೆ ನಾಲ್ಕು ಕಡೆಗಳಲ್ಲಿ ಕೋವಿಡ್ ತಪಾಸಣೆ ನಡೆಸಲಾಗುತ್ತಿದೆ. ಆದರೆ, ಅದು ಅಷ್ಟೊಂದು ತೃಪ್ತಿಕರವಾಗಿಲ್ಲ
> **ಡಾ.ರಾಮಚಂದ್ರ ಬಾಯರಿ**, ಜಿಲ್ಲಾ ಆರೋಗ್ಯಾಧಿಕಾರಿ

ಚಿಕ್ಕೋಡಿ ವರದಿ: ನಿಪ್ಪಾಣಿ ತಾಲ್ಲೂಕಿನ ಕೊಗನೊಳ್ಳಿಯ ಮೂಲಕ ರಾಜ್ಯ ಪ್ರವೇಶಿಸುವ ಪ್ರತಿಯೊಬ್ಬರಿಗೆ ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ಮಾಡಿಸಲಾಗುತ್ತಿದೆ. ಆರ್‌ಟಿಪಿಸಿಆರ್ ಪ್ರಮಾಣಪತ್ರ ಇಲ್ಲದವರಿಗೆ ರಾಜ್ಯ ಪ್ರವೇಶಿಸಲು ಅವಕಾಶ ನೀಡುತ್ತಿಲ್ಲ.

ಇಲ್ಲಿನ ಟೋಲ್ ಪ್ಲಾಜಾದಲ್ಲಿ ಥರ್ಮಲ್ ಸ್ಕ್ಯಾನರ್ ಅಳವಡಿಸಲಾಗಿದ್ದು, ಕೋವಿಡ್ ಲಕ್ಷಣಗಳು ಕಂಡು ಬಂದಲ್ಲಿ ತಪಾಸಣೆಗೆ ಸೂಚನೆ ನೀಡಲಾಗುತ್ತಿದೆ. 3–4 ದಿನಗಳಿಂದ ಆರ್‌ಟಿಪಿಸಿಆರ್ ತಪಾಸಣಾ ಪ್ರಮಾಣಪತ್ರವನ್ನೂ ಕಡ್ಡಾಯಗೊಳಿಸಲಾಗಿದೆ. ಗಡಿಗ್ರಾಮಗಳಿಂದ ಮಹಾರಾಷ್ಟ್ರದ ವಿವಿಧೆಡೆ ದುಡಿಯಲು ಹೋಗುವ ಕಾರ್ಮಿಕರಿಗೂ ಆರೋಗ್ಯ ಪ್ರಮಾಣ ಪತ್ರ ಕಡ್ಡಾಯಗೊಳಿಸಲಾಗಿದೆ.

'ಕೊಗನೊಳ್ಳಿ ಟೋಲ್ ಪ್ಲಾಜಾದಲ್ಲಿನ ಆರೋಗ್ಯ ತಪಾಸಣೆ ಕೇಂದ್ರದಲ್ಲಿ ಪ್ರಯಾಣಿಕರ ಥರ್ಮಲ್ ಸ್ಕ್ಯಾನಿಂಗ್ ಮಾಡಲಾಗುತ್ತಿದೆ. 72 ಗಂಟೆಯೊಳಗಾಗಿ ತಪಾಸಣೆ ಮಾಡಿಕೊಂಡಿರುವ ಆರ್‌ಟಿಪಿಸಿಆರ್ ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಹೊಂದಿರುವವರಿಗೆ ಮಾತ್ರ ರಾಜ್ಯದೊಳಗೆ ಪ್ರವೇಶ ನೀಡಲಾಗುತ್ತಿದೆ.ಸರ್ಕಾರಿ ಬಸ್‌ಗಳಲ್ಲಿ ಟಿಕೆಟ್ ಬುಕ್ ಮಾಡುವ ಮುನ್ನವೇ ಪ್ರಯಾಣಿಕರ ಕೋವಿಡ್ ತಪಾಸಣೆ ಪ್ರಮಾಣ ಪತ್ರ ಪರಿಶೀಲಿಸುವಂತೆ ನಿರ್ವಾಹಕರಿಗೆ ಸೂಚನೆ ನೀಡಲಾಗಿದೆ' ಎಂದು ಚಿಕ್ಕೋಡಿಯ ಹೆಚ್ಚುವರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್. ಗಡೇದ ಹೇಳಿದರು.



ಎಚ್‌.ಡಿ.ಕೋಟೆ ತಾಲ್ಲೂಕಿನ ಕೇರಳ ಗಡಿ ಭಾಗವಾದ ಬಾವಲಿ ಚೆಕ್‌ಪೋಸ್ಟ್ ಬಳಿ ಕೋವಿಡ್ ಪರೀಕ್ಷೆಗಾಗಿ, ಜನರು ಸಾಲುಗಟ್ಟಿ ನಿಂತಿರುವುದು



ತಲಪಾಡಿ ಗೇಟ್‌ನ ತಪಾಸಣಾ ಕೇಂದ್ರದಲ್ಲಿ ನೆಗೆಟಿವ್ ವರದಿ ಪರಿಶೀಲಿಸಲಾಗುತ್ತಿದೆ.

ಮೈಸೂರು, ಕೊಡಗು ಗಡಿಯಲ್ಲಿ ಕಟ್ಟುನಿಟ್ಟಿನ ನಿರ್ಬಂಧ

ಮೈಸೂರು: ಮೈಸೂರು ಹಾಗೂ ಕೊಡಗು ಜಿಲ್ಲೆಯ ಗಡಿಯಲ್ಲಿ ಕಟ್ಟುನಿಟ್ಟಿನ ನಿರ್ಬಂಧ ಮುಂದುವರಿದಿದೆ. ಚಾಮರಾಜನಗರ ಮೂಲೆಹೊಳೆ ಚೆಕ್‌ಪೋಸ್ಟ್‌ನಲ್ಲಿ ಥರ್ಮಲ್ ಸ್ಕ್ರೀನಿಂಗ್ ಮಾತ್ರ ನಡೆಸಲಾಗುತ್ತಿದೆ.


ಎಚ್‌.ಡಿ. ಕೋಟೆ ತಾಲ್ಲೂಕಿನ ಬಾವಲಿ ಚೆಕ್‌ಪೋಸ್ಟ್‌ನಲ್ಲಿ, ಆರ್‌ಟಿಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ಇದ್ದಲ್ಲಿ ಮಾತ್ರ ಕೇರಳದಿಂದ ಬರುತ್ತಿರುವವರಿಗೆ ಪ್ರವೇಶ ನೀಡಲಾಗುತ್ತಿದೆ. ವರದಿ ಇಲ್ಲದವರ ಗಂಟಲುದ್ರವ ಮಾದರಿಯನ್ನು ತೆಗೆದುಕೊಂಡು, ಪ್ರವೇಶಕ್ಕೆ ಅನುಮತಿ ನೀಡಲಾಗುತ್ತಿದೆ.

ಮೂರು ದಿನಗಳಿಂದ 190 ಜನರ ಗಂಟಲು ದ್ರವ ಮಾದರಿಯನ್ನು ಸಂಗ್ರಹಿಸಿ, ಆರ್‌ಟಿಪಿಸಿಆರ್ ಪರೀಕ್ಷೆಗೆ ಕಳುಹಿಸಿ ಅವರ ಮೊಬೈಲ್ ಸಂಖ್ಯೆಯನ್ನು ದಾಖಲಿಸಿಕೊಂಡು ಕಳುಹಿಸಲಾಗಿದೆ. ಕೋವಿಡ್ ಪಾಸಿಟಿವ್ ಇದ್ದಲ್ಲಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗುತ್ತದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಗಂಟಲುದ್ರವವನ್ನು ನೀಡಲು ಒಪ್ಪದವರನ್ನು ವಾಪಸ್ ಕಳುಹಿಸಲಾಗುತ್ತಿದೆ. ಹೀಗಾಗಿ, ನಿತ್ಯ ಇಲ್ಲಿ ಜನರು ಸಾಲುಗಟ್ಟಿ ನಿಲ್ಲಬೇಕಾದ ಪರಿಸ್ಥಿತಿ ಇದೆ’ ಎಂದು ಬಾವಲಿ ಗ್ರಾಮಸ್ಥರೊಬ್ಬರು ತಿಳಿಸಿದರು.

‘ಇಲ್ಲಿ ನಿತ್ಯ ಸುಮಾರು 200 ವಾಹನಗಳು ಸಂಚರಿಸುತ್ತವೆ. ಆರ್‌ಟಿಪಿಸಿಆರ್ ವರದಿ ನೆಗೆಟಿವ್ ಇದ್ದವರಿಗೆ ಮಾತ್ರ ಪ್ರವೇಶ ನೀಡಬೇಕು ಎಂಬ ಲಿಖಿತ ಆದೇಶ ಬಂದಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದ್ದಾರೆ.

ಕೊಡಗು ಜಿಲ್ಲೆಯ ಕರಿಕೆ, ಮಾಕುಟ್ಟ ಗಡಿಯಲ್ಲಿ, ಕೋವಿಡ್ ನೆಗೆಟಿವ್ ವರದಿಯಿದ್ದರಷ್ಟೇ ಪ್ರವೇಶ ನೀಡಲಾಗುತ್ತಿದೆ. ಕುಟ್ಟ ಗಡಿಯಲ್ಲಿ ಮಾತ್ರ ಗಂಟಲು ದ್ರವ ಸಂಗ್ರಹಿಸಿ ರ‍್ಯಾಪಿಡ್ ಆಂಟಿಜನ್ ಕಿಟ್ ಮೂಲಕ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ.



ಕೋವಿಡ್ ಲಸಿಕೆ ದರ ₹250 ನಿಗದಿ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಖಾಸಗಿ ಆಸ್ಪತ್ರೆಗಳಲ್ಲಿ ನೀಡಲಾಗುವ ಕೋವಿಡ್–19 ಲಸಿಕೆಗೆ ಪ್ರತಿ ಡೋಸ್‌ಗೆ ಗರಿಷ್ಠ ₹ 250 ಶುಲ್ಕವನ್ನು ಕೇಂದ್ರ ಸರ್ಕಾರ ನಿಗದಿ ಮಾಡಿದೆ.

ದೇಶದಾದ್ಯಂತ ಎರಡನೇ ಹಂತದ ಲಸಿಕಾ ಕಾರ್ಯಕ್ರಮವು ಮಾರ್ಚ್ 1ರಿಂದ ಆರಂಭವಾಗಲಿದ್ದು, ಸರ್ಕಾರಿ ಆರೋಗ್ಯ ಕೇಂದ್ರಗಳು ಹಾಗೂ ಆಯ್ದ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಹಾಕಲಾಗುವುದು. 60 ವರ್ಷ ವಯಸ್ಸಿಗೂ ಮೇಲ್ಪಟ್ಟವರು ಹಾಗೂ ಇತರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ 45 ವರ್ಷಕ್ಕೂ ಮೇಲ್ಪಟ್ಟವರು ಲಸಿಕೆ ಹಾಕಿಸಿಕೊಳ್ಳಲು ಅರ್ಹರಾಗಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಸಿಕೆ ಹಾಕಲಾಗುವುದು. ಖಾಸಗಿ ಆಸ್ಪತ್ರೆಗಳು ಲಸಿಕೆಯ ವೆಚ್ಚ ₹150 ಹಾಗೂ ಸೇವಾ ಶುಲ್ಕದ ರೂಪದಲ್ಲಿ ₹100 ಸೇರಿ, ಗರಿಷ್ಠ ₹250ನ್ನು ಮಾತ್ರ ಪಡೆಯಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2ನೇ ಹಂತ: ಆರೋಗ್ಯ ಕೇಂದ್ರಗಳ ಗುರುತು

ಪ್ರತಿ ಕೇಂದ್ರದಲ್ಲಿ 200 ಮಂದಿಗೆ ಮಾತ್ರ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಸೋಮವಾರದಿಂದ (ಮಾ.1) ಎರಡನೇ ಹಂತದ ಕೋವಿಡ್ ಲಸಿಕೆ ವಿತರಣೆ ಅಭಿಯಾನ ಪ್ರಾರಂಭವಾಗಲಿದ್ದು, ಪ್ರತಿ ಕೇಂದ್ರದಲ್ಲಿ ದಿನಕ್ಕೆ 200 ಮಂದಿಗೆ ಮಾತ್ರ ಲಸಿಕೆ ನೀಡಲಾಗುತ್ತದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಮೊದಲ ಹಂತದ ಲಸಿಕೆ ವಿತರಣೆ ಅಭಿಯಾನಕ್ಕೆ ಜ.16ರಂದು ಚಾಲನೆ ದೊರೆತಿತ್ತು. ಆರೋಗ್ಯ ಕಾರ್ಯಕರ್ತರು ಹಾಗೂ ಕೋವಿಡ್ ಮುಂಚೂಣಿ ಯೋಧರಿಗೆ ಲಸಿಕೆ ವಿತರಿಸಲಾಗಿದೆ. ನಿಗದಿಪಡಿಸಲಾಗಿದ್ದ 7,28,349 ಆರೋಗ್ಯ ಕಾರ್ಯಕರ್ತರಲ್ಲಿ 4,47,267 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. ಇವರಲ್ಲಿ 2.06 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ. 2,91,037 ಮುಂಚೂಣಿ ಯೋಧರಲ್ಲಿ 1,58,575 ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದಾರೆ.

ಎರಡನೇ ಹಂತದಲ್ಲಿ 60 ವರ್ಷ ಮೇಲ್ಪಟ್ಟ ಎಲ್ಲರೂ ಹಾಗೂ ಮಧುಮೇಹ ಸೇರಿದಂತೆ ಕೋವಿಡೇತರ 20 ಕಾಯಿಲೆಯನ್ನು ಎದುರಿಸುತ್ತಿರುವ 45ರಿಂದ 59 ವರ್ಷದೊಳಗಿನವರಿಗೆ ಲಸಿಕೆ ವಿತರಣೆ ಮಾಡಲಾಗುತ್ತದೆ. ಈ ಸಂಬಂಧ ಆರೋಗ್ಯ ಇಲಾಖೆಯು ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು ಹಾಗೂ ಕೆಲ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಿದೆ. ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳ ಜತೆಗೆ ಪ್ರತಿ ಜಿಲ್ಲೆಯಲ್ಲಿ ಎರಡು ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ 18 ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ವಿತರಣೆ ನಡೆಯಲಿದೆ.

ಲಸಿಕೆ ವಿತರಣೆಯು ಸೋಮವಾರ, ಬುಧವಾರ, ಶುಕ್ರವಾರ ಮತ್ತು ಶನಿವಾರ ಮಾತ್ರ ನಡೆಯಲಿದೆ. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡವರಿಗೆ ನಿಗದಿಪಡಿಸಲಾದ ದಿನಗಳಂದು ಮಧ್ಯಾಹ್ನ 12ರಿಂದ ಸಂಜೆ 5 ಗಂಟೆಯ ಅವಧಿಯಲ್ಲಿ ಲಸಿಕೆಗಳನ್ನು ವಿತರಿಸಲಾಗುತ್ತದೆ. ಕೇಂದ್ರ ಸರ್ಕಾರದ ಮಾರ್ಗಸೂಚಿ ಹಾಗೂ ಸೂಚನೆ ಅನುಸಾರ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಇಲಾಖೆ ತಿಳಿಸಿದೆ.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಮತ್ತೆ ಗುಡುಗಿದ ಶಾಸಕ ತನ್ವೀರ್ ಸೇಠ್

ಪಾಲಿಕೆ ಚುನಾವಣೆ: ಕಾಂಗ್ರೆಸ್‌ನೊಳಗೆ ಆರದ ‘ಬೆಂಕಿ’

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಮಹಾನಗರ ಪಾಲಿಕೆ ಮೇಯರ್ ಚುನಾವಣೆ ಹಾಗೂ ಜೆಡಿಎಸ್ ಜೊತೆಗಿನ ಮೈತ್ರಿ ವಿಚಾರವಾಗಿ ಕಾಂಗ್ರೆಸ್ ಪಕ್ಷದೊಳಗೆ ಹೊತ್ತಿಕೊಂಡಿರುವ ಬೆಂಕಿ ಮತ್ತಷ್ಟು ಜೋರಾಗುವ ಲಕ್ಷಣ ಕಂಡುಬರುತ್ತಿದೆ.

‘ನಾನು ಮಾರಾಟಕ್ಕಿಲ್ಲ; ಯಾರಿಗೂ ಹೆದರುವ ಪ್ರಶ್ನೆಯೇ ಇಲ್ಲ. ಪಕ್ಷಕ್ಕಿಂತ ದೊಡ್ಡವರು ಯಾರೂ ಇಲ್ಲ, ವ್ಯಕ್ತಿಪೂಜೆ ಮಾಡಬಾರದು. ಗಂಡು ಮಗು ಬೇಕೆಂದು ಬಯಸಿದವರಿಗೆ ಹೆಣ್ಣು ಮಗುವಾದರೆ ಏನು ಮಾಡಲು ಸಾಧ್ಯ?’ ಎಂದು ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್, ಸಿದ್ದರಾಮಯ್ಯ ವಿರುದ್ಧ ಗುಡುಗಿದರೆ; ಸಿದ್ದರಾಮಯ್ಯ ಆಪ್ತ ಡಾ.ಎಚ್‌.ಸಿ.ಮಹದೇವಪ್ಪ ಅವರು ‘ಈ ಪ್ರಕ್ರಿಯೆಯಲ್ಲಿ ಮುಂಚೂಣಿಯಲ್ಲಿದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್‌.ಧ್ರುವನಾರಾಯಣ ಅವರಿಗೆ ಎಲ್ಲ ವಿಚಾರವೂ ಗೊತ್ತಿದೆ’ ಎಂದಿರುವುದು ಪಕ್ಷದೊಳಗೆ ಒಡಕು ಹೆಚ್ಚಿದೆ.

ಇನ್ನೊಂದೆಡೆ ಸ್ಥಳೀಯ ಜೆಡಿಎಸ್ ಮುಖಂಡರು, ‘ನೀವೇ ಡೀಲ್ ಮಾಸ್ಟರ್‌ಗಳು’ ಎಂದು ಕಾಂಗ್ರೆಸ್ ವಿರುದ್ಧ ಪತ್ರಿಕಾಗೋಷ್ಠಿಯಲ್ಲಿ ಮುಗಿ ಬಿದ್ದಿದ್ದಾರೆ. ಭಾನುವಾರ ಜೆಡಿಎಸ್ ಶಾಸಕ ಸಾ.ರಾ.ಮಹೇಶ್, ಪಾಲಿಕೆಯ ತಮ್ಮ ಪಕ್ಷದ ಸದಸ್ಯರೊಂದಿಗೆ ಪತ್ರಿಕಾಗೋಷ್ಠಿ ಕರೆದಿರುವುದು ಮತ್ತಷ್ಟು ಕುತೂಹಲಕ್ಕೆ ಕಾರಣವಾಗಿದೆ.

ವಿವಾದದ ಕೇಂದ್ರ ಬಿಂದು ತನ್ವೀರ್ ಸೇಠ್, ‘ಪಕ್ಷವು ಯಾವುದೇ ರೀತಿಯ ಶಿಕ್ಷೆ ನೀಡಿದರೂ ಧೈರ್ಯದಿಂದ ಎದುರಿಸುತ್ತೇನೆ. ಅಮಾನತು ಮಾಡಲಿ, ಇಲ್ಲವೇ ವಜಾ ಮಾಡಲಿ ತಲೆ ತಗ್ಗಿಸಿ ಸ್ವೀಕರಿಸುತ್ತೇನೆ. ಬೇರೆ ನಾಯಕರ ಹೆಸರು ಹೇಳಿ ಜಾರಿಕೊಳ್ಳುವುದಿಲ್ಲ’ ಎಂದು ನೋಟಿಸ್ ನೀಡಿರುವ ವಿಚಾರಕ್ಕೆ ಶನಿವಾರ ಇಲ್ಲಿ ತಿರುಗೇಟು ನೀಡಿದ್ದಾರೆ.

ಮುಖ್ಯಾಂಶಗಳು

- ‘ಕೈ’ ನಾಯಕ ವಿರುದ್ಧ ಸಿಡಿದೆದ್ದ ಮೈಸೂರಿನ ಜೆಡಿಎಸ್ ಮುಖಂಡರು
- ಸಿದ್ದರಾಮಯ್ಯ ಬೆಂಬಲಕ್ಕೆ ನಿಂತ ಡಾ.ಮಹದೇವಪ್ಪ
- ಇಂದು ಪತ್ರಿಕಾಗೋಷ್ಠಿ ನಡೆಸಲಿರುವ ಸಾ.ರಾ.ಮಹೇಶ್

‘ಜೆಡಿಎಸ್ ಜೊತೆಗಿನ ಮೈತ್ರಿ ಸಂಬಂಧ ನಾನು ಮಾಡಿರುವ ಕೆಲಸಕ್ಕೆ ಸಿಗುತ್ತಿರುವ ಬಹುಮಾನ ಎಂದು ಭಾವಿಸಿದ್ದೇನೆ. ವಿವಾದ ಸಂಬಂಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಜೊತೆ ಕೂಡ ಮಾತನಾಡಿದ್ದು, ಸೋಮವಾರ ಭೇಟಿಯಾಗುತ್ತೇನೆ. ಅಂದೇ ವರದಿ ಕೊಡುತ್ತೇನೆ’ ಎಂದರು.

‘ನನ್ನ ವಿರುದ್ಧ ನೂರೆಂಟು ಆರೋಪ ಮಾಡಲಾಗಿದೆ. ಡೀಲ್ ಮಾಡಿದ್ದಾಗಿಯೂ ಅಪವಾದ ಇದೆ. ಹಿಂದಿನಿಂದಲೂ ನನಗೆ ಟಿಕೆಟ್ ತಪ್ಪಿಸುವ, ಸೋಲಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ. ಪ್ರತಿ ಚುನಾವಣೆಯಲ್ಲಿ ಹೋರಾಟ ಮಾಡಿಯೇ ಟಿಕೆಟ್ ಪಡೆದಿದ್ದೇನೆ’ ಎಂದು ತಾವು ಎದುರಿಸಿದ ಸಮಸ್ಯೆಗಳನ್ನು ಬಿಚ್ಚಿಟ್ಟರು.

ಸಿದ್ದರಾಮಯ್ಯ ಬೆಂಬಲಕ್ಕೆ ನಿಂತಿರುವ ಡಾ.ಮಹದೇವಪ್ಪ, ‘ಪಕ್ಷದ ಒಳಗೆ ಹಾಗೂ ಹೊರಗೆ, ದನಿ ಎತ್ತುವವರ ಬಾಯಿಯನ್ನು ಮುಚ್ಚಿಸುವ ಕೆಲಸ ನಡೆಯುತ್ತಿದೆ. ಸಿದ್ದರಾಮಯ್ಯ ಜನಪರ ಹೋರಾಟ ನಡೆಸುತ್ತಿದ್ದಾರೆ. ಆದರೆ, ಅದನ್ನು ಕೆಲವರು ಅರ್ಥ ಮಾಡಿಕೊಂಡಿಲ್ಲ. ಸಿದ್ದರಾಮಯ್ಯ ಅವರು ತಾವೇನೆಂದು ಜೆಡಿಎಸ್ ಮುಖಂಡರಿಗಾಗಲೀ, ಬೇರೆ ಯಾರಿಗೇ ಆಗಲಿ ಮತ್ತೆ ಹೇಳಬೇಕಾಗಿಲ್ಲ’ ಎಂದು ತಿವಿದರು.



> ಪಾಲಿಕೆ ವಿಚಾರವಾಗಿ ಸಿದ್ದರಾಮಯ್ಯ 16 ಬಾರಿ ಕರೆ ಮಾಡಿದ್ದು ನಿಜ. ಹಾಗೆಯೇ ನಾನೆಷ್ಟು ಬಾರಿ ಕರೆ ಮಾಡಿದ್ದೇನೆ ಎಂಬುದನ್ನು ಸಿದ್ದರಾಮಯ್ಯ ಹೇಳಲಿ
> **ತನ್ವೀರ್ ಸೇಠ್,** ಕಾಂಗ್ರೆಸ್ ಶಾಸಕ



> ಆನೆ ಹೋಗುತ್ತೆ, ನಾಯಿ ಬೊಗಳುತ್ತೆ. ಸಿದ್ದರಾಮಯ್ಯ ಒಬ್ಬ ಧೀಮಂತ ನಾಯಕ, ಅವರೇನು ಎಂಬುದು ಎಲ್ಲರಿಗೂ ಗೊತ್ತು
> **ಡಾ.ಎಚ್‌.ಸಿ.ಮಹದೇವಪ್ಪ,** ಕಾಂಗ್ರೆಸ್ ಮುಖಂಡ



> ನಮ್ಮ ಪಕ್ಷದವರೇ ಸಿದ್ದರಾಮಯ್ಯ ವಿರುದ್ಧ ಪ್ರತಿಭಟಿಸಿದ್ದು ತಪ್ಪು, ಆಂತರಿಕ ಸಮಸ್ಯೆಗಳನ್ನು ನಾಯಕರಿಗೆ ತಿಳಿಸಿ ಪರಿಹರಿಸಿಕೊಳ್ಳಬೇಕು. ಬಣಗಳಿಲ್ಲ
> **ಆರ್‌.ಧ್ರುವನಾರಾಯಣ,** ಕೆಪಿಸಿಸಿ ಕಾರ್ಯಾಧ್ಯಕ್ಷ

‘ಪಕ್ಷದ ನಿರ್ಧಾರವಲ್ಲ’

ಚಾಮರಾಜನಗರ: ‘ಮೈಸೂರು ಮಹಾನಗರ ಪಾಲಿಕೆಯ ಮೇಯರ್–ಉಪಮೇಯರ್ ಚುನಾವಣೆಯಲ್ಲಿ ನಡೆದ ಆಯ್ಕೆಯು ಪಕ್ಷದ ನಿರ್ಧಾರ ಅಲ್ಲ; ಶಾಸಕ ತನ್ವೀರ್ ಸೇಠ್, ಪಾಲಿಕೆಯ ಸದಸ್ಯರು ತೆಗೆದುಕೊಂಡ ತೀರ್ಮಾನ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್‌.ಧ್ರುವನಾರಾಯಣ ಶನಿವಾರ ಇಲ್ಲಿ ಹೇಳಿದರು.

ನಗರದಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ಒಪ್ಪಂದದ ಪ್ರಕಾರ, ಈ ಬಾರಿ ಮೇಯರ್ ಹುದ್ದೆ ನಮಗೆ ಸಿಗಬೇಕಿತ್ತು. ಅದಕ್ಕಾಗಿ ಅಭ್ಯರ್ಥಿ ಕಣಕ್ಕಿಳಿಸಿದ್ದೆವು. ಯಾವುದೇ ಕಾರಣಕ್ಕೂ ಮೇಯರ್ ಸ್ಥಾನವನ್ನು ಬಿಟ್ಟು ಕೊಡಬೇಡಿ ಎಂದು ಸಿದ್ದರಾಮಯ್ಯ ಹೇಳಿದ್ದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೂ ಕರೆ ಮಾಡಿ, ಮೇಯರ್ ಸ್ಥಾನ ಬಿಟ್ಟುಕೊಡಲು ಜೆಡಿಎಸ್‌ನವರು ಒಪ್ಪಿಕೊಂಡಿದ್ದಾಗಿ ಹೇಳಿದ್ದರು. ಚುನಾವಣೆ ದಿನ ನಾವು ಜೆಡಿಎಸ್ ಮುಖಂಡರೊಂದಿಗೆ ಸಭೆಯನ್ನೂ ನಡೆಸಿದ್ದವು. ಆದರೆ, ಮತದಾನದ ಸಂದರ್ಭದಲ್ಲಿ ಪಾಲಿಕೆ ಸದಸ್ಯರು ತಮ್ಮ ನಿಲುವು ಬದಲಿಸಿದರು’ ಎಂದರು.

‘ನಾನು ಚುನಾವಣಾ ವೀಕ್ಷಕನಾಗಿದ್ದೆ. ಚುನಾವಣೆಗೆ ಸಂಬಂಧಿಸಿದಂತೆ ವರದಿ ನೀಡುವಂತೆ ಕೆಪಿಸಿಸಿ ಅಧ್ಯಕ್ಷರು ಸೂಚಿಸಿದ್ದಾರೆ. ವರದಿ ನೀಡುತ್ತೇನೆ. ಪಾಲಿಕೆ ಸದಸ್ಯರ ಜೊತೆ ಮಾತನಾಡಿ ಭಿನ್ನಾಭಿಪ್ರಾಯ ಬಗೆಹರಿಸುತ್ತೇನೆ’ ಎಂದರು.

ಪಕ್ಷದ ನಾಯಕರದ್ದೇ ಕೆಲಸ–ಯತೀಂದ್ರ

'ಮೈಸೂರು ಮೇಯರ್ ಚುನಾವಣೆಯಲ್ಲಿ ನಡೆದಿರುವ ಬೆಳವಣಿಗೆ ದುರದೃಷ್ಟಕರ. ಪಕ್ಷದ ನಾಯಕರೊಬ್ಬರಿಗೆ ಹಿನ್ನಡೆ ಮಾಡಬೇಕು ಎಂಬ ಕಾರಣಕ್ಕೆ ನಮ್ಮ ಪಕ್ಷದ ಮುಖಂಡರೇ ಸೇರಿ ಮಾಡಿರುವ ಕೆಲಸ ಇದು' ಎಂದು ಶಾಸಕ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಹೇಳಿದರು.

'ಇಂತಹ ಬೆಳವಣಿಗೆಗಳು, ಪಕ್ಷದಲ್ಲಿ ಒಡಕಿದೆ ಎಂಬ ಸಂದೇಶವನ್ನು ರವಾನಿಸುತ್ತವೆ. ಇಂತಹ ಘಟನೆಗಳು ರಾಜ್ಯದಲ್ಲಿ ಎಲ್ಲೂ ಮರುಕಳಿಸಬಾರದು. ಎಲ್ಲ ಮುಖಂಡರು ಒಗ್ಗಟ್ಟಾಗಿರುವಂತೆ ಕೆಪಿಸಿಸಿ ಮುಖಂಡರು ನೋಡಿಕೊಳ್ಳಬೇಕು' ಎಂದರು.

ಸ್ವಾತಂತ್ರ್ಯ ಸಂಗ್ರಾಮದಲ್ಲೂ ಮಹಾನ್ ನಾಯಕರ ವಿರುದ್ಧ ಮಾತನಾಡಲಾಯಿತು. ಇದರಿಂದ ಅವರ ಹೆಸರಿಗೇನು ಧಕ್ಕೆಯಾಯಿತೇ? ವ್ಯಕ್ತಿಗತ ವರ್ಚಸ್ಸು, ನಾಯಕತ್ವ ಯಾವುದೇ ಪಕ್ಷದಿಂದ, ಮಾಧ್ಯಮದಿಂದ, ಜನರನ್ನು ಸೇರಿಸಿ ಸಭೆ ಮಾಡುವುದರಿಂದ ಬರಲ್ಲ ಎಂದರು.

ಇತ್ತ ಚಾಮರಾಜನಗದರಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್‌.ಧ್ರುವನಾರಾಯಣ, ‘ಸಿದ್ದರಾಮಯ್ಯ ಯಾವತ್ತಿದ್ದರೂ ಹುಲಿ. ಬಿಜೆಪಿ ಇಲಿಗಳು ಹತಾಶೆಯಿಂದ ಏನೇನೋ ಮಾತನಾಡುತ್ತಿವೆ. ಜೆಡಿಎಸ್‌ನವರು ವಚನಭ್ರಷ್ಟತೆಗೆ ಹೆಸರಾದವರು’ ಎಂದು ಹರಿಹಾಯ್ದಿದ್ದಾರೆ.

ಯಾರನ್ನೂ ಟಾರ್ಗೆಟ್ ಮಾಡಲ್ಲ: ಡಿಕೆಶಿ

ಕುಂದಾಪುರ: ‘ಮೈಸೂರು ಮಹಾನಗರ ಪಾಲಿಕೆ ಮೇಯರ್ ಸ್ಥಾನ ನಮಗೆ ಬೇಕು ಎನ್ನುವುದು ಪಕ್ಷದ ನಿಲುವಾಗಿತ್ತು. ಆದರೆ ಕೊನೇ ಕ್ಷಣದಲ್ಲಿ ಬದಲಾವಣೆಯಾಗಿದೆ.



ಈ ಕುರಿತು ಸೋಮವಾರ ಬೆಂಗಳೂರಿಗೆ ಬಂದು ವರದಿ ನೀಡುವಂತೆ ತಿಳಿಸಿದ್ದೇನೆ. ಇದರಲ್ಲಿ ಯಾರನ್ನೂ ಟಾರ್ಗೆಟ್ ಮಾಡುವ ವಿಚಾರ ಇಲ್ಲ. ಯಾರನ್ನೂ ಕಟ್ಟಿ ಹಾಕೋದಕ್ಕೆ ಅಥವಾ ನಾಯಕರ ಹೆಸರಿಗೆ ಅಗೌರವ ತರಲು ಅವಕಾಶ ನೀಡುವುದಿಲ್ಲ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ ಹೇಳಿದರು.

ಬೈಂದೂರಿನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಮಗೆ ಮೇಯರ್ ಸ್ಥಾನ ನೀಡುವ ಬಗ್ಗೆ ಜೆಡಿಎಸ್‌ನವರು ತಿಳಿಸಿದ್ದರು. ಜೆಡಿಎಸ್ ಹಾಗೂ ಬಿಜೆಪಿಯಿಂದಲೂ ನಾಮಪತ್ರ ಸಲ್ಲಿಕೆಯಾಗಿತ್ತು. ಕಾಂಗ್ರೆಸ್ ಅಧಿಕಾರ ಉಳಿಸಿಕೊಳ್ಳಲು ಪ್ರಯತ್ನ ಮಾಡಿತ್ತು. ಆದರೆ ಕೊನೆಯ ಕ್ಷಣದಲ್ಲಿ ಒಳಗಡೆ ಸದಸ್ಯರು ತೀರ್ಮಾನ ಮಾಡಿದ್ದರಿಂದಾಗಿ ಈ ರೀತಿಯಾಗಿದೆ’ ಎಂದರು.

ಉಪಚುನಾವಣೆ: ಮುಂದಿನ ವಾರ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಒಂದು ಲೋಕಸಭೆ (ಬೆಳಗಾವಿ) ಮತ್ತು ಮೂರು ವಿಧಾನಸಭಾ ಕ್ಷೇತ್ರಗಳಿಗೆ (ಮಸ್ಕಿ, ಸಿಂದಗಿ, ಬಸವಕಲ್ಯಾಣ) ಉಪಚುನಾವಣೆ ದಿನಾಂಕ ಮುಂದಿನ ವಾರ ಪ್ರಕಟವಾಗುವ ಸಾಧ್ಯತೆ ಇದೆ.

ಕೇಂದ್ರ ಚುನಾವಣಾ ಆಯೋಗ ದೆಹಲಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿ ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆ ಮತ್ತು ಆಯಾ ರಾಜ್ಯಗಳಲ್ಲಿ ತೆರವಾಗಿರುವ ಲೋಕಸಭಾ ಕ್ಷೇತ್ರಗಳಿಗೆ ಚುನಾವಣಾ ದಿನಾಂಕ ಘೋಷಿಸಿತ್ತು.

ರಾಜ್ಯದಲ್ಲಿ ಖಾಲಿ ಇರುವ ಕ್ಷೇತ್ರಗಳಿಗೆ ಚುನಾವಣೆ ವೇಳಾ ಪಟ್ಟಿ ಪ್ರಕಟವಾಗುವ ನಿರೀಕ್ಷೆಗಳಿದ್ದವು. ಆದರೆ, ಈ ಕ್ಷೇತ್ರಗಳ ಚುನಾವಣೆಗೆ ಪ್ರತ್ಯೇಕ ಅಧಿಸೂಚನೆ ಹೊರಡಿಸುವುದಾಗಿ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಸುನೀಲ್ ಅರೋರಾ ಹೇಳಿದ್ದರು.

ಉಪಚುನಾವಣೆಗಳ ವೇಳಾ ಪಟ್ಟಿ ಕುರಿತಂತೆ ‘ಪ್ರಜಾವಾಣಿ’ಗೆ ಶನಿವಾರ ಪ್ರತಿಕ್ರಿಯಿಸಿದ ರಾಜ್ಯ ಮುಖ್ಯ ಚುನಾವಣಾ ಆಯುಕ್ತ ಸಂಜೀವ್ ಕುಮಾರ್, ‘ನಾವು ಚುನಾವಣೆಗೆ ಎಲ್ಲ ಸಿದ್ಧತೆ ಮಾಡಿಕೊಂಡಿದ್ದೇವೆ. ಚುನಾವಣಾ ದಿನ ಘೋಷಣೆಯ ನಿರೀಕ್ಷೆಯಲ್ಲಿದ್ದೇವೆ’ ಎಂದರು.

ರೋಷನ್, ಇಬ್ರಾಹಿಂ ಹಾದಿಯಲ್ಲಿ ತನ್ವೀರ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಮಹಾನಗರಪಾಲಿಕೆ ಮೇಯರ್ ಚುನಾವಣೆಯಲ್ಲಿ ಜೆಡಿಎಸ್ ಜತೆ ಕಾಂಗ್ರೆಸ್ ಕೈಜೋಡಿಸಲು ಶಾಸಕ ತನ್ವೀರ್ ಸೇಠ್ ಕಾರಣ ಎನ್ನಲಾಗಿದ್ದು, ಸಿದ್ದರಾಮಯ್ಯ ಜತೆ ಚರ್ಚಿಸದೆ ನಡೆದ ಈ ಬೆಳವಣಿಗೆ ಕಾಂಗ್ರೆಸ್ ಪಕ್ಷದಲ್ಲಷ್ಟೇ ಅಲ್ಲ, ಆ ಪಕ್ಷದ ಮುಸ್ಲಿಂ ನಾಯಕರ ಮಧ್ಯೆಯೂ ಭಾರಿ ಚರ್ಚೆಗೆ ಕಾರಣವಾಗಿದೆ.

ಮುಸ್ಲಿಂ ಸಮುದಾಯದ ನಾಯಕನಾಗಿ ಗುರುತಿಸಿಕೊಳ್ಳುವ ಪ್ರಯತ್ನದಲ್ಲಿರುವ ಪಕ್ಷದ ಶಾಸಕ ಜಮೀರ್ ಅಹ್ಮದ್ ಖಾನ್ ಮಾತನ್ನು ಸಿದ್ದರಾಮಯ್ಯ ಕೇಳುತ್ತಿದ್ದಾರೆ ಎಂಬುವುದು ಕೆಲವರ ಆರೋಪ. ಜೆಡಿಎಸ್ ತ್ಯಜಿಸಿ ಕಾಂಗ್ರೆಸ್‌ಗೆ ಸೇರಿದ್ದ ಜಮೀರ್, ಸಿದ್ದರಾಮಯ್ಯ ಆಪ್ತ ಬಳಗ ಸೇರಿಕೊಂಡ ಬಳಿಕ ರೋಷನ್ ಬೇಗ್, ಸಿ.ಎಂ. ಇಬ್ರಾಹಿಂ ಸೇರಿದಂತೆ ಹಳೇ ಸ್ನೇಹಿತರು ದೂರವಾದರು ಎಂಬ ಮಾತುಗಳು ಕಾಂಗ್ರೆಸ್‌ನಲ್ಲಿದೆ. ಇತ್ತೀಚೆಗೆ ಸಿದ್ದರಾಮಯ್ಯ ದೆಹಲಿ ಪ್ರವಾಸದ ಸಂದರ್ಭದಲ್ಲಿಯೂ ಜಮೀರ್ ಜತೆಗಿದ್ದರು.

ಸಿದ್ದರಾಮಯ್ಯ ಸರ್ಕಾರದಲ್ಲಿ ಪ್ರಾಥಮಿಕ ಶಿಕ್ಷಣ ಸಚಿವರಾಗಿದ್ದ ತನ್ವೀರ್ ಸೇಠ್, ಮೈಸೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಸಿದ್ದರಾಮಯ್ಯ ಅಣತಿ ಮೀರಿ ನಡೆದುಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ‘ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು ಈ ನಿರ್ಧಾರ ಕೈಗೊಂಡಿದ್ದೇನೆ’ ಎಂದು ತನ್ವೀರ್ ಅವರು ತಮ್ಮ ನಿಲುವು ಸಮರ್ಥಿಸಿಕೊಂಡಿದ್ದಾರೆ. ಅವರ ಬೆಂಬಲಿಗರೂ ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿದ್ದಾರೆ.

ಸಿ.ಎಂ. ಇಬ್ರಾಹಿಂ ಮತ್ತು ಸಿದ್ದರಾಮಯ್ಯ ಬಹುತೇಕ ಒಂದೇ ನಿಲುವು, ಸಿದ್ಧಾಂತ ಹೊಂದಿದವರು. ಹಿಂದಿನ ಸಿದ್ದರಾಮಯ್ಯ ಇದೀಗ ಬದಲಾಗಿದ್ದಾರೆ ಎಂದು ಇಬ್ರಾಹಿಂ ಇತ್ತೀಚೆಗೆ ನೋವು ತೋಡಿಕೊಂಡದ್ದರು. ಇದೀಗ ತನ್ವೀರ್ ಸೇಠ್ ಕೂಡಾ ಸಿದ್ದರಾಮಯ್ಯ ವಿರುದ್ಧ ತಿರುಗಿ ಬಿದ್ದಿದ್ದಾರೆ.

‘ಜಮೀರ್ ಮಾತಿಗೆ ಸಿದ್ದರಾಮಯ್ಯ ಮಣೆ ಹಾಕುತ್ತಿದ್ದಾರೆ. ಇದೇ ಕಾರಣಕ್ಕೆ ರೋಷನ್ ಬೇಗ್, ಇಬ್ರಾಹಿಂ, ಇದೀಗ ತನ್ವೀರ್ ಸೇಠ್ ಅವರು ಸಿದ್ದರಾಮಯ್ಯ ವಿರುದ್ಧ ಮುನಿಸಿಕೊಂಡು ದೂರವಾಗಿದ್ದಾರೆ ಎಂಬುವುದು ಕೆಲವರ ಆರೋಪ. ಇನ್ನು ಶಾಸಕರಾದ ರಿಜ್ವಾನ್ ಅರ್ಷದ್ ಹಾಗೂ ಯು.ಟಿ. ಖಾದರ್ ತಟಸ್ಥ ನಿಲುವು ಹೊಂದಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಅವರು ಡಿ.ಕೆ ಶಿವಕುಮಾರ್ ಬಣದಲ್ಲಿ ಗುರುತಿಸಿಕೊಂಡಿದ್ದಾರೆ.



ಯಡಿಯೂರಪ್ಪ ಅವರಿಗೆ ಕುಟುಂಬ ಸದಸ್ಯರು ಆರತಿ ಬೆಳಗಿದರು

79ನೇ ವರ್ಷಕ್ಕೆ ಕಾಲಿಟ್ಟ ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಶನಿವಾರ ಹುಟ್ಟುಹಬ್ಬ ಸಂಭ್ರಮ. 79ನೇ ವಸಂತಕ್ಕೆ ಕಾಲಿಟ್ಟ ಬಿಎಸ್‌ವೈಗೆ ರಾಷ್ಟ್ರಪತಿ, ಪ್ರಧಾನಿ ಸೇರಿದಂತೆ ರಾಜಕೀಯ ನಾಯಕರು, ಅಭಿಮಾನಿಗಳು ಜನ್ಮದಿನದ ಶುಭಾಶಯ ಕೋರಿದರು.

ಈ ವೇಳೆ ಮಾತನಾಡಿದ ಮುಖ್ಯಮಂತ್ರಿ, ‘ರಾಷ್ಟ್ರಪತಿ, ಪ್ರಧಾನಿ ಮೋದಿ, ದೇವೇಗೌಡರು ಕರೆ ಮಾಡಿ ಹುಟ್ಟುಹಬ್ಬಕ್ಕೆ ಶುಭ ಕೋರಿದರು. ಅಲ್ಲದೆ, ಇತರ ಹಲವು ಗಣ್ಯರೂ ಶುಭ ಹಾರೈಸಿದ್ದಾರೆ. ಎಲ್ಲರ ಅಪೇಕ್ಷೆಯಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡಿ, ನಾಡನ್ನು ಮಾದರಿ ರಾಜ್ಯವನ್ನಾಗಿ ಮಾಡುತ್ತೇನೆ. ಇದೇ 8ರಂದು ಉತ್ತಮ ಬಜೆಟ್ ಮಂಡಿಸುತ್ತೇನೆ’ ಎಂದು ಭರವಸೆ ನೀಡಿದರು. ಕೇಂದ್ರ ಜಲಸಂಪನ್ಮೂಲ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರು ಯಡಿಯೂರಪ್ಪ ಅವರನ್ನು ಖುದ್ದು ಭೇಟಿಯಾಗಿ ಶುಭ ಕೋರಿದರು.

‘ಯಡಿಯೂರಪ್ಪ ಒಬ್ಬ ಅನುಭವಿ ನಾಯಕರಾಗಿದ್ದು, ತಮ್ಮ ಜೀವನವನ್ನು ರೈತರು ಹಾಗೂ ಬಡವರ ಹಿತರಕ್ಷಣೆಗೆ ಮುಡಿಪಾಗಿಸಿದ್ದಾರೆ. ಅವರ ಸುದೀರ್ಘ ಆರೋಗ್ಯ ಜೀವನಕ್ಕೆ ಹಾರೈಸುತ್ತೇನೆ’ ಎಂದು ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿ ಕೇಂದ್ರದ ಹಲವು ಸಚಿವರು ಹುಟ್ಟುಹಬ್ಬದ ಶುಭಾಶಯ ತಿಳಿಸಿದ್ದಾರೆ. ಇತ್ತ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಬಹುತೇಕ ಎಲ್ಲ ಸಚಿವರು, ಮುಖಂಡರು ಕೂಡಾ ಶುಭ ಹಾರೈಸಿದರು.


ಎಲ್ಲಮ್ಮ ದೇವಿಯ ವೈಭವದ ಮುತ್ತಿನ ಪಲ್ಲಕ್ಕಿ ಉತ್ಸವ

ಪ್ರಜಾವಾಣಿ ವಾರ್ತೆ

ಮದ್ದೂರು: ಪಟ್ಟಣದ ರೇಣುಕಾ ಎಲ್ಲಮ್ಮದೇವಿಯ 49ನೇ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ, ದೇವಿಯ ‘ಮುತ್ತಿನ ಪಲ್ಲಕ್ಕಿ ಉತ್ಸವ’ವು ಶನಿವಾರ ಸಡಗರ–ಸಂಭ್ರಮದೊಂದಿಗೆ ನೆರವೇರಿತು.

ರಾತ್ರಿ 8.30ಕ್ಕೆ ಹೊಳೆ ಆಂಜನೇಯಸ್ವಾಮಿ ದೇಗುಲದ ಆವರಣದಲ್ಲಿ, ದೇವಿಯ ಉತ್ಸವ ಮೂರ್ತಿಯನ್ನು ಮುತ್ತಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಾಯಿತು. ಸಾವಿರಾರು ಜನರು ಅಲಂಕೃತ ಉತ್ಸವ ಮೂರ್ತಿಯ ದರ್ಶನ ಪಡೆದರು. ಹೊಳೆಬೀದಿ, ದೊಡ್ಡಿ ಬೀದಿ, ಮೇಲಗದೊಡ್ಡಿ ಬೀದಿ, ಗಂಗಾಮತಸ್ಥ ಬೀದಿ, ಪೇಟೆಬೀದಿ ಮೂಲಕ ಮೆರವಣಿಗೆ ಸಾಗಿತು.

ತಿರುಪತಿಯ ತಿರುಮಲ ದೇವಾಲಯದ ಮಂಜು ಬಾಲಾಜಿ ತಂಡದಿಂದ ಮೃದಂಗ ವಾದ್ಯಗೋಷ್ಠಿ, ಕೇರಳದ ಚಂಡಮದ್ದಳೆ, ತಮಿಳುನಾಡಿನ ಬ್ಯಾಂಡ್‌ಸೆಟ್ ಹಾಗೂ ಸ್ಥಳೀಯ ಕಲಾವಿದರ ತಮಟೆ– ನಗಾರಿಯ ನಾದ ಮೆರವಣಿಗೆಗೆ ರಂಗು ತಂದಿತು.



ಮುತ್ತಿನ ಪಲ್ಲಕ್ಕಿಯಲ್ಲಿ ರೇಣುಕಾ ಎಲ್ಲಮ್ಮ ತಾಯಿಯ ಉತ್ಸವ ಮೂರ್ತಿ

ವೀರಗಾಸೆ, ಡೊಳ್ಳುಕುಣಿತ, ಗಾರುಡಿ ಗೊಂಬೆ, ಜಾನಪದ ನೃತ್ಯ ಗಮನ ಸೆಳೆದವು. ಮೆರವಣಿಗೆಯುದ್ದಕ್ಕೂ, ಮನೆಗಳ ಮುಂದೆ ಮಹಿಳೆಯರು ದೇವಿಗೆ ಆರತಿ ಬೆಳಗಿ ಪೂಜೆ ಸಲ್ಲಿಸಿದರು.

ಬೆಳಿಗ್ಗೆ 7.30ಕ್ಕೆ ಮಹಾಚಂಡಿಕಾ ಹೋಮ ಆರಂಭವಾಯಿತು. ನಂತರ ಪೂರ್ಣಾಹುತಿ, ಮಧ್ಯಾಹ್ನ ಮಹಾಮಂಗಳಾರತಿ, ತೀರ್ಥ ಪ್ರಸಾದ ಹಾಗೂ ಮಹಿಳೆಯರಿಂದ ತಂಬಿಟ್ಟಿನ ಆರತಿ ಕಾರ್ಯಕ್ರಮಗಳು ನಡೆದವು. ಮಧ್ಯಾಹ್ನ ಭಕ್ತರಿಗೆ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು.

ಶನಿವಾರ ಇಡೀ ರಾತ್ರಿ ಪಟ್ಟಣದ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ನಡೆಯಿತು. ಮೆರವಣಿಗೆಯುದ್ದಕ್ಕೂ ಪಟಾಕಿ ಸಿಡಿಸಲಾಯಿತು. ರೇಣುಕಾ ಎಲ್ಲಮ್ಮ ದೇವಿಯ ಉತ್ಸವ ಮೂರ್ತಿಯು ಭಾನುವಾರ ಬೆಳಿಗ್ಗೆ ದೇಗುಲಕ್ಕೆ ಹಿಂದಿರುಗಲಿದೆ. ವಿಶೇಷ ಕ್ಷೀರಾಭಿಷೇಕ, ತೀರ್ಥಪ್ರಸಾದ ವಿನಿಯೋಗದೊಂದಿಗೆ ಜಾತ್ರೆಗೆ ತೆರೆಬೀಳಲಿದೆ.

ವಿಶ್ವಕರ್ಮ ನಿಗಮ: ₹ 300 ಕೋಟಿ ಅನುದಾನಕ್ಕೆ ಒತ್ತಾಯ

ಮೈಸೂರು: ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ, ಬಜೆಟ್‌ನಲ್ಲಿ ಕನಿಷ್ಠ ₹ 300 ಕೋಟಿ ಅನುದಾನ ನೀಡದಿದ್ದಲ್ಲಿ , ಮಠಾಧೀಶರು ಹಾಗೂ ಮುಖಂಡರೊಂದಿಗೆ ಬೃಹತ್ ಹೋರಾಟ ನಡೆಸಲಾಗುವುದು ಎಂದು ಜಿಲ್ಲಾ ವಿಶ್ವಕರ್ಮ ಯುವ ವೇದಿಕೆಯ ಅಧ್ಯಕ್ಷ ಕೆ.ಕೆಂಡಗಣ್ಣ ವಿಶ್ವಕರ್ಮ ಎಚ್ಚರಿಕೆ ನೀಡಿದರು.

2 ಎ ಮೀಸಲಾತಿ ವ್ಯಾಪ್ತಿಗೆ ಬೇರೆ ಸಮುದಾಯಗಳನ್ನು ಸೇರ್ಪಡೆ ಮಾಡಬಾರದು, ವಿಶ್ವಕರ್ಮ ಸಮುದಾಯಕ್ಕೆ ಶೇ 3ರಷ್ಟು ಒಳ ಮೀಸಲಾತಿ ನೀಡಬೇಕು ಎಂದು ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಸಚಿವರು, ಶಾಸಕರು ಪಾಲ್ಗೊಂಡಿದ್ದಕ್ಕೆ ಬಿಜೆಪಿ ಪದಾಧಿಕಾರಿಗಳ ಸಭೆಯಲ್ಲಿ ಅಸಮಾಧಾನ

ಮೀಸಲಾತಿ ಹೋರಾಟ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಸಲಾತಿಗಾಗಿ ನಡೆಯುತ್ತಿರುವ ಹೋರಾಟಗಳಲ್ಲಿ ಸಚಿವರು ಹಾಗೂ ಶಾಸಕರು ಪಾಲ್ಗೊಳ್ಳುತ್ತಿರುವುದರಿಂದ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗುತ್ತಿದೆ ಎಂಬ ಅಭಿಪ್ರಾಯ ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆಯಲ್ಲಿ ವ್ಯಕ್ತವಾಗಿದೆ.

ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಮೀಸಲಾತಿ ಹೋರಾಟಗಳ ಬಗ್ಗೆ ಪದಾಧಿಕಾರಿಗಳು ಅನೇಕ ಪ್ರಶ್ನೆಗಳನ್ನು ಎತ್ತಿದ್ದಾರೆ.

ಮೀಸಲಾತಿಗಾಗಿ ಇದೇ ರೀತಿಯ ಹೋರಾಟ ಮುಂದುವರಿದರೆ ಪಕ್ಷದ ನಿಲುವಿನ ಬಗ್ಗೆ ಗೊಂದಲ ಸೃಷ್ಟಿಯಾಗಿ, ಪಕ್ಷಕ್ಕೆ ಹಾನಿಯಾಗುವ ಸಾಧ್ಯತೆ ಹೆಚ್ಚಿದೆ. ಈ ವಿಷಯದಲ್ಲಿ ಸರ್ಕಾರ ಹಾಗೂ ಪಕ್ಷದ ನಿಲುವು ಏನಾಗಿರಬೇಕು ಎಂಬ ತೀರ್ಮಾನಕ್ಕೆ ಬರುವುದು ಸೂಕ್ತ ಎಂಬ ಸಲಹೆಯೂ ಬಂದಿತು ಎಂದು ಮೂಲಗಳು ಹೇಳಿವೆ.

ಮೀಸಲಾತಿಗಾಗಿ ನಡೆಯುತ್ತಿರುವ ಹೋರಾಟ ಈಗ ಕೈ ಮೀರಿದೆ ಹೋಗಿದೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ನಮ್ಮದೇ ಪಕ್ಷ ಅಧಿಕಾರ ಇರುವಾಗ ಈ ರೀತಿಯ ಹೋರಾಟ ಅನೇಕ ತಪ್ಪು ಸಂದೇಶಗಳು ರವಾನೆಯಾಗಲು ದಾರಿ ಮಾಡಿಕೊಡಲಿವೆ. ಸರ್ಕಾರ ತೆಗೆದುಕೊಳ್ಳಬಹುದಾದ ನಿರ್ಣಯಗಳು ಮುಂದಿನ ದಿನಗಳಲ್ಲಿ ಸಮಸ್ಯೆಗೆ ಕಾರಣವಾಗಬಹುದು. ಈ ವಿಷಯದಲ್ಲಿ ಪಕ್ಷ ಮತ್ತು ವರಿಷ್ಠರು ಮಧ್ಯ ಪ್ರವೇಶ ಮಾಡಬೇಕು ಎಂಬ ಸಲಹೆಯನ್ನು ಕೆಲವು ಪದಾಧಿಕಾರಿಗಳು ನೀಡಿದರು ಎಂದು ಮೂಲಗಳು ವಿವರಿಸಿವೆ.

ಈ ಹಂತದಲ್ಲಿ ಮಾತನಾಡಿದ ನಳಿನ್ ಕುಮಾರ್ ಕಟೀಲ್, 'ಮೀಸಲಾತಿಗಾಗಿ ನಡೆಯುತ್ತಿರುವ ಹೋರಾಟಗಳ ಬಗ್ಗೆ ಸಂಘ ಪರಿವಾರ, ಪಕ್ಷ ಹಾಗೂ ಸರ್ಕಾರದ ಪ್ರಮುಖರ ಜತೆ ಸಭೆ ನಡೆಸಿ ಸ್ಪಷ್ಟ ತೀರ್ಮಾನಕ್ಕೆ ಬರಲಾಗುವುದು. ಈ ವಿಷಯದಲ್ಲಿ ಯಾವ ನಿಲುವು ತೆಗೆದುಕೊಳ್ಳಬೇಕು ಎಂಬ ಸ್ಪಷ್ಟ ಸೂಚನೆಯನ್ನೂ ಬಳಿಕ ನೀಡುವುದಾಗಿ ಹೇಳಿದರು' ಎಂದು ಗೊತ್ತಾಗಿದೆ.

ಅಧಿಕಾರ ಅನುಭವಿಸಿದವರು, ಅನುಭವಿಸುತ್ತಿರುವವರು ಪಕ್ಷ ಮತ್ತು ಸಂಘಟನೆ ವಿಷಯ ಬಂದಾಗ ಮುಂದೆ ಬರುವುದಿಲ್ಲ. ಕೆಲವರಿಗೆ ಅಧಿಕಾರ ಮಾತ್ರ ಬೇಕಾಗಿದೆ. ಚಿಕ್ಕಬಳ್ಳಾಪುರ ಕ್ಷೇತ್ರದ ಬಿಜೆಪಿ ಸಂಸದರಾಗಿರುವ ಬಚ್ಚೇಗೌಡರ ಮಗನಾದ ಪಕ್ಷೇತರ ಶಾಸಕ ಶರತ್ ಬಚ್ಚೇಗೌಡ ಕಾಂಗ್ರೆಸ್ ಜತೆ ಕೈಜೋಡಿಸಿದ್ದಾರೆ. ಬಚ್ಚೇಗೌಡರಿಂದ ಈ ಬಗ್ಗೆ ವಿವರಣೆ ಪಡೆಯಬೇಕಿತ್ತು. ಆ ಕೆಲಸ ಏಕೆ ಮಾಡಿಲ್ಲ ಎಂದು ಪದಾಧಿಕಾರಿಯೊಬ್ಬರು ಪ್ರಶ್ನೆ ಮಾಡಿದ್ದಾಗಿ ಮೂಲಗಳು ತಿಳಿಸಿವೆ.

ಚುನಾವಣೆ ಸಿದ್ಧತೆ: ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಅತಿ ಹೆಚ್ಚು ಸಂಖ್ಯೆಯಲ್ಲಿ ಗೆಲ್ಲಿಸುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು.

ಬೂತ್ ಪ್ರಮುಖ್, ಪೇಜ್ ಪ್ರಮುಖ್ ಮುಂದುವರಿದ ರೂಪವಾಗಿ ಬೂತ್ ಅಧ್ಯಕ್ಷರಾಗಿರುವವರಿಗೆ ಹೆಚ್ಚಿನ ಜವಾಬ್ದಾರಿ ಕೊಡಲು ಚರ್ಚೆ ನಡೆಯಿತು. ಬೂತ್ ಸಮಸ್ಯೆಗಳ ಪಟ್ಟಿ ಮಾಡುವುದು, ರಾಜಕೀಯ ಬೆಳವಣಿಗೆಗಳ ಬಗ್ಗೆ ವರದಿ ಸಿದ್ಧಪಡಿಸುವುದು, ಸರ್ಕಾರದ ಜತೆಗೆ ನಿಂತು ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಲು ಕಾರ್ಯಕ್ರಮ ರೂಪಿಸುವ ಜವಾಬ್ದಾರಿಯನ್ನು ಬೂತ್ ಅಧ್ಯಕ್ಷರಿಗೆ ನೀಡುವ ಬಗ್ಗೆಯೂ ಸಮಾಲೋಚನೆ ನಡೆದಿದೆ ಎಂದು ಮೂಲಗಳು ವಿವರಿಸಿವೆ.

ಸುದ್ದಿ 2 ನಿಮಿಷ

ನಿವೃತ್ತ ಸಿಜೆಐ ವಿರುದ್ಧ ಆರೋಪ: ಪ್ರಕರಣ ದಾಖಲಿಸಲು ಅನುಮತಿ ನಿರಾಕರಣೆ

ನವದೆಹಲಿ (ಪಿಟಿಐ): ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ಹಾಗೂ ರಾಜ್ಯಸಭಾ ಸದಸ್ಯ ರಂಜನ್ ಗೊಗೊಯಿ ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸುವ ಸಂಬಂಧ ಅನುಮತಿ ನೀಡಲು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ನಿರಾಕರಿಸಿದ್ದಾರೆ.

ನ್ಯಾಯಾಂಗ ವ್ಯವಸ್ಥೆ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಆರೋಪವನ್ನು ನಿವೃತ್ತ ಸಿಜೆಐ ರಂಜನ್ ಗೊಗೊಯಿ ಎದುರಿಸುತ್ತಿದ್ದಾರೆ.

'ದೇಶದ ನ್ಯಾಯಾಂಗ ವ್ಯವಸ್ಥೆಯೇ ಕುಸಿದಿದೆ. ನ್ಯಾಯ ಬೇಡಿ ವ್ಯಕ್ತಿಯೊಬ್ಬ ಕೋರ್ಟ್ ಮೆಟ್ಟಿಲೇರಿದಾಗ ಸಕಾಲದಲ್ಲಿ ತೀರ್ಪು ಹೊರಬೀಳುವ ಸಾಧ್ಯತೆ ಈಗ ಕಡಿಮೆ ಎಂಬುದಾಗಿ ನಿವೃತ್ತ ಸಿಜೆಐ ಗೊಗೊಯಿ ಇತ್ತೀಚೆಗೆ ಹೇಳಿದ್ದರು. ಹೀಗಾಗಿ ಅವರ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿ, ವಿಚಾರಣೆ ನಡೆಸಬೇಕು' ಎಂದು ಕೋರಿ ಸಾಮಾಜಿಕ ಹೋರಾಟಗಾರ ಸಾಕೇತ್ ಗೋಖಲೆ ಎಂಬುವವರು ಅರ್ಜಿ ಸಲ್ಲಿಸಿದ್ದರು.



'ಗೊಗೊಯಿ ಅವರ ಸಂದರ್ಶನವನ್ನು ವೀಕ್ಷಿಸಿದ್ದೇನೆ. ನ್ಯಾಯಾಂಗ ವ್ಯವಸ್ಥೆ ಕುರಿತು ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ನ್ಯಾಯಾಲಯದ ಘನತೆಯನ್ನು ಕುಂದಿಸುವ ರೀತಿಯಲ್ಲಿ ಇರಲಿಲ್ಲ. ನ್ಯಾಯಾಂಗ ನಿಂದನೆಯಾಗುವಂಥ ಅಭಿಪ್ರಾಯವನ್ನು ಸಹ ವ್ಯಕ್ತಪಡಿಸಿಲ್ಲ. ಗೊಗೊಯಿ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಅನುಮತಿ ನಿರಾಕರಿಸಿಲಾಗಿದೆ' ಎಂದು ವೇಣುಗೋಪಾಲ್ ಅವರು ಗೋಖಲೆ ಅವರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

ಫುಲ್ ಬ್ರೈಟ್ ಫೆಲೋಷಿಪ್: ಅರ್ಜಿ ಆಹ್ವಾನ

ಬೆಂಗಳೂರು: ಯುನೈಟೆಡ್ ಸ್ಟೇಟ್ಸ್-ಇಂಡಿಯಾ ಎಜುಕೇಷನಲ್ ಫೌಂಡೇಶನ್ (ಯುಎಸ್‌ಐಇಎಫ್), 2022-23ನೇ ಸಾಲಿನ ಫುಲ್ ಬ್ರೈಟ್-ನೆಹರೂ ಮತ್ತು ಇತರ ಫುಲ್ ಬ್ರೈಟ್ ಫೆಲೋಷಿಪ್‌ಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಅಮೆರಿಕ ಹಾಗೂ ಭಾರತದ ಪ್ರತಿಭೆಗಳ ಶೈಕ್ಷಣಿಕ, ಸಂಶೋಧನೆ, ಬೋಧನೆ ಮತ್ತು ವೃತ್ತಿಪರ ಸಾಮರ್ಥ್ಯ ಅಭಿವೃದ್ಧಿಗೆ ಪೂರಕವಾಗುವ ಅವಕಾಶಗಳನ್ನು ಈ ಫೆಲೋಷಿಪ್ ನೀಡಲಿವೆ. ಭಾರತದ ಅತ್ಯುತ್ತಮ ವಿದ್ಯಾರ್ಥಿಗಳು, ವಿದ್ವಾಂಸರು, ಶಿಕ್ಷಕರು, ಕಲಾವಿದರು ಮತ್ತು ಎಲ್ಲಾ ಹಿನ್ನೆಲೆಯ ವೃತ್ತಿಪರರಿಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಅಮೆರಿಕದಲ್ಲಿ ದೇಶವನ್ನು ಪ್ರತಿನಿಧಿಸುವ ಸಾಂಸ್ಕೃತಿಕ ರಾಯಭಾರಿಯಾಗಲು ಅವಕಾಶವಿದೆ.

ವಿವರಗಳಿಗೆ: www.usief.org.in. ಅರ್ಜಿದಾರರು ತಮ್ಮ ಪ್ರಶ್ನೆಗಳನ್ನು ip@usief.org.in ಗೆ ಕಳುಹಿಸಬಹುದು ಅಥವಾ ನವದೆಹಲಿ, ಚೆನ್ನೈ, ಹೈದರಾಬಾದ್, ಕೋಲ್ಕತಾ, ಅಥವಾ ಮುಂಬೈಯಲ್ಲಿರುವ ಯುಎಸ್‌ಐಇಎಫ್ ಕಚೇರಿಗಳನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿರೋಧಿ ಚಟುವಟಿಕೆಗಳಿಗೆ ಅವಕಾಶ ಇಲ್ಲ: ಭಾರತ– ಬಾಂಗ್ಲಾ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮ್ಮ ಪ್ರದೇಶಗಳಲ್ಲಿ ಪರಸ್ಪರ ದೇಶಗಳ ಹಿತಾಸಕ್ತಿಗೆ ವಿರುದ್ಧವಾದ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶ ನೀಡುವುದಿಲ್ಲ ಎಂದು ಭಾರತ ಮತ್ತು ಬಾಂಗ್ಲಾದೇಶ ಪ್ರಕಟಿಸಿವೆ.

ಆನ್‌ಲೈನ್ ಮೂಲಕ ಶನಿವಾರ ನಡೆದ 19ನೇ ಗೃಹ ಕಾರ್ಯದರ್ಶಿಗಳ ಮಟ್ಟದ ಮಾತುಕತೆ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ನಿರ್ಧಾರಕೈಗೊಳ್ಳಲಾಯಿತು.

ಭಾರತದ ನಕಲಿ ನೋಟುಗಳನ್ನು ಅಕ್ರಮವಾಗಿ ಸಾಗಿಸುವ ಚಟುವಟಿಕೆಗಳನ್ನು ತಡೆಗಟ್ಟಲು ಉಭಯ ದೇಶಗಳ ಭದ್ರತಾ ಪಡೆಗಳು ಪರಸ್ಪರ ಸಹಕಾರ ನೀಡುವುದು ಅಗತ್ಯವಿದೆ. ಈ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಗೃಹ ಕಾರ್ಯದರ್ಶಿಗಳು ಚರ್ಚೆ ನಡೆಸಿದರು.

ಭದ್ರತೆ ಮತ್ತು ಗಡಿಗೆ ಸಂಬಂಧಿಸಿದ ವಿಷಯಗಳಲ್ಲಿ ಸಹಕಾರವನ್ನು ಮತ್ತಷ್ಟು ವಿಸ್ತರಿಸಿ ಬಲಪಡಿಸಲು ಉಭಯ ದೇಶಗಳು ಈ ಸಂದರ್ಭದಲ್ಲಿ ಒಪ್ಪಿಗೆ ನೀಡಲಾಯಿತು. ಜತೆಗೆ, ಭಾರತ ಮತ್ತು ಬಾಂಗ್ಲಾದೇಶ ಗಡಿಯಲ್ಲಿ ಬಾಕಿ ಉಳಿದಿರುವ ಬೇಲಿ ಹಾಕುವ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ಬಗ್ಗೆ ಈ ಸಂದರ್ಭದಲ್ಲಿ ಚರ್ಚಿಸಲಾಯಿತು.

ಕಾನೂನುಬಾಹಿರವಾಗಿ ಗಡಿಯಲ್ಲಿ ನುಸುಳುವುದನ್ನು ತಡೆಗಟ್ಟಲು ಸಮಗ್ರವಾದ ಗಡಿ ನಿರ್ವಹಣೆ ಯೋಜನೆ ಕೈಗೊಳ್ಳುವ ಬಗ್ಗೆ ಉಭಯ ದೇಶಗಳ ಕಾರ್ಯದರ್ಶಿಗಳು ಈ ಸಂದರ್ಭದಲ್ಲಿ ಚರ್ಚಿಸಿದರು ಎಂದು ಪ್ರಕಟಣೆ ತಿಳಿಸಿದೆ

ಭಾರತದ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಮತ್ತು ಬಾಂಗ್ಲಾದೇಶದ ಗೃಹ ಸಚಿವಾಲಯದ ಹಿರಿಯ ಕಾರ್ಯದರ್ಶಿ ಚರ್ಚೆಯಲ್ಲಿ ಭಾಗವಹಿಸಿದ್ದರು.

'ರೈತರ ಮಕ್ಕಳ ಮೀಸಲಾತಿ ಹೆಚ್ಚಿಸಲು ಪ್ರಸ್ತಾವ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಕೃಷಿ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ರೈತರ ಮಕ್ಕಳಿಗೆ ಈಗಿರುವ ಶೇ 40ರ ಮೀಸಲಾತಿಯನ್ನು ಶೇ 50ಕ್ಕೆ ಹೆಚ್ಚಿಸಲು ಬಜೆಟ್‌ನಲ್ಲಿ ಘೋಷಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಮಾಡಿದ್ದೇವೆ' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಹೇಳಿದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಶನಿವಾರ ನಡೆದ 33ನೇ ಘಟಿಕೋತ್ಸವದಲ್ಲಿ 890 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

'ರೈತರನ್ನು ನಿರ್ಲಕ್ಷಿಸಿದರೆ ದೇಶಕ್ಕೆ ದುರಂತ ಕಾಡಲಿದೆ. ಹೀಗಾಗಿ ರೈತರ ಸಾಂಪ್ರದಾಯಿಕ ಕೃಷಿ ಶೈಲಿಯನ್ನು ಮೌಲ್ಯಾಧಾರಿತ ಕೃಷಿಗೆ ಬದಲಿಸುವ ನಿಟ್ಟಿನಲ್ಲಿ ಸಾಕಷ್ಟು ಬದಲಾವಣೆಗಳು ಆಗಬೇಕಾಗಿದೆ. ಹೀಗಾಗಿ ಒಕ್ಕಲುತನದ ಅನುಭವವಿರುವ ಕೃಷಿಕರ ಮಕ್ಕಳಿಗೆ ಕೃಷಿಯಲ್ಲಿ ಆಧುನಿಕತೆಯನ್ನು ಕಲಿಸಿದರೆ ಆಮೂಲಾಗ್ರ ಬದಲಾವಣೆ ತರಲು ಸಾಧ್ಯ. ಆ ಮೂಲಕ ರೈತರ ಆದಾಯವನ್ನು ಹೆಚ್ಚಿಸಬಹುದು' ಎಂದರು.



ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ ಶನಿವಾರ ನಡೆದ 33ನೇ ಘಟಿಕೋತ್ಸವದಲ್ಲಿ ಚಿನ್ನದ ಹುಡುಗ ಸಂಜಯ ಕಲ್ಲುಗುಡಿ ಅವರಿಗೆ ಕೃಷಿ ಸಚಿವ ಬಿ.ಸಿ.ಪಾಟೀಲ ಪದಕ ಹಾಗೂ ಪದವಿ ಪ್ರದಾನ ಮಾಡಿದರು. ಕುಲಪತಿ ಡಾ. ಎಂ.ಬಿ. ಚೆಟ್ಟಿ ಇದ್ದಾರೆ.

'ಕೃಷಿ ವಿಶ್ವವಿದ್ಯಾಲಯದಲ್ಲಿರುವ ವಿಜ್ಞಾನಿಗಳು ಹಾಗೂ ಪ್ರಾಧ್ಯಾಪಕರನ್ನು ಜಿಲ್ಲೆ, ತಾಲ್ಲೂಕು, ಹೋಬಳಿ ಹಾಗೂ ಗ್ರಾಮಗಳ ಉಸ್ತುವಾರಿ ನೀಡಿ ರೈತರೊಂದಿಗೆ ನೇರ ಸಂಪರ್ಕದಲ್ಲಿರುವಂತೆ ಮಾಡಲು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಸೂಚಿಸಲಾಗಿದೆ. ಅದರಂತೆಯೇ ಕೊಪ್ಪಳದಲ್ಲಿ ಜಾರಿಗೆ ತಂದಿರುವ 'ಕೃಷಿ ಸಂಜೀವಿನಿ' ಎಂಬ ಸಂಚಾರಿ ಪ್ರಯೋಗಾಲಯ ಹಾಗೂ ಕೃಷಿಕರಿಗೆ ಸ್ವಾಭಿಮಾನಿ ರೈತರ ಕಾರ್ಡ್ ನೀಡುವ ಯೋಜನೆಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸುವ ಕುರಿತು ಚಿಂತನೆ ನಡೆದಿದೆ' ಎಂದು ಹೇಳಿದರು.

ಬಿಎಸ್ಸಿ ಕೃಷಿ ವಿಷಯದಲ್ಲಿ ಹನುಮನಮಟ್ಟಿ ಕಾಲೇಜಿನ ಜಯಂತ ಕಲ್ಲುಗುಡಿ ಅತಿಹೆಚ್ಚು ಚಿನ್ನದ ಪದಕ ಪಡೆದು ಚಿನ್ನದ ಹುಡುಗನಾಗಿ ಹೊರಹೊಮ್ಮಿದರು. ಸಾಧನೆ ಕುರಿತು ಪ್ರತಿಕ್ರಿಯಿಸಿದ ಜಯಂತ, 'ಕೃಷಿ ಕುಟುಂಬದ ಹಿನ್ನೆಲೆ ಇರುವ ನನ್ನ ಪಾಲಕರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ತಂದೆ ದಾಬಾಸ್ ಪೇಟೆಯಲ್ಲಿ ಶಾಲಾ ಶಿಕ್ಷಕರು. ಕೃಷಿಕರ ಏಳಿಗೆಗಾಗಿ ದುಡಿಯುವ ಕನಸು ಕಂಡಿರುವ ನಾನು, ಸದ್ಯ ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷೆಗಾಗಿ ದೆಹಲಿಯಲ್ಲಿ ತರಬೇತಿ ಪಡೆಯುತ್ತಿದ್ದೇನೆ' ಎಂದು ಅವರು ಹೇಳಿದರು.

ಅಸ್ಸಾಂ ಚುನಾವಣೆಯಲ್ಲಿ ಸ್ಪರ್ಧಿಸಲು ಆರ್‌ಜೆಡಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಗುವಾಹಟಿ : ಬಿಹಾರದ ರಾಷ್ಟ್ರೀಯ ಜನತಾದಳ (ಆರ್‌ಜೆಡಿ) ಪಕ್ಷವು ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದೆ.

ಅಸ್ಸಾಂನಲ್ಲಿ ಬಿಜೆಪಿ ಹಾಗೂ ಅದರ ಮೈತ್ರಿ ಪಕ್ಷಗಳನ್ನು ನೆಲ ಕಚ್ಚಿಸುವ ಗುರಿ ಹೊಂದಿರುವ ಆರ್‌ಜೆಡಿ, ಈ ಬಗ್ಗೆ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳ 'ಮಹಾಮೈತ್ರಿ' ನಾಯಕರ ಜೊತೆ ಮಾತುಕತೆ ನಡೆಸಿದೆ.

ಆರ್‌ಜೆಡಿ ಮುಖ್ಯಸ್ಥ ಹಾಗೂ ಬಿಹಾರದ ವಿರೋಧ ಪಕ್ಷದ ನಾಯಕ ತೇಜಸ್ವಿ ಪ್ರಸಾದ್ ಯಾದವ್ ಅವರು ಗುವಾಹಟಿಯಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ಅಸ್ಸಾಂನಲ್ಲಿ ಹಿಂದಿ ಮಾತನಾಡುವ ಮತದಾರರನ್ನು ಪಕ್ಷ ಗುರಿಯಾಗಿಸಿಕೊಳ್ಳುತ್ತದೆ. ಅಲ್ಲಿ ಹಿಂದಿ ಮಾತನಾಡುವವರ ಸಂಖ್ಯೆ ಶೇಕಡ 5ರಷ್ಟು. ಅದರಲ್ಲಿ ಬಹುತೇಕರ ಮೂಲ ಬಿಹಾರ, ಉತ್ತರಪ್ರದೇಶ ಹಾಗೂ ಜಾರ್ಖಂಡ್ ಆಗಿದೆ. ಬಿಜೆಪಿ ಮತ್ತು ಆರ್‌ಎಸ್‌ಎಸ್‌ನಂತಹ ವಿಭಜಕ ಶಕ್ತಿಗಳ ಬೆದರಿಕೆ ವಿರುದ್ಧ ಅವರನ್ನು ಒಟ್ಟುಗೂಡಿಸುತ್ತೇವೆ. ರಾಜ್ಯದ ಬಿಜೆಪಿ ಹಾಗೂ ಅದರ ಮೈತ್ರಿ ಪಕ್ಷಗಳ ವಿರುದ್ಧವಿರುವ ಪಕ್ಷಗಳ ನೆರವನ್ನು ಆರ್‌ಜೆಡಿ ಪಡೆದುಕೊಳ್ಳುತ್ತದೆ' ಎಂದು ಹೇಳಿದ್ದಾರೆ.

'ಕಾಂಗ್ರೆಸ್ ಯಾವಾಗಲೂ ನಮ್ಮ ಮಿತ್ರ. ಬಿಹಾರ ಚುನಾವಣೆಯಲ್ಲಿ ಕಾಂಗ್ರೆಸ್- ಆರ್‌ಜೆಡಿ ಜೊತೆಗೆ ಸ್ಪರ್ಧಿಸಿದೆ. ಕೇಂದ್ರದ ಯುಪಿಎ ಮೈತ್ರಿಕೂಟದಲ್ಲೂ ಜೊತೆಗಿದ್ದೇವೆ. ಅಸ್ಸಾಂ ಚುನಾವಣೆ ಬಗ್ಗೆ ಕಾಂಗ್ರೆಸ್ ಹಾಗೂ ಆಲ್ ಇಂಡಿಯಾ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ ನಾಯಕ ಬದ್ರುದ್ದೀನ್ ಅಜ್ಮಲ್ ಜೊತೆಗೂ ಮಾತುಕತೆ ನಡೆಸಿದ್ದೇವೆ. ಮೈತ್ರಿ ಅಥವಾ ಎಷ್ಟು ಸ್ಥಾನಗಳಲ್ಲಿ ಸ್ಪರ್ಧಿಸಬೇಕು ಎಂಬ ಬಗ್ಗೆ ಶೀಘ್ರ ತೀರ್ಮಾನ ಕೈಗೊಳ್ಳುತ್ತೇವೆ' ಎಂದು ಅವರು ಹೇಳಿದ್ದಾರೆ.

ಅಸ್ಸಾಂ ವಿಧಾನಸಭೆ ಚುನಾವಣೆಯು ಮೂರು ಹಂತಗಳಲ್ಲಿ ಮಾರ್ಚ್ 27, ಏಪ್ರಿಲ್ 1 ಹಾಗೂ ಏಪ್ರಿಲ್ 6ರಂದು ನಡೆಯಲಿದೆ.

'ಎಲ್ಲ ಲಿಂಗಾಯತರಿಗೆ 2ಎ ಮೀಸಲಾತಿಯ ಚಿಂತನೆ'

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ಮೀಸಲಾತಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಪಂಚಮಸಾಲಿ, ವಾಲ್ಮೀಕಿ, ಕುರುಬ ಜನಾಂಗದವರು ಹೋರಾಟ ನಡೆಸುತ್ತಿದ್ದಾರೆ. ಲಿಂಗಾಯತ ಎಲ್ಲ ಜಾತಿಗಳನ್ನು 2ಎಗೆ ಸೇರಿಸುವ ಚಿಂತನೆ ಇದೆ. ಹಿಂದುಳಿದ ವರ್ಗದ ಆಯೋಗದಿಂದ ವರದಿ ಪಡೆದು ಸಂಪುಟದಲ್ಲಿ ಚರ್ಚೆ ನಡೆಸಿ ಮೀಸಲಾತಿ ನೀಡಲಾಗುವುದು' ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ ನಿರಾಣಿ ಶನಿವಾರ ಹೇಳಿದರು.

'ವಿಜಯಾನಂದ ಕಾಶಪ್ಪನವರು ರಾಷ್ಟ್ರೀಯ ಮಟ್ಟದ ನಾಯಕರು. ಅವರಷ್ಟು ದೊಡ್ಡ ನಾಯಕರು ನಾವಲ್ಲ. ಮೀಸಲಾತಿಗೆ ನಾವು ಮುಂದಾಳತ್ವ ವಹಿಸುವುದಿಲ್ಲ. ಅದನ್ನು ಅವರಿಗೆ ಬಿಟ್ಟಿದ್ದೇವೆ. ದೇವರು ಅವರಿಗೆ ಎಷ್ಟು ಶಕ್ತಿ, ಸಾಮರ್ಥ್ಯ ನೀಡಿದ್ದಾನೆಯೋ ಅಷ್ಟು ಹೋರಾಟ ಮಾಡಲಿ. ಸರ್ಕಾರದ ಭಾಗವಾಗಿ ಕೇವಲ ಪಂಚಮಸಾಲಿ ಸಮಾಜಕ್ಕಲ್ಲ, ಒಟ್ಟಾರೆ ವೀರ-ಶೈವ-ಲಿಂಗಾಯತ ಸಮಾಜಕ್ಕೆ ಏನು ಮಾಡಬೇಕೋ ಅದನ್ನು ಮಾಡಲಿದ್ದೇವೆ' ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ನೈಜೀರಿಯಾ: ವಸತಿ ಶಾಲೆಯ 317 ವಿದ್ಯಾರ್ಥಿನಿಯರ ಅಪಹರಣ

ಲಾಗೋಸ್(ಎಪಿ, ಎಎಫ್‌ಪಿ): 'ಉತ್ತರ ನೈಜೀರಿಯಾದ ವಸತಿ ಶಾಲೆಯೊಂದರಿಂದ 317 ಬಾಲಕಿಯರನ್ನು ಬಂದೂಕುಧಾರಿಗಳು ಶುಕ್ರವಾರ ಅಪಹರಿಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಜಂಗೆಬೆ ಪಟ್ಟಣದಲ್ಲಿರುವ ಬಾಲಕಿಯರ ಸರ್ಕಾರಿ ಕಿರಿಯ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿನಿಯರ ಸಾಮೂಹಿಕ ಅಪಹರಣ ಮಾಡಲಾಗಿದ್ದು, ಪೊಲೀಸ್ ಮತ್ತು ಮಿಲಿಟರಿ ಪಡೆ ವಿದ್ಯಾರ್ಥಿನಿಯರ ರಕ್ಷಣಾ ಕಾರ್ಯಾಚರಣೆಯನ್ನು ಆರಂಭಿಸಿದೆ' ಎಂದು ಪೊಲೀಸ್ ವಕ್ತಾರ ಮೊಹಮ್ಮದ್ ಶೇಷು ಮಾಹಿತಿ ನೀಡಿದ್ದಾರೆ.

'ನನ್ನ 10 ಮತ್ತು 13 ವರ್ಷದ ಮಕ್ಕಳಿಬ್ಬರನ್ನೂ ಅಪಹರಿಸಲಾಗಿದೆ. ಶಾಲೆಯ ಹತ್ತಿರದಲ್ಲಿ ದೊಡ್ಡ ಪ್ರಮಾಣದಲ್ಲಿ ಸೇನಾ ಪಡೆಯಿದ್ದರೂ, ಬಾಲಕಿಯರನ್ನು ರಕ್ಷಿಸಲು ಅವರಿಗೆ ಸಾಧ್ಯವಾಗಿಲ್ಲ ಎಂಬುದು ನಿರಾಶಾದಾಯಕವಾಗಿದೆ' ಎಂದು ಪೋಷಕರೊಬ್ಬರು ಹೇಳಿದರು.

'ಎಲ್ಲಾ ಮಕ್ಕಳನ್ನು ಸುರಕ್ಷಿತವಾಗಿ ಅವರ ಪೋಷಕರ ಬಳಿ ತಲುಪಿಸುವುದು ನಮ್ಮ ಮೂಲ ಉದ್ದೇಶವಾಗಿದೆ. ಹಣಕ್ಕಾಗಿ ಮುಗ್ಧ ಶಾಲಾ ಮಕ್ಕಳನ್ನು ಅಪಹರಿಸಿ, ಬೆದರಿಕೆಯೊಡ್ಡುವ ಬಂಡುಕೋರರಿಗೆ ನಾವು ಹೆದರುವುದಿಲ್ಲ' ಎಂದು ನೈಜೀರಿಯಾದ ಅಧ್ಯಕ್ಷ ಮೊಹಮ್ಮದು ಬುಹಾರಿ ಅವರು ತಿಳಿಸಿದರು.

ಈ ಕೃತ್ಯಕ್ಕೆ ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಅವರು ಖಂಡನೆ ವ್ಯಕ್ತಪಡಿಸಿದ್ದು, ' ಆದಷ್ಟು ಬೇಗ ಬಾಲಕಿಯರನ್ನು ಸುರಕ್ಷಿತವಾಗಿ ಬಿಡುಗಡೆಗೊಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಕೇಂದ್ರದ ವಿರುದ್ಧ ಆರ್‌ಎಸ್‌ಎಸ್ ಅಂಗಸಂಸ್ಥೆ ಸರಣಿ ಆಂದೋಲನ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾರ್ವಜನಿಕ ವಲಯದ ಘಟಕಗಳಿಗೆ (ಪಿಎಸ್‌ಯುಎಸ್) ಬಂಡವಾಳ ಹಿಂತೆಗೆತ ನೀತಿ ಅನುಸರಿಸಿರುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಮಾರ್ಚ್ 15ರಿಂದ ನವೆಂಬರ್ 11ರವರೆಗೆ ಹಂತಹಂತವಾಗಿ ಆಂದೋಲನ ನಡೆಸುವುದಾಗಿ ಆರ್‌ಎಸ್‌ಎಸ್ ಅಂಗಸಂಸ್ಥೆ ಭಾರತೀಯ ಮಜ್ದೂರ್ ಸಂಘ (ಬಿಎಂಎಸ್) ಶನಿವಾರ ಪ್ರಕಟಿಸಿದೆ.

ಹೈದರಾಬಾದ್‌ನಲ್ಲಿ ಶುಕ್ರವಾರ ಮುಕ್ತಾಯಗೊಂಡ ಬಿಎಂಎಸ್‌ನ ಪಿಎಸ್‌ಯುಎಸ್ ಸಮನ್ವಯ ಸಮಿತಿಯ ಎರಡು ದಿನಗಳ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಮೊದಲ ಹಂತದಲ್ಲಿ ಉದ್ಯಮವಾರು ವಿಚಾರ ಸಂಕಿರಣಗಳು ಮಾರ್ಚ್ 15ರಿಂದ ಏಪ್ರಿಲ್ 14 ರವರೆಗೆ ನಡೆಯಲಿದ್ದು, ಮೇ ತಿಂಗಳಲ್ಲಿ ಘಟಕ ಮಟ್ಟದ ಕಾರ್ಯಾಗಾರಗಳು, ಜೂನ್ 14ರಿಂದ ಜೂನ್ 20ರವರೆಗೆ ಸಾಮೂಹಿಕ ಜಾಗೃತಿ ಅಭಿಯಾನ ನಡೆಯಲಿದೆ.

ನಾಲ್ಕನೇ ಹಂತದ ಆಂದೋಲನವಾಗಿ ಜುಲೈ 15ರಂದು ಘಟಕ ಮಟ್ಟದ ಸಾಮೂಹಿಕ ಧರಣಿ, ಐದನೇ ಹಂತವಾಗಿ ಸೆ.20 ಮತ್ತು ಸೆ.30ರ ನಡುವೆ ರಾಜ್ಯಮಟ್ಟದ ಸಮಾವೇಶಗಳನ್ನು ನಡೆಸಲಾಗುತ್ತಿದೆ. ಆರನೇ ಮತ್ತು ಅಂತಿಮ ಹಂತದ ಆಂದೋಲನ ನವೆಂಬರ್ 23ರಂದು ನಡೆಯಲಿದ್ದು, ಎಲ್ಲ ಸಾರ್ವಜನಿಕ ವಲಯಗಳ ಘಟಕಗಳ ಕಾರ್ಪೊರೇಟ್ ಕಚೇರಿಗಳ ಎದುರು ಬಿಎಂಎಸ್ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಿದೆ.

ಇದಕ್ಕಾಗಿ ಬ್ಯಾಂಕಿಂಗ್, ವಿಮೆ, ಟೆಲಿಕಾಂ, ತೈಲ, ವಿದ್ಯುತ್, ಕಲ್ಲಿದ್ದಲು, ನಾನ್‌ಕೋಲ್, ಎಂಜಿನಿಯರಿಂಗ್, ರಕ್ಷಣಾ ಉತ್ಪಾದನಾ ಘಟಕಗಳು, ರೈಲ್ವೆ, ಅಂಚೆ, ಬಂದರುಗಳು, ಶಿಪ್‌ಯಾರ್ಡ್‌ಗಳು, ವಿಮಾನ ನಿಲ್ದಾಣಗಳು ಮತ್ತು ಏರ್ ಇಂಡಿಯಾ ಕ್ಷೇತ್ರದಲ್ಲಿನ ಸಿಪಿಎಸ್‌ಇಗಳನ್ನು ಒಳಗೊಂಡ ಸಮನ್ವಯ ಸಮಿತಿಯ ವಿಶೇಷ ಸಭೆ ನಡೆಸಲು ಬಿಎಂಎಸ್ ನಿರ್ಧರಿಸಿದೆ.

ಸಮನ್ವಯ ಸಮಿತಿ ಸಭೆಯಲ್ಲಿ ಬಿಎಂಎಸ್ ಅಧ್ಯಕ್ಷ ಎಚ್.ಜೆ. ಪಾಂಡ್ಯ, ಪ್ರಧಾನ ಕಾರ್ಯದರ್ಶಿ ಬಿನಾಯ್ ಕುಮಾರ್ ಸಿನ್ಹಾ ಮತ್ತು ಸಂಘಟನಾ ಕಾರ್ಯದರ್ಶಿ ಬಿ. ಸುರೇಂದ್ರನ್ ಪಾಲ್ಗೊಂಡಿದ್ದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟೀಕೆ

ನರೇಂದ್ರ ಮೋದಿಗೆ ಚೀನಾ ಭಯ

ತೂತುಕುಡಿ, ತಮಿಳುನಾಡು (ಪಿಟಿಐ): ಚೀನಾ- ಭಾರತದ ಗಡಿ ಸಂಘರ್ಷಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, 'ಪೂರ್ವ ನೆರೆಯ ದೇಶಕ್ಕೆ ಮೋದಿ ಹೆದರಿದ್ದಾರೆ' ಎಂದು ಆರೋಪಿಸಿದರು.

ಏಪ್ರಿಲ್ 6ಕ್ಕೆ ತಮಿಳುನಾಡಿನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಅವರು ಹಮ್ಮಿಕೊಂಡಿರುವ ಮೂರು ದಿನಗಳ ಪ್ರವಾಸಕ್ಕೆ ಇಲ್ಲಿ ಶನಿವಾರ ಚಾಲನೆ ನೀಡಿ, ನಂತರ ವಕೀಲರೊಂದಿಗೆ ನಡೆದ ಸಂವಾದದಲ್ಲಿ ಮಾತನಾಡಿದರು.



ತೂತುಕುಡಿಯಲ್ಲಿ ಶನಿವಾರ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿಧಾನಸಭಾ ಚುನಾವಣಾ ಪ್ರಚಾರ ರ‍್ಯಾಲಿ ನಡೆಸಿದರು. (ಪಿಟಿಐ ಚಿತ್ರ)

ಪ್ಯಾಂಗಾಂಗ್ ಸರೋವರ ಪ್ರದೇಶಗಳ ಉತ್ತರ ಮತ್ತು ದಕ್ಷಿಣ ದಂಡೆಗಳಿಂದ ಸೇನಾಪಡೆಗಳು, ಶಸ್ತ್ರಾಸ್ತ್ರಗಳು ಮತ್ತು ಮಿಲಿಟರಿ ಯಂತ್ರೋಪಕರಣಗಳನ್ನು ಹಿಂತೆಗೆದುಕೊಳ್ಳುವ ಪ್ರಕ್ರಿಯೆಯು ಪೂರ್ಣಗೊಳ್ಳುವ ಮೂಲಕ ಪೂರ್ವ ಲಡಾಖ್‌ನಲ್ಲಿ ಗಡಿ ಸಂಘರ್ಷ ನಿಷ್ಕ್ರಿಯಗೊಳಿಸುವ ಮೊದಲು, ಚೀನಿಯರು ಅತಿಕ್ರಮಣ ಆಲೋಚನೆಯನ್ನು ದೋಕಲಾದಲ್ಲಿ ಪರೀಕ್ಷೆಗೆ (2017ರಲ್ಲಿ) ಒಳಪಡಿಸಿದ್ದರು ಎಂದು ಅವರು ಹೇಳಿದರು.

'ಚೀನೀಯರು ನಮ್ಮ ದೇಶದ ಪ್ರಮುಖ ಕಾರ್ಯತಂತ್ರದ ಪ್ರದೇಶಗಳನ್ನು ಅತಿಕ್ರಮಿಸಿಕೊಂಡಿದ್ದಾರೆ. ಭಾರತದ ಪ್ರತಿಕ್ರಿಯೆ ನೋಡಲು ತಮ್ಮ ಅತಿಕ್ರಮಣದ ಆಲೋಚನೆಯನ್ನು ಅವರು ಮೊದಲು ದೋಕಲಾದಲ್ಲಿ ಪರೀಕ್ಷಿಸಿದ್ದರು. ಭಾರತ ಪ್ರತಿಕ್ರಿಯಿಸುವುದಿಲ್ಲ ಎನ್ನುವುದನ್ನು ಅರಿತು, ಅದನ್ನು ಲಡಾಖ್‌ನಲ್ಲಿ ಮತ್ತೊಮ್ಮೆ ಪರೀಕ್ಷಿಸಿದ್ದಾರೆ. ಮುಂದೆ ಅವರು ಅದನ್ನು ಅರುಣಾಚಲಪ್ರದೇಶದ ಮೇಲೂ ಪರೀಕ್ಷಿಸಲಿದ್ದಾರೆ' ಎಂದು ರಾಹುಲ್ ಹೇಳಿದ್ದಾರೆ.

ಗಡಿ ಸಂಘರ್ಷದ ಬಗ್ಗೆ ಸುದೀರ್ಘವಾಗಿ ಮಾತನಾಡಿದ ರಾಹುಲ್, 'ಚೀನಾ ಅತಿಕ್ರಮಣ ನಡೆಸಿದಾಗ ಪ್ರಧಾನಿ ಮೋದಿಯವರ ಮೊದಲ ಪ್ರತಿಕ್ರಿಯೆ 'ಭಾರತದೊಳಕ್ಕೆ ಯಾರೂ ಬಂದಿಲ್ಲ' ಎನ್ನುವುದಾಗಿತ್ತು. ಇದರಿಂದಾಗಿ ಭಾರತದ ಪ್ರಧಾನಿ ನಮಗೆ ಹೆದರಿಕೊಂಡಿದ್ದಾರೆ ಎನ್ನುವ ಸೂಚನೆ ಚೀನಾದವರಿಗೆ ಸಿಕ್ಕಿತು. ಭಾರತದ ಪ್ರಧಾನಿ ನಮ್ಮ ಎದುರು ನಿಲ್ಲಲು ಹೆದರುತ್ತಾರೆ ಎನ್ನುವುದನ್ನು ಅವರು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಅದೇ ಆಧಾರದ ಮೇಲೆ ಚೀನಾದವರು ಈಗಲೂ ಮಾತುಕತೆ ನಡೆಸಿದ್ದಾರೆ' ಎಂದು ಟೀಕಿಸಿದರು.

'ನನ್ನ ಮಾತನ್ನು ಚೆನ್ನಾಗಿ ನೆನಪಿಟ್ಟುಕೊಳ್ಳಿ, ಡೆಪ್ಸಾಂಗ್‌ನಲ್ಲಿರುವ ನಮ್ಮ ನೆಲ ಅತ್ಯಂತ ಮುಖ್ಯವಾದುದು. ಇದು ಚೀನಾದವರು ಆಕ್ರಮಿಸಿಕೊಂಡಾಗಿದೆ. ಇದು ನಮಗೆ ಮರಳಿ ಸಿಗದು, ನಮ್ಮ ಪ್ರಧಾನಿ ಕೂಡ ಆ ಭೂಮಿಯನ್ನು ಮರಳಿ ಪಡೆಯುವುದಿಲ್ಲ. ಎಲ್ಲ ಸಮಸ್ಯೆಗಳನ್ನೂ ಸರಿಪಡಿಸಿದ್ದೇವೆ ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ ಅಷ್ಟೇ. ಆದರೆ, ನಮ್ಮ ದೇಶ ಆ ಪ್ರದೇಶವನ್ನು ಕಳೆದುಕೊಳ್ಳಲಿದೆ' ಎಂದು ಹೇಳಿದರು.

ಅಯೋಧ್ಯೆಯಲ್ಲಿ ವೆಂಕಟೇಶ್ವರ ಮಂದಿರ ಟಿಟಿಡಿ ಪ್ರಸ್ತಾವ

ಹೈದರಾಬಾದ್: ರಾಮಮಂದಿರ ಟ್ರಸ್ಟ್‌ನವರು ಅಯೋಧ್ಯೆಯಲ್ಲಿ ಜಾಗ ಮಂಜೂರು ಮಾಡಿದರೆ, ಅಲ್ಲಿ ವೆಂಕಟೇಶ್ವರ ದೇವಸ್ಥಾನ ನಿರ್ಮಿಸುವ ಪ್ರಸ್ತಾವಕ್ಕೆ ತಿರುಮಲ ತಿರುಪತಿ ದೇವಸ್ಥಾನದ ಆಡಳಿತ ಮಂಡಳಿಯು ಶನಿವಾರ ಅನುಮೋದನೆ ನೀಡಿದೆ.

ದೇವಸ್ಥಾನ ನಿರ್ಮಾಣ ಸಾಧ್ಯವಾಗದಿದ್ದಪಕ್ಷದಲ್ಲಿ, ಪ್ರವಾಸಿ ಸೌಲಭ್ಯಗಳನ್ನು ಹೊಂದಿರುವ ಭಜನಾ ಮಂದಿರವೊಂದನ್ನಾದರೂ ನಿರ್ಮಿಸಲು ಟಿಟಿಡಿ ಆಡಳಿತ ಮಂಡಳಿ ಆಸಕ್ತಿ ವ್ಯಕ್ತಪಡಿಸಿದೆ. ಮುಂಬೈ ಹಾಗೂ ಜಮ್ಮುವಿನಲ್ಲಿ ಶ್ರೀನಿವಾಸ ದೇವಸ್ಥಾನ ನಿರ್ಮಾಣಕ್ಕೆ ಮಂಡಳಿಯು ಈಗಾಗಲೇ ತೀರ್ಮಾನಿಸಿದ್ದು ಅದರ ಭೂಮಿಪೂಜೆಯ ಸಿದ್ಧತೆಗಳು ನಡೆಯುತ್ತಿದೆ.

ಮಂಡಳಿಯ ಅಧ್ಯಕ್ಷ ವೈ. ವಿ. ಸುಬ್ಬಾರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಸಭೆಯಲ್ಲಿ ಕೆಲವು ಪ್ರಮುಖ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. 2021–22ನೇ ಸಾಲಿಗೆ ₹2937.82 ಕೋಟಿ ಬಜೆಟ್‌ಗೆ ಮಂಡಳಿ ಅನುಮೋದನೆ ನೀಡಿದೆ. 2020–21ನೇ ಸಾಲಿಗೆ ಹೋಲಿಸಿದರೆ ಈ ಬಾರಿ ₹ಬಜೆಟ್ ಗಾತ್ರವು ₹373 ಕೋಟಿಯಷ್ಟು ಕುಗ್ಗಿದೆ.

ಯಥಾಸ್ಥಿತಿಗೆ ಮರಳಿದ ದೇಗುಲಗಳು

ಪ್ರಜಾವಾಣಿ ವಾರ್ತೆ

ಮೈಸೂರು: ಲಾಕ್‌ಡೌನ್ ತೆರವುಗೊಳಿಸಿ ದರ್ಶನಕ್ಕೆ ಅವಕಾಶ ಮಾಡಿಕೊಟ್ಟ ಬಳಿಕ, ಕೋವಿಡ್–19 ಪಿಡುಗಿನ ಆತಂಕ ಲೆಕ್ಕಿಸದೇ ರಾಜ್ಯದ ಪ್ರಮುಖ ದೇವಾಲಯಗಳಿಗೆ ಭಕ್ತಸಾಗರ ಹರಿದುಬರುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ, ಧರ್ಮಸ್ಥಳ, ಮೈಸೂರಿನ ಚಾಮುಂಡೇಶ್ವರಿ ದೇಗುಲ, ನಂಜನಗೂಡಿನ ಶ್ರೀಕಂಠೇಶ್ವರ ದೇಗುಲ, ಚಾಮರಾಜನಗರದ ಮಹದೇಶ್ವರ ಬೆಟ್ಟ, ಉತ್ತರ ಕರ್ನಾಟಕದ ಪ್ರಮುಖ ದೇಗುಲಗಳ ಮುಂದೆ ಸರತಿ ಸಾಲು ಸಾಮಾನ್ಯ ದೃಶ್ಯವಾಗುತ್ತಿದೆ. ಪ್ರಸಿದ್ಧ ದೇಗುಲಗಳಿಗೆ ಹೊರರಾಜ್ಯಗಳ ಭಕ್ತರೂ ಭೇಟಿ ನೀಡುತ್ತಿದ್ದಾರೆ. ಕೋವಿಡ್ ಎರಡನೇ ಅಲೆಯ ಆತಂಕ ಇದ್ದರೂ ಮಾರ್ಗಸೂಚಿಗಳ ಪಾಲನೆ ಅಷ್ಟಕ್ಕಷ್ಟೇ ಇದೆ. ಸೋಂಕು ಪ್ರಸರಣ ಮೊದಲಿನಂತೆ ಇಲ್ಲ ಎಂಬ ಮನೋಭಾವ ಕಾಣುತ್ತಿದೆ.

ಕಾಣಿಕೆ ಮಾತ್ರ ಹಿಂದಿನಷ್ಟು ಸಂಗ್ರಹವಾಗುತ್ತಿಲ್ಲ ಎಂಬುದು ದೇಗುಲದ ಆಡಳಿತಾಧಿಕಾರಿಗಳ ಮಾತು. ಸೇವೆಗಳು ಆರಂಭವಾದರೂ, ಪ್ರಮುಖ ಜಾತ್ರೆಗಳನ್ನು ಇನ್ನೂ ಪೂರ್ಣ ಪ್ರಮಾಣದಲ್ಲಿ ಆಚರಿಸದಿರುವುದು ಇದಕ್ಕೊಂದು ಕಾರಣ. ಹೀಗಾಗಿ,ದೇಗುಲಗಳ ಸುತ್ತಮುತ್ತಲಿನ ವ್ಯಾಪಾರವೂ ಚೇತರಿಸಿಕೊಂಡಿಲ್ಲ. ಲಾಕ್‌ಡೌನ್ ಸಂಕಷ್ಟದ ಬಳಿಕ ಜನರು ಮೊದಲಿನ ರೀತಿ ಖರ್ಚು ಮಾಡುತ್ತಿಲ್ಲ. ಇದರಿಂದ ಹಣದ ಹರಿವುತಗ್ಗಿದೆ.

ದೇವರ ದರ್ಶನ, ಪೂಜಾ ಸೇವೆಗಳು, ಪ್ರಸಾದ–ತೀರ್ಥ ವಿತರಣೆಗೆ ಮುಜರಾಯಿ ಇಲಾಖೆ ಈಗಾಗಲೇ ಅವಕಾಶ ಕಲ್ಪಿಸಿದೆ. ಬಹುತೇಕ ದೇಗುಲಗಳಲ್ಲಿ, ಮಠಗಳಲ್ಲಿ ದಾಸೋಹ ಆರಂಭವಾಗಿದೆ. ಆದಾಯಕ್ಕೆ ಪೆಟ್ಟು ಬಿದ್ದಿದ್ದರೂ ಬಹುತೇಕ ಕಡೆ ಸೇವಾ ಶುಲ್ಕ, ಪ್ರಸಾದ ಶುಲ್ಕದಲ್ಲಿ ಯಾವುದೇ ಏರಿಕೆ ಮಾಡಿಲ್ಲ. ಹೀಗಾಗಿ ಭಕ್ತರು ನಿಟ್ಟುಸಿರು ಬಿಡುವಂತಾಗಿದೆ.


ನಾಯಕನಹಟ್ಟಿ ಗುರು ತಿಪ್ಪೇರುದ್ರ ಸ್ವಾಮಿ ಒಳಮಠದ ರಾಜಗೋಪುರ

ಹೆಚ್ಚು ಕಾಣಿಕೆ ಸಂಗ್ರಹವಾಗುವ ರಾಜ್ಯದ ದೇಗುಲಗಳಲ್ಲಿ ಒಂದಾದ ಮಹದೇಶ್ವರಸ್ವಾಮಿ ದೇವಾಲಯಕ್ಕೆ ಕೋವಿಡ್‌ನಿಂದಾಗಿ ಕಳೆದ ವರ್ಷ ₹ 50 ಕೋಟಿ ಆದಾಯ ಕೊರತೆಯಾಗಿದೆ. ಚಾಮುಂಡೇಶ್ವರಿ ದೇಗುಲದಲ್ಲಿ 2020ರ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ₹ 4.54 ಕೋಟಿ ಕಾಣಿಕೆ ಸಂಗ್ರಹವಾಗಿದೆ. ಆದರೆ 2019ರ ಇದೇ ಅವಧಿಯಲ್ಲಿ ದುಪ್ಪಟ್ಟು ಹಣ (₹ 8.34 ಕೋಟಿ) ಸಂಗ್ರಹವಾಗಿತ್ತು.

‘ಡಿಸೆಂಬರ್‌ವರೆಗೆ ಭಕ್ತರ ಸಂಖ್ಯೆ ಕಡಿಮೆ ಇದ್ದ ಕಾರಣ ಆದಾಯ ತಗ್ಗಿದೆ. ಕಳೆದ ತಿಂಗಳಿನಿಂದ ನಿಧಾನವಾಗಿ ಚೇತರಿಕೆ ಕಾಣುತ್ತಿದ್ದು, ಮೊದಲಿನ ಸ್ಥಿತಿಗೆ ಬರುತ್ತಿದೆ’ ಎಂದು ಹೇಳುತ್ತಾರೆ ಚಾಮುಂಡೇಶ್ವರಿ ದೇಗುಲದ ಕಾರ್ಯನಿರ್ವಾಹಕ ಅಧಿಕಾರಿ ಯತಿರಾಜ್.

ಮಂಡ್ಯ ಜಿಲ್ಲೆಯ ಮೇಲುಕೋಟೆ ಚೆಲುವನಾರಾಯಣ ಸ್ವಾಮಿ ದೇಗುಲಕ್ಕೆ ನಿರೀಕ್ಷೆಗೂ ಮೀರಿ ಜನ ಬರುತ್ತಿದ್ದಾರೆ. ಮುಂಬರುವ ವೈರಮುಡಿ ಬ್ರಹ್ಮೋತ್ಸವಕ್ಕೆ 3 ಲಕ್ಷಕ್ಕೂ ಅಧಿಕ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ವರ್ಷಕ್ಕೊಮ್ಮೆ ದರ್ಶನ ಕರುಣಿಸುವ ಹಾಸನದ ಅಧಿದೇವತೆ ಹಾಸನಾಂಬೆ ದರ್ಶನೋತ್ಸವದಲ್ಲಿ 2020ರಲ್ಲಿ ದೇವಾಲಯಗಳ ಹುಂಡಿಯಲ್ಲಿ ಕೇವಲ ₹ 22.77 ಲಕ್ಷ ಹಣ ಸಂಗ್ರಹವಾಗಿದೆ. 2019ರಲ್ಲಿ ₹ 1 ಕೋಟಿಗೂ ಹೆಚ್ಚು ಸಂಗ್ರಹವಾಗಿತ್ತು!

ಸಹಜ ಸ್ಥಿತಿಗೆ: ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಶರಾವತಿ ಹಿನ್ನೀರಿನ ಸಿಗಂದೂರು ದೇವಾಲಯ ಸಹಜ ಸ್ಥಿತಿಗೆ ಮರಳಿದೆ. ಕೋವಿಡ್ ಕಾರಣದಿಂದ ಉಡುಪಿಯ ಕೃಷ್ಣಮಠದಲ್ಲಿ ಸೇವೆಗಳ ದರ ಕಡಿಮೆ ಮಾಡಲಾಗಿದೆ ಎಂದು ಮಠದ ವ್ಯವಸ್ಥಾಪಕ ಗೋವಿಂದರಾಜು ಹೇಳುತ್ತಾರೆ.


‘ಬಫೆ’ ವ್ಯವಸ್ಥೆ: ಶೃಂಗೇರಿಯ ಶಾರದಾಂಬೆ, ಹೊರನಾಡಿನ ಅನ್ನಪೂರ್ಣೇಶ್ವರಿ ಸನ್ನಿಧಿಗೆ ಭಕ್ತರ ಸಂಖ್ಯೆ ಹೆಚ್ಚಿದ್ದು ಹೊರನಾಡಿನಲ್ಲಿ, ಭೋಜನಕ್ಕೆ ‘ಬಫೆ’ ವ್ಯವಸ್ಥೆ ಮಾಡಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯದಲ್ಲಿ ಭಕ್ತಾದಿಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ.

‘ಸಪ್ತಪದಿ ಯೋಜನೆಯ ಉಚಿತ ಸಾಮೂಹಿಕ ವಿವಾಹದಲ್ಲಿ 47 ನವ ದಂಪತಿ ಹೆಸರು ನೋಂದಣಿ ಮಾಡಿಕೊಳ್ಳುವ ಮೂಲಕ ರಾಜ್ಯದ ಮುಜರಾಯಿ ದೇವಾಲಯಗಳಲ್ಲೇ ಹೆಚ್ಚಿನ ಸಂಖ್ಯೆಯ ಜೋಡಿಗಳು ಘಾಟಿ ದೇವಾಲಯದಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ’ ಎಂದು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಎನ್. ಕೃಷ್ಣಪ್ಪ ಹೇಳುತ್ತಾರೆ.


ಭಕ್ತರ ದಾಂಗುಡಿ: ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಎಡೆಯೂರು ಸಿದ್ಧಲಿಂಗೇಶ್ವರ ಕ್ಷೇತ್ರ, ತುಮಕೂರಿನ ಸಿದ್ಧಗಂಗಾ ಮಠ, ಕೋಲಾರ ಜಿಲ್ಲೆಯಲ್ಲಿ ಮಾಲೂರು ತಾಲ್ಲೂಕಿನ ಚಿಕ್ಕತಿರುಪತಿಯ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ, ಶಿರಸಿಯ ಮಾರಿಕಾಂಬಾ ದೇವಾಲಯ, ಭಟ್ಕಳದ ಮುರ್ಡೇಶ್ವರ ದೇವಸ್ಥಾನ, ಹುಬ್ಬಳ್ಳಿಯ ಸಿದ್ಧಾರೂಢ ಮಠ, ಮೂರುಸಾವಿರ ಮಠ ಹಾಗೂ ಧಾರವಾಡದ ಮುರುಘಾ ಮಠಗಳಿಗೆ ಬರುವ ಭಕ್ತರ ಪ್ರಮಾಣ ಹಿಂದಿನಷ್ಟು ಇಲ್ಲ ಎಂದು ಮಠದ ಅಧಿಕಾರಿಗಳು ಹೇಳುತ್ತಾರೆ. ಕಲಬುರ್ಗಿಯ ಶರಣಬಸವೇಶ್ವರ ದೇವಸ್ಥಾನ, ಕೊಪ್ಪಳ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ತಾಣಗಳಾದ ಅಂಜನಾದ್ರಿ ಹಾಗೂ ಹುಲಿಗಿಗೆ ಭೇಟಿ ನೀಡುತ್ತಿರುವ ಭಕ್ತರ ಸಂಖ್ಯೆ ಕ್ರಮೇಣ ಹೆಚ್ಚಳವಾಗಿದೆ. ಬೀದರ್ ನಗರದ ಹೊರವಲಯದಲ್ಲಿರುವ ಧಾರ್ಮಿಕ ಕ್ಷೇತ್ರ ನರಸಿಂಹ ಝರಣಾಕ್ಕೆ ಇನ್ನೂ ಪ್ರವೇಶ ನೀಡುತ್ತಿಲ್ಲ.

ಆದರೆ, ರಾಜ್ಯದ ದಕ್ಷಿಣ ಭಾಗದಲ್ಲಿ ಕೇರಳದಿಂದ ಬರುವ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿದ್ದರೆ; ಉತ್ತರದಲ್ಲಿ ಮಹಾರಾಷ್ಟ್ರದಿಂದ ಬರುವ ಯಾತ್ರಿಕರ ಸಂಖ್ಯೆ ಕ್ಷೀಣಿಸಿದೆ.

ಮೈಸೂರು ಅರಮನೆಗೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ



ಬಂಡೀಪುರ ರಾಷ್ಟ್ರೀಯ ಉದ್ಯಾನಕ್ಕೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ



ಆದಾಯ ನಷ್ಟ ಸರಿದೂಗಿಸಲು ಕಸರತ್ತು

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯದ ಬಹುತೇಕ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಕಲರವ ಕೇಳಿ ಬರುತ್ತಿದೆ. ಜನವರಿಯಿಂದ ಪ್ರವಾಸಿಗರ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದು, ಎಲ್ಲಾ ರೀತಿಯ ಚಟುವಟಿಕೆಗಳು ಪುನರಾರಂಭವಾಗಿವೆ.

ಕೋವಿಡ್‌ನಿಂದಾಗಿ ಡಿಸೆಂಬರ್‌ವರೆಗೆ ಅನುಭವಿಸಿದ್ದ ಆದಾಯ ನಷ್ಟವನ್ನು ಸರಿದೂಗಿಸುವುದು ಹೇಗೆಂಬ ಚಿಂತೆ ಪ್ರವಾಸಿ ತಾಣಗಳ ಆಡಳಿತಗಾರರನ್ನು ಕಾಡುತ್ತಿದೆ. ಕೆಲವರು ಹಿಂದಿನ ಠೇವಣಿಯನ್ನು ಬಳಸಿಕೊಂಡು ನಿರ್ವಹಣೆ ಮಾಡುತ್ತಿದ್ದಾರೆ.

ಕೋವಿಡ್‌ನಿಂದಾಗಿ ರಾಜ್ಯದ 9 ಮೃಗಾಲಯಗಳ ಆದಾಯಕ್ಕೆ ದೊಡ್ಡ ಹೊಡೆತ ಬಿದ್ದಿದೆ.

‘2020ರ ಜನವರಿ ಅಂತ್ಯಕ್ಕೆ ₹59 ಕೋಟಿ ಆದಾಯ ಬಂದಿತ್ತು. ಈ ಬಾರಿ 2021ರ ಜನವರಿ ಅಂತ್ಯಕ್ಕೆ ಕೇವಲ ₹17 ಕೋಟಿ ಆದಾಯ ಲಭಿಸಿದೆ. ಹಿಂದಿನ ಠೇವಣಿಯನ್ನು ಬಳಸಿಕೊಂಡು ನಿರ್ವಹಣೆ ಮಾಡುತ್ತಿದ್ದೇವೆ. ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಂಡಿಲ್ಲ’ ಎಂದು ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ ಹೇಳುತ್ತಾರೆ.

ಮೈಸೂರು ಅರಮನೆಗೆ ಭೇಟಿ ನೀಡುವವರ ಸಂಖ್ಯೆಯಲ್ಲಿ ಕಳೆದ ಎರಡು ತಿಂಗಳು ಚೇತರಿಕೆ ಕಂಡರೂ, ಹಿಂದಿನ ದಿನಗಳಿಗೆ ಹೋಲಿಸಿದರೆ ಶೇ 40ರಷ್ಟು ಪ್ರವಾಸಿಗರ ಕೊರತೆ ಇದೆ. ‘ಪ್ರವಾಸಿಗರು ನೀಡುವ ಪ್ರವೇಶ ಶುಲ್ಕವೇ ನಮ್ಮ ಆದಾಯ. ಡಿಸೆಂಬರ್‌ವರೆಗೆ ಪ್ರವಾಸಿಗರ ಭೇಟಿ ತೀರಾ ಕಡಿಮೆ ಇತ್ತು. ಈಗ ನಿಧಾನವಾಗಿ ಚೇತರಿಕೆ ಆಗುತ್ತಿದೆ’ ಎನ್ನುತ್ತಾರೆ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಮಣ್ಯ.

ಕೊಡಗಿನಲ್ಲೂ ಚೇತರಿಕೆ: ಕೊಡಗು ಜಿಲ್ಲೆಯ ರಾಜಾಸೀಟ್, ಅಬ್ಬಿ–ಇರ್ಪು ಜಲಪಾತ, ದುಬಾರೆ, ನಿಸರ್ಗಧಾಮ, ತಲಕಾವೇರಿ, ಭಾಗಮಂಡಲದಲ್ಲಿ ಎರಡು ತಿಂಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಕಂಡುಬರುತ್ತಿದ್ದಾರೆ. ಬಾಗಿಲು ಮುಚ್ಚಿದ್ದ ಹೋಂ ಸ್ಟೇಗಳಿಗೂ ಈಗ ಕಳೆಬಂದಿದೆ.

ಸಹಜ ಸ್ಥಿತಿಗೆ ಮರಳದ ಕೆಆರ್‌ಎಸ್: ಈಚೆಗಿನ ಆದಾಯ ಪರಿಶೀಲಿಸಿದರೆ ಮಂಡ್ಯ ಜಿಲ್ಲೆಯ ಕೆಆರ್‌ಎಸ್–ಬೃಂದಾವನ ಇನ್ನೂ ಸಹಜ ಸ್ಥಿತಿಗೆ ಮರಳಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಲಾಕ್‌ಡೌನ್‌ಗೂ ಮೊದಲು ಬೃಂದಾವನ ಪ್ರತಿ ತಿಂಗಳಿಗೆ ಸರಾಸರಿ ₹1.8 ಲಕ್ಷ ಆದಾಯ ಗಳಿಸುತ್ತಿತ್ತು. ಲಾಕ್‌ಡೌನ್ ತೆರವುಗೊಂಡ ನಂತರ ಕೇವಲ ಸರಾಸರಿ ₹50 ಸಾವಿರ ಆದಾಯ ಗಳಿಸಿದೆ.

ಹಾಸನ ಜಿಲ್ಲೆಯ ಬೇಲೂರು, ಹಳೇಬೀಡು, ಶ್ರವಣಬೆಳಗೊಳಕ್ಕೆ ನಿತ್ಯ ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಬೆಟ್ಟಕ್ಕೆ ವಾರಾಂತ್ಯದಲ್ಲಿ ಹೊರತುಪಡಿಸಿ ಉಳಿದ ದಿನಗಳಲ್ಲಿ ಬರುವ ಪ್ರವಾಸಿಗರ ಸಂಖ್ಯೆಯಲ್ಲಿ ಇಳಿಮುಖವಾಗಿದೆ.

ದಾವಣಗೆರೆ ಜಿಲ್ಲೆಯ ಪ್ರವಾಸಿ ತಾಣಗಳಾದ ಏಷ್ಯಾದ ಎರಡನೇ ಅತಿ ದೊಡ್ಡ ಕೆರೆ ಸೂಳೆಕೆರೆ, ಸಂತೇಬೆನ್ನೂರಿನ ಪುಷ್ಕರಣಿ, ದಾವಣಗೆರೆಯ ಗಾಜಿನಮನೆ ಯತ್ತ ಬರುವ ಪ್ರವಾಸಿಗರೂ ಹೆಚ್ಚಾಗುತ್ತಿದ್ದಾರೆ. ನಾಲ್ಕು ತಿಂಗಳ ಅವಧಿಯಲ್ಲಿ 2.58 ಲಕ್ಷ ಪ್ರವಾಸಿಗರು, ಪ್ರಸಿದ್ಧ ಜೋಗ ಜಲಪಾತ ವೀಕ್ಷಿಸಿದ್ದಾರೆ. ತ್ಯಾವರೆಕೊಪ್ಪದ ಹುಲಿ ಮತ್ತು ಸಿಂಹಧಾಮಕ್ಕೆ ಅಕ್ಟೋಬರ್‌ನಿಂದ ಇಲ್ಲಿಯವರೆಗೆ ಒಂದು ಲಕ್ಷ ಜನ ಭೇಟಿ ನೀಡಿದ್ದಾರೆ.

ಆದರೆ, ಕೇರಳ ಹಾಗೂ ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ಅಲ್ಲಿಂದ ರಾಜ್ಯಕ್ಕೆ ಬರುವ ಪ್ರವಾಸಿಗರಿಗೆ ಕೆಲವು ನಿರ್ಬಂಧಗಳನ್ನು ವಿಧಿಸಲಾಗಿದೆ. ಇದು, ಈಗಷ್ಟೇ ಚೇತರಿಸಿಕೊಳ್ಳುತ್ತಿರುವ ಪ್ರವಾಸೋದ್ಯಮದ ಆತಂಕಕ್ಕೆ ಕಾರಣವಾಗಿದೆ.


ಮೈಸೂರು ಅರಮನೆ ಮುಂಭಾಗದಲ್ಲಿ ಪ್ರವಾಸಿಗರು ಚಿತ್ರ: ಬಿ.ಆರ್.ಸವಿತಾ

ಮೂರು ಕಡೆ ರೆಸಾರ್ಟ್ ನಿರ್ಮಾಣ


ಕುಮಾರ್ ಪುಷ್ಕರ್

ಮೂರು ಕಡೆ ಹೊಸದಾಗಿ ರೆಸಾರ್ಟ್/ನೇಚರ್ ಕ್ಯಾಂಪ್ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಕೆಮ್ಮಣ್ಣುಗುಂಡಿಯಲ್ಲಿ ತೋಟಗಾರಿಕೆ ಇಲಾಖೆಯ ಅತಿಥಿ ಗೃಹಗಳನ್ನು ಪಡೆದು, ನಾವೇ ನಿರ್ವಹಣೆ ಮಾಡಲಿದ್ದೇವೆ. ಅಲ್ಲದೇ, ಬೆಳಗಾವಿ ಜಿಲ್ಲೆಯಲ್ಲೂ ಎರಡು ಕಡೆ ರೆಸಾರ್ಟ್ ಮಾಡಲಿದ್ದೇವೆ.

ಸದ್ಯ ರಾಜ್ಯದಲ್ಲಿ 24ಕಡೆ ರೆಸಾರ್ಟ್ ನಡೆಸುತ್ತಿದ್ದೇವೆ. ಇಂಟರ್‌ನೆಟ್ ಸಂಪರ್ಕ ಕಲ್ಪಿಸಿದ್ದು, ಸ್ವಚ್ಛತೆ ಹಾಗೂ ಸುರಕ್ಷತೆಗೆ ಒತ್ತು ನೀಡುತ್ತಿದ್ದೇವೆ. ಇಲ್ಲಿಯೇ ಉಳಿದು ಕೆಲಸ ಮಾಡಲು (ವರ್ಕ್ ಫ್ರಂ ಹೋಂ) ಕೂಡ ಸೌಲಭ್ಯ ಕಲ್ಪಿಸಿದ್ದೇವೆ.

ಕೋವಿಡ್‌ನಿಂದಾಗಿ 2020ರ ಮಾರ್ಚ್‌ನಿಂದ ಮೂರು ತಿಂಗಳ ಬುಕ್ಕಿಂಗ್ ರದ್ದಾಯಿತು. ಇದರಿಂದ ಆದಾಯಕ್ಕೆ ಪೆಟ್ಟು ಬಿತ್ತು. ಸೆಪ್ಟೆಂಬರ್ ಬಳಿಕ ಚೇತರಿಕೆ ಕಂಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಿದ್ದಾರೆ. ಅದರಲ್ಲೂ ಡಿಸೆಂಬರ್‌ನಲ್ಲಿ 40 ವರ್ಷಗಳಲ್ಲೇ ಅತಿ ಹೆಚ್ಚು ಆದಾಯ ಬಂದಿದೆ. ಕೋವಿಡ್ ಸಮಯದಲ್ಲಿ ಹಲವು ತಿಂಗಳು ಮನೆಯೊಳಗೇ ಇದ್ದ ಜನರು, ಕುಟುಂಬದ ಜೊತೆ ರೆಸಾರ್ಟ್‌ಗಳಿಗೆ ಬರುತ್ತಿದ್ದಾರೆ.

ಕುಮಾರ್ ಪುಷ್ಕರ್, ವ್ಯವಸ್ಥಾಪಕ ನಿರ್ದೇಶಕ
ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್

ಉತ್ತರದಲ್ಲೂ ಪ್ರವಾಸಿ ಚಟುವಟಿಕೆ ಚುರುಕು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಉತ್ತರ ಕರ್ನಾಟಕ ಭಾಗದ ಪ್ರಮುಖ ಪ್ರವಾಸೀ ತಾಣಗಳಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಪ್ರವಾಸೋದ್ಯಮ ಚೇತರಿಕೆ ಕಾಣುತ್ತಿದೆ.


ವಿಜಯಪುರದ ಪ್ರೇಕ್ಷಣೀಯ ಸ್ಥಳಗಳಾದ ಗೋಳಗುಮ್ಮಟ, ಬಾರಾ ಕಮಾನ್, ಇಬ್ರಾಹಿಂ ರೋಜಾ ಹಾಗೂ ಆಲಮಟ್ಟಿ ಜಲಾಶಯಕ್ಕೆ ಪ್ರವಾಸಿಗರ ಸಂಖ್ಯೆ ಹೆಚ್ಚಿದೆ. ಜನವರಿಯಲ್ಲಿ 68,953 ಭಾರತೀಯರು ಹಾಗೂ ಒಬ್ಬ ವಿದೇಶಿ ಪ್ರವಾಸಿಗ ಭೇಟಿ ನೀಡಿದ್ದು, ₹17.24 ಲಕ್ಷ ಆದಾಯ ಸಂಗ್ರಹವಾಗಿದೆ.

ವಿಜಯಪುರದ ಹೋಟೆಲ್ ಮಯೂರ ಆದಿಲ್‌ಶಾಹಿಯ ಶೇ 45 ಕೊಠಡಿಗಳು ಡಿಸೆಂಬರ್‌ನಲ್ಲಿ ಭರ್ತಿಯಾಗಿದ್ದವು. ಫೆಬ್ರುವರಿಯಲ್ಲಿ ಈ ಸಂಖ್ಯೆ ಶೇ 70ಕ್ಕೆ ತಲುಪಿದೆ ಎಂದು ಹೋಟೆಲ್ ವ್ಯವಸ್ಥಾಪಕ ಎಸ್.ಸುನೀಲ್‌ಕುಮಾರ್ ಹೇಳುತ್ತಾರೆ.

ಪ್ರವಾಸೋದ್ಯಮವನ್ನೇ ನೆಚ್ಚಿಕೊಂಡಿರುವ ಹಂಪಿ ಸುತ್ತಮುತ್ತಲಿನ ಹೋಟೆಲ್, ರೆಸಾರ್ಟ್, ಹೋಂ ಸ್ಟೇಗಳು ಚೇತರಿಸಿಕೊಂಡಿವೆ. ಮೊದಲಿನಷ್ಟು ಇಲ್ಲದಿದ್ದರೂ ವ್ಯಾಪಾರ ಹಳಿಗೆ ಮರಳುತ್ತಿದೆ.

ಉತ್ಸಾಹ ಮಾಯ: ಬಾಗಲಕೋಟೆ ಜಿಲ್ಲೆಯಲ್ಲಿ ಪ್ರತಿ ವರ್ಷ ನವೆಂಬರ್‌ನಿಂದ ಫೆಬ್ರುವರಿವರೆಗೆ ಪ್ರವಾಸಿಗರ ಸುಗ್ಗಿ. ಶಾಲಾ ಮಕ್ಕಳ ಕಲರವವೂ ಈ ಅವಧಿಯಲ್ಲಿ ಸಾಮಾನ್ಯ. ಇಲ್ಲಿನ ಪ್ರವಾಸಿ ತಾಣಗಳಾದ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಕೂಡಲಸಂಗಮದಲ್ಲಿ ಈಗ ಎಂದಿನ ಉತ್ಸಾಹ ಮಾಯವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ, ಮುರ್ಡೇಶ್ವರ, ದಾಂಡೇಲಿ ಸೇರಿದಂತೆ ಈ ಭಾಗದ ಸಮುದ್ರ ತೀರಗಳು ಹಾಗೂ ಪ್ರವಾಸೀ ತಾಣಗಳೂ ಸಹಜ ಸ್ಥಿತಿಗೆ ಬರುತ್ತಿವೆ.


ವಿಜಯಪುರದ ಗೋಳಗುಮ್ಮಟಕ್ಕೆ ಭೇಟಿ ನೀಡಿದ ಪ್ರವಾಸಿಗರು –ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

ರದ್ದಾಗುತ್ತಿರುವ ಜಾತ್ರೆ; ಮತ್ತೆ ಆತಂಕದ ಬದುಕು

● ಓದೇಶ ಸಕಲೇಶಪುರ

ಹುಬ್ಬಳ್ಳಿ: ‘ನಮ್ಮದು ಒಂದು ರೀತಿಯಲ್ಲಿ ಅರಕ್ಕೇರದ ಮೂರಕ್ಕಿಳಿಯದ ಜೀವನ. ಪ್ರಮುಖ ಆದಾಯದ ಮೂಲವಾದ ಜಾತ್ರೆಗಳು ರದ್ದಾಗಿದ್ದರಿಂದ ಬದುಕು ಬೀದಿಗೆ ಬಂದಿದೆ. ರಂಗಭೂಮಿ ಬಿಟ್ಟರೆ ನಮಗೆ ಬೇರೇನೂ ಗೊತ್ತಿಲ್ಲ. ಕಷ್ಟ ಎಂದುಕೊಂಡು, ಇಷ್ಟು ವರ್ಷ ಅನ್ನ ಕೊಟ್ಟ ವೃತ್ತಿಯನ್ನು ಬಿಡಲೂ ಆಗುತ್ತಿಲ್ಲ...’

–ನಾಟಕ ಕಂಪನಿಗಳು ಅನುಭವಿಸುತ್ತಿರುವ ಸಂಕಷ್ಟವನ್ನು ದಾವಣಗೆರೆಯ ಕೆ.ಬಿ.ಆರ್. ಡ್ರಾಮಾ ಕಂಪನಿ ಮಾಲೀಕ ಚಿಂದೋಡಿ ಶ್ರೀಕಂಠೇಶ್ ಬಿಚ್ಚಿಟ್ಟಿದ್ದು ಹೀಗೆ.

ಕಳೆದ ವರ್ಷ ಜಾತ್ರೆಗಳ ಸಂದರ್ಭದಲ್ಲೇ ಆದ ಲಾಕ್‌ಡೌನ್ ಘೋಷಣೆಯು ಕಲಾವಿದರು ಹಾಗೂ ನಾಟಕ ಕಂಪನಿ ಮಾಲೀಕನ್ನು ಕಂಗಾಲು ಮಾಡಿತು. ಸಾಮಾನು–ಸರಂಜಾಮುಗಳನ್ನು ಸಾಗಿಸಲೂ ಆಗದೇ ಯಾವ ಊರಲ್ಲಿ ಕ್ಯಾಂಪ್ ಹಾಕಿದ್ದರೋ ಅಲ್ಲಿಯೇ ತಿಂಗಳಾನುಗಟ್ಟಲೆ ಇರಬೇಕಾಯಿತು. ಮಾಲೀಕರು, ಕ್ಯಾಂಪ್ ಕಾಯುತ್ತ ಕುಳಿತರೆ, ಕಲಾವಿದರು ಕೂಲಿ–ನಾಲಿ ಮಾಡಿಕೊಂಡು ದಿನದೂಡಿದರು.

ಬದಲಾದ ಅಭಿರುಚಿ, ನಿರ್ವಹಣೆಯ ಸವಾಲಿನಿಂದಾಗಿ, ನೂರಕ್ಕೂ ಹೆಚ್ಚು ಇದ್ದ ನಾಟಕ ಕಂಪನಿಗಳ ಸಂಖ್ಯೆ ಈಗ 27ಕ್ಕೆ ಬಂದು ತಲುಪಿದೆ. ಅವು ಕೂಡ ಈಗಲೋ ಆಗಲೋ ಎನ್ನುವಂತಿವೆ ಎಂದು ಚಿಂದೋಡಿ ಶ್ರೀಕಂಠೇಶ್ ಬೇಸರ ವ್ಯಕ್ತಪಡಿಸಿದರೆ; ‘ಅನ್‌ಲಾಕ್ ಬಳಿಕ ಬಸ್ ಪ್ರಯಾಣ, ರಾಜಕೀಯ ಸಮಾವೇಶ ಸೇರಿದಂತೆ ಹಲವು ಕಾರ್ಯಕ್ರಮಗಳಿಗೆ ಅನುಮತಿ ಕೊಟ್ಟ ಸರ್ಕಾರ, ವೃತ್ತಿ ರಂಗಭೂಮಿಯವರಿಗೆ ನಾಟಕ ಪ್ರದರ್ಶನಕ್ಕೆ ಅವಕಾಶ ನೀಡದೆ ತಾರತಮ್ಯ ಮಾಡಿತು.ಇದರಿಂದಾಗಿ, ಕೆಲ ಜಾತ್ರೆಗಳು ಕೈ ತಪ್ಪಿದವು’ ಎಂಬ ಅಸಮಾಧಾನ ವಿಶ್ವಭಾರತಿ ರಮ್ಯನಾಟಕ ಸಂಘದ ಮಾಲೀಕ ಬಸವರಾಜ ಬೆಂಗೇರಿ ಅವರದು.

ಈಗ ಬಹುತೇಕ ನಾಟಕ ಕಂಪನಿಗಳು ನಗರಗಳಲ್ಲಿ ಕ್ಯಾಂಪ್ ಹಾಕಿವೆ. ಈಗಷ್ಟೇ ಪ್ರದರ್ಶನಗಳನ್ನು ನೀಡುತ್ತಿರುವ ಕಂಪನಿ ನಾಟಕಗಳ ಕಲಾವಿದರು, ಇದೀಗ ಮತ್ತೆ ದುಗುಡದಲ್ಲಿದ್ದಾರೆ. ಕೋವಿಡ್ ಎರಡನೇ ಅಲೆಯ ಭೀತಿಯಿಂದ ಪ್ರಮುಖ ಜಾತ್ರೆಗಳು ರದ್ದಾಗುತ್ತಿರುವುದು ಅವರನ್ನು ಆತಂಕಕ್ಕೆ ದೂಡಿದೆ.

ಇನ್ನು ಪ್ರಮುಖ ಜಾತ್ರೆ, ದೇವಸ್ಥಾನಗಳನ್ನು ಹಾಗೂ ಮಠಗಳಿಗೆ ಭೇಟಿ ನೀಡುವ ಭಕ್ತರನ್ನು ನಂಬಿಕೊಂಡು ಬದುಕು ಸಾಗಿಸುವ ಮಿರ್ಚಿ–ಭಜಿ, ಮಂಡಕ್ಕಿ, ಕುಂಕುಮ–ಭಂಡಾರ, ವಿಭೂತಿ ಮಾರುವವರ ಬದುಕು ಈಗಷ್ಟೇ ಲಯಕ್ಕೆ ಬರುತ್ತಿದೆ.

ಲಾಕ್‌ಡೌನ್ ಘೋಷಣೆಯಿಂದಾಗಿ, ಮಾರಾಟವಾಗದೇ ಉಳಿದ ಕುಂಕುಮ ಮತ್ತು ಭಂಡಾರವು ಇಟ್ಟಲ್ಲೇ ಇಟ್ಟು ಹಾಳಾಗಿ ನಷ್ಟ ಅನುಭವಿಸಿದ ದೇವರಗುಡ್ಡ ಮಾಲತೇಶ ದೇವಸ್ಥಾನದ ಬಳಿ ಭಂಡಾರ ವ್ಯಾಪಾರ ಮಾಡುವ ಮಾಲತೇಶ ದಿಳ್ಳೆಪ್ಪ ಹುಲಿಕಟ್ಟಿ, ಧಾರವಾಡದ ಮಂಡಕ್ಕಿ ಭಟ್ಟಿಯ ಅಲ್ತಾಫ್ ಹಾಗೂ ಜಾತ್ರೆಯಲ್ಲಿ ಬಳೆ ಮಾರುವ ಬಶೀರ್ ಅಹಮ್ಮದ್ ಮನಿಯಾರ ಈಗಷ್ಟೇ ವ್ಯಾಪಾರದತ್ತ ಮುಖಮಾಡಿದ್ದಾರೆ. ಆದರೆ, ಜಾತ್ರೆಗಳು ಮತ್ತೆ ರದ್ದಾದರೆ ಹೋದ ವರ್ಷದಂತೆ ಈ ವರ್ಷವೂ ಸಂಕಷ್ಟವೇ ಎನ್ನುತ್ತಾರೆ ಅವರಂಥ ಎಲ್ಲ ಸಣ್ಣ ವ್ಯಾಪಾರಸ್ಥರು.

ಸಂಕಷ್ಟಕ್ಕೆ ಸ್ಪಂದಿಸದ ಇಲಾಖೆ

‘ಸಂಕಷ್ಟದಲ್ಲಿ ಸ್ಪಂದಿಸಬೇಕಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು, ಕಾಯಕಲ್ಪ ಯೋಜನೆಯಡಿ ಪ್ರತಿ ವರ್ಷ ವೃತ್ತಿ ರಂಗಭೂಮಿಗೆ ನೀಡಬೇಕಾದ ₹ 2 ಕೋಟಿ ಸಹಾಯಧನ ನೀಡಲು ಮೀನ–ಮೇಷ ಎಣಿಸುತ್ತಿದೆ. ಸಾಲದ್ದಕ್ಕೆ ಆ ಮೊತ್ತದಲ್ಲಿ ಮೊದಲಿಗೆ ₹ 75 ಲಕ್ಷ ಹಾಗೂ ಇತ್ತೀಚೆಗೆ ₹ 30 ಲಕ್ಷ ವಾಪಸ್ ಪಡೆಯಲಾಗಿದೆ’ ಎಂದು ವೃತ್ತಿ ರಂಗಭೂಮಿ ಮಾಲೀಕರ ಸಂಘದ ಅಧ್ಯಕ್ಷರೂ ಆಗಿರುವ ಶ್ರೀಕಂಠೇಶ್ ಅಸಮಾಧಾನ ವ್ಯಕ್ತಪಡಿಸಿದರು.

ಬೆರಳೆಣಿಕೆಯ ಮಂದಿಗಷ್ಟೇ ಪರಿಹಾರ ತಲುಪಿದೆ. ಪ್ರದರ್ಶನ ರದ್ದಾಗಿದ್ದರಿಂದ ಕಲಾವಿದರು ಬದುಕಿಗಾಗಿ ಕೂಲಿ ಮಾಡಿದ್ದಾರೆ

ಖತಾಲಸಾಬ ಬಣಗಾರ, ಮಾಲೀಕರು, ಶ್ರೀ ಸಂತ ಶರೀಫ ಶಿವಯೋಗಿ ನಾಟ್ಯಸಂಘ, ಹಾವೇರಿ ಜಿಲ್ಲೆ

ಸತತ ಒಂಬತ್ತು ತಿಂಗಳು ಮನೆಯಲ್ಲೇ ಕೂರಬೇಕಾಯಿತು. ಯಾರೂ ನೆರವಿಗೆ ಬರಲಿಲ್ಲ. ಈಗ, ಯಾವ ಕಂಪನಿ ಕರೆಯುವುದೋ ಅಲ್ಲಿ ಹೋಗಿ ಪಾತ್ರ ಮಾಡುವೆ

ಮಹಾರುದ್ರಾಚಾರ್, ಕಲಾವಿದ, ಹರಪನಹಳ್ಳಿ

ಶೇ 70ರಷ್ಟು ಕೊಠಡಿಗಳು ಖಾಲಿ

ಬಾಗಿಲು ಮುಚ್ಚಿದ ಶೇ 30ರಷ್ಟು ಹೋಟೆಲ್

● ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕೋವಿಡ್ ಲಾಕ್‌ಡೌನ್‌ನಿಂದ ಸೊರಗಿದ್ದ ಹೋಟೆಲ್ ಉದ್ಯಮ ಇನ್ನೂ ಚೇತರಿಕೆ ಕಂಡಿಲ್ಲ. ಶೇ 30ರಷ್ಟು ಹೋಟೆಲ್‌ಗಳು ಶಾಶ್ವತವಾಗಿ ಮುಚ್ಚಿವೆ. ರಾಜ್ಯದಲ್ಲಿ 40 ಸಾವಿರಕ್ಕೂ ಹೆಚ್ಚು ಹೋಟೆಲ್‌ಗಳಿದ್ದು, ಅವುಗಳಲ್ಲಿ 12 ಸಾವಿರದಷ್ಟು ಮುಚ್ಚಿಯೇ ಇವೆ.

‘ಲಾಕ್‌ಡೌನ್ ಸಂದರ್ಭದಲ್ಲಿ, ಊರಿಗೆ ಹೋದ ಕಾರ್ಮಿಕರಲ್ಲಿ ಕೆಲವರು ವಾಪಸ್ ಬಂದಿದ್ದಾರೆ. ಹಲವರು ಬೇರೆ ಉದ್ಯೋಗ ಕಂಡುಕೊಂಡಿದ್ದಾರೆ. ಬಂದರೂ ಅವರಿಗೆ ಕೆಲಸ ಕೊಟ್ಟು ಸಂಬಳ ಕೊಡುವ ಸ್ಥಿತಿಯಲ್ಲೂ ಹೋಟೆಲ್ ಉದ್ಯಮ ಇಲ್ಲ. ತೆರೆದಿರುವ ಹೋಟೆಲ್‌ಗಳಲ್ಲೂ ಶೇ 70ರಷ್ಟು ವಹಿವಾಟು ನಡೆಯುತ್ತಿದೆ’ ಎಂದು ಕರ್ನಾಟಕ ಪ್ರದೇಶ ಹೋಟೆಲ್ ಮತ್ತು ಉಪಾಹಾರ ಮಂದಿರಗಳ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್ ಹೇಳಿದರು.

ಬೆಂಗಳೂರಿನಲ್ಲಿ 24 ಸಾವಿರ ಹೋಟೆಲ್‌ಗಳಿದ್ದು, ಅವುಗಳಲ್ಲಿ 1 ಸಾವಿರದಷ್ಟು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ತೆರೆದೇ ಇಲ್ಲ. ತಾರಾ ಹೋಟೆಲ್‌ಗಳಲ್ಲಿ ಶೇ 70ರಷ್ಟು ಕೊಠಡಿಗಳು ಖಾಲಿಯೇ ಇರುತ್ತವೆ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದರು.

ಕೋವಿಡ್‌ನಿಂದ ನಲುಗಿರುವ ಪ್ರವಾಸೋದ್ಯಮ ವಲಯದ ಚೇತರಿಕೆಗೆ ಪೂರಕವಾಗುವಂತೆ ಸ್ಟಾರ್ ವರ್ಗೀಕೃತ ಹೋಟೆಲ್‌ಗಳಿಗೆ ಕೈಗಾರಿಕೆಯ ಸ್ಥಾನಮಾನ ನೀಡಲು ರಾಜ್ಯ ಸರ್ಕಾರ ಮುಂದಾಗಿದೆ.

ಕೈಗಾರಿಕೆ ಸ್ಥಾನಮಾನ ನೀಡುವುದರಿಂದ ಸ್ಟಾರ್ ವರ್ಗೀಕೃತ ಹೋಟೆಲ್‌ಗಳು, ಕೈಗಾರಿಕೆ ಹಾಗೂ ವಾಣಿಜ್ಯ ವಿದ್ಯುತ್ ದರಗಳ ವ್ಯತ್ಯಾಸದ ಮೊತ್ತದ ರಿಯಾಯಿತಿಯನ್ನು ಐದು ವರ್ಷ ಪಡೆಯಲಿವೆ. ಆಸ್ತಿ ತೆರಿಗೆಯಲ್ಲಿ ಐದು ವರ್ಷಗಳಿಗೆ ಹೋಟೆಲ್ ಕಟ್ಟಡಕ್ಕೆ ಅನ್ವಯವಾಗುವ ಆಸ್ತಿ ತೆರಿಗೆ ಹಾಗೂ ಉದ್ಯಮ ಕಟ್ಟಡಕ್ಕೆ ಅನ್ವಯವಾಗುವ ಆಸ್ತಿ ತೆರಿಗೆಯ ವ್ಯತ್ಯಾಸದ ಮೊತ್ತದ ರಿಯಾಯಿತಿ ಪಡೆಯಲಿವೆ ಎಂದು ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಹೇಳಿದ್ದಾರೆ. ರಾಜ್ಯದ ಐತಿಹಾಸಿಕ ಪ್ರವಾಸಿ ತಾಣಗಳನ್ನು ವಿಶ್ವ ದರ್ಜೆಗೇರಿಸಿ, ದೇಶ -ವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಿಸಲು ಕ್ರಿಯಾ ಯೋಜನೆ ಸಿದ್ಧಪಡಿಸುವಂತೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ತಿಳಿಸಿದ್ದಾರೆ.

ಸಂಚಾರ ನಿಲ್ಲಿಸಿದ ಶೇ 40ರಷ್ಟು ಬಸ್

ಪ್ರವಾಸೋದ್ಯಮ ಕಂಗೆಟ್ಟಿರುವುದರಿಂದ ಸಾರಿಗೆ ಉದ್ಯಮದ ಮೇಲೆ ದೊಡ್ಡ ಹೊಡೆತ ಬಿದ್ದಿದೆ. ಶೇ 40ರಷ್ಟು ಖಾಸಗಿ ಬಸ್‌ಗಳು ನಿಂತಲ್ಲೇ ನಿಂತಿವೆ.

‘ಬಸ್‌ಗಳು ನಿಂತಲ್ಲೇ ನಿಂತಿರುವ ಕಾರಣ ಬ್ಯಾಟರಿಗಳು ಹಾಳಾಗಿರುತ್ತವೆ. ಹೊಸದಾಗಿ ವಿಮೆ ಮಾಡಿಸಬೇಕು. ಇದೆಲ್ಲದಕ್ಕೂ ಲಕ್ಷಗಟ್ಟಲೆ ಹಣ ಹೊಂದಿಸುವ ಸ್ಥಿತಿಯಲ್ಲಿ ಮಾಲೀಕರು ಇಲ್ಲ. ಹೀಗಾಗಿ, ಆ ಬಸ್‌ಗಳು ನಿಂತಲ್ಲೇ ದೂಳು ಹಿಡಿಯುತ್ತಿವೆ’ ಎಂದು ಕರ್ನಾಟಕ ಬಸ್ ಮಾಲೀಕರ ಸಂಘಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸದಾನಂದ ಚಾತ್ರ ಹೇಳಿದರು.

ಚೇತರಿಕೆಯಲ್ಲಿ ಪ್ರವಾಸೋದ್ಯಮ

ಒಂದನೇ ಪುಟದಿಂದ

ಆ ರಾಜ್ಯಗಳಿಂದ ಬರುವ ಪ್ರವಾಸಿಗರ ಸಂಖ್ಯೆಯೂ ಕಡಿಮೆ ಆಗುತ್ತಿದೆ.

ಬೆಳಗಾವಿ ಜಿಲ್ಲೆ ಸವದತ್ತಿಯ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನವನ್ನು ಫೆ. 1ರಿಂದ ಸಾರ್ವಜನಿಕರ ದರ್ಶನಕ್ಕೆ ಮುಕ್ತಗೊಳಿಸಲಾಗಿತ್ತು. ಆದರೆ ಈಗ ಕೇವಲ 20 ದಿನಗಳಲ್ಲೇ ಮತ್ತೆ ನಿರ್ಬಂಧ ಹೇರಲಾಗಿದೆ. ಈಗಾಗಲೇ ಈ ದೇಗುಲಕ್ಕೆ ₹13 ಕೋಟಿ ಆದಾಯ ಕೊರತೆಯಾಗಿದೆ. ವರಮಾನ ದೃಷ್ಟಿಯಿಂದ ಇತರ ಪ್ರಮುಖ ದೇಗುಲಗಳ ಕಥೆ ಭಿನ್ನವಾಗೇನೂ ಇಲ್ಲ. 2019ಕ್ಕೆ ಹೋಲಿಸಿದರೆ, ಕಳೆದ ವರ್ಷದ ಕೊನೆಯ ಮೂರು ತಿಂಗಳಲ್ಲಿ (ಲಾಕ್‌ಡೌನ್ ತೆರವಾಗಿದ್ದರೂ) ಸಂಗ್ರಹವಾಗಿರುವ ಕಾಣಿಕೆ ಪ್ರಮಾಣ ಬಹಳಷ್ಟು ಕಡಿಮೆಯಾಗಿದೆ!

ಇದರ ಜೊತೆಗೆ ತೈಲ ಬೆಲೆಯಲ್ಲಾದ ಹೆಚ್ಚಳವು ಪ್ರವಾಸಿ ಕ್ಷೇತ್ರದ ಭಾಗವೇ ಆಗಿರುವ ಟ್ಯಾಕ್ಸಿ– ಆಟೊ ಚಾಲಕರನ್ನು ಹೈರಾಣಾಗಿಸಿದೆ.


‘ಲಾಕ್‌ಡೌನ್ ಹಾಗೂ ಆ ನಂತರದ ದಿನಗಳಲ್ಲಿ ಬದುಕು ಸಾಗಿಸುವುದೇ ಕಷ್ಟಕರವಾಗಿತ್ತು. ಟ್ಯಾಕ್ಸಿ ಓಡಿಸದಿದ್ದರೂ ವಿಮೆ, ತೆರಿಗೆ ಪಾವತಿಸಲು ಹಾಗೂ ಸಾಲ ತೀರಿಸಲು ತರಕಾರಿ ವ್ಯಾಪಾರ, ಮರಗೆಲಸ, ಗಾರೆ ಕೆಲಸ ಮಾಡಿದೆವು. ಈಗ ಅಲ್ಪಸ್ವಲ್ಪ ಬಾಡಿಗೆ ಬರುತ್ತಿದೆ. ಆದರೂ ಟ್ರಿಪ್‌ಗಳ ಸಂಖ್ಯೆ ಕಡಿಮೆಯಾಗಿದೆ’ ಎನ್ನುತ್ತಾರೆ ಮಡಿಕೇರಿಯ ಟ್ಯಾಕ್ಸಿ ಚಾಲಕ ರವಿ.

ಮೈಸೂರಿನಂಥ, ಪ್ರವಾಸಿ ನಗರಿಯಲ್ಲಿ ಶೇ 50ರಷ್ಟು ಹೋಟೆಲ್ ಕೊಠಡಿಗಳು ಈಗಲೂ ಭರ್ತಿಯಾಗುತ್ತಿಲ್ಲ. ಪ್ರವಾಸಕ್ಕೆ ಬಂದವರು ಉಳಿಯದೇ ವಾಪಸ್ ಹೋಗುತ್ತಿದ್ದಾರೆ. ಹಲವು ಪ್ರವಾಸಿ ತಾಣಗಳಲ್ಲಿ ಪರಿಸ್ಥಿತಿ ಭಿನ್ನವಾಗಿಲ್ಲ. ವಾರಾಂತ್ಯದಲ್ಲಿ ಹಾಸನ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ ಹೋಂ ಸ್ಟೇ, ರೆಸಾರ್ಟ್‌ಗಳು ಭರ್ತಿಯಾಗುತ್ತಿವೆ. ಕಡಲತೀರಗಳಿಗೆ ಜನ ಹೋಗುತ್ತಿದ್ದಾರೆ.

‘ಎರಡು ತಿಂಗಳಿನಿಂದ ಹೋಟೆಲ್ ಉದ್ಯಮದ ವಹಿವಾಟು ಪರವಾಗಿಲ್ಲ. ಮೊದಲಿನಂತೆ ಹಳಿಗೆ ಮರಳಲು ಸಮಯ ಬೇಕು’ ಎಂದು ಹೇಳುತ್ತಾರೆ ದಾವಣಗೆರೆ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಮೋತಿ ಆರ್. ಪರಮೇಶ್ವರರಾವ್.

ಮಲೆ ಮಹದೇಶ್ವರಸ್ವಾಮಿ ದೇವಾಲಯದ ಆದಾಯ

(₹ ಕೋಟಿಗಳಲ್ಲಿ)



ಪೂರಕ ಮಾಹಿತಿ: ಕೆ. ಓಂಕಾರಮೂರ್ತಿ (ಮೈಸೂರು), ಓದೇಶ ಸಕಲೇಶಪುರ (ಹುಬ್ಬಳ್ಳಿ), ಚಂದ್ರಕಾಂತ ಮಸಾನಿ (ಬೀದರ್), ಮನೋಜಕುಮಾರ ಗುದ್ದಿ (ಕಲಬುರ್ಗಿ), ಸಿದ್ಧನಗೌಡ ಪಾಟೀಲ (ಕೊಪ್ಪಳ)

ಪದಬಂಧ 4522


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಯೋಗವಿದ್ದರೆ ಅಗಲುವಿಕೆ! (3)
3.ಆರೋಹಿ ಇಲ್ಲಿದ್ದಾನೆ (3)
6.ದುರಸ್ತಿಯನ್ನು ಹೀಗೆನ್ನಿ (3)
7.ಇಬ್ಬಂದಿಯೇನಿಲ್ಲ!ಕಚೇರಿಯ ನೌಕರ ವರ್ಗ! (3)
8.ವಿರಳವಾಗಿರುವ ನಲ್ಮೆ (3)
9.ಚಿತೆಯಲ್ಲಿ ಶೂನ್ಯವಿದ್ದರೆ ಮಾತ್ರ ಈ ಯೋಚನೆ! (2)
10.ಆ ದಿವಸ ನೋಡಿದ ಜೈನ ದೇವಾಲಯ (3)
12.ತೀರಾ ದೂರವಿರುವ ದಡ! (2)
13.ಬಿನ್ನಹ ಹೀಗೆ ಬಂದಿದೆ (3)
14.ರಾಜನ ದರ್ಬಾರು (3)
15.ನಗ ಧರಿಸಿಕೊಂಡು ನೋಡಿರುವ ಪಟ್ಟಣ (3)
17.ಕುಂಬಾರನ ಚಕ್ರವಿದು (3)
18.ಅತಿಶಯವಾದ ಮೋಹ (3)

ಮೇಲಿಂದ ಕೆಳಕ್ಕೆ

1.ಕೆಂಗಲ್ ಹನುಮಂತಯ್ಯನವರು ನಿರ್ಮಿಸಿದ ಭವ್ಯ ಕಟ್ಟಡ (5)
2.ಗರಿ ಹಿಡಿದವನ ಹಿರಿಮೆ (3)
3.ಸದರಿಯಲ್ಲಿ ಸಮವಾದುದನ್ನು ಹುಡುಕಿ! (2)
4.ವಿಲಾಸಪ್ರಿಯತೆಯನ್ನು ಹೀಗೆನ್ನಿ (4)
5.ಮಂದಿ ಹತ್ತಿರವಿರುವ ಸೂಕರ! (2)
9.ಹರುಕು ಬಟ್ಟೆ ಇಲ್ಲಿದೆ (2)
10.ಬಡವರ ನಾಡಿನಲ್ಲಿ ಕ್ಷಾಮವೇ? (2)
11.ವಿರಮಿಸಿಕೊಳ್ಳುವ ಮನೆಯಿದು (5)
12.ಚುರುಕಾದ ಗಮನ (4)
13.ಸರಸದ ವಿರುದ್ಧ ಪದ (3)
14.ಕುಯುಕ್ತಿಗೆ ಹೆಸರಾದ ಪ್ರಾಣಿ (2)
15.ಓಲಗದಲ್ಲಿ ಬರೆದಿರುವ ಪತ್ರ (2)



4521ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸೂಕ್ಷ್ಮದರ್ಶಕ 3.ಕುಲಾವಿ 5.ರಸಕವಳ 7.ಸಫಲ 8.ನಿರಪರಾಧಿ 10.ಆಕಾಂಕ್ಷೆ 11.ಹೊಸಜೀವನ 14.ಮಜೂರಿ 15.ಹೆರಿಗೆಮನೆ

ಮೇಲಿಂದ ಕೆಳಕ್ಕೆ: 1.ಸೂಕರ 2.ದಶಕ 4.ವಿಚಲ 6.ವಕ್ತಾರ 7.ಸಮಾಧಿ 8.ನಿರೀಕ್ಷೆ 9.ರಾಯಸ 10.ಆಗಮ 12.ಜೀರಿಗೆ 13.ನಮೂನೆ

ಸುಡೊಕು 4908

5			8		1	9		2
	8						3	
3		1	2		9		5	6
	1	7			8	3		
6				2				4
8		3	9				6	
1			7		2	4		3
		8		4			1	
	3		1		5		7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4907 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕರಗಿತು ₹ 3 ಲಕ್ಷ ಕೋಟಿ ಸಂಪತ್ತು



ಬೆಂಗಳೂರು: ದೇಶದ ಷೇರುಪೇಟೆಗಳ ವಾರದ ವಹಿವಾಟು ನಕಾರಾತ್ಮಕವಾಗಿ ಅಂತ್ಯವಾಗಿದ್ದು, ಹೂಡಿಕೆದಾರರ ಸಂಪತ್ತು ₹ 3.17 ಲಕ್ಷ ಕೋಟಿಗಳಷ್ಟು ಕರಗಿದೆ. ಇದರಿಂದ ಷೇರುಪೇಟೆಯ ಬಂಡವಾಳ ಮೌಲ್ಯ ₹ 200.81 ಲಕ್ಷ ಕೋಟಿಗಳಿಗೆ ಇಳಿಕೆಯಾಗಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವು (ಬಿಎಸ್‌ಇ) ಫೆಬ್ರುವರಿ 19 ರಿಂದ 26ರವರೆಗಿನ ವಹಿವಾಟಿನಲ್ಲಿ 1,799 ಅಂಶಗಳಷ್ಟು ಇಳಿಕೆ ಕಂಡು, 40,099 ಅಂಶಗಳಿಗೆ ತಲುಪಿದೆ. ಶುಕ್ರವಾರದ ವಹಿವಾಟಿನಲ್ಲಿ ಸೂಚ್ಯಂಕ 1900 ಅಂಶ ಕುಸಿತ ಕಂಡಿದ್ದರಿಂದ ಒಂದೇ ದಿನದಲ್ಲಿ ಹೂಡಿಕೆದಾರರ ಸಂಪತ್ತಿನಲ್ಲಿ ₹ 5.3 ಲಕ್ಷ ಕೋಟಿ ಕರಗಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 452 ಅಂಶಗಳ ಇಳಿಕೆ ಕಂಡು 14,529 ಅಂಶಗಳಿಗೆ ತಲುಪಿದೆ.

ರಫ್ತು: 20 ಲಕ್ಷದ ಮೈಲಿಗಲ್ಲು ದಾಟಿದ ಮಾರುತಿ ಸುಜುಕಿ



ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಒಟ್ಟಾರೆ 20 ಲಕ್ಷಕ್ಕೂ ಅಧಿಕ ವಾಹನಗಳನ್ನು ರಫ್ತು ಮಾಡಿದ ಮೈಲಿಗಲ್ಲು ಸಾಧಿಸಿದೆ.

ಎಸ್‌–ಪ್ರೆಸೊ, ಸ್ವಿಫ್ಟ್ ಮತ್ತು ವಿಟಾರಾ ಬ್ರೆಜಾ ವಾಹನಗಳನ್ನು ಗುಜರಾತ್‌ನ ಮುಂದ್ರಾ ಬಂದರಿನಿಂದ ದಕ್ಷಿಣ ಆಫ್ರಿಕಾಕ್ಕೆ ರಫ್ತು ಮಾಡುವ ಮೂಲಕ ಈ ಸಾಧನೆ ಮಾಡಿದೆ.

ಕಂಪನಿಯು ಸದ್ಯ 150 ಆವೃತ್ತಿಗಳನ್ನು ಒಳಗೊಂಡ 14 ಮಾದರಿಗಳನ್ನು 100ಕ್ಕೂ ಅಧಿಕ ದೇಶಗಳಿಗೆ ರಫ್ತು ಮಾಡುತ್ತಿದೆ.

'ಜಾಗತಿಕ ವಾಹನ ವ್ಯವಹಾರದಲ್ಲಿ ಭಾರತ ಪ್ರಮುಖ ಪಾತ್ರ ವಹಿಸುವುದಕ್ಕೂ ಮೊದಲೇ 34 ವರ್ಷಗಳಿಂದ ಕಂಪನಿಯು ವಾಹನಗಳನ್ನು ರಫ್ತು ಮಾಡುತ್ತಿದೆ. ಇದರಿಂದಾಗಿಯೇ ಜಾಗತಿಕ ಮಾನದಂಡವನ್ನು ತಲುಪಲು ಸಾಧ್ಯವಾಗಿದೆ' ಎಂದು ಕಂಪನಿಯು ಸಿಇಒ ಕೆನೆಚಿ ಅಯುಕವಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಭಾರತದ ಘಟಕಗಳಲ್ಲಿ ತಯಾರಾಗಿರುವ ವಾಹನಗಳು ಗುಣಮಟ್ಟ, ಸುರಕ್ಷತೆ, ವಿನ್ಯಾಸ ಮತ್ತು ತಂತ್ರಜ್ಞಾನದಲ್ಲಿ ಜಾಗತಿಕ ಮಾನದಂಡಗಳನ್ನು ಒಳಗೊಂಡಿವೆ' ಎಂದು ಅವರು ತಿಳಿಸಿದ್ದಾರೆ.

ಚಿಲಿ, ಇಂಡೋನೇಷ್ಯಾ, ದಕ್ಷಿಣ ಆಫ್ರಿಕಾ ಮತ್ತು ಶ್ರೀಲಂಕಾ ದೇಶಗಳಲ್ಲಿ ಆಲ್ಟೊ, ಬಲೆನೊ, ಡಿಸೈರ್ ಮತ್ತು ಸಿಫ್ಟ್ ಮಾದರಿಗಳು ಜನಪ್ರಿಯ ಆಯ್ಕೆಗಳಾಗಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

'ಮ್ಯಾನ್ಮಾರ್: ಪ್ರಜಾಪ್ರಭುತ್ವ ಮರುಸ್ಥಾಪನೆ ಆದ್ಯತೆಯಾಗಲಿ'

ವಿಶ್ವಸಂಸ್ಥೆ (ಪಿಟಿಐ): ಮಿಲಿಟರಿ ದಂಗೆಯಿಂದ ನಲುಗಿರುವ ಮ್ಯಾನ್ಮಾರ್‌ನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮರುಸ್ಥಾಪಿಸಿರುವುದು, ಬಂಧನಕ್ಕೆ ಒಳಗಾಗಿರುವ ನಾಯಕರ ಬಿಡುಗಡೆ ನಮ್ಮ ಆದ್ಯತೆಯಾಗಬೇಕು ಎಂದು ವಿಶ್ವಸಂಸ್ಥೆಯ ಸಾಮಾನ್ಯಸಭೆಯಲ್ಲಿ ಭಾರತ ಪ್ರತಿಪಾದಿಸಿದೆ.

'ಶಾಂತಿಯುತ ಹಾಗೂ ರಚನಾತ್ಮಕ ಮಾರ್ಗದ ಮೂಲಕ ಮ್ಯಾನ್ಮಾರ್ ತನ್ನ ಆಂತರಿಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು' ಎಂದು ವಿಶ್ವಸಂಸ್ಥೆಯ ಭಾರತದ ಕಾಯಂ ರಾಯಭಾರಿಯಾಗಿರುವ ಟಿ.ಎಸ್. ತಿರುಮೂರ್ತಿ ಹೇಳಿದರು.



ತಿರುಮೂರ್ತಿ

'ಮ್ಯಾನ್ಮಾರ್‌ನೊಂದಿಗೆ ಭಾರತ ಭೂ ಹಾಗೂ ಸಾಗರ ಗಡಿಯನ್ನು ಹಂಚಿಕೊಂಡಿದೆ. ಹೀಗಾಗಿ ಈ ಪ್ರದೇಶದಲ್ಲಿ ಶಾಂತಿ ಹಾಗೂ ಸ್ಥಿರತೆಯನ್ನು ಕಾಪಾಡುವುದು ಭಾರತದ ಜವಾಬ್ದಾರಿಯಾಗಿದೆ' ಎಂದರು.

'ಮ್ಯಾನ್ಮಾರ್‌ನಲ್ಲಿ ಇತ್ತೀಚಿನ ಬೆಳವಣಿಗೆಗಳನ್ನು ಭಾರತ ಸೂಕ್ಷ್ಮವಾಗಿ ಅವಲೋಕಿಸುತ್ತಿದೆ. ಹಲವು ದಶಕಗಳ ಹೋರಾಟದ ಫಲವಾಗಿ ಆ ದೇಶದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗಿದೆ. ಆ ಪ್ರಯತ್ನವನ್ನು ವ್ಯರ್ಥಗೊಳಿಸಬಾರದು' ಎಂದೂ ಅವರು ಹೇಳಿದರು.

ದುಬೈ: ಮನೆಯ ಟೆರೇಸ್‌ನಲ್ಲಿ ಅಡಗಿದ್ದ ಬಾಲಕಿ

ದುಬೈ: ನಾಪತ್ತೆಯಾಗಿದ್ದ ಭಾರತ ಮೂಲದ 15 ವರ್ಷದ ಬಾಲಕಿ ಮನೆಯ ಟೆರೇಸ್‌ನಲ್ಲಿ ಪತ್ತೆಯಾಗಿದ್ದಾಳೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ದುಬೈನಲ್ಲಿ ಗುರುವಾರ ಮುಂಜಾನೆ ವಾಯುವಿಹಾರಕ್ಕೆ ತೆರಳಿದ್ದ ಹರಿಣಿ ಕರಾಣಿ ನಾಪತ್ತೆಯಾಗಿದ್ದಾಳೆ ಎಂದು 'ಗಲ್ಫ್ ನ್ಯೂಸ್' ವರದಿ ಮಾಡಿತ್ತು.

'ಶಾಲೆಯಲ್ಲಿ ಕಡಿಮೆ ಅಂಕ ಗಳಿಸಿದ್ದಾಳೆ ಎಂಬ ಕಾರಣಕ್ಕೆ ಹರಿಣಿಯನ್ನು ಪೋಷಕರು ಗದರಿಸಿದ್ದರು. ಆಕೆಯ ಮೊಬೈಲ್ ಫೋನ್ ಅನ್ನು ವಶಕ್ಕೆ ಪಡೆದುಕೊಂಡಿದ್ದರು. ಇದರಿಂದ ಬೇಸರಗೊಂಡ ಬಾಲಕಿ, ತನ್ನದೇ ಮನೆಯ ಟೆರೇಸ್‌ನಲ್ಲಿ ಅವಿತು ಕುಳಿತಿದ್ದಳು' ಎಂದು ವರದಿಗಳು ಹೇಳಿವೆ.

ಮಗಳು ನಾಪತ್ತೆಯಾಗಿದ್ದಾಳೆ ಎಂದು ಪೋಷಕರು ಪೊಲೀಸರಿಗೆ ದೂರು ಸಲ್ಲಿಸಿದ್ದರು. ಅಲ್ಲದೆ ಮಗಳನ್ನು ಹುಡುಕುವಲ್ಲಿ ಸಹಾಯ ಮಾಡಿ ಎಂದು ಸಾಮಾಜಿಕ ಜಾಲತಾಣದಲ್ಲಿ ಮನವಿ ಮಾಡಿದ್ದರು.

'ದುಬೈ ಪೊಲೀಸರು ಕೆಲವೇ ಗಂಟೆಗಳಲ್ಲಿ ಈ ಪ್ರಕರಣವನ್ನು ಭೇದಿಸಿ, ಹರಿಣಿಯನ್ನು ಸುರಕ್ಷಿತವಾಗಿ ಪೋಷಕರಿಗೆ ಒಪ್ಪಿಸಿದ್ದಾರೆ' ಎಂದು ವರದಿಯಾಗಿದೆ.

ಚೀನಾ ಜೊತೆ ವ್ಯಾಪಾರ ಅತ್ಯವಶ್ಯ: ಬಜಾಜ್

ಮುಂಬೈ (ಪಿಟಿಐ): ಸ್ಪರ್ಧಾತ್ಮಕ ದರದಲ್ಲಿ ಲಭ್ಯವಿರುವ ಕಡೆಗಳಿಂದ ಸರಕುಗಳನ್ನು ಖರೀದಿಸಬೇಕು ಎಂದು ಹೇಳುವ ಮೂಲಕ ಬಜಾಜ್ ಆಟೊ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರಾಜೀವ್ ಬಜಾಜ್ ಅವರು ಚೀನಾದೊಂದಿಗೆ ವ್ಯಾಪಾರ ಮುಂದುವರಿಸುವ ಒಲವು ವ್ಯಕ್ತಪಡಿಸಿದ್ದಾರೆ.

'ಏಷ್ಯಾ ಆರ್ಥಿಕ ಸಂವಾದ ಕಾರ್ಯಕ್ರಮದಲ್ಲಿ ಸುಸ್ಥಿರ ಪೂರೈಕೆ ವ್ಯವಸ್ಥೆ ರೂಪಿಸುವ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ಜಗತ್ತಿನಾದ್ಯಂತ ವಿತರಕರು ಮತ್ತು ಪೂರೈಕೆದಾರರನ್ನು ಹೊಂದಿದ್ದೇವೆ. ಹೀಗಾಗಿ ನಾವು ಜಾಗತಿಕ ಕಂಪನಿ ಎಂದು ಭಾವಿಸುತ್ತೇವೆ. ಹೀಗಾಗಿ ನಾವು ಚೀನಾದೊಂದಿಗೆ ವ್ಯಾಪಾರ ಮುಂದುವರಿಸಲೇಬೇಕು ಎಂದು ನಂಬುತ್ತೇನೆ. ಒಂದೊಮ್ಮೆ ಚೀನಾದಂತಹ ದೊಡ್ಡ ದೇಶ, ದೊಡ್ಡ ಮಾರುಕಟ್ಟೆಯನ್ನು ಹೊರತುಪಡಿಸಿ ವ್ಯಾಪಾರ ನಡೆಸಿದರೆ, ಮುಂಬರುವ ದಿನಗಳಲ್ಲಿ ನಾವು ನಮ್ಮ ವ್ಯಾಪಾರದಲ್ಲಿ ಪರಿಪೂರ್ಣ ಎನಿಸಿಕೊಳ್ಳಲು ಆಗುವುದಿಲ್ಲ' ಎಂದು ಹೇಳಿದ್ದಾರೆ.

'ಕಾರಣಗಳು ಏನೇ ಇರಲಿ, ಜೂನ್–ಜುಲೈ ಅವಧಿಯಲ್ಲಿ ಸರಕುಗಳನ್ನು ಆಮದು ಮಾಡಿಕೊಳ್ಳಲು ನಿರ್ಬಂಧ ಹೇರಲಾಯಿತು. ಅದರಲ್ಲಿಯೂ ಮುಖ್ಯವಾಗಿ ಚೀನಾದಿಂದ ಆಮದು ಮಾಡಿಕೊಳ್ಳಲು ನಿರ್ಬಂಧಿಸಲಾಯಿತು. ಆದರೆ, ದೇಶಿ ಅಥವಾ ವಿದೇಶಿ ಮಾರುಕಟ್ಟೆಗೆ ಪೂರೈಸಬೇಕಿರುವ ಉತ್ಪನ್ನಗಳ ತಯಾರಿಕೆಗೆ ದೇಶದಲ್ಲಿ ತಯಾರಾಗದೇ ಇರುವ ಬಿಡಿಭಾಗಗಳನ್ನು ಇದ್ದಕ್ಕಿದಂತೆಯೇ ಸಂಗ್ರಹಿಸಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ಈ ಮೂಲಕ ಪೂರೈಕೆ ವ್ಯವಸ್ಥೆಗೆ ಅಡಚಣೆ ಉಂಟಾಗದಿರುವುದು ಎಷ್ಟು ಮುಖ್ಯ ಎನ್ನುವುದನ್ನು ಪ್ರತಿಪಾದಿಸಿದರು.

'ಹಾಲು ಖರೀದಿ ದರ ಏರಿಕೆಗೆ ಒತ್ತಾಯಿಸಿ ಪ್ರತಿಭಟನೆ'

ಬೆಂಗಳೂರು: 'ಉತ್ಪಾದಕರಿಂದ ಖರೀದಿಸುವ ಪ್ರತಿ ಲೀಟರ್ ಹಾಲಿನ ದರವನ್ನು ₹40ಕ್ಕೆ ಹೆಚ್ಚಿಸಬೇಕೆಂದು ಒತ್ತಾಯಿಸಿ ಮಾರ್ಚ್ 1ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ' ಎಂದು ಕರ್ನಾಟಕ ರೈತ ಸೇನೆಯ ರಾಜ್ಯ ಘಟಕದ ಅಧ್ಯಕ್ಷ ಎಂ.ಆರ್.ನಾರಾಯಣ ಗೌಡ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 'ರಾಜ್ಯದ ವಿವಿಧ ಭಾಗಗಳ ಸುಮಾರು 6 ಸಾವಿರ ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದರು.

ನಾಲ್ಕು ದಿನಗಳ ಆಟಿಕೆ ಜಾತ್ರೆಗೆ ಪ್ರಧಾನಿ ಮೋದಿ ಚಾಲನೆ

'ಆಟಿಕೆಗೆ ಕಡಿಮೆ ಪ್ಲಾಸ್ಟಿಕ್ ಬಳಸಿ'

ನವದೆಹಲಿ (ಪಿಟಿಐ): 'ಆಟಿಕೆಗಳನ್ನು ತಯಾರಿಸುವಾಗ ಕಡಿಮೆ ಪ್ಲಾಸ್ಟಿಕ್ ಬಳಸುವಂತೆ ಹಾಗೂ ಪರಿಸರ ಸ್ನೇಹಿ ಮತ್ತು ಮರುಬಳಕೆ ಮಾಡುವಂತಹ ವಸ್ತುಗಳನ್ನೇ ಹೆಚ್ಚಾಗಿ ಬಳಸುವಂತೆ' ಪ್ರಧಾನಿ ನರೇಂದ್ರ ಮೋದಿ ಅವರು ಆಟಿಕೆ ಉದ್ಯಮಕ್ಕೆ ಮನವಿ ಮಾಡಿದ್ದಾರೆ.

ದೇಶದ ಮೊದಲ ಆಟಿಕೆ ಜಾತ್ರೆಗೆ ಶನಿವಾರ ಚಾಲನೆ ನೀಡಿ ಮಾತನಾಡಿದ ಅವರು, ಆಟಿಕೆ ವಲಯದಲ್ಲಿ ನಾವು ಸ್ವಾವಲಂಬನೆ ಸಾಧಿಸುವ ಜೊತೆ ಜೊತೆಗೆ ಜಾಗತಿಕ ಮಾರುಕಟ್ಟೆಯನ್ನೂ ತಲುಪಬೇಕು ಎಂದು ಹೇಳಿದ್ದಾರೆ.

ಈ ಜಾತ್ರೆಯಲ್ಲಿ ಒಂದು ಸಾವಿರಕ್ಕೂ ಅಧಿಕ ಪ್ರದರ್ಶಕರು ಭಾಗವಹಿಸಿದ್ದಾರೆ. ಮಾರ್ಚ್ 2ರವರೆಗೂ ಜಾತ್ರೆ ನಡೆಯಲಿದೆ ಜಾಗತಿಕ ಆಟಿಕೆ ಮಾರುಕಟ್ಟೆಯಲ್ಲಿ ಭಾರತದ ಪಾಲು ಬಹಳ ಕಡಿಮೆ ಇದ್ದು, ಸದ್ಯ, ದೇಶದಲ್ಲಿ ಲಭ್ಯವಿರುವ ಶೇ 85ರಷ್ಟು ಆಟಿಕೆಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಇದನ್ನು ಉಲ್ಲೇಖಿಸಿ ಮಾತನಾಡಿದ ಅವರು, ದೇಶದಲ್ಲಿಯೇ ಹೆಚ್ಚು ತಯಾರಿಸುವ ಮೂಲಕ ಈ ಸ್ಥಿತಿಯನ್ನು ಬದಲಿಸಬೇಕಿದೆ ಎಂದು ಹೇಳಿದರು.

ಭಾರತದಲ್ಲಿಯೇ ತಯಾರಿಕೆಗೆ ಈಗ ಬೇಡಿಕೆ ಇದೆ ಎಂದಾದರೆ, ಕರಕುಶಲ ವಸ್ತುಗಳಿಗೂ ದೇಶದಲ್ಲಿ ಬೇಡಿಕೆ ಹೆಚ್ಚಾಗಿದೆ. ಹೀಗಾಗಿ ಕೈಯಿಂದ ತಯಾರಿಸುವ ಆಟಿಕೆಗಳಿಗೆ ಉತ್ತೇಜನ ನೀಡುವ ಅಗತ್ಯವಿದೆ ಎಂದು ಹೇಳಿದ್ದಾರೆ. ಚನ್ನಪಟ್ಟಣ, ವಾರಾಣಸಿ ಮತ್ತು ಜೈಪುರದ ಸಾಂಪ್ರದಾಯಿಕ ಆಟಿಕೆ ತಯಾರಕರ ಜೊತೆ ಸಂವಾದ ನಡೆಸಿದ ಅವರು, ಬದಲಾಗುತ್ತಿರುವ ಮಕ್ಕಳ ಅಭಿರುಚಿಗೆ ತಕ್ಕಂತೆ ಹೊಸ ಆಟಿಕೆಗಳನ್ನು ರೂಪಿಸುವಂತೆ ಸಲಹೆ ನೀಡಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರು ಆಟಿಕೆ ಜಾತ್ರೆಗೆ ಚಾಲನೆ ನೀಡಿ ಮಾತನಾಡಿದರು —ಪಿಟಿಐ ಚಿತ್ರ

ಮೂಲಸೌಕರ್ಯ ವಲಯ: ಶೇ 0.1ರಷ್ಟು ಅಲ್ಪ ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ 8 ಮೂಲಸೌಕರ್ಯ ವಲಯಗಳು ಜನವರಿಯಲ್ಲಿ ಶೇ 0.1ರಷ್ಟು ಅಲ್ಪ ಬೆಳವಣಿಗೆ ಸಾಧಿಸಿವೆ. ರಸಗೊಬ್ಬರ, ಉಕ್ಕು ಮತ್ತು ವಿದ್ಯುತ್ ಉತ್ಪದನೆಯಲ್ಲಿಯಲ್ಲಿ ಹೆಚ್ಚಳ ಆಗಿರುವುದರಿಂದ ಈ ಬೆಳವಣಿಗೆ ಸಾಧ್ಯವಾಗಿದೆ.

ಕಲ್ಲಿದ್ದಲು, ಕಚ್ಚಾತೈಲ, ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು ಮತ್ತು ಸಿಮೆಂಟ್ ವಲಯಗಳು ನಕಾರಾತ್ಮಕ ಬೆಳವಣಿಗೆ ಕಂಡಿವೆ.




2020ರ ಡಿಸೆಂಬರ್‌ನಲ್ಲಿ ಶೇ 0.2ರಷ್ಟು ಬೆಳವಣಿಗೆ ಆಗಿತ್ತು. ಇದಕ್ಕೆ ಹೋಲಿಸಿದರೆ ಶೇ 0.1ರಷ್ಟು ಇಳಿಕೆ ಆಗಿದೆ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಬಿಡುಗಡೆ ಮಾಡಿರುವ ತಾತ್ಕಾಲಿಕ ಅಂಕಿ–ಅಂಶಗಳ ಪ್ರಕಾರ, 2020ರ ಜನವರಿಯಲ್ಲಿ ಈ ವಲಯಗಳು ಶೇ 2.2ರಷ್ಟು ಬೆಳವಣಿಗೆ ಕಂಡಿದ್ದವು. ಇದಕ್ಕೆ ಹೋಲಿಸಿದರೆ ಶೇ 2.1ರಷ್ಟು ಕಡಿಮೆಯಾಗಿದೆ.

2020–21ರ ಏಪ್ರಿಲ್–ಜನವರಿ ಅವಧಿಯಲ್ಲಿ ಈ ವಲಯಗಳ ಬೆಳವಣಿಗೆ ಶೇ 8.8ರಷ್ಟು ಇಳಿಕೆ ಕಂಡಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ 0.8ರಷ್ಟು ಬೆಳವಣಿಗೆ ಆಗಿತ್ತು. ಕೈಗಾರಿಕಾ ಉತ್ಪಾದನಾ ಸೂಚ್ಯಂಕದಲ್ಲಿ (ಐಐಪಿ) 8 ಪ್ರಮುಖ ಮೂಲಸೌಕರ್ಯ ವಲಯಗಳ ಕೊಡುಗೆಯು ಶೇ 40.27ರಷ್ಟಿದೆ.

ರೈತರ ಆದಾಯ ಹೆಚ್ಚಿಸುವ ಉತ್ಪನ್ನಗಳ ಪಟ್ಟಿ ಅಂತಿಮ

ನವದೆಹಲಿ (ಪಿಟಿಐ): ರೈತರ ಆದಾಯ ದ್ವಿಗುಣಗೊಳಿಸುವ ಮತ್ತು ಕೃಷಿ ಉತ್ಪನ್ನಗಳ ರಫ್ತು ಉತ್ತೇಜಿಸುವ ಉತ್ಪನ್ನಗಳ ಪಟ್ಟಿಯನ್ನು ಅಂತಿಮಗೊಳಿಸಿರುವುದಾಗಿ ಸರ್ಕಾರ ಶನಿವಾರ ತಿಳಿಸಿದೆ.



'ಒಂದು ಜಿಲ್ಲೆ ಒಂದು ಉತ್ಪನ್ನ' ಯೋಜನೆಯಡಿ ದೇಶದ 728 ಜಿಲ್ಲೆಗಳಲ್ಲಿ ಕೃಷಿ, ತೋಟಗಾರಿಕೆ, ಪ್ರಾಣಿ, ಕೋಳಿ ಸಾಕಣೆ, ಹಾಲು, ಮೀನು, ಜಲಚರ ವಲಯಗಳಲ್ಲಿ ಯಾವ ಉತ್ಪನ್ನಗಳಿಗೆ ಉತ್ತೇಜನ ನೀಡಬೇಕು ಎನ್ನುವುದನ್ನು ಗುರುತಿಸಲಾಗಿದೆ' ಎಂದು ಕೃಷಿ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಗೋಧಿ, ಭತ್ತ, ಸಂಬಾರ ಪದಾರ್ಥಗಳು,ಜೇನು, ಹಣ್ಣು ಸೇರಿದಂತೆ ಇನ್ನಿತರ ಉತ್ಪನ್ನಗಳನ್ನು ಬೆಳೆಯಲು ಉತ್ತೇಜನ ಸಿಗಲಿದೆ. ಆಹಾರ ಸಂಸ್ಕರಣಾ ಸಚಿವಾಲಯದ ಸಲಹೆ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಹಾಗೂ ಐಸಿಎಆರ್‌ಎ ಅಭಿಪ್ರಾಯ ಪಡೆದು ಇದನ್ನು ಅಂತಿಮಗೊಳಿಸಲಾಗಿದೆ ಎಂದು ಕೃಷಿ ಸಚಿವಾಲಯ ತಿಳಿಸಿದೆ.

ಕೆಲವು ರಾಜ್ಯಗಳ ವಿವರ

ರಾಜ್ಯ	ಜಿಲ್ಲೆಗಳು
ಕರ್ನಾಟಕ	31
ತಮಿಳುನಾಡು	36
ಕೇರಳ	14
ಮಹಾರಾಷ್ಟ್ರ	36
ಉತ್ತರ ಪ್ರದೇಶ	75
ಒಡಿಶಾ	30
ಅರುಣಾಚಲ ಪ್ರದೇಶ	38
ಬಿಹಾರ	38
ಛತ್ತೀಸಗಡ	28
ಹರಿಯಾಣ	22
ಜಾರ್ಖಂಡ್	24

'ಸಮಗ್ರ ಆರೋಗ್ಯ ನೀತಿ ಅಗತ್ಯ'

ನವದೆಹಲಿ: ಜಗತ್ತಿನಲ್ಲಿ ಗುರುತಿಸಲಾದ 8,000 ಅಪರೂಪದ ಕಾಯಿಲೆಗಳ ಪೈಕಿ ಭಾರತದಲ್ಲಿ 450 ರೋಗಗಳು ಮಾತ್ರ ಕಾಣಿಸಿಕೊಂಡಿವೆ. ಈ ಕಾಯಿಲೆಗಳ ಚಿಕಿತ್ಸೆಗಾಗಿ ಸಮಗ್ರ ಆರೋಗ್ಯ ನೀತಿಯೊಂದರ ಅಗತ್ಯ ಇದೆ ಎಂದು ತಜ್ಞರು ಪ್ರತಿಪಾದಿಸಿದ್ದಾರೆ.

ಹಲವರು ಅಪರೂಪದ ಕಾಯಿಲೆಗಳಿಂದ ಬಳಲುತ್ತಿದ್ದರೂ ಸಕಾಲದಲ್ಲಿ ರೋಗ ಪತ್ತೆಯಾಗುತ್ತಿಲ್ಲ. ಇಲ್ಲವೇ ಸೂಕ್ತ ಚಿಕಿತ್ಸೆ ಸಿಗುತ್ತಿಲ್ಲ. ಅಪರೂಪದ ಕಾಯಿಲೆಗಳಿಂದ ವೈದ್ಯ ಸಮುದಾಯದ ಮೇಲೆ ಒತ್ತಡ ಹೆಚ್ಚುತ್ತಿದೆ. ಕಾಯಿಲೆಯಿಂದ ಬಳಲುವವರ ಕುಟುಂಬಗಳು ತೊಂದರೆ ಅನುಭವಿಸುತ್ತಿವೆ ಎಂದು ತಜ್ಞರು ಹೇಳುತ್ತಾರೆ.

ಭಾನುವಾರ (ಫೆ.28) 'ಅಪರೂಪದ ಕಾಯಿಲೆ ದಿನ'. ಇಂತಹ ಕಾಯಿಲೆಗಳು ಪತ್ತೆಯಾಗುವುದೇ ಕಷ್ಟವಾಗಿರುವ ಹಿನ್ನೆಲೆಯಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರು ತಮ್ಮ ಕಳವಳ ವ್ಯಕ್ತಪಡಿಸಿದ್ದಾರೆ.

ಹಂಟರ್ ಸಿಂಡ್ರೋಮ್, ಗೌಷರ್ ಕಾಯಿಲೆ, ಫೇಬ್ರಿಸ್ ರೋಗಗಳಿಂದ ಬಹಳಷ್ಟು ಜನರು ಸಾವನ್ನಪ್ಪಿದ್ದಾರೆ ಎಂದು ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

27-2-2020

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9850-9900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1535)
ಸೋಯಾ ಕಚ್ಚಾ	1170 (1170)
ಪಾಮ್ ವಾರದ ಡೆಲಿವರಿ	1178 (1168)
ಸೂರ್ಯಕಾಂತಿ ಎಣ್ಣೆ ಕಚ್ಚಾ	1540 (1540)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 45,600 (46,400)
ಬೆಳ್ಳಿ ಕೆ.ಜಿ 67,800 (68,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1230 (1530)
ಸೋಯಾ (ರಿಫೈನ್ಡ್)	₹1205 (1185)
ಸೂರ್ಯಕಾಂತಿ (ರಿಫೈನ್ಡ್)	₹1570 (1570)
ಪಾಮೋಲಿನ್	₹1180 (1170)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	1000-1050
ನಡುಗೋಲು	1150-1250
ರಾಶಿ	1450-1500
ರಾಶಿ ಉತ್ತಮ	1500-1600
ಜರಡಿ	1700-1750
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	2000-2050
ಕಾಳು ಮೆಣಸು	325

ಅಡಿಕೆ
ಸಿದ್ದಾಪುರ

ಬಿಳಿಗೋಟು	18699-28608
ಕೋಕ	16699-29689
ಚಾಲಿ	32099-36099
ಕೆಂಪುಗೋಟು	27089-29469
ರಾಶಿ	41399-42009
ತಟ್ಟಿಬೆಟ್ಟೆ	26089-39099

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10150	10100	10175	136.85 ಸೆಂಟ್ಸ್
ಎಸಿ	4100	4000	4000	
ಆರ್‌ಪಿ	5400	5200	5275	
ಆರ್‌ಸಿ	3000	3150	3025	1456 ಡಾಲರ್ಸ್

ರಾಮನಗರ ರೇಷ್ಮೆ ಗೂಡು ಧಾರಣೆ




ಮಿಶ್ರತಳಿ (ಸಿ.ಬಿ) ₹250-400
ದ್ವಿತಳಿ (ಬಿ.ವಿ) ₹288-500

ಪ್ರಜಾವಾಣಿ
ಭಾನುವಾರದ
ಪುರವಣಿ
ಭಾನುವಾರ, 28 ಫೆಬ್ರುವರಿ 2021



ಹರಿದಿದೆ ಕಲಾ ಬೆಳದಿಂಗಳು

13



ಪುಂಡು ವೇಷದ ಐಕಾನ್

14



ರೈತ ಚಳವಳಿಯ ರಂಗಬಿಂಬ ನೀಲದರ್ಪಣ

15



ಗುಲಾಬೊ ಸಪೇರಾ

ಹಾಲಿವುಡ್‌ನಲ್ಲೂ ಮಿಂಚಿದ
ಹಾವಾಡಗಿತ್ತಿ!

ಪ್ರವೀಣ ಕುಲಕರ್ಣಿ

‘ಭಾರತವೆಂದರೆ ಹಾವಾಡಿಗರ ದೇಶ’ ಎಂದು ಮೂಗು ಮುರಿದ ರಾಷ್ಟ್ರಗಳು ಈಗ ಸರದಿಯಲ್ಲಿ ನಿಂತು ಅದೇ ಭಾರತದ ಹಾವಾಡಿಗ ಕುಟುಂಬದ ಕಲಾವಿದೆ ಗುಲಾಬೊ ಸಪೇರಾ ಅವರ ನೃತ್ಯ ಪ್ರದರ್ಶನಕ್ಕಾಗಿ ಹಾತೊರೆದು ಕಾಯುತ್ತಿವೆ. ಹೇಳಿಕೊಳ್ಳಲು ಒಂದು ಊರೂ ಇಲ್ಲದ ರಾಜಸ್ಥಾನದ ಈ ಕಲಾವಿದೆ, 150ಕ್ಕೂ ಹೆಚ್ಚು ದೇಶಗಳಲ್ಲಿ ಕಾಲ್‌ಬೆಲಿಯಾ ನೃತ್ಯ ಪ್ರದರ್ಶನ ನೀಡಿ ಜಗತ್ತಿನ ಗಮನ ಸೆಳೆದಿದ್ದಾರೆ.

ರಾಜಸ್ಥಾನದ ಕುರುಚಲು ಕಾಡುಗಳಲ್ಲಿ ಪುಂಗಿಯ ನಾದ, ದಪಲಿಯ ಸದ್ದಿಗೆ ಹಾವಿನ ಚಲನೆಯಂತೆ ನೃತ್ಯದ ಪಟ್ಟುಗಳನ್ನು ಪ್ರದರ್ಶಿಸುತ್ತಿದ್ದ ಗುಲಾಬೊ, ಶಾಲೆಯ ಮೆಟ್ಟಿಲನ್ನೇನು ತುಳಿದವರಲ್ಲ. ಆದರೆ, ಹಾಲಿವುಡ್ ಚಿತ್ರಗಳಲ್ಲೂ ನಟಿಸುವಷ್ಟು ಎತ್ತರಕ್ಕೆ ಬೆಳೆದು ನಿಂತವರು. ಕಾಡು ಕುಸುಮವೊಂದು ಹೀಗೆ ಜಗತ್ತಿನ ತುಂಬಾ ತನ್ನ ಕಲೆಯ ಪರಿಮಳವನ್ನು ಪಸರಿಸುತ್ತಿರುವುದು ನಮ್ಮ ದೇಶದ ಬೆರಗುಗಳಲ್ಲೊಂದು. ಈ ವರ್ಷದ ಜೈಪುರ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಅವರು ‘ಭಾನುವಾರದ ಪುರವಣಿ’ಯೊಂದಿಗೆ ಮಾತಿಗೆ ಸಿಕ್ಕರು. ‘ಹೇಳತೀನಿ ಕೇಳ...’ ಎಂದು ತಮ್ಮ ಬದುಕಿನ ರೋಚಕ ಕಥೆಗಳ ಪುಟಗಳನ್ನು ತಿರುವಿ ಹಾಕಿದರು.

ಕಾಲ್‌ಬೆಲಿಯಾ (ಹಾವು ಹಿಡಿಯುವವರು) ಎನ್ನುವುದು ರಾಜಸ್ಥಾನದ ಬುಡಕಟ್ಟು ಜನಾಂಗಗಳಲ್ಲಿ ಒಂದು. ಗುಡ್ಡಗಾಡಿನಲ್ಲಿಯೇ ಈ ಸಮುದಾಯ ನೆಲೆ ಕಂಡುಕೊಂಡಿದೆ. ಹಾವು ಹಿಡಿಯುವುದು, ಹಾವಾಡಿಸಲು ಊರೂರು ಸುತ್ತುವುದು ಈ ಸಮುದಾಯದ ಕಾಯಕ. ಅಂತಹ ಸಮುದಾಯದಲ್ಲಿ ಜನಿಸಿದವರು ಗುಲಾಬೊ.

ಒಂದು ಕುಟುಂಬಕ್ಕೆ ಒಂದೇ ಹೆಣ್ಣುಮಗು ಎನ್ನುವುದು ಕಾಲ್‌ಬೆಲಿಯಾ ಜನಾಂಗದ ಅಲಿಖಿತ ನಿಯಮ. ಕುಟುಂಬದ ಏಳನೇ ಮಗುವಾಗಿ ಗುಲಾಬೊ ಜನಿಸಿದಾಗ ಆಕೆಗೆ ಅದಾಗಲೇ ಮೂವರು ಅಕ್ಕಂದಿರು ಇದ್ದರು. ಹಿಂದೆಯೂ ಈ ಕುಟುಂಬದ ಹೆಣ್ಣುಮಕ್ಕಳನ್ನು ಕೊಲ್ಲಲು ಹೋಗಿ ಸೋತಿದ್ದ ಸಮುದಾಯದ ಮುಖಂಡರು, ನಮ್ಮ ಹಾಡಿಯಲ್ಲಿ ‘ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಯಿತು’ ಎಂದು ಆಕ್ರೋಶಗೊಂಡರು, ಆಗತಾನೆ ಜನಿಸಿದ ಹಸುಗೂಸನ್ನು ಕಾಡಿನಲ್ಲಿ ದಫನ ಮಾಡಲು ಅದರ ಅಮ್ಮನ ಮಡಿಲಿನಿಂದ ಕಿತ್ತುಕೊಂಡು ಹೋದರು. ಆದರೆ, ಅವರನ್ನು ಹಿಂಬಾಲಿಸಿದ ಆ ಕೂಸಿನ ಚಿಕ್ಕಮ್ಮ, ಮಣ್ಣಾಗುತ್ತಿದ್ದ ಕಂದನನ್ನು ಉಳಿಸಿಕೊಂಡು ಬಂದರು. ಗುಲಾಬೊ, ಜನಿಸಿದ ತಕ್ಷಣವೇ ಸಾವಿನ ದವಡೆಯಿಂದ ಪಾರಾಗಿ ಬಂದ ಕಥೆ ಇದು.

> ಹಾವುಗಳನ್ನು ಒಯ್ಯುತ್ತಿದ್ದ ಬುಟ್ಟಿಗಳ ಮಧ್ಯೆ ಊರಿಂದೂರಿಗೆ ಹೋಗುತ್ತಿದ್ದ ಆ ಪುಟ್ಟ ಬಾಲಕಿ, ಕಾಲ್‌ಬೆಲಿಯಾ ನೃತ್ಯದ ಐಕಾನ್ ಆಗಿ ಬೆಳೆದಿದ್ದು ಒಂದು ರೋಚಕ ಕಥೆ...

‘ಕಾಲ್‌ಬೆಲಿಯಾ ಸಮುದಾಯ ಗುಡ್ಡಗಾಡಿನಲ್ಲಿಯೇ ವಾಸ ಇರುವುದರಿಂದ ಮನೆಯಲ್ಲಿ ಹೆಣ್ಣುಮಕ್ಕಳು ಹೆಚ್ಚಾಗಿದ್ದರೆ ಅಪಾಯ ಜಾಸ್ತಿ. ಏನಾದರೂ ಹೆಚ್ಚು-ಕಡಿಮೆಯಾದರೆ ಕುಲಕ್ಕೂ ಕೆಟ್ಟ ಹೆಸರು. ಅಲ್ಲದೆ, ಬೆಳೆದ ಮೇಲೆ ಮದುವೆ ಮಾಡಲು ದೊಡ್ಡ ಪ್ರಮಾಣದಲ್ಲಿ ವರದಕ್ಷಿಣೆಯನ್ನೂ ಕೊಡಬೇಕು. ಇಂತಹ ಯಾವ ತಾಪತ್ರಯ ಬೇಡವೆಂದು ಸಮುದಾಯದ ಮುಖಂಡರು ಕಂಡುಕೊಂಡ ಸುಲಭದ ಉಪಾಯ ಹುಟ್ಟಿದ ತಕ್ಷಣವೇ ಹೆಣ್ಣುಮಗುವಿನ ಜೀವವನ್ನು ತೆಗೆದುಬಿಡುವುದು’ ಎಂದು ನೋವಿನ ನಗೆ ನಗುತ್ತಾರೆ ಗುಲಾಬೊ.

ಮನೆಯಲ್ಲಿ ಬಿಟ್ಟುಹೋದರೆ ಸಮುದಾಯದ ಮುಖಂಡರಿಂದ ಮತ್ತೆ ಅಪಾಯ ಕಟ್ಟಿಟ್ಟ ಬುತ್ತಿ ಎಂದರಿತ ಗುಲಾಬೊ ಅವರ ಅಪ್ಪ, ಮುಂದೆ ಆ ಪುಟ್ಟ ಮಗುವನ್ನು ಹಾವಿನ ಬುಟ್ಟಿಗಳ ಮಧ್ಯೆ ಕೂರಿಸಿಕೊಂಡು ಹಾವಾಡಿಸಲು ಹೋಗುತ್ತಿದ್ದರು. ಹಾವಿಗೆ ಹಾಲು ಕುಡಿಸಿದ ಮೇಲೆ, ಅವುಗಳು ಬಿಟ್ಟ ಹಾಲನ್ನು ಗುಲಾಬೊ ಅವರಿಗೆ ಕುಡಿಯಲು ಕೊಡುತ್ತಿದ್ದರು. ಹೀಗೆ ಗುಲಾಬೊ ಹಾವಿನ ಹುಡುಗಿಯಾಗಿ ಬೆಳೆಯಲು ಆರಂಭಿಸಿದರು.

ಹಾವುಗಳನ್ನು ಪಳಗಿಸುವಾಗ, ಊರೂರಲ್ಲಿ ಪ್ರದರ್ಶನ ನೀಡುವಾಗ ಅಪ್ಪ ಪುಂಗಿ ಊದುತ್ತಿದ್ದ. ಅಣ್ಣ ದಪಲಿ ಬಾರಿಸುತ್ತಿದ್ದ. ಅಕಶೇರುಕಗಳಾದ ಹಾವುಗಳು ಕಣ್ಣು ಮಿಟುಕಿಸುವಷ್ಟರಲ್ಲಿ ಹೆಡೆ ಎತ್ತಿ ಅತ್ತಿಂದಿತ್ತ ಚಲಿಸುವುದನ್ನು ಗುಲಾಬೊ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದರು. ಅವುಗಳು ಬಳುಕುವುದನ್ನು ಅಷ್ಟೇ ಏಕಾಗ್ರತೆಯಿಂದ ಗಮನಿಸುತ್ತಿದ್ದರು. ಕಾಡಿನಲ್ಲಿ ಹಾವುಗಳ ಪ್ರಣಯ ಪ್ರಸಂಗಗಳನ್ನೂ ಅವರು ನೋಡಿದ್ದರು. ಅವುಗಳು ಪಲ್ಟಿ ಹೊಡೆಯುತ್ತಿದ್ದ ಆ ವೇಗ ಈ ಹುಡುಗಿಗೆ ರೋಮಾಂಚನವನ್ನು ಉಂಟು ಮಾಡಿತ್ತು. ಸಂಜೆ ಮನೆಯ ಮುಂದಿನ ಬಯಲಿನಲ್ಲಿ ದಪಲಿಯ ಸದ್ದು ಮೊಳಗುವಾಗ ಅಥವಾ ಪುಂಗಿಯ ನಾದ ಕೇಳಿಬರುವಾಗ ಗುಲಾಬೊ ನೃತ್ಯವೂ ಜೋರಾಗಿ ನಡೆಯುತ್ತಿತ್ತು. ಮಬ್ಬುಗತ್ತಲಿನಲ್ಲಿ ನಡೆಯುತ್ತಿದ್ದ ಆ ಕಲಾ ಪ್ರದರ್ಶನ ಹಾಡಿಯಲ್ಲಿ ಯಾರೆಂದರೆ ಯಾರ ಗಮನಕ್ಕೂ ಬರಲಿಲ್ಲ. ಆದರೆ, ಆ ವೇಳೆಗೆ ಹಾವಿನಂತೆ ಬಳುಕುವುದನ್ನು ಆ ಹುಡುಗಿ ಕಲಿತುಬಿಟ್ಟಿದ್ದಳು.

ಗುಲಾಬೊ ಅವರ ಅಪ್ಪ ಹಾವುಗಳ ಬುಟ್ಟಿಗಳನ್ನು ಹೊತ್ತು ಪುಷ್ಕರ ಮೇಳ ಕ್ಕೆ ಹೋಗುವಾಗ ಮಗಳನ್ನೂ ಕರೆದೊಯ್ದಿದ್ದರು. ಅಪ್ಪ ಹಾವಾಡಿಸುವಾಗ, ಮಗಳು ಮಾಡುತ್ತಿದ್ದ ನೃತ್ಯ ಮೇಳದ ಉಸ್ತುವಾರಿ ಹೊತ್ತ ರಾಜಸ್ಥಾನದ ಅಧಿಕಾರಿಗಳ ಗಮನವನ್ನೂ ಸೆಳೆಯಿತು. ‘ಏನು ಈ ಹುಡುಗಿ, ದೇಹದಲ್ಲಿ ಎಲುಬುಗಳೇ ಇಲ್ಲ ಎನ್ನುವಂತೆ ನೃತ್ಯ ಮಾಡುತ್ತಾಳಲ್ಲ’ ಎಂದು ಅವರಿಗೆಲ್ಲ ಸೋಜಿಗ. ಪ್ರಧಾನ ವೇದಿಕೆಯಲ್ಲಿ ಗುಲಾಬೊ ಅವರ ನೃತ್ಯ ಪ್ರದರ್ಶನಕ್ಕೆ ಅವಕಾಶವನ್ನೂ ಮಾಡಿಕೊಟ್ಟರು. ಅಲ್ಲಿಂದ ಈ ಕಲಾವಿದೆ ಹಿಂದಿರುಗಿ ನೋಡಿದ್ದೇ ಇಲ್ಲ. ಅವಕಾಶಗಳ ಮೇಲೆ ಅವಕಾಶಗಳು ಅವರನ್ನು ಹುಡುಕಿಕೊಂಡು ಬಂದವು.

ಅಮೆರಿಕದಲ್ಲಿ ನಡೆದ ಭಾರತೀಯ ಹಬ್ಬದಲ್ಲಿ ಗುಲಾಬೊ ಅವರಿಗೆ ಪಾಲ್ಗೊಳ್ಳುವ ಅವಕಾಶ ಸಿಕ್ಕಾಗ ಅವರ ಅಪ್ಪ ತೀರಿ ಹೋಗಿದ್ದರು. ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡವರೇ ಆಕೆ ಸೀದಾ ವಾಷಿಂಗ್ಟನ್ ವಿಮಾನ ಏರಲು ಹೊರಟರು. ಸಮುದಾಯದ ಮುಖಂಡರು ಆಕ್ಷೇಪ ಎತ್ತಿದಾಗ, ‘ನಾನು ಎತ್ತರಕ್ಕೆ ಬೆಳೆಯಬೇಕು ಎನ್ನುವುದು ಅಪ್ಪನ ಅಪೇಕ್ಷೆಯಾಗಿತ್ತು. ಇಲ್ಲಿದ್ದು ಕರ್ಮಾದಿಗಳಲ್ಲಿ ಪಾಲ್ಗೊಳ್ಳುವುದಕ್ಕಿಂತ ಅಮೆರಿಕಕ್ಕೆ ಹೋಗಿ ಪ್ರದರ್ಶನ ನೀಡುವುದೇ ಆತನಿಗೆ ನಾನು ಸಲ್ಲಿಸುವ ದೊಡ್ಡ ಶ್ರದ್ಧಾಂಜಲಿ’ ಎಂದು ಬಾಯಿ ಮುಚ್ಚಿಸಿದರು. ವಾಷಿಂಗ್ಟನ್‌ನ ವಿಮಾನ ಏರಿದಾಗ ಗುಲಾಬೊ ಅವರಿಗೆ ಕೇವಲ ಹದಿನಾಲ್ಕರ ಹರೆಯ. ಮುಂದೆ ಹಾಲಿವುಡ್‌ನ ಯಾತ್ರೆಗೂ ಆ ಪ್ರದರ್ಶನ ನೆರವಾಯಿತು.

ಕಾಲ್‌ಬೆಲಿಯಾ ನೃತ್ಯ ಪ್ರಕಾರಕ್ಕೆ ಒಂದು ಸ್ಪಷ್ಟ ರೂಪವನ್ನು ಕೊಟ್ಟವರು ಗುಲಾಬೊ. ಅವರ ಈ ಸಾಹಸಕ್ಕಾಗಿಯೇ ಪದ್ಮಶ್ರೀ ಗೌರವ ಅವರನ್ನು ಹುಡುಕಿಕೊಂಡು ಬಂದಿದ್ದು. ಗುಲಾಬೊ, ಸೊಗಸಾಗಿ ಹಾಡನ್ನೂ ಹಾಡುತ್ತಾರೆ. ಹಾಡಿನ ಲಯ, ಪುಂಗಿ-ದಪಲಿಯ ನಾದದ ಏರಿಳಿತಗಳಿಗೆ ತಕ್ಕಂತೆ ಕಾಲ್‌ಬೆಲಿಯಾ ನೃತ್ಯ ಅರಳುತ್ತಾ ಹೋಗುತ್ತದೆ. ಕ್ಷಣಗಳು ಉರುಳಿದಂತೆ ಪಟ್ಟುಗಳು ಪಡೆಯುವ ವೇಗ ಬೆರಗು ಹುಟ್ಟಿಸುತ್ತದೆ. ಮೈಮೇಲೆ ನೃತ್ಯದ ದಿರಿಸು ಹಾಗೂ ಆಭರಣಗಳು ಸೇರಿ ಮಣಭಾರ (ಬರೋಬ್ಬರಿ 21 ಕೆಜಿ ತೂಕ) ಹೊತ್ತುಕೊಂಡು ಹೆಜ್ಜೆ ಹಾಕುವುದೇನು ತಮಾಷೆಯ ಮಾತೇ? ಈ ಹಿಂದೆ ಗುಲಾಬೊ ಕುಟುಂಬಕ್ಕೆ ಬಹಿಷ್ಕಾರ ಹಾಕುವ ಮಾತುಗಳನ್ನಾಡಿದವರೇ ಇಂದು ಅವರ ಮಕ್ಕಳನ್ನು ಈ ಕಲಾವಿದೆ ಬಳಿ ನೃತ್ಯದ ತರಬೇತಿಗಾಗಿ ಕಳುಹಿಸುತ್ತಿದ್ದಾರೆ. ಹೆಣ್ಣುಮಕ್ಕಳನ್ನು ಕೊಲ್ಲುವ ಪ್ರವೃತ್ತಿ ಬಹುತೇಕ ನಿಂತಿದ್ದು, ಅದಕ್ಕೆ ಗುಲಾಬೊ ಅವರೇ ಪ್ರೇರಣೆಯಾಗಿದ್ದಾರೆ. ಕಾಲ್‌ಬೆಲಿಯಾ ನೃತ್ಯ ಶಾಲೆಯನ್ನು ತೆರೆಯುವ ಇರಾದೆಯನ್ನೂ ಅವರು ಹೊಂದಿದ್ದಾರೆ. ಮಾತು ಮುಗಿಸುವ ಮುನ್ನ ‘ಅರೆರೆರೆ ರೇ ಕಾಳ್ಯೋ...’ ಎಂದು ಅವರು ರಾಗ ತೆಗೆಯುವಾಗ ಭವಿಷ್ಯದ ಬಗೆಗೆ ಅವರು ಹೊಂದಿರುವ ಆತ್ಮವಿಶ್ವಾಸದ ಸೆಳಕೊಂದು ಫಕ್ಕನೆ ಹೊಳೆದಂತಾಯಿತು. ❖

ರಾಯಧನದ
ಕಟಕಟೆಯಲ್ಲಿ
ಕಂಟೆಂಟ್



ಶ್ರೀಹರ್ಷ ಸಾಲಿಮಠ



ಆಸ್ಟ್ರೇಲಿಯಾ ಸರ್ಕಾರವು ನ್ಯೂಸ್ ಮೀಡಿಯಾ ಬಾರ್ಗೇನಿಂಗ್ ಕೋಡ್ ಅನ್ನು ಫೆ. 25ರಂದು ಅಧಿಕೃತ ಕಾನೂನಾಗಿ ಜಾರಿಗೊಳಿಸಿತು. ಈ ಕಾನೂನನ್ನು ಜಾರಿಗೊಳಿಸುವುದು ಬಲಿಷ್ಠ ದೇಶಗಳಲ್ಲೊಂದಾದ ಆಸ್ಟ್ರೇಲಿಯಾಕ್ಕೆ ಸುಲಭ ತುತ್ತೇನೂ ಆಗಿರಲಿಲ್ಲ. ಶ್ರೀಮಂತ ದೇಶದ ಸರ್ಕಾರವನ್ನೇ ಅಲ್ಲಾಡಿಸುವಷ್ಟು ಕೆಲ ಕಂಪನಿಗಳು ಬಲಾಢ್ಯವಾಗಿರುವುದು ಮತ್ತು ಅತ್ಯಂತ ನಾಜೂಕಾಗಿ ಸಮಸ್ತ ಜಗತ್ತು ಬಂಡವಾಳಿಗರ ಕಪಿಮುಷ್ಟಿಯೊಳಗೆ ಜಾರಿ ಹೋಗಿರುವುದು ಸೂಕ್ಷ್ಮ ಕಣ್ಣುಗಳ ಅರಿವಿಗೆ ಬಂತು. ಈ ರೀತಿಯ ಒಂದು ಕಾನೂನನ್ನು ತರಲು ಆಸ್ಟ್ರೇಲಿಯಾ ಸರ್ಕಾರ ಉದ್ದೇಶಿಸಿದ್ದು 2019ರಲ್ಲಿ. ಆಸ್ಟ್ರೇಲಿಯನ್ ಸ್ಪರ್ಧಾತ್ಮಕ ಮತ್ತು ಗ್ರಾಹಕ ಆಯೋಗವು (Australian Competition and Consumer commission) ಡಿಜಿಟಲ್ ಪ್ಲಾಟ್‌ಫಾರಂ ರಿಪೋರ್ಟ್ ಎಂಬ ಆರುನೂರಾ ಇಪ್ಪತ್ತು ಪುಟಗಳ ಬೃಹತ್ ವರದಿಯನ್ನು ತಯಾರಿಸಿತು. (ಈ ವರದಿ ಆಸ್ಟ್ರೇಲಿಯನ್ ಸ್ಪರ್ಧಾತ್ಮಕ ಮತ್ತು ಗ್ರಾಹಕ ಆಯೋಗದ ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಲು ಲಭ್ಯವಿದೆ.) ಈ ವರದಿಯು ಕೆಲವು ಪ್ರಮುಖ ಅಂಶಗಳ ಬಗ್ಗೆ ಸರ್ಕಾರದ ಗಮನ ಸೆಳೆಯಿತು. ಅದರಲ್ಲೂ ವರದಿಯು ಮುಖ್ಯವಾಗಿ ಗೂಗಲ್ ಮತ್ತು ಫೇಸ್‌ಬುಕ್‌ಗಳನ್ನು ಹೆಸರಿಸಿತ್ತು. ಈ ವರದಿಯಲ್ಲಿ ಗಮನ ಸೆಳೆದ ಕೆಲ ಪ್ರಮುಖ ಅಂಶಗಳನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ,

> ಆಸ್ಟ್ರೇಲಿಯಾದಲ್ಲಿ ಮೊನ್ನೆಯಷ್ಟೇ ಜಾರಿಗೆ ತಂದ ‘ಸುದ್ದಿ ಮಾಧ್ಯಮ ಚೌಕಾಸಿ ಕಾನೂನು’ ಜಗತ್ತಿನಾದ್ಯಂತ ಅಷ್ಟೊಂದು ಸದ್ದು ಮಾಡುತ್ತಿರುವುದೇಕೇ? ಸುದ್ದಿ ಮಾಧ್ಯಮಗಳು ಮತ್ತು ಡಿಜಿಟಲ್ ವೇದಿಕೆಗಳ ಮೇಲೆ ಆ ಕಾನೂನು ಬೀರುವ ಪರಿಣಾಮಗಳು ಏನು? ರಾಯಧನದ ಈ ಹೋರಾಟ ಎಲ್ಲಿಗೆ ಹೋಗಿ ಮುಟ್ಟೀತು?

ಕಳೆದೆರಡು ದಶಕಗಳಲ್ಲಿ ಸಾಮಾಜಿಕ ಮಾಧ್ಯಮಗಳು ಪ್ರಬಲವಾಗಿ ಬೆಳೆದಿದ್ದು ವಾರ್ತಾಪತ್ರಿಕೆ, ರೇಡಿಯೊ, ದೂರದರ್ಶನದಂತಹ ಸಾಂಪ್ರದಾಯಿಕ ಮೀಡಿಯಾಗಳಿಗೆ ಪರ್ಯಾಯವಾಗಿ ಕೆಲಸ ಮಾಡುತ್ತಿವೆ. ಆದರೆ ಈ ಸೋಷಿಯಲ್ ಮೀಡಿಯಾ ಕಂಪನಿಗಳಿಗೂ ಮತ್ತು ಸಾಂಪ್ರದಾಯಿಕ ಮಾಧ್ಯಮಗಳಿಗೂ ತಳಮಟ್ಟದಲ್ಲಿ ಒಂದು ಮೂಲಭೂತವಾದ ಅಸಮತೋಲನ ತಲೆದೋರಿದೆ. ಫೇಸ್‌ಬುಕ್ ಮತ್ತು ಗೂಗಲ್ ಈ ಎರಡೂ ಬೃಹತ್ ಕಂಪನಿಗಳು ನೂರಾರು ಕೋಟಿಯಷ್ಟು ಗ್ರಾಹಕರನ್ನು ಹೊಂದಿರುವುದಲ್ಲದೇ ಧನಬಲವನ್ನೂ ಹೊಂದಿದ್ದು ಹೆಚ್ಚಿನ ಪ್ರಭಾವ ಬೀರುವ ಸಾಮರ್ಥ್ಯವನ್ನು ಹೊಂದಿವೆ. ಲಕ್ಷಾಂತರ ಸಾಂಪ್ರದಾಯಿಕ ಸುದ್ದಿ ಪ್ರಕಾಶನ ಸಂಸ್ಥೆಗಳಿದ್ದು ಅವ್ಯಾವುವೂ ಈ ಬೃಹತ್ ಕಂಪನಿಗಳಿಗೆ ಸಮನಾಗಿ ನಿಲ್ಲುವ ಸಾಮರ್ಥ್ಯ ಹೊಂದಿಲ್ಲ.

ಸುದ್ದಿ ಪ್ರಕಾಶನ ಸಂಸ್ಥೆಗಳಿಗೆ ಅಂದರೆ ಮೀಡಿಯಾ ಹೌಸ್‌ಗಳಿಗೆ ಕಾನೂನಾತ್ಮಕ ಸರ್ಕಾರಿ ನಿಯಂತ್ರಣ ನಿಬಂಧನೆಗಳಿವೆ. ಆದರೆ ಈ ಸಾಮಾಜಿಕ ಜಾಲತಾಣಗಳು ಸಾಂಪ್ರದಾಯಿಕ ಮಾಧ್ಯಮಗಳಂತೆ ಕಾರ್ಯ ನಿರ್ವಹಿಸುತ್ತಿದ್ದರೂ ಕೂಡ ಆ ಯಾವ ನಿಯಂತ್ರಣಗಳೂ ಅನ್ವಯಿಸುವುದಿಲ್ಲ. ಸಾಮಾಜಿಕ ಜಾಲತಾಣಗಳ ಅನಿಯಂತ್ರಿತ ಬೆಳವಣಿಗೆಯಿಂದಾಗಿ ಸಾಂಪ್ರದಾಯಿಕ ಮಾಧ್ಯಮಗಳು ತಮ್ಮ ಮಹತ್ವವನ್ನೂ, ಆದಾಯವನ್ನೂ ಕಳೆದುಕೊಂಡು ವಿನಾಶದತ್ತ ಸಾಗುತ್ತಿವೆ.

ಈ ವರದಿಯನ್ನು ಗಮನದಲ್ಲಿರಿಸಿಕೊಂಡು ಆಸ್ಟ್ರೇಲಿಯಾ ಸರ್ಕಾರವು ಈ ಕುರಿತು ಕಾನೂನು ರೂಪಿಸಲು ಸೂಕ್ತ ಕರಡು ಮಸೂದೆ ತಯಾರಿಸಲು ಆಸ್ಟ್ರೇಲಿಯನ್ ಸ್ಪರ್ಧಾತ್ಮಕ ಮತ್ತು ಗ್ರಾಹಕ ಆಯೋಗಕ್ಕೆ ಸೂಚಿಸಿತು. ಅದರಂತೆ ಆಯೋಗವು ಕಳೆದ ವರ್ಷದ ಆಗಸ್ಟ್ ಹೊತ್ತಿಗೆ ಈ ಕರಡನ್ನು ಸರ್ಕಾರಕ್ಕೆ ಒಪ್ಪಿಸಿತು. ಈ ಕರಡನ್ನು ಕಾನೂನಾಗಿ ಜಾರಿಗೆ ತಂದಿದ್ದೇ ಆದರೆ ಸಾಂಪ್ರದಾಯಿಕ ಮೀಡಿಯಾಗಳ ಪುನಶ್ಚೇತನವಾಗುವುದಲ್ಲದೇ ಈಗ ಜಾಗತಿಕ ಪಿಡುಗಾಗಿ ಕಾಡುತ್ತಿರುವ ಸುಳ್ಳುಸುದ್ದಿಯ ಹಾವಳಿಗೂ ಕಡಿವಾಣ ಬೀಳುತ್ತದೆ ಎಂದು ಹೇಳಲಾಯಿತು. ಈ ಮಸೂದೆಯು ಸಂಸತ್ತಿನಲ್ಲಿ ಚರ್ಚೆಗೊಳಪಟ್ಟು ಅಂಗೀಕಾರವಾಗುವ ಹಂತಕ್ಕೆ ಬರುತ್ತಿದ್ದಂತೆ ಈ ಎರಡೂ ದೈತ್ಯ ಕಂಪನಿಗಳು ಸರ್ಕಾರದ ವಿರುದ್ಧ ತಿರುಗಿ ಬಿದ್ದವು. ಗೂಗಲ್ ಆಸ್ಟ್ರೇಲಿಯಾದಲ್ಲಿ ತನ್ನ ಸೇವೆಯನ್ನು ಹಿಂಪಡೆಯುವುದಾಗಿ ಬೆದರಿಸಿತು. ಫೇಸ್‌ಬುಕ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆಸ್ಟ್ರೇಲಿಯಾದ ಸುದ್ದಿ ಚಾನೆಲ್‌ಗಳನ್ನು ಬ್ಲಾಕ್ ಮಾಡಿತು. ಇದಾವ ಬೆದರಿಕೆಗಳಿಗೂ ಆಸ್ಟ್ರೇಲಿಯಾ ಸರ್ಕಾರ ಬಗ್ಗಲಿಲ್ಲ. ಈ ಕಾನೂನಿನಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಪ್ರಧಾನಿ ಸ್ಕಾಟ್ ಮಾರಿಸನ್ ಬಲವಾಗಿ ನಿಂತರು. ಕಾನೂನಿನ ಕರಡಿನಲ್ಲಿದ್ದದ್ದೇನು ಮತ್ತು ಗೂಗಲ್, ಫೇಸ್‌ಬುಕ್‌ಗಳು ಇದನ್ನು ವಿರೋಧಿಸಿದ್ದೇಕೆ ಎಂದು ಒಂದೊಂದಾಗಿ ನೋಡೋಣ.

ಈ ನ್ಯೂಸ್ ಮೀಡಿಯಾ ಬಾರ್ಗೇನಿಂಗ್ ಕಾನೂನು ಏನು ಹೇಳುತ್ತದೆಂದರೆ ಈ ಎರಡೂ ಕಂಪನಿಗಳು ತಮ್ಮ ವೇದಿಕೆಯ ಮುಖಾಂತರ ಹಂಚಿಕೊಳ್ಳುವ ಯಾವುದೇ ಸುದ್ದಿಗೆ ಆ ಸುದ್ದಿಯ ವಾರಸುದಾರರಾದ ಪತ್ರಿಕೆಗಳಿಗೆ ಸೂಕ್ತ ರಾಯಧನವನ್ನು ಕೊಡಬೇಕು. ಈ ರಾಯಧನ ಎಷ್ಟೆಂದು ಪತ್ರಿಕೆಗಳು ಮತ್ತು ಕಂಪನಿಗಳು ಪರಸ್ಪರ ಮಾತುಕತೆಯ ಮೂಲಕ ನಿರ್ಧರಿಸಿಕೊಳ್ಳಬಹುದು. ಮಾತುಕತೆಯ ಸಮಯದಲ್ಲಿ ಯಾವುದೇ ನಿರ್ಧಾರಕ್ಕೆ ಬರಲಾಗದಿದ್ದರೆ ಸರ್ಕಾರವು ನಿಯಮಿಸಿದ ಮಧ್ಯವರ್ತಿಗಳ ಮೂಲಕ ಈ ರಾಯಧನದ ವಿಷಯವನ್ನು ಬಗೆಹರಿಸಿಕೊಳ್ಳಬಹುದು.

ಎರಡನೆಯದಾಗಿ ಈ ಕಂಪನಿಗಳು ತಮ್ಮ ಸರ್ಚ್ ಅಲ್ಗಾರಿದಂಗಳ ಬದಲಾವಣೆಯ ವಿವರಗಳನ್ನು ಪತ್ರಿಕೆಗಳೊಂದಿಗೆ ಹದಿನೈದು ದಿನ ಮುಂಚೆಯೇ ಹಂಚಿಕೊಳ್ಳಬೇಕು. ಸರ್ಚ್ ಅಲ್ಗಾರಿದಂಗಳೆಂದರೆ ಗೂಗಲ್‌ನಲ್ಲಿ ನಾವು ಯಾವುದೇ ವಿಷಯವನ್ನು ಹುಡುಕಿದಾಗ ಯಾವುದನ್ನು ಅತ್ಯಂತ ಮೇಲೆ ತೋರಿಸಬೇಕು ಯಾವುದನ್ನು ನಂತರ ತೋರಿಸಬೇಕು ಎಂಬುದನ್ನು ನಿರ್ಧರಿಸಲು ಬರೆಯಲಾದ ಚಾಣಾಕ್ಷ ಪ್ರೋಗ್ರಾಮ್‌ಗಳು. ಇವುಗಳನ್ನು ಗೂಗಲ್‌ನ ಎಂಜಿನಿಯರ್‌ಗಳು ಪ್ರತಿದಿನವೂ ಪರಿಷ್ಕರಿಸುತ್ತಿರುತ್ತಾರೆ. ಆಯಾದಿನ ಮಾರುಕಟ್ಟೆಗೆ ತಕ್ಕಂತೆ ಜನರ ಟ್ರೆಂಡ್‌ಗೆ ತಕ್ಕಂತೆ ಹಾಗೂ ಜಾಹೀರಾತುಗಳ ಬೇಡಿಕೆಗೆ ತಕ್ಕಂತೆ ಈ ಅಲ್ಗಾರಿದಂಗಳನ್ನು ರೂಪಿಸಲಾಗುತ್ತದೆ.

ಗೂಗಲ್‌ಗೆ ಆದಾಯವನ್ನು ಹಂಚಿಕೊಳ್ಳುವಲ್ಲಿ ಹೆಚ್ಚಿನ ತಕರಾರುಗಳು ಇರಲಿಲ್ಲವಾದರೂ ಅಲ್ಗಾರಿದಂಗಳ ವಿವರಗಳನ್ನು ಹಂಚಿಕೊಳ್ಳುವುದು ತಲೆನೋವಾಗಿತ್ತು. ಯಾಕೆಂದರೆ ಅಲ್ಗಾರಿದಂಗಳು ಕಂಪನಿಯ ಆಂತರಿಕ ಮಾಹಿತಿ, ಇವು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತವೆ. ಉದಾಹರಣೆಗೆ ಒಂದು ಸುದ್ದಿಯು ಆಸ್ಟ್ರೇಲಿಯಾದಲ್ಲಿ ಬಹುಮೇಲಕ್ಕೆ ತೋರಿಸಲ್ಪಟ್ಟರೆ ಅಮೆರಿಕದಲ್ಲಿ ಕೆಳಗೆ ತೋರಿಸಲ್ಪಡುತ್ತದೆ. ಇದನ್ನು ಜಗತ್ತಿನಾದ್ಯಂತ ಏಕರೂಪವಾಗಿ ಇಡಲು ಸಾಧ್ಯವಿಲ್ಲ. ಅಲ್ಲದೇ ಹದಿನೈದು ದಿನಗಳ ಮುಂಚೆಯೇ ಅಲ್ಗಾರಿದಂ ವಿವರಗಳನ್ನು ಹಂಚಿಕೊಳ್ಳಬೇಕೆಂದರೆ ಒಮ್ಮೆ ಬರೆದಿಟ್ಟ ಅಲ್ಗಾರಿದಂನ್ನು ಹದಿನೈದು ದಿನಗಳ ಕಾಲ ಬದಲಿಸಲು ಸಾಧ್ಯವಿಲ್ಲ. ಇದು ಗೂಗಲ್‌ನ ಬಿಸಿನೆಸ್ ಮಾಡೆಲ್‌ಗೇ ದೊಡ್ಡ ಹೊಡೆತ ಕೊಡುತ್ತದೆ!

ಹೀಗಾಗಿ ಮೊದಲು ಗೂಗಲ್ ತನ್ನ ಸೇವೆಯನ್ನು ಆಸ್ಟ್ರೇಲಿಯಾದಿಂದ ಹಿಂಪಡೆಯುವುದಾಗಿ ಘೋಷಿಸಿದ್ದರೂ ಆಸ್ಟ್ರೇಲಿಯಾ ಸರ್ಕಾರವು ಕ್ಯಾರೇ ಅನ್ನದಿದ್ದಾಗ ಹೊಸ ದಾರಿಯೊಂದನ್ನು ಗೂಗಲ್ ಕಂಡುಕೊಂಡಿತು. ಎಷ್ಟೆಂದರೂ ಸಿರಿವಂತ ದೇಶವೊಂದರಲ್ಲಿ ಗೂಗಲ್‌ನಂತಹ ಕಂಪನಿ ತನ್ನ ವ್ಯಾಪಾರವನ್ನು ಕಳೆದುಕೊಳ್ಳಲು ಇಚ್ಛಿಸಲಾರದು. ಸುದ್ದಿಯನ್ನು ಮೊದಲಿನಂತೆ ಈಗ ಹುಡುಕಿದಾಗ ತೋರಿಸುವ ಬದಲು ಗೂಗಲ್ ಶೋಕೇಸ್ ಎಂಬ ಹೊಸ ಕವಲೊಂದನ್ನು ಹುಟ್ಟುಹಾಕಿ ಅದರಲ್ಲಿ ತಾವು ರಾಯಧನಕ್ಕಾಗಿ ಒಪ್ಪಂದ ಮಾಡಿಕೊಂಡ ಪತ್ರಿಕೆಗಳ ಸುದ್ದಿಯನ್ನು ಮಾತ್ರ ಪ್ರಸಾರ ಮಾಡುವುದು ಎಂದು ನಿರ್ಧರಿಸಿದೆ. ಈಗಾಗಲೇ ವಾರ್ಷಿಕ ಮೂರು ಕೋಟಿ ಡಾಲರ್ ಕೊಟ್ಟು ಸೆವೆನ್ ನ್ಯೂಸ್ ಚಾನೆಲ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದ್ದು ಮತ್ತೊಂದಷ್ಟು ಸುದ್ದಿ ಸಂಸ್ಥೆಗಳೊಂದಿಗೆ ಮಾತುಕತೆಗಳು ನಡೆಯುತ್ತಿವೆ. ಇಂತಹ ವಿವಿಧ ಒಪ್ಪಂದಗಳಿಗಾಗಿಯೇ ಒಂದು ಶತಕೋಟಿ ಡಾಲರುಗಳಷ್ಟು ಇಡುಗಂಟನ್ನು ಎತ್ತಿಟ್ಟಿರುವುದಾಗಿ ಗೂಗಲ್‌ನ ಮುಖ್ಯಸ್ಥ ಸುಂದರ್ ಪಿಚ್ಚೈ ತಮ್ಮ ಬ್ಲಾಗ್‌ನಲ್ಲಿ ಬರೆದುಕೊಂಡಿದ್ದಾರೆ. ಇದು ಹಾವೂ ಸಾಯದ ಕೋಲೂ ಮುರಿಯದ ಚಾಣಾಕ್ಷ ನಡೆ.

ಫೇಸ್‌ಬುಕ್ ಈ ಕಾನೂನಿಗೆ ಪ್ರತಿಕ್ರಿಯಿಸಿದ್ದೇ ಬೇರೆ ರೀತಿಯಲ್ಲಿ. ಅತ್ಯಂತ ದುರಾಸೆಯಿಂದ ವರ್ತಿಸಿದ ಫೇಸ್‌ಬುಕ್ ತಾನು ಯಾವುದೇ ರೀತಿ ಯಾರಿಗೂ ರಾಯಧನ ಕೊಡಲು ಸಾಧ್ಯವಿಲ್ಲ. ತನ್ನ ವೇದಿಕೆಯಲ್ಲಿ ಸುದ್ದಿಗಳನ್ನು ಹಂಚಿಕೊಳ್ಳುತ್ತಿರುವುದರಿಂದ ಈ ಪತ್ರಿಕೆಗಳಿಗೆ ಹೆಚ್ಚಿನ ಓದುಗರು ದೊರೆಯುತ್ತಿದ್ದಾರೆ. ಅವರಿಗೆ ಆದಾಯ ಹೆಚ್ಚುತ್ತಿರುವುದೇ ತನ್ನಿಂದ ಎಂದು ಎದುರು ವಾದಿಸಿತು. ಮುದ್ರಣ ಪತ್ರಿಕೆಗಳು ಎಂದೋ ಪಳೆಯುಳಿಕೆಗಳಾಗಿರುವ ಆಸ್ಟ್ರೇಲಿಯಾ ದೇಶದಲ್ಲಿ ಶೇ 67ರಷ್ಟು ಓದುಗರು ಆನ್‌ಲೈನ್‌ನಲ್ಲಿಯೇ ಸುದ್ದಿ ಓದುತ್ತಾರೆ.

ಮುಂದಿನ ಪುಟಕ್ಕೆ...

ಭಾರತದಲ್ಲಿ ಯಾವ ನವರಂಗಿ ಆಟ?

ಸುದ್ದಿಯ ಕಂಟೆಂಟ್ ಬಳಸಿದ್ದಕ್ಕಾಗಿ ಗೂಗಲ್ ಮತ್ತು ಫೇಸ್‌ಬುಕ್‌ನಂತಹ ಡಿಜಿಟಲ್ ಪ್ಲಾಟ್‌ಫಾರಂಗಳು ಮಾಧ್ಯಮ ಸಂಸ್ಥೆಗಳಿಗೆ ಶುಲ್ಕ ನೀಡಬೇಕು ಎಂಬ ಆಸ್ಟ್ರೇಲಿಯಾದ ಕಾನೂನು, ಜಗತ್ತಿನಾದ್ಯಂತ ಚರ್ಚೆಯ ಅಲೆ ಎಬ್ಬಿಸಿದೆ. ಇದೇ ಮಾದರಿಯ ಪಾಲನ್ನು ಕೇಳುವ ಕಾನೂನು ಎಲ್ಲಾ ದೇಶಗಳಲ್ಲೂ ಬರುವ ಸಾಧ್ಯತೆಗಳಿರುವುದು ಗೂಗಲ್ ಮತ್ತು ಫೇಸ್‌ಬುಕ್‌ನ ಮುಖ್ಯಸ್ಥರ ನಿದ್ದೆಗೆಡಿಸಿದೆ.

ಈ ರೀತಿಯ ಕಾನೂನು ಬರುತ್ತಿರುವುದು ಆಸ್ಟ್ರೇಲಿಯಾದಲ್ಲೇ ಏನು ಮೊದಲಲ್ಲ. 2015ರಲ್ಲೇ ಗೂಗಲ್ ಮೇಲೆ ಸ್ಪೇನ್ ಇಂತಹದ್ದೊಂದು ರೀತಿಯ ಕಾನೂನಿನ ನಿರ್ಬಂಧ ಹೇರಿತ್ತು. ಇದಕ್ಕೆ ಪ್ರತಿಯಾಗಿ ಸರ್ಚ್‌ನಲ್ಲಿ ಯಾವುದೇ ಸುದ್ದಿಗಳನ್ನು ತೋರಿಸದಿರಲು ಗೂಗಲ್ ನಿರ್ಧರಿಸಿತ್ತು. ಆ ಸಂದರ್ಭದಿಂದ ಸ್ಪೇನ್‌ನಲ್ಲಿ ಗೂಗಲ್ ಸರ್ಚ್‌ನಲ್ಲಿ ಸುದ್ದಿ ತುಣುಕುಗಳನ್ನು ತೋರಿಸಲಾಗುತ್ತಿಲ್ಲ. ಆದರೆ ಇದರಿಂದ ಸ್ಪೇನ್‌ನ ಸುದ್ದಿ ಸಂಸ್ಥೆಗಳಿಗೆ ಲಾಭವೇ ಆಯಿತು. ಮೊದಲು ಗೂಗಲ್‌ನಲ್ಲಿ ಸುದ್ದಿಗಳನ್ನು ಹುಡುಕುತ್ತಿದ್ದ ಜನ ಬಳಿಕ ನೇರವಾಗಿ ಸುದ್ದಿಸಂಸ್ಥೆಯ ವೆಬ್‌ಸೈಟ್‌ಗೇ ಭೇಟಿ ನೀಡತೊಡಗಿದರು. ಇದರಿಂದ ಅವರ ವೆಬ್‌ಸೈಟ್‌ಗಳಿಗೆ ಹೆಚ್ಚಿನ ಟ್ರಾಫಿಕ್ ಹರಿದುಬರತೊಡಗಿ ಸುದ್ದಿಸಂಸ್ಥೆಗಳ ಆದಾಯವೂ ಹೆಚ್ಚಿತು. ಆದ್ದರಿಂದ ಅಲ್ಲಿನ ಯಾವ ಸಂಸ್ಥೆಗಳೂ ಗೂಗಲ್ ಜೊತೆಗೆ ಹೆಚ್ಚಿನ ಒಪ್ಪಂದಕ್ಕೆ ಹೋಗಲಿಲ್ಲ.

2020ರಲ್ಲಿ ಫ್ರಾನ್ಸ್ ದೇಶವು ಯುರೋಪಿಯನ್ ಒಕ್ಕೂಟದ ಹೊಸ ಕಾಪಿರೈಟ್ ಕಾನೂನನ್ನು ಅಂಗೀಕರಿಸಿತು. ಗೂಗಲ್ ಸಂಸ್ಥೆಯು ಸುದ್ದಿಮೂಲಗಳ ಜೊತೆಗೆ ಆದಾಯ ಹಂಚಿಕೆಯ ಒಪ್ಪಂದ ಮಾಡಿಕೊಳ್ಳಲೇಬೇಕೆಂಬ ನಿಯಮವನ್ನು ಅದು ಹೊಂದಿದ್ದು, ಗೂಗಲ್ ಸಹ ಒಪ್ಪಿಕೊಂಡಿದೆ. ಗೂಗಲ್, ಫ್ರಾನ್ಸ್‌ನಲ್ಲಿ ಒಪ್ಪಿದ್ದನ್ನು ಆಸ್ಟ್ರೇಲಿಯಾದಲ್ಲಿ ಯಾಕೆ ನಿರಾಕರಿಸುತ್ತಿದೆಯೆಂದರೆ ಆಸ್ಟ್ರೇಲಿಯಾದ ಕಾನೂನಿನಲ್ಲಿ ಅಲ್ಗಾರಿದಂಗಳ ವಿವರಗಳನ್ನು ಎರಡು ವಾರ ಮುಂಚೆಯೇ ಹಂಚಿಕೊಳ್ಳಬೇಕೆಂಬ ಅಂಶ ಇರುವುದಕ್ಕೆ.

ಚೀನಾ ದೇಶದಲ್ಲಿ ಇದರ ಗೊಡವೆಯೇ ಇಲ್ಲ. ಚೀನಾ ಗೂಗಲ್, ಫೇಸ್‌ಬುಕ್‌ನ ಪರ್ಯಾಯಗಳನ್ನು ಅದಾಗಲೇ ತಾನೇ ಹುಟ್ಟುಹಾಕಿ ಬೆಳೆಸಿದೆ. ಭಾರತದಂತಹ ದೇಶದಲ್ಲಿ ಈ ಕಾನೂನು ಬಂದರೆ ಅದರ ರೂಪುರೇಷೆ ಹೇಗಿರಬಹುದು ಮತ್ತು ಅದರ ದೂರಗಾಮಿ ಪರಿಣಾಮಗಳೇನಾಗಬಹುದು ಎಂಬುದರ ಚರ್ಚೆ ಕುತೂಹಲಕಾರಿ. ಸದ್ಯಕ್ಕೆ ಹಣಬಲದಿಂದ ಅಲ್ಲದಿದ್ದರೂ ಜನಬಲದಿಂದಾದರೂ ಫೇಸ್‌ಬುಕ್ ಮತ್ತು ಗೂಗಲ್‌ಗೆ ದೊಡ್ಡ ಗ್ರಾಹಕ ನೆಲೆ ಭಾರತೀಯ ಒಕ್ಕೂಟ. ಇಲ್ಲಿ ಅಡಿಯಿಂದ ಮುಡಿಯವರೆಗೆ ನೂರಾರು ನುಡಿಗಳು, ನೂರಾರು ಸಂಸ್ಕೃತಿಗಳು ಮತ್ತು ಅಷ್ಟೇ ವೈವಿಧ್ಯಮಯ ಸುದ್ದಿಮೂಲಗಳಿವೆ.

ಮೊದಲನೆಯದಾಗಿ, ಆದಾಯ ಹಂಚಿಕೆಯ ಕಾನೂನನ್ನು ಸಾರ್ವತ್ರಿಕವಾಗಿ ಏಕರೂಪದಲ್ಲಿ ಜಾರಿಗೆ ತರಲು ಸಾಧ್ಯವಿದೆಯೇ ಎಂಬ ಪ್ರಶ್ನೆ ಕಾಡುತ್ತದೆ. ಏಕೆಂದರೆ ಆನ್‌ಲೈನ್‌ನಲ್ಲಿ ಪತ್ರಿಕೆಗಳನ್ನು ನಡೆಸುವುದು ಸುಲಭ. ಕನ್ನಡವನ್ನೇ ತೆಗೆದುಕೊಳ್ಳುವುದಾದರೆ ಟ್ರೋಲ್ ಪುಟಗಳೆಷ್ಟಿವೆಯೋ ಸುದ್ದಿಪುಟಗಳೂ ಅಷ್ಟೇ ಇವೆ. ಪ್ರತಿಯೊಂದಕ್ಕೂ ಅವುಗಳ ವಸ್ತುವಿಷಯಗಳ ಆಧಾರದ ಮೇಲೆ ಸಾಕಷ್ಟು ಅಭಿಮಾನಿಗಳಿದ್ದಾರೆ. ಇವುಗಳಲ್ಲಿ ಯಾವುದಕ್ಕೆ ಆದಾಯ ಹಂಚಿಕೊಳ್ಳುವುದು, ಯಾವುದಕ್ಕೆ ಹಂಚಿಕೊಳ್ಳದಿರುವುದು?

ಇನ್ನೊಂದು ತೊಂದರೆಯೆಂದರೆ ಇತರೆ ದೇಶಗಳಲ್ಲಿ ಸುದ್ದಿಗಳ ಪ್ರಸಾರಕ್ಕೂ ಭಾರತದಲ್ಲಿನ ಸುದ್ದಿ ಪ್ರಸಾರಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಆಸ್ಟ್ರೇಲಿಯಾದಂತಹ ದೇಶಗಳಲ್ಲಿ ಒಂದೇ ಸುದ್ದಿಯನ್ನು ಹಿಡಿದು ಎಲ್ಲರೂ ಮುಗಿಬೀಳುವುದಿಲ್ಲ. ಪ್ರತಿಯೊಬ್ಬರದೂ ತಮ್ಮದೇ ವಿಶೇಷ ಸುದ್ದಿಗಳಿರುತ್ತವೆ. ಎಲ್ಲರಿಗೂ ಸಮಾನವಾದ ಸುದ್ದಿಯಿದ್ದರೆ ಪ್ರತೀ



ಸುದ್ದಿಮನೆಯು ತನ್ನದೇ ಆಯಾಮದ ಎಳೆ ಹಿಡಿದುಕೊಂಡು ಸಂಶೋಧಿಸಿ ತಂದು ವಿವರಗಳನ್ನು ಜನರ ಮುಂದಿಡುತ್ತದೆ. ಆದರೆ, ಈಗಿನ ಭಾರತೀಯ ಮೀಡಿಯಾಗಳು ಒಂದೇ ಸುದ್ದಿಯನ್ನು ತಾವೇ ಮೊದಲು ಎಂಬಂತೆ ಮುಗಿಬಿದ್ದು ಪ್ರಸಾರ ಮಾಡುತ್ತವೆ. ನಾಯಿಕೊಡೆಗಳಂತೆ ಹುಟ್ಟಿರುವ ಆನ್‌ಲೈನ್ ಪತ್ರಿಕೆಗಳು ಇದನ್ನೇ ವರ್ಣರಂಜಿತವಾಗಿ ಬರೆದು ಪ್ರಸಾರ ಮಾಡಿ ಅಭಿಮಾನಿಗಳನ್ನು ಪಡೆದುಕೊಳ್ಳುತ್ತವೆ. ಪರಿಸ್ಥಿತಿ ಹೀಗಿರುವಾಗ ಅಪಾರ ಜನಸಂಖ್ಯೆಗೆ ಸುದ್ದಿ ಒದಗಿಸಲು ವಿಸ್ತಾರ ಮಾರುಕಟ್ಟೆಯನ್ನು ಸೂರೆಗೊಳ್ಳಲು ಹುಟ್ಟಿಕೊಂಡಿರುವ ಸುದ್ದಿಮನೆಗಳಲ್ಲಿ ಯಾವುದರ ಜೊತೆಗೆ ಈ ಗೂಗಲ್ ಮತ್ತು ಫೇಸ್‌ಬುಕ್ ಒಪ್ಪಂದ ಮಾಡಿಕೊಳ್ಳುತ್ತವೆ? ಆದಾಯ ಹಂಚಿಕೆಯ ಸಮಯದಲ್ಲಿ ಕಾಪಿರೈಟ್ ತೊಂದರೆಗಳು ತಲೆದೋರುವುದಿಲ್ಲವೇ?

ಎರಡನೆಯದಾಗಿ ಈಗಾಗಲೇ ಅಸ್ತಿತ್ವಕ್ಕಾಗಿ ಅನೈತಿಕ ಹಾದಿಯಲ್ಲಿ ಹಿಂದಿರುಗಲು ಸಾಧ್ಯವಾಗದಷ್ಟು ದೂರ ಕ್ರಮಿಸಿರುವ ಮಾಧ್ಯಮಗಳು ಈ ಹೊಸ ಆದಾಯ ಮೂಲಕ್ಕಾಗಿ ಅದೆಷ್ಟರ ಮಟ್ಟಿಗೆ ಪೈಪೋಟಿಗೆ ಇಳಿಯಬಹುದು? ಈಗಾಗಲೇ ಮಾರಾಟವಾಗಬಲ್ಲ ರೋಚಕತೆಯ ಹಿಂದೆ ಬಿದ್ದಿರುವ ಮಾಧ್ಯಮಗಳು ಇದೇ ರೋಚಕತೆಯ ಪಟ್ಟನ್ನೇ ಇಲ್ಲೂ ಮುಂದುವರಿಸುತ್ತವೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಆತಂಕದ ವಿಷಯವೆಂದರೆ ಫೇಸ್‌ಬುಕ್‌ನಂತಹ ವೇದಿಕೆಗಳು ತಮ್ಮ ಅಲ್ಗಾರಿದಂಗಳ ಮೂಲಕ ಜನರ ಓದುವಿಕೆಯ ಸ್ವರೂಪವನ್ನು ಗ್ರಹಿಸಿ ಹೆಚ್ಚಿನ ಓದುಗರನ್ನು ಪಡೆಯುವ ಸಾಮರ್ಥ್ಯ ಇರುವ ಸುದ್ದಿಗಳನ್ನೇ ಹೆಚ್ಚಿನ ಮಟ್ಟಿಗೆ ಪಸರಿಸಿ ಹೆಚ್ಚಿನ ಜನರಿಗೆ ಉಣಬಡಿಸುತ್ತವೆ.

ಟಿ.ವಿ, ಪತ್ರಿಕೆಗಳ ಮುಖಾಂತರ ಪಸರಿಸಲು ಸಾಧ್ಯವಿರದ ಕೊನೆಗಳನ್ನು ಫೇಸ್‌ಬುಕ್‌ನಂತಹ ವೇದಿಕೆಗಳು ಆರಾಮವಾಗಿ ತಲುಪುತ್ತವೆ. ಅದಲ್ಲದೇ ಅನೇಕ ದೇಶಗಳಲ್ಲಿ ಸರ್ಕಾರಿ ಅಥವಾ ಮಿಲಿಟರಿ ಪ್ರಾಯೋಜಿತ ಸುದ್ದಿಗಳನ್ನು ತನ್ನ ಅಲ್ಗಾರಿದಂಗಳ ಮೂಲಕ ಹೆಚ್ಚಿನ ಮಟ್ಟಿಗೆ ಪಸರಿಸಿ ಅಲ್ಲಿ ಪ್ರಜಾಪ್ರಭುತ್ವವನ್ನು ಅಪಾಯಕರ ಸ್ಥಿತಿಗೆ ಫೇಸ್‌ಬುಕ್ ತಂದಿಟ್ಟಿರುವ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಆಸ್ಟ್ರೇಲಿಯಾ, ಅಮೆರಿಕದಂತಹ ಜಾಗೃತ ಪ್ರಜೆಗಳಿರುವ ದೇಶಗಳಲ್ಲೂ ಫೇಸ್‌ಬುಕ್ ಇಂತಹ ಅಪಾಯವನ್ನು ತಂದೊಡ್ಡಿದೆ. ಇನ್ನು ಅಂಧಾನುಕರಣೆ, ವ್ಯಕ್ತಿಪೂಜೆಯೇ ನೂಲಾಗಿರುವ ಸಮಾಜದಲ್ಲಿ ಇದರ ಅಪಾಯ ಇನ್ನೂ ಹೆಚ್ಚು.

ದೊಡ್ಡ ದೊಡ್ಡ ಬಂಡವಾಳ ಹೊಂದಿದ ಮತ್ತು ಭ್ರಷ್ಟರ ಸೂರನ್ನೇ ಪಡೆದಿರುವ ಸುದ್ದಿ ಸಂಸ್ಥೆಗಳು ಗೂಗಲ್ ಮತ್ತು ಫೇಸ್‌ಬುಕ್ ಜೊತೆ ಒಪ್ಪಂದದಲ್ಲಿ ತೊಡಗಿಕೊಂಡು ತಮಗೆ ಬೇಕಾದ ಸುದ್ದಿಯನ್ನೇ ಪಸರಿಸುವುದು ಮತ್ತು ಕಾನೂನಿನ ನೆಪವೊಡ್ಡಿ ಫೇಸ್‌ಬುಕ್‌ನಂತಹ ಮಾಧ್ಯಮವನ್ನೇ ನೆಚ್ಚಿಕೊಂಡ ಹಣಬಲವಿಲ್ಲದ ಪ್ರಾಮಾಣಿಕ ಸುದ್ದಿಸಂಸ್ಥೆಗಳು ಮೂಲೆಗೆ ಸರಿಯುವ ಸಾಧ್ಯತೆಗಳೂ ಇವೆ. ಹಣ, ಹಣವನ್ನೇ ಆಕರ್ಷಿಸುತ್ತದೆ ಎಂಬ ನುಡಿಯಂತೆ ಈ ಕ್ಯಾಪಿಟಲಿಸಂನ ತೆಕ್ಕೆಗೆ ತಮ್ಮನ್ನು ಒದಗಿಸಿಕೊಂಡ ಸುದ್ದಿಮಾಧ್ಯಮಗಳು ಪ್ರಜಾಪ್ರಭುತ್ವಕ್ಕೆ ಕಂಟಕವಾಗಿ ನಿಂತರೂ ಅಚ್ಚರಿಪಡಬೇಕಿಲ್ಲ.

ನೋಡಿದರೆ ಇಂತಹ ಕಾನೂನಿನಿಂದಾಗಿ ಭಾರತೀಯ ಒಕ್ಕೂಟದಂತಹ ದೇಶಗಳಲ್ಲಿ ಒಳಿತೂ ಇದೆ ಕೆಡುಕೂ ಇದೆ. ಕಾನೂನನ್ನು ಎಷ್ಟೇ ಜಾಗರೂಕತೆಯಿಂದ ಪರಿಣಾಮಕಾರಿಯಾಗಿ ರೂಪಿಸಿದರೂ ಪರಿಣಾಮಕಾರಿಯಾಗಿ ಜಾರಿಗೆ ತರುವುದರ ಮೇಲೆ ಅದರ ಭವಿಷ್ಯ ನಿಂತಿದೆ. ಬಲಿಷ್ಠ ದೇಶಗಳ ಸರ್ಕಾರಗಳನ್ನೇ ದಕ್ಕಿಸಿಕೊಂಡಿರುವ ಈ ದೈತ್ಯ ಟೆಕ್ ಕಂಪನಿಗಳು ಭಾರತದಲ್ಲಿ ಯಾವ ನವರಂಗಿ ಆಟಗಳನ್ನು ಆಡಲಿವೆ ಎಂಬುದನ್ನು ಕಾದು ನೋಡಬೇಕು.

ಎಸ್ಸೆಸ್



ಕೃಷ್ಣ-ರಾಧೆಯ ಸಲ್ಲಾಪ... ಭಾರತಿ ಕರ್ ಅವರ ಕಲಾಕೃತಿ

ಕೋವಿಡ್ ನಂತರದ ಕಾಲಘಟ್ಟದಲ್ಲಿ ಇದೇ ಮೊದಲ ಬಾರಿಗೆ ರಾಷ್ಟ್ರ ಮಟ್ಟದ ಕಲಾಪ್ರದರ್ಶನವೊಂದು ಬೆಂಗಳೂರಿನಲ್ಲಿ ಏರ್ಪಾಟಾಗಿದೆ. ಅಬ್ಬಬ್ಬಾ ಅಲ್ಲಿನ ಕಲಾಕೃತಿಗಳಲ್ಲಿ ಅದೆಂತಹ ಸೊಬಗು ತುಂಬಿದೆ


ಲಂಬಾಣಿ ಮಹಿಳೆ.... ಕಲಾಕೃತಿ: ದೇವಾಂಶಿ ದಮನಿ

ಹರಡಿದ ಕಲಾ ಬೆಳುದಿಂಗಳು


ಬುಟ್ಟಿ ಹೊತ್ತು ಹೊರಟ ಮೀನುಗಾರ ಮಹಿಳೆ... ಕಲಾಕೃತಿ: ಶ್ರೀಪತಿ



ಹೆಂಗಳೆಯರ ಹರಟೆ... ರಾಜೇಶ್ವರ್ ನನ್ನೂಟ ಅವರ ಕಲಾಕೃತಿ

ಬಾನಿನಲ್ಲಿ ಪೌರ್ಣಿಮೆಯ ಚಂದಿರ ಮೂಡಿ, ಹರಡಿದ ಬೆಳುದಿಂಗಳಿನಲ್ಲಿ ಕೃಷ್ಣ-ರಾಧೆ ಪ್ರೇಮದ ಹೊನಲಿನಲ್ಲಿ ಮೈಮರೆತು ಬಿಟ್ಟಿದ್ದಾರೆ. ಜಗತ್ತಿನ ಯಾವ ಆಗು-ಹೋಗುಗಳೂ ಅವರಿಗೆ ಆ ಕ್ಷಣದಲ್ಲಿ ಕ್ಷುಲ್ಲಕ ಸಂಗತಿಗಳಾಗಿ ಗೋಚರಿಸುತ್ತಿವೆ ಅಥವಾ ಅವರ ಆ ಪ್ರೇಮದ ಕಣ್ಣುಗಳಿಗೆ ಬೇರೆ ಯಾವುದೂ ಕಾಣುತ್ತಿಲ್ಲ. ಭಾರತಿ ಕರ್ ಅವರ ಈ ಕಲಾಕೃತಿಯಲ್ಲಿ ಅದೆಂತಹ ವರ್ಣವೈಭವ. ಪ್ರೇಮ ಭಾವವನ್ನು ಉಕ್ಕೇರಿಸುವ ಈ ಕಲಾಕೃತಿ ಸೂಜಿಗಲ್ಲಿನಂತೆ ಸೆಳೆದು ಬಿಡುತ್ತದೆ.

ಮತ್ತೊಂದು ಕ್ಯಾನ್ವಾಸ್‌ನಲ್ಲಿ ಹೈದರಾಬಾದ್‌ನ ಜೀವನ ಸಂಸ್ಕೃತಿಯೇ ಮೈದಳೆದು ನಿಂತಿದೆ. ಮೀನುಗಾರ್ತಿಯ ಮುಖದಲ್ಲಿ ಅಷ್ಟು ಅಂದದ ಮುಗ್ಧತೆಯನ್ನು ತುಂಬಿದ ಕಲಾವಿದರಿಗೆ ನೋಡುಗರ ಮನ ಒಮ್ಮೆ ಸಲಾಂ ಹೇಳುತ್ತದೆ. ರಾಜೇಶ್ವರ್ ಅವರ ಹರಟೆ ಹೊಡೆಯುವ ಮಹಿಳೆಯರ ಮುಂದೆ ನಾವೂ ಕಾಲದ ಪರಿವೆಯೇ ಇಲ್ಲದಂತೆ ನಿಂತು ಬಿಡಬೇಕು ಎಂಬ ಆಸೆ ಮೂಡುತ್ತದೆ.

ಹೌದು, ಇದೊಂದು ಮಹಾಸಂಗಮ. ಪುರಾಣ, ಗ್ರಾಮೀಣ ಹಾಗೂ ನಗರ ಬದುಕು ಹೀಗೆ ಹತ್ತಾರು ವಿಷಯಾಧಾರಿತ ಚಿತ್ರಗಳ ಮಹಾಸಾಗರ. ಇದರ ಹಿಂದೆ ಕರ್ನಾಟಕ, ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ಸೇರಿದಂತೆ ಹತ್ತು ರಾಜ್ಯಗಳ 42ಕ್ಕೂ ಹೆಚ್ಚು ಕಲಾವಿದರ ಕುಂಚದ ಕೈಚಳಕ ಇದೆ. ಇದಕ್ಕೆ ವೇದಿಕೆಯಾಗಿದ್ದು, ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆ. ಕೋವಿಡ್ ನಂತರದ ಕಾಲಘಟ್ಟದಲ್ಲಿ ಬೆಂಗಳೂರು ಪ್ರಮುಖ ಚಿತ್ರಕಲಾ ಪ್ರದರ್ಶನವೊಂದಕ್ಕೆ ಸಾಕ್ಷಿಯಾಗುತ್ತಿದೆ.

ಹೈದರಾಬಾದಿನ ಎಂ.ಈಶ್ವರಯ್ಯ ಚಿತ್ರ ಶಾಲೆ ಆಯೋಜಿಸಿರುವ ಮೊತ್ತಮೊದಲ ಅಖಿಲ ಭಾರತ ಕಲಾ ಪ್ರದರ್ಶನ ವೆಂಕಟಪ್ಪ ಚಿತ್ರಶಾಲೆಯಲ್ಲಿ ಆರಂಭವಾಗಿದ್ದು, ಮಾರ್ಚ್ 6ರವರೆಗೂ ನಡೆಯಲಿದೆ. ಈ ಪ್ರದರ್ಶನಕ್ಕೆ ಈಶ್ವರಯ್ಯ ಚಿತ್ರ ಶಾಲೆಯ ನಿರ್ದೇಶಕ ಸಂಜಯ್ ಕುಮಾರ್ ರೂವಾರಿ. ಕರ್ನಾಟಕದಿಂದ ಮೇಘನಾಥ್ ಅಬ್ರಹಾಮ್ ಬೆಳ್ಳಿ, ತೆಲಂಗಾಣದಿಂದ ಸುಭಾಷ್ ಬಾಬು ರೌರಿ, ಅಮಿಲಾ ರೆಡ್ಡಿ ಅನ್ನಪೂರ್ಣ, ರಾಮು ಮರೇಡು, ಸತ್ಯ ಗನ್ನೋಜು, ಬಾಲಭಕ್ತ ರಾಜ್, ಶ್ರೀದೇವಿ, ತಮಿಳುನಾಡಿನ ಉಮಾ ಕೃಷ್ಣಮೂರ್ತಿ, ಪಶ್ಚಿಮ ಬಂಗಾಳದ ನಿವೇದಿತ ಚಕ್ರವರ್ತಿ ಹಾಗೂ ದೇವದ್ರತ ಬಿಸ್ವಾಸ್ ಸೇರಿದಂತೆ ಹಲವು ಚಿತ್ರ ಕಲಾವಿದರು ರಚಿಸಿರುವ ಚಿತ್ರಗಳು ಇಲ್ಲಿ ಪ್ರದರ್ಶನಕ್ಕಿವೆ. ಕಲಾಭಿಮಾನಿಗಳಿಗೆ ವರ್ಷದಿಂದಲೂ ಕಾದಿದ್ದಂತೆ ಆ ಕಲಾಕೃತಿಗಳು ತಮ್ಮ ಸೊಬಗನ್ನು ಮೊಗೆ ಮೊಗೆದು ಕೊಡುತ್ತಿವೆ. ❖


ಹೈದರಾಬಾದ್‌ನ ಜನಜೀವನ-ಸಂಸ್ಕೃತಿ ಕಲಾಕೃತಿ: ದೇವದ್ರತ ಬಿಸ್ವಾಸ್

ಮುನ್ನೋಟ 28-02-2021 ರಿಂದ 06-03-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಉದ್ದಿಮೆಗಳಲ್ಲಿ ತಾಂತ್ರಿಕ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯರಿಗೆ ಹೆಚ್ಚಿನ ಜವಾಬ್ದಾರಿಗಳು ಒದಗಿಬರುತ್ತವೆ. ಸರ್ಕಾರಿ ಹಿರಿಯ ಅಧಿಕಾರಿಗಳಿಗೆ ಅಸ್ವಾಭಾವಿಕ ಆದಾಯ ಬರುವ ಸಾಧ್ಯತೆ ಇದೆ. ಚಿತ್ರಕಾರರಿಗೆ ಅವರ ಪ್ರತಿಭಾ ಪ್ರದರ್ಶನ ಮಾಡಲು ಉತ್ತಮ ಅವಕಾಶ ದೊರೆಯುತ್ತದೆ. ಕೆಲವರಿಗೆ ಚಿತ್ರಗಳ ಮಾರಾಟಗಳಿಂದ ಉತ್ತಮ ಲಾಭವಿದೆ. ರಾಜಕೀಯ ವಿಚಾರಗಳನ್ನು ವಿಭಿನ್ನ ದೃಷ್ಟಿಯಿಂದ ವಿಮರ್ಶೆ ಮಾಡುವಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆದಾಯದಲ್ಲಿ ತುಸು ಏರಿಕೆಯನ್ನು ಕಾಣಬಹುದು. ಆರ್ಥಿಕ ಅಡಚಣೆಗಳು ಹಂತಹಂತವಾಗಿ ನಿವಾರಣೆ ಆಗುತ್ತವೆ. ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂಭ್ರಮದ ವಾತಾವರಣ ಇರುತ್ತದೆ. ಶಾರೀರಿಕ ಆಯಾಸ ಕಂಡುಬಂದರೂ ದೈನಂದಿನ ಕಾರ್ಯಗಳಲ್ಲಿ ಪ್ರಗತಿ ಇರುತ್ತದೆ. ಭೂಮಿಯ ವ್ಯವಹಾರಗಳಲ್ಲಿ ನಿಮ್ಮ ಹಟಮಾರಿತನ ಗೆದ್ದು ಹೆಚ್ಚಿನ ಹಣ ದೊರೆಯುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ತೈಲ ಉದ್ಯಮದಲ್ಲಿ ತೊಡಗಿಸಿಕೊಂಡವರಿಗೆ ವ್ಯವಹಾರ ಸಿದ್ಧಿಸಿ ಆದಾಯವಿರುತ್ತದೆ. ಮಹಿಳೆಯರಿಗೆ ಸಾಮಾಜಿಕ ಗೌರವಗಳು ದೊರೆಯುತ್ತವೆ. ಕೆಲವರಿಗೆ ತವರಿನಿಂದ ಆಸ್ತಿ ದೊರೆಯಬಹುದು. ಅಪೇಕ್ಷಿತ ಸರ್ಕಾರಿ ಸಹಾಯಧನಗಳು ಇವರಿಗೆ ಸುಲಭವಾಗಿ ದೊರೆಯುತ್ತವೆ. ಷೇರು ಮಾರುಕಟ್ಟೆಯಲ್ಲಿ ಅತಿಯಾಗಿ ಹಣ ತೊಡಗಿಸುವುದು ಬೇಡ. ಹೆಚ್ಚಿನ ಬಡ್ಡಿ ಆಸೆಗಾಗಿ ಹಣ ಕೊಡುವುದು ಬೇಡ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಮೇಲ್ವರ್ಗದ ಗುತ್ತಿಗೆದಾರರಿಗೆ ಟೆಂಡರ್ ಮೂಲಕ ಹೊಸ ಗುತ್ತಿಗೆಗಳನ್ನು ಪಡೆಯುವಂತಹ ಅವಕಾಶವಿದೆ. ಕೃಷಿಕರಿಗೆ ಉತ್ತಮ ಬೆಳೆ ಜೊತೆಗೆ ಉತ್ತಮ ಹಣವನ್ನು ಪಡೆಯುವ ಅವಕಾಶವಿದೆ. ಹಣದ ಒಳಹರಿವು ಉತ್ತಮವಾಗಿರುತ್ತದೆ. ಮಕ್ಕಳು ನಿಮ್ಮ ಮಾತನ್ನು ಕೇಳದೇ ಇರಬಹುದು. ಸಾಲಸೋಲಗಳಿದ್ದಲ್ಲಿ ಅವುಗಳನ್ನು ತೀರಿಸಿ ನೆಮ್ಮದಿಯನ್ನು ಪಡೆಯಬಹುದು.

ಸಿಂಹ — ಮಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಸ್ತ್ರೀಯರಿಗೆ ಆರ್ಥಿಕ ಅಭಿವೃದ್ಧಿ ಇರುತ್ತದೆ. ಆಲಸ್ಯದ ನಡವಳಿಕೆ ಖಂಡಿತಬೇಡ. ಗೃಹನಿರ್ಮಾಣಕ್ಕೆ ಕೈ ಹಾಕುವ ಮೊದಲು ಆರ್ಥಿಕ ಸ್ಥಿತಿಯ ಬಗ್ಗೆ ಸರಿಯಾಗಿ ತಿಳಿಯಿರಿ. ಸರ್ಕಾರಿ ಸವಲತ್ತುಗಳನ್ನು ಅರ್ಜಿ ಸಲ್ಲಿಸಿ ಪಡೆಯಬಹುದು. ನೃತ್ಯ ಪಟುಗಳಿಗೆ ಉತ್ತಮ ಗುರುಗಳು ದೊರೆತು ಕಲಿಕೆಯಲ್ಲಿ ಹೆಚ್ಚಿನ ಅನುಕೂಲವಾಗುತ್ತದೆ. ಹಿರಿಯರ ಆರೋಗ್ಯಕ್ಕಾಗಿ ಹೆಚ್ಚಿನ ಖರ್ಚು ಮಾಡಬೇಕಾಗುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವೈಜ್ಞಾನಿಕ ಸಂಶೋಧನೆಯಲ್ಲಿ ತೊಡಗಿಕೊಂಡವರಿಗೆ ಅನಿರೀಕ್ಷಿತವಾಗಿ ನಿರೀಕ್ಷಿತ ಫಲಿತಾಂಶ ದೊರೆಯುತ್ತದೆ. ವೈದ್ಯಾಧಿಕಾರಿಗಳಿಗೆ ಅಚ್ಚರಿ ಮೂಡಿಸುವ ರೀತಿಯಲ್ಲಿ ವೃತ್ತಿಯಲ್ಲಿ ಬೆಳವಣಿಗೆ ನಡೆಯುತ್ತದೆ. ಕಲೆ ಸಂಗೀತ ಕ್ಷೇತ್ರಗಳಲ್ಲಿ ಇರುವವರು ಉತ್ತಮ ಬೆಳವಣಿಗೆಯನ್ನು ನಿರೀಕ್ಷಿಸಬಹುದು. ಹೋಟೆಲ್ ಉದ್ಯಮದವರ ಬೆಳವಣಿಗೆ ನಿಧಾನವಾಗಿ ಏರ ತೊಡಗುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಸ್ವತಂತ್ರ ವೃತ್ತಿಯವರಿಗೆ ನಿರಂತರ ಆದಾಯವಿದ್ದರೂ ಖರ್ಚು ಜಾಸ್ತಿಯಾಗುವ ಸಂದರ್ಭವಿದೆ, ಆರ್ಥಿಕ ಸಮತೋಲನ ಅತಿ ಅಗತ್ಯ. ವಿದ್ಯಾರ್ಥಿಗಳ ಶ್ರಮಕ್ಕೆ ತಕ್ಕ ಫಲಿತಾಂಶ ಇರುತ್ತದೆ. ಸಮಾಜ ಸೇವೆ ಮಾಡುವವರ ವಿರುದ್ಧ ಆರ್ಥಿಕ ದುರುಪಯೋಗದ ಅಪವಾದ ಕೇಳಿಬರುತ್ತದೆ. ದಿನಸಿ ವಸ್ತುಗಳನ್ನು ಅಲ್ಪ ಪ್ರಮಾಣದಲ್ಲಿ ರಫ್ತು ಮಾಡುತ್ತಿದ್ದವರಿಗೆ ಪೂರ್ಣ ಪ್ರಮಾಣದ ರಫ್ತಿಗೆ ಅವಕಾಶ ದೊರೆಯುತ್ತದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಹದಗೆಟ್ಟಿದ್ದ ಹಿರಿಯರ ಆರೋಗ್ಯ ಸುಸ್ಥಿತಿಗೆ ಬರುತ್ತದೆ. ವ್ಯಾಪಾರಕ್ಕೆ ಬೇಕಾದ ಧನಸಂಗ್ರಹ ಒದಗಿ ಬರುತ್ತದೆ. ಯಂತ್ರೋಪಕರಣಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ವಿದ್ಯಾರ್ಥಿಗಳಿಗೆ ಸೂಕ್ತ ವಿದ್ಯಾ ಪರಿಕರಗಳು ದೊರೆಯುತ್ತವೆ. ಉನ್ನತ ಅಧಿಕಾರಿಗಳ ಸಹಾಯದಿಂದ ಕೆಳದರ್ಜೆ ನೌಕರರಿಗೆ ಅನುಕೂಲವಾಗುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮ ಯೋಜನೆಗಳಿಗೆ ಇದ್ದ ಅಡ್ಡಿಗಳು ಈಗ ನಿವಾರಣೆಯಾಗುತ್ತವೆ. ಹೊಸ ಅವಕಾಶಗಳು ನಿಮ್ಮನ್ನು ಅರಸಿಬರುತ್ತವೆ. ಹಣದ ಒಳಹರಿವಿನಲ್ಲಿ ಏರಿಕೆಯನ್ನು ಕಾಣಬಹುದು. ವಾಹನಗಳ ಬಿಡಿಭಾಗಗಳನ್ನು ಮಾರಾಟ ಮಾಡುವವರಿಗೆ ವ್ಯವಹಾರದಲ್ಲಿ ಏಳಿಗೆ ಇದೆ. ವಿದ್ಯುತ್ ಉಪಕರಣಗಳನ್ನು ದುರಸ್ತಿ ಮಾಡುವವರಿಗೆ ಕೈತುಂಬಾ ಕೆಲಸವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಸಾಮಾಜಿಕವಾಗಿ ನಿಮ್ಮ ವರ್ಚಸ್ಸು ಹೆಚ್ಚಾಗುತ್ತದೆ. ಆರ್ಥಿಕವಾಗಿ ಚೇತರಿಕೆಯನ್ನು ಕಾಣಬಹುದು. ನಿಮ್ಮ ಒಳ್ಳೆಯತನವನ್ನು ದುರುಪಯೋಗಮಾಡಿಕೊಳ್ಳದಂತೆ ಎಚ್ಚರ ವಹಿಸಿರಿ. ಕಾನೂನು ಸಲಹೆಗಾರರಾಗಿ ಕೆಲಸ ಮಾಡುತ್ತಿರುವವರಿಗೆ ಗೌರವದ ಜೊತೆಗೆ ಸೂಕ್ತವಾದ ಸಂಭಾವನೆಯೂ ಇರುತ್ತದೆ. ರಾಜಕೀಯ ಜೀವನದಲ್ಲಿ ಸ್ಥಾನಮಾನಗಳನ್ನು ಭದ್ರಪಡಿಸಿಕೊಳ್ಳಲು ಮುಖಂಡರ ಜೊತೆ ಮಾತನಾಡುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಮ್ಮಿಕೊಂಡಿರುವ ಯೋಜನೆಗಳನ್ನು ಪೂರೈಸಲು ಎಲ್ಲ ರೀತಿಯಿಂದ ಧನ ಸಂಗ್ರಹಣೆಗೆ ಮುಂದಾಗುವಿರಿ. ಪೀಠೋಪಕರಣಗಳು, ಗೃಹಾಲಂಕಾರ ವಸ್ತುಗಳನ್ನು ಖರೀದಿಸಲು ಮುಂದಾಗುವಿರಿ. ಹಣದ ಒಳಹರಿವು ತಕ್ಕಮಟ್ಟಿಗೆ ಇರುತ್ತದೆ. ಆಯುಧ ವ್ಯಾಪಾರ ಮಾಡುವ ವ್ಯಕ್ತಿಗಳು ಸ್ವಲ್ಪ ಎಚ್ಚರವಾಗಿರುವುದು ಒಳ್ಳೆಯದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಹಣದ ಹರಿವು ಉತ್ತಮವಾಗಿರುತ್ತದೆ. ಸರ್ಕಾರಿ ಸಾಲಗಳು ಸಿಗುವುದು ಸ್ವಲ್ಪ ನಿಧಾನವಾಗುತ್ತದೆ. ಸಕಾರಾತ್ಮಕ ಚಿಂತನೆಗಳಿಂದ ಮನಸ್ಸು ಹಗುರಾಗುತ್ತದೆ. ಲೋಹದ ವ್ಯಾಪಾರಿಗಳಿಗೆ ಅಭಿವೃದ್ಧಿ ಇರುತ್ತದೆ. ನಿಮ್ಮ ನಡವಳಿಕೆಯಲ್ಲಿ ದ್ವಂದ್ವವಿದ್ದು ತೀರ್ಮಾನ ತೆಗೆದುಕೊಳ್ಳುವಲ್ಲಿ ನಿಧಾನವಾಗುತ್ತದೆ. ಶೀತ ಬಾಧೆ ನಿಮ್ಮನ್ನು ಕಾಡಬಹುದು. ಬರಹಗಾರರಿಗೆ ಬೇಡಿಕೆ ಹೆಚ್ಚಾಗುವುದು.

ಕಟಕಟೆಯಲ್ಲಿ ಕಂಟೆಂಟ್

ಹಿಂದಿನ ಪುಟದಿಂದ...

ಇದರಲ್ಲಿ ಯುವಜನರು ಫೇಸ್‌ಬುಕ್‌ನಲ್ಲಿಯೆ ವಿವಿಧ ಪತ್ರಿಕೆಗಳಿಗೆ ಚಂದಾದಾರರಾಗಿ ತಮಗೆ ಬೇಕಾದ ಸುದ್ದಿಯನ್ನು ತೆರೆದುಕೊಂಡು ಓದುತ್ತಾರೆ. ಎಲ್ಲ ಸುದ್ದಿಗಳು ಫೇಸ್‌ಬುಕ್‌ನಲ್ಲಿ ಒಂದೇ ಕಡೆ ದೊರಕುವುದರಿಂದ ಇದು ಎಲ್ಲರಿಗೂ ಸುಲಭ. ಪ್ರತೀ ಪತ್ರಿಕೆಯ ವೆಬ್‌ಸೈಟ್‌ಗೆ ಹೋಗಿ ಓದುವುದು ತಪ್ಪುತ್ತದೆ. ಹಾಗಾಗಿ ಫೇಸ್‌ಬುಕ್ ತನ್ನಿಂದಾಗಿ ಪತ್ರಿಕೆಗಳಿಗೆ ಓದುಗರು ಸಿಗುತ್ತಿದ್ದಾರೆ ಎಂದು ವಾದಿಸುತ್ತಿದ್ದುದರಲ್ಲಿ ಹುರುಳಿತ್ತು.

ಆದರೆ, ಫೇಸ್‌ಬುಕ್‌ಗೂ 'ಕಂಟೆಂಟ್' ಎಂಬುದು ಬೇಕಲ್ಲವೇ? ಅಂದರೆ ನಿಖರ ಸುದ್ದಿ ಮೂಲಗಳು ಬೇಕಲ್ಲವೇ? ಮುಖ್ಯವಾಹಿನಿಯ ಸುದ್ದಿಮೂಲಗಳಿಲ್ಲದೇ ಹೋದಲ್ಲಿ ವ್ಯಕ್ತಿಗತ ಸುದ್ದಿಗಳನ್ನೇ ಹಂಚುವ ಹರಟೆಮಲ್ಲರ ತಾಣವಾಗಿ ಹೋಗಿಬಿಡುತ್ತದೆ ಫೇಸ್‌ಬುಕ್! ಇದು ಫೇಸ್‌ಬುಕ್‌ನ ವಿಶ್ವಾಸಾರ್ಹತೆಗೆ ಒಂದು ಧಕ್ಕೆ. ಅಲ್ಲದೇ ಫೇಸ್‌ಬುಕ್ ಮತ್ತು ಗೂಗಲ್‌ನಂತಹ ತಾಣಗಳು ತಮ್ಮ ಗ್ರಾಹಕರ ಎಲ್ಲ ಚಟುವಟಿಕೆಗಳ ಮೇಲೆ ಕಣ್ಣಿಟ್ಟಿರುತ್ತವೆ. ಅದರಲ್ಲೂ ಅವರು ಓದುವ ಸುದ್ದಿಗಳೇನು ಅವರಿಗೆ ಇಷ್ಟವಾಗುವ ಮಾಹಿತಿಗಳೇನು ಎಂಬುದನ್ನು ಬಳಸಿಕೊಂಡು ಅದರ ಮೇಲೆ ಜಾಹೀರಾತುಗಳನ್ನು ಹುಟ್ಟುಹಾಕಿ ತೋರಿಸಿ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳುತ್ತವೆ. ಇದರಿಂದಲೇ ಬಿಲಿಯಂತರ ಡಾಲರುಗಳನ್ನು ಸಂಪಾದಿಸುತ್ತವೆ. ಅಂದರೆ ಈ ಪತ್ರಿಕೆಗಳು ಬೆವರು ಹರಿಸಿ ಸಂಪಾದಿಸಿದ ಸುದ್ದಿಯನ್ನು ಹೀಗೆ ಬಿಟ್ಟಿಯಾಗಿ ತಮ್ಮ ಆದಾಯ ಮೂಲಕ್ಕಾಗಿ ಬಳಸಿಕೊಂಡು ಸಲ್ಲಬೇಕಾದ ಪಾಲನ್ನು ಸುದ್ದಿ ಸಂಸ್ಥೆಗಳಿಗೆ ಕೊಡದಿದ್ದರೆ ಅನ್ಯಾಯವಲ್ಲವೇ? ಈ ಪ್ರಶ್ನೆಯೂ ನ್ಯಾಯಯುತವಾದದ್ದೇ!



ಸರ್ಕಾರವು ಅದಕ್ಕೇ ಪತ್ರಿಕೆಗಳ ಪರವಾಗಿ ನಿಂತು ಈ ಸಾಮಾಜಿಕ ಜಾಲತಾಣ ವೇದಿಕೆಗಳು ಆದಾಯವನ್ನು ಪತ್ರಿಕೆಗಳೊಂದಿಗೆ ಹಂಚಿಕೊಳ್ಳಬೇಕೆಂದು ಕಾನೂನು ತರಲು ಹೊರಟದ್ದು. ಆದರೆ ಈ ವಾದವನ್ನೊಪ್ಪದ ಫೇಸ್‌ಬುಕ್‌ನ ಮುಖ್ಯಸ್ಥ ಮಾರ್ಕ್ ಜುಕರ್‌ಬರ್ಗ್ ಸ್ವತಃ ಆಸ್ಟ್ರೇಲಿಯಾದ ಪ್ರಭಾವಿ ರಾಜಕಾರಣಿಗಳ ಮೂಲಕ ಈ ಕಾನೂನು ತರದಿರಲು ಒತ್ತಡ ಹಾಕಲು ಯತ್ನಿಸಿ ವಿಫಲರಾದರು. ಕಡೆಗೆ ಫೇಸ್‌ಬುಕ್ ಆಸ್ಟ್ರೇಲಿಯಾದ ಸುದ್ದಿಗಳನ್ನು ಹಂಚಿಕೊಳ್ಳದಂತೆ ತಡೆಯೊಡ್ಡಿಬಿಟ್ಟಿತು. ಜೊತೆಗೆ ರಾತ್ರೋರಾತ್ರಿ ಎಲ್ಲಾ ಪತ್ರಿಕೆಗಳ ಫೇಸ್‌ಬುಕ್ ಪುಟವನ್ನು ನಿರ್ಬಂಧಿಸಿತು. ಇದರ ಜೊತೆಗೆ ಕೆಲವು ಮಹತ್ವಪೂರ್ಣವಾದ ಕೋವಿಡ್ ಸಂಬಂಧಿತ ಸುದ್ದಿಯನ್ನು ಹಂಚುತ್ತಿದ್ದ ಸರ್ಕಾರಿ ಸಂಸ್ಥೆಗಳ ಪುಟಗಳನ್ನೂ ನಿಷೇಧಿಸಿ ಎಡವಟ್ಟು ಮಾಡಿಬಿಟ್ಟಿತು.

ಹಣಬಲ ಸೊಕ್ಕಿದ ದುರಹಂಕಾರದ ಈ ನಡೆ ವಿಶ್ವದಾದ್ಯಂತ ಟೀಕೆಗೆ ಒಳಗಾಯಿತು. ಇದು ಪ್ರಜಾಪ್ರಭುತ್ವ ವಿರೋಧಿ ನಡೆ ಮತ್ತು ಮಾನವ ಹಕ್ಕುಗಳ ವಿರುದ್ಧದ ನಡೆ ಎಂದು ಎಲ್ಲೆಡೆ ಆಕ್ರೋಶ ವ್ಯಕ್ತವಾಯಿತು. ಕಡೆಗೆ ತನ್ನ ಕಂಪನಿಯ ಹೆಸರಿಗೇ ಧಕ್ಕೆ ತರುವಂತಾಗಿದ್ದರಿಂದ ತನ್ನ ಈ ಹಟಮಾರಿ ಧೋರಣೆಯಿಂದ ಫೇಸ್‌ಬುಕ್ ಹಿಂದೆ ಸರಿಯಿತು. ಆಸ್ಟ್ರೇಲಿಯಾ ಸರ್ಕಾರದೊಡನೆ ಸತತ ಮಾತುಕತೆ ನಡೆಸಿ ತನಗೆ ಬೇಕಾದ ಸುದ್ದಿಮಾಧ್ಯಮಗಳೊಂದಿಗೆ ಮಾತ್ರ ಒಪ್ಪಂದ ಮಾಡಿಕೊಳ್ಳುವ ಮತ್ತು ಯಾವ ಪತ್ರಿಕೆಯ ಸುದ್ದಿಯನ್ನು ಪ್ರಕಟಿಸಬೇಕೆಂದು ನಿರ್ಧರಿಸುವ ಹಕ್ಕನ್ನು ತನ್ನದಾಗಿಸಿಕೊಂಡಿತು. ಜೊತೆಗೆ ಈ ರಾಯಧನದ ವಿಷಯದಲ್ಲಿ ಸರ್ಕಾರಿ ಮಧ್ಯಸ್ಥಿಕೆದಾರರ ತಲೆಹಾಕುವಿಕೆಯ ಅಂಶವನ್ನೂ ತೆಗೆದುಹಾಕಿಸಿತು. ಈ ಒಪ್ಪಂದದಲ್ಲಿ ಆಸ್ಟ್ರೇಲಿಯಾ ಸರ್ಕಾರ ತಾನು ಗೆದ್ದೆನೆಂದುಕೊಂಡಿದ್ದರೆ ವಾಸ್ತವವಾಗಿ ಗೆದ್ದಿದ್ದು ಫೇಸ್‌ಬುಕ್!

ಈ ಒಪ್ಪಂದದ ಸಾಧಕ ಬಾಧಕಗಳೇನು ಎಂಬುದಕ್ಕೆ ಕಾಲವೇ ಉತ್ತರ ಹೇಳಲಿದೆ. ಸದ್ಯಕ್ಕೆ ಸಾಂಪ್ರದಾಯಿಕ ಮಾಧ್ಯಮಗಳು ತಮ್ಮ ಪಾಲನ್ನು ತೆಗೆದುಕೊಂಡು ತೃಪ್ತಿಪಟ್ಟವೆಯಾದರೂ ಇದರಲ್ಲಿ ಯಾರಿಗೆ ಹೆಚ್ಚು ಪಾಲು ಹಂಚಿಕೆಯಾಗಲಿದೆ ಎಂಬುದಷ್ಟೇ ಪ್ರಶ್ನೆ.

ಈಗ ಗೂಗಲ್ ಮತ್ತು ಫೇಸ್‌ಬುಕ್‌ಗಳೆರಡೂ ತಮ್ಮದೇ ಚಾಣಾಕ್ಷ ರೀತಿಯ ನಡೆಗಳಲ್ಲಿ ತಮಗೆ ಬೇಕಾದ ಸುದ್ದಿಗಳನ್ನು ಮಾತ್ರ ಜನರಿಗೆ ತಲುಪಿಸುವ ಹಕ್ಕು ಪಡೆದುಕೊಂಡಿವೆ.

ಈ ಸಾಮಾಜಿಕ ಜಾಲತಾಣ ವೇದಿಕೆಗಳಿಗೆ ಹೆಚ್ಚಿನ ಜನ ಬರಬೇಕೆಂದರೆ ಮತ್ತೆ ಜನಪ್ರಿಯವಾದ ಸೆನ್ಸೇಷನ್ ಕಂಟೆಂಟ್‌ಗಳನ್ನೇ ಕೊಡಬೇಕಾಗುತ್ತದೆ. ಹೆಚ್ಚಿನ ಪಾಲಿಗಾಗಿ ಪತ್ರಿಕೆಗಳೂ ಆ ರೀತಿಯದ್ದನ್ನೇ ಕೊಡತೊಡಗುತ್ತವೆ. ಆಗ ನೈಜ ಮತ್ತು ಗಂಭೀರ ಸುದ್ದಿಗಳಿಗೆ ಜಾಗವೇ ಇಲ್ಲದಂತಾಗುತ್ತದೆ. ಗಂಭೀರ ಸುದ್ದಿ ಪಸರಿಸುವ ಜಾಲತಾಣಗಳನ್ನು ಇದೇ ಕಾನೂನಿನ ನೆಪವೊಡ್ಡಿ ಚಾಣಾಕ್ಷತನದಿಂದ ಈ ಎರಡೂ ಬೃಹತ್ ಕಂಪನಿಗಳು ಮುಚ್ಚಿಬಿಡಬಹುದು. ಜನರಿಗೆ ತೋರಿಸದೇ ಹೋಗಬಹುದು. ಈ ಬೃಹತ್ ಮೀಡಿಯಾ ಹೌಸ್‌ಗಳೊಂದಿಗೆ ಸಣ್ಣಪುಟ್ಟ ಸುದ್ದಿ ಪತ್ರಿಕೆಗಳು ಸ್ಪರ್ಧಿಸುವುದೂ ಕಷ್ಟವಾಗುತ್ತದೆ. ಅತ್ಯಂತ ಎಚ್ಚರಿಕೆ ಮತ್ತು ಸದುದ್ದೇಶದಿಂದ ಕಾನೂನು ತಂದಿದ್ದರೂ ಈ ಕ್ಯಾಪಿಟಲಿಸಂನ ಕುತಂತ್ರಗಳು ಒಳಸುಳಿಗಳು ವಿಷವರ್ತುಲಗಳು ಮತ್ತೆ ಪ್ರಬಲರ ಕೈಗೇ ಚುಕ್ಕಾಣಿ ಸಿಗುವಂತೆ ಮಾಡುವಲ್ಲಿ ಯಶಸ್ವಿಯಾಗಿರುವಂತೆ ಮೇಲ್ನೋಟಕ್ಕೆ ತೋರುತ್ತದೆ.

(ಲೇಖಕ: ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ನೆಲೆಸಿರುವ ಐಟಿ ವೃತ್ತಿಪರ, ದಾವಣಗೆರೆ ಮೂಲ)

ಉದ್ಯೋಗ ಸೃಷ್ಟಿಯಲ್ಲಿ ವಿಜ್ಞಾನ

ಡಾ.ಕರಿಸಿದ್ದಪ್ಪ



ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಶ್ರೇಷ್ಠ ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿವೆ. ಭಾರತೀಯ ವೇದಗಳು, ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಅಡಿಪಾಯಗಳಾಗಿವೆ. ಸರ್ ಸಿ.ವಿ. ರಾಮನ್‌ರವರಿಗೆ 1930ರಲ್ಲಿ ನೊಬೆಲ್ ಪ್ರಶಸ್ತಿ ದೊರೆತ ಸವಿನೆನಪಿಗಾಗಿ ಫೆಬ್ರುವರಿ 28ರಂದು ರಾಷ್ಟ್ರೀಯ ವಿಜ್ಞಾನ ದಿನವನ್ನಾಗಿ ಆಚರಿಸಲಾಗುತ್ತದೆ.

ಭಾರತೀಯ ಇತಿಹಾಸದಲ್ಲಿ ಖ್ಯಾತ ವಿಜ್ಞಾನಿಗಳಾದ ಆರ್ಯಭಟ, ಬ್ರಹ್ಮಗುಪ್ತ, ಭಾಸ್ಕರಾಚಾರ್ಯ, ನಾಗಾರ್ಜುನ, ಸುಶ್ರುತ, ಚರಕ ಅವರಂತಹ ವಿಜ್ಞಾನಿಗಳು ಖಗೋಳವಿಜ್ಞಾನ, ಆಹಾರವಿಜ್ಞಾನ, ವೇದವಿಜ್ಞಾನ, ಔಷಧವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೆಚ್ಚು ಸಾಧನೆಗಳನ್ನು ಮಾಡಲು ಭದ್ರಬುನಾದಿ ಹಾಕಿದ್ದಾರೆ. ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ಕಳೆದ ಒಂದು ದಶಕದಲ್ಲಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿದ್ದು, ತಂತ್ರಜ್ಞಾನ ಕ್ಷೇತ್ರಕ್ಕೆ ಹೆಚ್ಚು ಹೆಚ್ಚು ಜನರು ಆಕರ್ಷಿತರಾಗುತ್ತಿದ್ದಾರೆ.

ನಾಲ್ಕನೇ ಕೈಗಾರಿಕಾ ಕ್ರಾಂತಿಯ ಎಲ್ಲಾ ಅಂಶಗಳಲ್ಲಿ ತಂತ್ರಜ್ಞಾನವು ಪ್ರಮುಖ ಪಾತ್ರವನ್ನು ವಹಿಸುತ್ತಿದೆ. ವಿಶ್ವ ಆರ್ಥಿಕ ವೇದಿಕೆಯ ಸಂಶೋಧನೆಗಳ ಪ್ರಕಾರ, ಪ್ರಸ್ತುತ ಪ್ರಾಥಮಿಕ ಶಾಲೆಗೆ ಪ್ರವೇಶಿಸುವ ಶೇ 65ರಷ್ಟು ಮಕ್ಕಳು ಈಗ ಅಸ್ತಿತ್ವದಲ್ಲಿಯೇ ಇಲ್ಲದ, ಮುಂದೊಂದು ದಿನ ಸೃಷ್ಟಿಯಾಗಬಹುದಾದ ಹೊಸ ಉದ್ಯೋಗಗಳನ್ನು ಪಡೆಯಲಿದ್ದಾರೆ. 2022-23ರ ಹೊತ್ತಿಗೆ ಪ್ರಪಂಚದಾದ್ಯಂತ 17 ಲಕ್ಷಕ್ಕಿಂತಲೂ ಹೆಚ್ಚು ಹೊಸ ಹೊಸ ಡಿಜಿಟಲ್ ತಂತ್ರಜ್ಞಾನ ಸಂಬಂಧದ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಅಂದಾಜಿಸಲಾಗಿದ್ದು, ಜೊತೆಗೆ ಐಟಿ ಕೌಶಲ ಹೊಂದಿರುವ ಶೇ 90ರಷ್ಟು ತಜ್ಞರ ಕೊರತೆಯನ್ನು ನೀಗಿಸಬೇಕಾಗಿದೆ.

ವಿಜ್ಞಾನ ದಿನದ ವಿಶೇಷ

ಸಂಶೋಧಕ ಪ್ರೊ. ಕೀತ್ ಸಾಯರ್, ವಿಜ್ಞಾನದ ದೃಷ್ಟಿಕೋನದ ಮುಖಾಂತರ ಹೊಸ ವಿಧಾನಗಳನ್ನು ಅರಿತರೆ ಸೃಜನಶೀಲತೆಯನ್ನು ಹೆಚ್ಚು ಬೆಳೆಸಿಕೊಳ್ಳಬಹುದು ಎನ್ನುತ್ತಾರೆ.

ಬೌದ್ಧಿಕ ವಾತಾವರಣವನ್ನು ಸೃಷ್ಟಿಸಲು ನಾವು ಇಂಟರ್ನೆಟ್ ಆಫ್ ಥಿಂಗ್ಸ್ (ಐಒಟಿ) ವಿಷಯವನ್ನು ಸರಿಯಾಗಿ ಅರ್ಥೈಸಬೇಕಾಗಿದೆ. ಉದಾಹರಣೆಗೆ ವಿದ್ಯಾರ್ಥಿಗಳು ತಾವು ತಯಾರಿಸುವ ಪ್ರಾಜೆಕ್ಟ್ ವರ್ಕ್‌ಗಳು ಕ್ಲೌಡ್ ಆಧಾರಿತ ಸಿಮ್ಯುಲೇಟರ್ ಜ್ಞಾನವನ್ನು ಸೇರಿಸಿ ಯಶಸ್ವಿಗೊಳಿಸಲು ವೇದಿಕೆಯನ್ನು ನಾವು ಸಿದ್ಧಪಡಿಸಬೇಕಿದೆ.

ವಿಶ್ವದ ಪ್ರಮುಖ ಐಟಿ ಕೌಶಲ ಮತ್ತು ವೃತ್ತಿ ನಿರ್ಮಾಣ ಕಂಪನಿಗಳು ಪರಿಚಯಿಸಿದ ಅನೇಕ ವಿಧದ ನೂತನ ತಂತ್ರಜ್ಞಾನಗಳು, ವಿಶ್ವದ ಬೇರೆ ಬೇರೆ ಸ್ಥಳಗಳಲ್ಲಿ ಇರುವಂತಹ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಮಾರ್ಗದರ್ಶಕರು ಆನ್‌ಲೈನ್‌ನಲ್ಲಿ ಪರಸ್ಪರ ಮುಖಾಮುಖಿಯಾಗಿ ತಮ್ಮ ಪ್ರಾಜೆಕ್ಟ್‌ನ ಅಭಿವೃದ್ಧಿಯ ಬಗ್ಗೆ ವಿವಿಧ ಹಂತಗಳಲ್ಲಿ ಮಾಹಿತಿಯನ್ನು ರಿಯಲ್ ಟೈಮ್‌ನಲ್ಲಿ ವಿನಿಮಯ ಮಾಡಿಕೊಳ್ಳುವ ಮೂಲಕ ಅತ್ಯಂತ ಕ್ಲಿಷ್ಟಕರವಾದ ಸಮಸ್ಯೆಗಳಿಗೆ ಪರಿಹಾರವನ್ನು ಸುಲಭವಾಗಿ ಪಡೆಯಬಹುದು ಎಂಬುದನ್ನು ತೋರಿಸಿಕೊಟ್ಟಿವೆ.

ಕೃತಕ ಬುದ್ಧಿಮತ್ತೆ ಬಳಸಿಕೊಂಡು ನುರಿತ ಪ್ರಾಧ್ಯಾಪಕರು ಪಾಠಮಾಡುವ ವೈಖರಿ ಅನುಕರಣೆ ಮಾಡುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು ತಮಗಿಷ್ಟವಿರುವ ಬೋಧಕರ ಪಾಠಗಳನ್ನು ಅವರ ಅನುಪಸ್ಥಿತಿಯಲ್ಲಿಯೂ ತಂತ್ರಜ್ಞಾನದ ನೆರವಿನಿಂದ ಪಡೆಯಲು ಸಹಕಾರಿಯಾಗಲಿದೆ. ಅಲ್ಲದೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಕಲು ಮಾಡುವುದನ್ನು ತಪ್ಪಿಸಲು, ಪರೀಕ್ಷೆಗಳಲ್ಲಿ ಪಾರದರ್ಶಕತೆಯನ್ನು ತರಲು ಈ ತಂತ್ರಜ್ಞಾನವನ್ನು ಇತ್ತೀಚೆಗೆ ಯಶಸ್ವಿಯಾಗಿ ಬಳಸಲಾಗುತ್ತಿದೆ. ಇತ್ತೀಚೆಗೆ ಇದೇ ಜ್ಞಾನವನ್ನು ಬಳಸಿ ಕೃಷಿ ಇಲಾಖೆಯು ರೈತರ ಬೆಳೆ ಸಮೀಕ್ಷೆಯನ್ನು ನಡೆಸಿ, ಪ್ರಕೃತಿ ವಿಕೋಪ, ಅತಿವೃಷ್ಟಿ-ಅನಾವೃಷ್ಟಿಗಳಿಂದ ಹಾನಿಗೊಳಗಾದ ಅರ್ಹ ರೈತ ಫಲಾನುಭವಿಗಳನ್ನು ಆಯ್ಕೆಮಾಡಲು ಸಾಧ್ಯವಾಗಿದೆ. ಕೋವಿಡ್ ಹರಡದಂತೆ ತಡೆಯಲು ಆರೋಗ್ಯ ಸೇತು ಆ್ಯಪ್ ಹೇಗೆ ನೆರವಿಗೆ ಬಂತು ಎನ್ನುವುದು ಎಲ್ಲರಿಗೂ ಗೊತ್ತೇ ಇದೆ.

ತಂತ್ರಜ್ಞಾನವು ವಿದ್ಯಾರ್ಥಿಗಳಿಗೆ ಸಂವಾದಾತ್ಮಕ ಅನುಭವವನ್ನು ನೀಡುವುದರ ಜೊತೆಗೆ ಅವರಲ್ಲಿ ಕಲಿಕಾ ಪ್ರಕ್ರಿಯೆಯನ್ನು ಚುರುಕುಗೊಳಿಸುತ್ತದೆ ಮತ್ತು ವಿದ್ಯಾರ್ಥಿಗಳಲ್ಲಿ ಕಲಿಯುವ ಕುತೂಹಲ ಹಾಗೂ ಆಸಕ್ತಿಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಶಿಕ್ಷಕರು ನೀಡಿರುವ ಕ್ಲಾಸ್ ಅಸೈನ್‌ಮೆಂಟ್‌ಗಳನ್ನು ಶಾಲೆಯ ಹೊರಗೆ ಎಲ್ಲಿ ಬೇಕಾದರೂ ಮಾಡಬಹುದಾಗಿದೆ. ಅರ್ಥವಾಗದ ವಿಷಯವನ್ನು ಅರಿತುಕೊಳ್ಳಲು ಆನ್‌ಲೈನ್ ತಂತ್ರಜ್ಞಾನದ ನೆರವಿನಿಂದ ಪರಿಣತರ ಸಹಾಯವನ್ನು ಪಡೆಯಬಹುದು. ಈ ತಂತ್ರಜ್ಞಾನವು ಶಾಲೆ ಮತ್ತು ಮನೆ ನಡುವೆ ಸೇತುವೆಯಂತೆ ಕೆಲಸ ಮಾಡುತ್ತಿದೆ.

ತಂತ್ರಜ್ಞಾನದಿಂದ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಪರಿವರ್ತನೆ ಆಗಿದ್ದು, ಹಿಂದಿನ ದಶಕಕ್ಕೆ ಹೋಲಿಸಿದರೆ, ಕಲಿಕಾ ಮಟ್ಟವು ಹತ್ತು ಪಟ್ಟು ಹೆಚ್ಚಾಗಿದೆ. ಆಧುನಿಕ ತರಗತಿಯ ಪ್ರಮುಖ ಲಕ್ಷಣವೆಂದರೆ ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವಿನ ಸಂವಾದ. ವಿವಿಧ ಗ್ಯಾಜೆಟ್‌ಗಳ ಮುಖಾಂತರ ಕಲಿಕೆಯನ್ನು ಉತ್ತೇಜಿಸಲು ಶಿಕ್ಷಕರು ಇಂದು ಗ್ರೂಪ್ ಚಾಟ್‌ಗಳು ಮತ್ತು ಆನ್‌ಲೈನ್ ಫಾರ್ಮ್ ಮುಂತಾದ ವಿವಿಧ ವಿಧಾನಗಳನ್ನು ಬಳಸುತ್ತಿದ್ದಾರೆ. ಆ್ಯನಿಮೇಶನ್ ವಿಡಿಯೊಗಳು ಅತ್ಯಂತ ಕಠಿಣವಾದ ವಿಷಯಗಳನ್ನು ಸುಲಭವಾಗಿ ಅರ್ಥೈಸಲು ಸಹಾಯ ಮಾಡುತ್ತಿವೆ.

ಇ- ಪುಸ್ತಕಗಳು ವಿದ್ಯಾರ್ಥಿಗಳ ಬೆನ್ನು ಹೊರೆಯನ್ನು ಕಡಿಮೆ ಮಾಡುವುದರ ಜೊತೆಗೆ ಶಿಕ್ಷಕರು ಈಗ ಸ್ಲೈಡ್ ಹಾಗೂ ಸ್ಮಾರ್ಟ್ ಕ್ಲಾಸ್‌ರೂಮ್ ಬಳಸುತ್ತಿದ್ದು ವಿವಿಧ ವಿಷಯಗಳನ್ನು ಆಸಕ್ತಿಕರವಾಗಿ ತೋರಿಸುವುದರ ಮೂಲಕ ತರಗತಿಯಲ್ಲಿ ಪಾಠದ ಬಗ್ಗೆ ಆಕರ್ಷಣೆ ಉಂಟುಮಾಡುತ್ತಿದ್ದಾರೆ.

ಬದಲಾದ ತಂತ್ರಜ್ಞಾನದ ನೆರವಿನಿಂದ ಕಲಿಯಲು ಸಾಧ್ಯವಿಲ್ಲ ಎಂದು ಭಾವಿಸುವವರೂ ಇಂದು ವಿಜ್ಞಾನ ಪಾಠಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಶ್ರೀಮಂತ ಮತ್ತು ಬಡ ರಾಷ್ಟ್ರಗಳ ನಡುವೆ ಅಂತರವನ್ನು ಕಡಿಮೆ ಮಾಡಲು ಸಹ ತಂತ್ರಜ್ಞಾನ ಸಹಾಯ ಮಾಡಿದೆ.


ತಾಂತ್ರಿಕ ಪ್ರಗತಿಯಿಂದ ಭವಿಷ್ಯದಲ್ಲಿ ಉದ್ಭವಿಸುವ ಪ್ರಮುಖ ಪ್ರಶ್ನೆಯೆಂದರೆ ಉದ್ಯೋಗ ಮತ್ತು ಕಾರ್ಮಿಕರ ಕಲ್ಯಾಣ. ಏಕೆಂದರೆ ಯಾವುದೇ ಸರ್ಕಾರಗಳು ಸಮಾಜದ ಮತ್ತು ಆರ್ಥಿಕ ಶಕ್ತಿಯ ಸಮತೋಲನವನ್ನು ಕಾಪಾಡಲು ಇವುಗಳು ಬಹು ಮುಖ್ಯ. ಇತ್ತೀಚೆಗೆ ಹಲವು ನೂತನ ತಂತ್ರಜ್ಞಾನಗಳನ್ನು ಹಲವಾರು ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಬಳಕೆಮಾಡಲಾಗುತ್ತಿದೆ. ಉದಾಹರಣೆಗೆ 5G ಸಂವಹನ ತಂತ್ರಜ್ಞಾನ ಹೆಚ್ಚು ವೇಗವಾಗಿ ಡೇಟಾ ಕೊಂಡೊಯ್ಯುವ ಕೆಲಸ ಮಾಡುತ್ತಿದೆ.

ಇಂಡಸ್ಟ್ರಿ 4.0 ಎಂದು ಕರೆಯಲ್ಪಡುವ ಹೊಸ ಕೈಗಾರಿಕಾ ಕ್ರಾಂತಿಯು ಹೆಚ್ಚು ವ್ಯಾಪಕವಾಗಿ ಬೆಳೆಯುತ್ತಿದ್ದು, ಇದರಿಂದ ಉತ್ಪಾದನಾ ಮಾರ್ಗಗಳಲ್ಲಿ ಯಾಂತ್ರೀಕೃತ ರೋಬೋಟೈಸೇಷನ್ ಆಗುತ್ತಿದ್ದು, ವಿವಿಧ ಕೌಶಲಗಳನ್ನು ಹೊಂದಿದ ವೃತ್ತಿಪರರಿಗೆ ಮಾತ್ರ ಇನ್ನುಮುಂದೆ ಕೆಲಸದ ಭದ್ರತೆ ಒದಗಲಿದೆ.

ಈ ನಿಟ್ಟಿನಲ್ಲಿ ಯುವಪೀಳಿಗೆ ಶಿಕ್ಷಣದ ಜೊತೆಗೆ ಕೌಶಲವೃದ್ಧಿಯಲ್ಲಿ ಆಸಕ್ತಿ ಇದ್ದರೆ, ಬದಲಾಗುವ ತಂತ್ರಜ್ಞಾನದ ಹರಿವಿನೊಂದಿಗೆ ಸಾಗುವುದನ್ನು ರೂಢಿಸಿಕೊಳ್ಳಬೇಕಿದೆ.

(ಲೇಖಕ: ಕುಲಪತಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ)

ಪದಬಂಧ 2676



ಮೇಲಿನಿಂದ ಕೆಳಕ್ಕೆ
1. ತಲೆಕೆಳಕಾದ ಅಹವಾಲು 3
2. ದಾರದಿಂದ ಕೆಳಗಿಳಿದ ಪೂರ್ಣ ಚಂದ್ರನ ಬೆಳಕು 5
3. ಹೊಸದಾಗಿ ಮೂಡಿದ ಆಂತರಂಗದ ಅನಿಸಿಕೆ 5
4. ಯಾವುದೇ ಭಯವಿಲ್ಲದ ನಿರಾಳ ಸ್ಥಿತಿ 4
6. ಶಿವಪೂಜೆಯಲ್ಲಿ ಬಿಟ್ಟು ಬಂದ ಲಿಂಗ ಪೆಟ್ಟಿಗೆ 4
8. ಸರ್ಪದ ಬೆನ್ನೇರಿದಾಗ ಉತ್ತರ ಕರ್ನಾಟಕದ ರಾಜ್ಯ ಸಿಗುತ್ತದೆ 3
10. ಬೇಡಿದ್ದನ್ನು ಕೊಡುವವನೇ ಇವ? 3
12. ಕಾಪಾಡುವ ವ್ಯವಸ್ಥೆ 3
13. ಸಂಗೀತ, ನಾಟಕ, ನೃತ್ಯ ಇತ್ಯಾದಿಗಳಿಗೆ ಮೀಸಲಾದ ಊರು 4
14. ಕಣಿವೆಯಾದಿಯಾಗಿ ಊರನ್ನೇ ದೋಚುವ ಕಸುಬಿನವರು 5
15. ಏರೋಪ್ಲೇನುಗಳು ತಯಾರಾಗುವ ಊರನ್ನು ಹೀಗೆ ಕರೆದರೆ? 5
16. ಸುತರ ಕಾಯುವ ಜನ್ಮದಾತೆಯೇ, ನಮ್ಮನ್ನು ಆಶೀರ್ವದಿಸು 3
17. ಹರಿದು ಬಂದಿರುವ ಕೃಷ್ಣ ಕುಲ 4
19. ಪರ್ವತದ ಮೇಲೆ ಬೀಸುವ ಗಾಳಿ 3

ಎಡದಿಂದ ಬಲಕ್ಕೆ
1. ಸರ್ವ ಹೃದಯಗಳನ್ನು ಸಂಸ್ಕರಿಸುವ ತಾಯಿ ಭಾರತಿ ಪ್ರಪಂಚಕ್ಕೆ ನಾವೀನ್ಯತೆಯ ಪ್ರತೀಕವೆಂಬುದು ಕವಿವಾಣಿ 6
4. ಗೋಕುಲದಿಂದ ಕೃಷ್ಣ, ಕಪಿಲವಸ್ತುವಿನಿಂದ ಸಿದ್ಧಾರ್ಥ ಹೊರಟಿದ್ದು 4
5. ಟಿವಿ ಸಿನಿಮಾಗಳನ್ನು ನೋಡುವವ 3
7. ಈತನ ಭುಜಬಲ ಸಾಮಾನ್ಯವಾದುದಲ್ಲ ಮಹತ್ತರವಾದದ್ದು 4
9. ಇಬ್ಭಾಗವಾಗಿ ಒಡೆದ ಹಾದಿ 5
11. ಜನರ ದೃಷ್ಟಿ ಬೀಳಲೆಂದು ರಸ್ತೆಯಲ್ಲಿ ಸಂಭ್ರಮದ ಸುತ್ತಾಟ 5
13. ನಮ್ಮ ಭಾಷಾ ಕಾವ್ಯದ ಸೃಷ್ಟಿಕರ್ತ 5
16. ವಿಧಿ ಲಿಖಿತ ಲಲಾಟ ಲಿಪಿ 5
18. ಹೊಸತು ಹಿಂದುಮುಂದಾದರೆ ಕಾನನದಲ್ಲಿ ಅರಳಿದ ಹೂವು 4
20. ಮತ್ತೆ ಮತ್ತೆ ಬೀಸುವ ಗಾಳಿ 3
21. ರಾಮ ಪುತ್ರನಿಗೆ ಎಳ್ಳಷ್ಟೂ ಸಂಶಯವಿಲ್ಲ 4
22. ಭಯಂಕರವೆನಿಸಿದರೂ ಮನೋಹರ 6

ಪದಬಂಧ ಉತ್ತರ -2675

ಮೇಲಿಂದ ಕೆಳಕ್ಕೆ

1. ಸಾರಸ್ವತ 2.ದಯಾವಂತ 3.ಪರಿಕರ 4.ಧನವಂತ 6.ಶರವೇಗ 7.ಹಸು 9.ದನಿತರಂಗ 11.ಜಿನುಗುಮಳೆ 13.ಸಾಕುಮಗ 14.ನಾರಸಿಂಹ 15.ಚರಾಚರ 16.ನಗ 19.ನಮಸ್ಕಾರ 20.ತರಗೆಲೆ

ಎಡದಿಂದ ಬಲಕ್ಕೆ

1. ಸಾಮವೇದ 3.ಪದಬಂಧ 5.ವಂಶವಾಹಕ 8.ತದನಂತರ 10.ಸುರಪೂಜಿತ 12.ತಪೋಭಂಗ 13.ಸಾಯಂರಂಗು 14.ನಾಗಲೋಚನ 18.ಮನಸೆಳೆತ 21.ರಾಗಸಂಗಮ 22.ಹರಿಹರ 23.ರವಿಜ್ವಾಲೆ

ಪುಂಡುವೇಷದ 'ಐಕಾನ್'!



ನಾಲ್ಕೈದು ವರುಷಗಳ ಹಿಂದಿನ 'ಮಗುತನ'ದ ಭಾವ

> ಗಂಡುಗತ್ತಿನ ಪುಂಡು ವೇಷಧಾರಿ ಎಂದೇ ಹೆಸರಾಗಿದ್ದ ಶ್ರೀಧರ ಭಂಡಾರಿ ಅವರ ಅಗಲಿಕೆ ಎಂದರೆ ಅದೊಂದು ಯಕ್ಷಗಾನದ ಸುವರ್ಣ ಅಧ್ಯಾಯವೊಂದರ ಅಂತ್ಯವೇ ಸರಿ. ಇಂತಹ ಮತ್ತೊಬ್ಬ ಅಪೂರ್ವ ಕಲಾವಿದ ನಮಗೆ ಸಿಕ್ಕಾರೆಯೇ?

ನಾ. ಕಾರಂತ ಪೆರಾಜೆ


ತೆಂಕುತಿಟ್ಟು ಯಕ್ಷಗಾನದ ಪುಂಡು ವೇಷಧಾರಿ ಪುತ್ತೂರು ಶ್ರೀಧರ ಭಂಡಾರಿಯವರ ಕಲಾಯಾನಕ್ಕೆ ಹತ್ತಿರ ಹತ್ತಿರ ಆರು ದಶಕದ ದಾಖಲೆ. ಫೆಬ್ರುವರಿ 19ರಂದು ಅವರು ಇನ್ನಿಲ್ಲವಾದಾಗ ಅವರಿಗೆ ಎಪ್ಪತ್ತಾರು ವರುಷ. 'ಸಿಡಿಲಮರಿ, ಗಂಡುಗತ್ತಿನ ಪುಂಡು ವೇಷಧಾರಿ, ಸಿಡಿದೆದ್ದ ಗಂಡುಗಲಿ, ಯಕ್ಷನಾಟ್ಯ ಚತುರ, ಶತದಿಗಿಣಗಳ ವೀರ...' ಇವೆಲ್ಲಾ ಭಂಡಾರಿಯವರಿಗೆ ಅರ್ಹತೆಯು ತಂದಿತ್ತ ನಿಜಾರ್ಥದ ಬಿರುದುಗಳು.

'ಒಂದು ನಿಮಿಷಕ್ಕೆ ನೂರು ಸುತ್ತು (ದಿಂಗಿಣ) ಹಾರಬೇಕು' - ಝೀ ಮ್ಯೂಸಿಕ್ ವಾಹಿನಿಯು ತನ್ನ 'ಶಭಾಷ್ ಇಂಡಿಯಾ' ಕಾರ್ಯಕ್ರಮದಲ್ಲಿ ಶ್ರೀಧರ ಭಂಡಾರಿಗಳ ಮುಂದಿಟ್ಟ ಸವಾಲು. ಹಾರಿದ್ದು ಮಾತ್ರ ನೂರನಲವತ್ತೆಂಟು ಸುತ್ತು! ಅದು ಗಿನ್ನಿಸ್ ದಾಖಲೆ ಮಾಡಿತು. ಆಗವರಿಗೆ ಅರವತ್ತೆರಡು ವಯಸ್ಸು.



ಇಳಿ ವಯಸ್ಸಲ್ಲೂ ಹೊಂತಕಾರಿ ಭಾವ

ಶ್ರೀಧರ ಭಂಡಾರಿ ಅಂದಾಗ ನೆನಪಾಗುವುದು ಅವರ 'ಅಭಿಮನ್ಯು' ಪಾತ್ರ. ಪುರಾಣದ ಅಭಿಮನ್ಯು ನಿಮ್ಮ ಗ್ರಹಿಕೆಗೆ ಬಂತೆನ್ನಿ. ಯಕ್ಷಗಾನದ ಸಂಪರ್ಕವಿರುವವರಿಗೆ ಆಗ ಇವರು ನೆನಪಾಗದೇ ಇರರು. ಹೀಗೆ ಪಾತ್ರವೂ, ವ್ಯಕ್ತಿಯೂ ಒಂದಾದ ಸಂಬಂಧವು ಮರೆಯಲಾಗದ ಬಂಧ, ಕಾಡುವ ಅನುಬಂಧ.



ಪುತ್ತೂರು ಶ್ರೀಧರ ಭಂಡಾರಿ

ಭಂಡಾರಿ ಯಕ್ಷರಂಗದ ಬೆರಗು. ರಂಗ ಸಾಧ್ಯತೆಯನ್ನು ಮೀರಿದ ಸಾಹಸಿ. ಯಕ್ಷಗಾನದ ಎಲ್ಲಾ ಪುಂಡುವೇಷಗಳು ಇವರನ್ನು ಮರೆಯವು! ಪಾತ್ರಗಳೇ ಬೆರಗಾಗುವ ಕ್ಷಣಗಳನ್ನು ರಂಗದಲ್ಲಿ ಮೂಡಿಸಿದ ಅಪ್ರತಿಮ. ರಂಗಪ್ರವೇಶಿಸಿದರೆ ಸಾಕು, ಇದಿರು ಪಾತ್ರಧಾರಿಯ ಅರ್ಧ ಶಕ್ತಿಯನ್ನು ಸೆಳೆವ ಶಕ್ತಿ, ಜತೆಪಾತ್ರಗಳ ಅಭಿವ್ಯಕ್ತಿಗಳಿಗೆ ಅವ್ಯಕ್ತ ಅಂಕುಶ.

ಪುಂಡುವೇಷಗಳ ವೇಗವು ಅವರಿಗೆ ಸ್ವ-ಭಾವ. ಅದು ಹುಟ್ಟಿನಿಂದಲೇ ರೂಪುಗೊಂಡ ಶಿಲ್ಪ. ರಂಗದಲ್ಲಿ ಆ ವೇಗವು ಬಿಡಿಸುವ ಚಿತ್ತಾರಕ್ಕೆ ರಂಗವೇ ದಂಗಾಗಿದೆ. ಜವ್ವನದ ಈ ವೇಗದ ಕ್ಷಿಪ್ರತೆಗೆ ಶ್ರೀ ಧರ್ಮಸ್ಥಳ ಮೇಳದ ಮದ್ದೆಗಾರ್ ಕೀರ್ತಿಶೇಷ ಚಿಪ್ಪಾರು ಕೃಷ್ಣಯ್ಯ ಬಲ್ಲಾಳರ ನುಡಿತ, ಬಿಡಿತ. ದಿನದಿನವೂ ರಂಗದಲ್ಲಿ ಪ್ರಯೋಗ. ಸವಾಲುಗಳ ಆಪೋಶನಗಳು ಒಂದು ಕಾಲಘಟ್ಟದ ರಂಗ ವಿಸ್ಮಯ.

1957ರಲ್ಲಿ ಶ್ರೀ ಬಳ್ಳಂಬೆಟ್ಟು ಮೇಳದ ಮೂಲಕ ಶ್ರೀಧರರ ರಂಗಪ್ರವೇಶ. ಪ್ರಥಮ ಪಾತ್ರ 'ಬಾಲಕೃಷ್ಣ'. ಮುಂದೆ ಎಲ್ಲಾ ಪಾತ್ರಗಳಲ್ಲೂ ಕೃಷ್ಣನ ಸೌಂದರ್ಯವನ್ನು ತಂದರು. ಅಭಿಮನ್ಯುವಿನ ಕ್ರೋಧದಲ್ಲೂ ಸೌಂದರ್ಯ, ಬಬ್ರುವಾಹನನ ಸಿಟ್ಟಿನಲ್ಲೂ ಮಾಧುರ್ಯ. ಇಂದ್ರಜಿತುವಿನ ಕಾಠಿಣ್ಯದ ಮಧ್ಯೆಯೂ ಇಣುಕುವ ಸೊಗಸುಗಾರಿಕೆ. 1959ರ ಬಾಲ್ಯದ ಆ ದಿವಸ. ಮೇರು ಕಲಾವಿದ ಕ್ರಿಶ್ಚನ್ ಬಾಬು ಅವರ 'ಅಭಿಮನ್ಯು' ಪಾತ್ರವನ್ನು ನೋಡಿದ್ದರು. ಅದು ಪಾತ್ರವಲ್ಲ, ಸಿಡಿಲ ಮಿಂಚು! ಪಾತ್ರದ ವೇಗ, ಕ್ಷಿಪ್ರ ರಂಗನಡೆ, ದಣಿವರಿಯದ ಅಭಿವ್ಯಕ್ತಿ, ಕ್ಷಣಕ್ಷಣಕ್ಕೆ ಏರುವ ಉತ್ಸಾಹ. ಆಟವನ್ನು ನೋಡುತ್ತಾ ಕುಳಿತ ಶ್ರೀಧರರ ಮನದೊಳಗೆ ಅಭಿಮನ್ಯು ಕುಳಿತುಬಿಟ್ಟ! ರಂಗದಲ್ಲಿ ನೋಡಿದ ಅಭಿಮನ್ಯುವಿನ ಆ ಕಿಚ್ಚಿನ ಭಾವವೇ ಮುಂದೆ ಯೋಗವಾಯಿತು.

ಸ್ಮರಣೆ

ಇವರಿಗೆ 'ಹುಟ್ಟುಕಲಾವಿದ' ಪದವು ಹೆಚ್ಚು ಒಪ್ಪುತ್ತದೆ. ಕಣ್ಣು ಬಿಡುವಾಗಲೇ ಮನೆಯೊಂದು ಬಣ್ಣದ ಮನೆ! ಗೆಜ್ಜೆಯ ಸದ್ದು. ಬಣ್ಣದ ಓಕುಳಿ. ಜೌಳಿಯ ರಂಗು. ತಂದೆ ಬನ್ನೂರು ಶೀನಪ್ಪ ಭಂಡಾರಿಯವರ ತನುಸ್ಪರ್ಶದಲ್ಲೇ ಬೆಳೆದರು. 'ತನ್ನ ಯಕ್ಷಗಾನ ಮೇಳದ ಹಾದಿ ಮಗನಿಗೆ ಬೇಡ' - ತಂದೆಯ ನಿಲುವು. ಕಲಾವಿದನಾಗಲೇ ಬೇಕೆಂಬ ಹಟ ಮಗನದು. ಮಗನ ಹಟದಲ್ಲಿ ಆತನ ಉತ್ಕರ್ಷವಿದೆಯೆಂದರಿತ ತಂದೆ ರಾಜಿಯಾದರು. ಮತ್ತೆ ರಂಗದಲ್ಲಿ ತಂದೆ-ಮಗನದ್ದೇ ಜೋಡಿ. ಕೃಷ್ಣ-ಕಂಸ, ಪ್ರಹ್ಲಾದ-ಹಿರಣ್ಯಕಶಿಪು ಜತೆಗಾರಿಕೆ.

ಶ್ರೀ ಆದಿಸುಬ್ರಹ್ಮಣ್ಯ ಮೇಳ, ಶ್ರೀ ಧರ್ಮಸ್ಥಳ ಮೇಳಗಳಲ್ಲಿ ತಿರುಗಾಟ. ಬಳಿಕ ಸ್ವಂತದ್ದಾದ ಪುತ್ತೂರು ಶ್ರೀ ಮಹಾಲಿಂಗೇಶ್ವರ ಮೇಳ, ಶ್ರೀ ಕಾಂತಾವರ ಮೇಳಗಳ ಯಜಮಾನಿಕೆ. 'ಬಾಲೆ ನಾಗಮ್ಮ, ನಾದಕೇದಗೆ, ಬಂಟಮಲೆ ಬೈರವೆ, ಪಟ್ಟದ ಕತ್ತಿ, ಬಾಲೆದ ಓಲೆ, ಮರ್ಲೆದಿ ಮಾಚಕ್ಕೆ, ಜಾಗೆದ ಪಂಜುರ್ಲಿ, ಪುತ್ತೂರ್ದ ಮುತ್ತು..' ಪ್ರಸಂಗಗಳ ಪ್ರದರ್ಶನ. ಕೊನೆಗೆ ಸಾಲ ಶೂಲವಾದಾಗ ಮೇಳಗಳನ್ನು ನಿಲುಗಡೆಗೊಳಿಸಿದರು. ಮತ್ತೆ ಧರ್ಮಸ್ಥಳ ಮೇಳದಿಂದ ನಿವೃತ್ತಿ ತನಕ ಕಲಾವಿದನಾಗಿ ದುಡಿತ.

ಶ್ರೀ ಧರ್ಮಸ್ಥಳ ಮೇಳ ಸೇರುವಾಗ (1964) ಶ್ರೀಧರರ ಪ್ರತಿಭೆಗೆ ಪ್ರಖರತೆ ಇದ್ದಿರಲಿಲ್ಲ. ಮೇಳದಲ್ಲಿ ಭಾಗವತ ಕಡತೋಕ ಮಂಜುನಾಥ ಭಾಗವತರು, ಮದ್ದೆಗಾರ ಕೃಷ್ಣಯ್ಯ ಬಲ್ಲಾಳರ ನಿರಂತರ ಉಳಿಪೆಟ್ಟುಗಳಿಂದ ಶಿಲೆಯು ಶಿಲ್ಪವಾಯಿತು. ರಂಗದಲ್ಲಿ ವೀರರಸದ ಪಾತ್ರಗಳಿಗೆ ಸೊಗಸುಗಾರಿಕೆ ಬಂತು. ವೀರರಸ ಪ್ರಧಾನವಾದ ಪ್ರಸಂಗಗಳ ಮಾತಿಗೆ, ಮತಿಯಿದೆ, ಭಾವವಿದೆ ಎಂದು ತೋರಿದರು. ಅದನ್ನು ಅಭಿವ್ಯಕ್ತಿಸುವ ವಿನ್ಯಾಸವು ಸ್ವೀಕೃತಿ ಪಡೆಯಿತು.

ಅಭಿಮನ್ಯು, ಬಬ್ರುವಾಹನ, ಲಕ್ಷ್ಮಣ, ಭಾರ್ಗವ, ಜಯಂತ, ಚಂಡ-ಮುಂಡ, ಶಶಿಪ್ರಭೆ... ಬಹುಕಾಲ ರಂಗದಲ್ಲಿ ಕುಣಿದ, ಕುಣಿಕುಣಿದ ಪಾತ್ರಗಳು. ನಂತರ ಅದೇ ಜಾಡಿನಲ್ಲಿ ಹಿರಣ್ಯಾಕ್ಷ, ಇಂದ್ರಜಿತು, ಶಿಶುಪಾಲ, ರಕ್ತಬೀಜ ಪಾತ್ರಗಳ ಪಯಣ. ಪಗಡಿ (ಪುಂಡು) ವೇಷದಲ್ಲೇ ದೀರ್ಘಕಾಲ ಕಾಣಿಸಿಕೊಂಡ ಇವರ ಇತರ ವೇಷಗಳನ್ನು ಕಣ್ಣುಗಳು ಥಕ್ಕನೆ ಒಪ್ಪಲು ಒದ್ದಾಡುತ್ತಿದ್ದವು.

ಮಳೆಗಾಲದಲ್ಲಿ ಪ್ರಸಿದ್ಧ ಕಲಾವಿದರ ತಂಡದೊಂದಿಗೆ ಕನ್ನಾಡು ಮಾತ್ರವಲ್ಲ ಹೊರ ರಾಜ್ಯಗಳಲ್ಲೂ ತಿರುಗಾಟ. ಹೋದೆಡೆ ಶಿಷ್ಯರ-ಅಭಿಮಾನಿಗಳ ದೊಡ್ಡ ಗಡಣ. ವಿದೇಶದಲ್ಲಿ ತರಗತಿ ನಡೆಸಿದ್ದಾರೆ. ಪ್ರದರ್ಶನ ಏರ್ಪಡಿಸಿದ್ದಾರೆ. ನೂರಾರು ಪ್ರದರ್ಶನ, ಜನಮನ್ನಣೆ. ಮಂಗಳೂರು ವಿಶ್ವವಿದ್ಯಾಲಯದಿಂದ 'ಯಕ್ಷಭಂಡಾರಿ' (ಲೇ: ಚಂದ್ರಶೇಖರ ಮಂಡೆಕೋಲು) ಅಭಿನಂದನಾ ಕೃತಿ ಪ್ರಕಟವಾಗಿದೆ. ಸಂಮಾನ, ಪುರಸ್ಕಾರ, ಪ್ರಶಸ್ತಿಗಳ ಮಹಾಪೂರ. ಪತ್ನಿ ಉಷಾ. ನಿಜಾರ್ಥದಲ್ಲಿ ಪತಿಗೆ ಹೆಗಲೆಣೆ. ಯಕ್ಷಗಾನವನ್ನು ತುಂಬು ಪ್ರೀತಿಸುವ ಮಕ್ಕಳು, ಸಂಸಾರ.

ಒಂದೂವರೆ ದಶಕದ ಹಿಂದೆ ಪುತ್ತೂರಿನಲ್ಲಿ 'ಯಕ್ಷಕೂಟ' ತಂಡದ ಮೂಲಕ ಬಾಲ ಕಲಾವಿದರನ್ನು ರೂಪಿಸಿದ್ದರು. ಎರಡು ವರುಷಗಳ ಕಾಲ ತರಬೇತಿ ನೀಡಿ, ವಿದ್ಯಾರ್ಥಿಗಳು ಪಕ್ವಗೊಂಡ ಬಳಿಕವೇ ರಂಗಪ್ರವೇಶ ಮಾಡಿಸಿದ್ದರು. ಇದರಿಂದಾಗಿ ಮಕ್ಕಳ ತಂಡವು ಸುಪುಷ್ಟವಾಗಿ ಬೆಳೆದಿದೆ. ಆ ಕಾಲಘಟ್ಟದಲ್ಲಿ ನೂರಾರು ಪ್ರದರ್ಶನಗಳಾಗಿವೆ. ಹಲವು ಸ್ಪರ್ಧೆಗಳಲ್ಲಿ ತಂಡವು ಬಹುಮಾನ ಪಡೆದಿದೆ.

ಶ್ರೀಧರರ ಪಾತ್ರಗಳ ವೇಗದ ತೀವ್ರತೆಯನ್ನು ಕಾಲಕ್ಕೆ ತಾಳಿಕೊಳ್ಳಲು ಕಷ್ಟವಾಯಿತು. ದಶಕದ ಹಿಂದೆ ಅವರ ರಂಗದ ಓಟಕ್ಕೆ 'ಅಶಕ್ತತೆ'ಯು ನಿರ್ದಾಕ್ಷಿಣ್ಯವಾಗಿ ಬೇಲಿ ಹಾಕಿತು. ಚೇತರಿಸಿದ ಬಳಿಕ ಶ್ರೀ ಎಡನೀರು ಮೇಳದಲ್ಲಿ ಸ್ವಲ್ಪಕಾಲ ತಿರುಗಾಟ ಮಾಡಿದ್ದರು. ಹವ್ಯಾಸಿ ಕೂಟಗಳಲ್ಲಿ ಭಾಗವಹಿಸಿದರು. ಕಳೆದ ಸುಮಾರು ಇಪ್ಪತ್ತೆಂಟು ವರುಷದಿಂದ 'ಶ್ರೀ ಮಹಾಲಿಂಗೇಶ್ವರ ಪ್ರವಾಸಿ ಯಕ್ಷಗಾನ ಮಂಡಳಿ'ಯನ್ನು ಮಳೆಗಾಲದಲ್ಲಿ ನಿರ್ವಹಿಸಿದ್ದರು.

2019ರ ಮಧ್ಯಭಾಗದವರೆಗೂ ರಂಗದಲ್ಲಿ ಶ್ರೀಧರ ಭಂಡಾರಿ ವೇಷಮಾಡುತ್ತಾ ಇದ್ದರು. ಆ ಚಿಮ್ಮುವ ಉತ್ಸಾಹ, ಪುಟಿಯುವ ಕ್ರಿಯಾಶೀಲತೆಯು ಇಳಿವಯಸ್ಸಲ್ಲೂ ಆಶ್ಚರ್ಯಮೂಡಿಸುತ್ತಿತ್ತು. ರಂಗದಲ್ಲಿ ಎಷ್ಟೋ ಬಾರಿ ನೋಡಿದ್ದೇನೆ, ತನ್ನ ಮನೋವೇಗಕ್ಕೆ ಹೆಜ್ಜೆಯ ಊನವು ಅಡ್ಡಿಯಾದಾಗ ಮುಖದಲ್ಲಿ ವೇದನೆ ಪ್ರಕಟಗೊಳ್ಳುತ್ತಿತ್ತು. ಅಂತಹ ಹೊತ್ತಲ್ಲೆಲ್ಲಾ ಪಾತ್ರ ಮುಗಿದ ಬಳಿಕವೂ ಶ್ರೀಧರ ಭಂಡಾರಿಗಳು ಗಂಟೆಗಳ ಕಾಲ ಮೌನವಾಗುತ್ತಿದ್ದರು, ಮ್ಲಾನವಾಗುತ್ತಿದ್ದರು.


ಮೊನ್ನೆಮೊನ್ನೆಯಷ್ಟೇ ಅಂದರೆ ಡಿಸೆಂಬರ್‌ನಲ್ಲಿ ಶ್ರೀ ಧರ್ಮಸ್ಥಳ ಮೇಳದ ಈ ವರುಷದ ತಿರುಗಾಟದ ಸೇವೆಯಾಟದಲ್ಲಿ 'ಶ್ರೀಕೃಷ್ಣ'ನ ಪಾತ್ರವನ್ನು ತನ್ನ ಅಶಕ್ತತೆಯ ಮಧ್ಯೆಯೂ ನಿರ್ವಹಿಸಿದ್ದು. ಅದು ಅವರ ಕೊನೆಯ ವೇಷ.

ತೆಂಕುತಿಟ್ಟು ಯಕ್ಷಗಾನದ ಇತಿಹಾಸದಲ್ಲಿ 'ಪುಂಡುವೇಷದ ಐಕಾನ್' ಆಗಿ ಹೊರಹೊಮ್ಮಿದ ಭಂಡಾರಿಗಳು ಇನ್ನು ನೆನಪು ಮಾತ್ರ. ಪುಂಡುವೇಷಕ್ಕೆ ಗೌರವ ಮತ್ತು ಅಂದಗಾರಿಕೆಯ ಸ್ಪರ್ಶವನ್ನು ಮಾಡಿದ ಭಂಡಾರಿಗಳ ಪಾತ್ರ ವೈಭವಗಳು ಯಕ್ಷಲೋಕ ಊಹಿಸದ ಅಪೂರ್ವ ವಿದ್ಯಮಾನ. ❖

ಹೊಸ ಧಾಟಿ, ತಾಜಾ ರೂಪಕ

ಎಸ್. ದಿವಾಕರ್

ನಾವು ಕಾವ್ಯದಿಂದ ಮೊದಲು ನಿರೀಕ್ಷಿಸುವುದೇನು? ಹಿಂದೆಂದೂ ಅನುಭವಿಸಿರದ ಭಾವನೆಗಳ ಮತ್ತು ಪ್ರತಿಮೆಗಳ ಲೋಕವೊಂದು ಇದ್ದಕ್ಕಿದ್ದಂತೆ ನಮ್ಮಲ್ಲಿ ಮೂಡಿಸಬಹುದಾದ ಅಚ್ಚರಿಯನ್ನು. ಅನುಭವದ ಶುದ್ಧ ಅಭಿವ್ಯಕ್ತಿಯಾಗಿರುವ ಕಾವ್ಯ ಖಚಿತವೂ ಮೋಹಕವೂ ಆದ ಪ್ರತಿಮೆಗಳಿಂದ, ವೈಯಕ್ತಿಕ ಹಾಗೂ ಕಾಲ್ಪನಿಕ ಅವಲೋಕನಗಳ ಧ್ವನಿಯಿಂದ ಜೀವನದ ಸಂದಿಗ್ಧ ಕ್ಷಣಗಳ ಬಗೆಗೆ ನಮ್ಮಲ್ಲಿ ಅತ್ಯಂತ ಗಾಢವಾದ ಭಾವನೆಗಳನ್ನು ಉದ್ದೀಪಿಸುತ್ತದೆ.



ಗಾಯಗೊಂಡವರಿಗೆ
ಲೇ:ಮಂಜುಳಾ ಹಿರೇಮಠ
ಪ್ರ: ಅಹರ್ನಿಶಿ ಪ್ರಕಾಶನ
ಮೊ: 9449174662
ಪು: 84 ₹80

ಮಂಜುಳಾ ಹಿರೇಮಠರ 'ಗಾಯಗೊಂಡವರಿಗೆ' ತನ್ನ ಹೊಸ ಧಾಟಿಯಿಂದ, ತಾಜಾ ರೂಪಕಗಳಿಂದ, ಅರ್ಥವನ್ನು ಅನುಸರಿಸಿಕೊಂಡು ಸಾಗುವ ಲಯದಿಂದ ಅಂಥ ಉದ್ದೀಪನೆಯನ್ನು ಉಂಟುಮಾಡುವ ಕವನ ಸಂಕಲನ. ಈ ಕವಿ ಮನುಷ್ಯನ ಸ್ಥಿತಿಯನ್ನು, ಅವನ ದೃಷ್ಟಿವಿಶೇಷವನ್ನು, ಅವನು ಕಳೆದುಕೊಂಡಿದ್ದರ ಮಹತ್ವವನ್ನು ಕುರಿತು ಬರೆದರೂ ಇವರ ಪರಿಪ್ರೇಕ್ಷ್ಯ ತೀರ ಖಾಸಗಿಯಾದದ್ದು. ಮುಖ್ಯವಾಗಿ ಇವರು ಅಂತರಂಗದ ಅಥವಾ ಅಂತರ್ಮುಖತೆಯ ಕವಿ; ಯಾವುದನ್ನು ನಾವು ಆತ್ಮದ ಆವರಣವೆಂದು ಪರಿಗಣಿಸುತ್ತೇವೋ ಅಂಥ ಆವರಣವನ್ನು ಅನುಭವಕ್ಕೆ ತಂದುಕೊಡುವ ಕವಿ.

ಈ ಸಂಕಲನದಲ್ಲಿರುವುದು ಒಂದು ರೀತಿ ಆತ್ಮನಿವೇದನೆಯ ಕಾವ್ಯವೆನಿಸಿದರೂ ಅದರಲ್ಲಿ ಆತ್ಮಾನುಕಂಪವಾಗಲೀ, ಕ್ಷುದ್ರತೆಯಾಗಲೀ ಇಲ್ಲ. ಹಾಗಾಗಿ ಇಲ್ಲಿನ ಕಾವ್ಯದಲ್ಲಿ 'ವೈಯಕ್ತಿಕ' ಎನ್ನಬಹುದಾದದ್ದು ಪೇಲವವಾದ ಒಂದು ನೆರಳಿನಂತಿದ್ದು ಅದು ಭಾವನೆಗಳ, ಭಾವೋತ್ಕರ್ಷದ, ವಿನಾಶದ ಪ್ರಜ್ಞೆಯನ್ನು ಜಾಗೃತಗೊಳಿಸುವಂತಿದೆ. ಹಾಗೆಂದು ಒಬ್ಬ ಹೆಣ್ಣಾಗಿ ತಮ್ಮ ಅಸ್ಮಿತೆಯನ್ನು ಮರೆತವರಲ್ಲ ಇವರು. 'ಕಾವ್ಯದೆಡೆಗೆ ಕವಿಯೊಬ್ಬ ನಡೆವ ದೂರವಲ್ಲ ಕವಿಯೊಬ್ಬಳು ನಡೆವ ದೂರ!' ಎಂಬ ಪ್ರಜ್ಞೆ ಇಲ್ಲಿ ಉದ್ದಕ್ಕೂ ಎಚ್ಚರವಾಗಿದೆ. ಮೇಲುನೋಟಕ್ಕೆ ಕೆಲವು ಕವನಗಳು ಪುರುಷ ವ್ಯಕ್ತಿವಿಶೇಷಗಳನ್ನು ಕುರಿತಂತೆ ತೋರಿದರೂ ಆಳದಲ್ಲಿ ಅವು ಲಿಂಗಭೇದವನ್ನು ಮೀರಿದ ಸಾಹಚರ್ಯವನ್ನು ಎತ್ತಿಹಿಡಿಯುತ್ತವೆ. ಸಂವೇದನೆಯಲ್ಲಿ ತೊಯ್ದುಹೋಗಿರುವ ಈ ಕವಿಯ ಪ್ರತಿಮೆಗಳು, ವಿಚಾರಗಳು ಓದುಗನ ಮನಸ್ಸಿನಲ್ಲಿ ದೀರ್ಘಕಾಲ ಅನುರಣಿಸುವಷ್ಟು ಶಕ್ತವಾಗಿವೆ.

ವಿಮರ್ಶೆ

ಮಂಜುಳಾ ಯಾವುದೇ ನಿರ್ದಿಷ್ಟ ಕಾವ್ಯಪಂಥದ ಹಂಗಿಲ್ಲದೆ ಬರೆಯುವವರು. ಆದ್ದರಿಂದಲೇ ಅವರು ತಮ್ಮ ಧ್ವನಿಯನ್ನು ತಮ್ಮದೇ ಭಾಷೆಯಲ್ಲಿ ಕಂಡುಕೊಳ್ಳುವಂತಾಗಿದೆ. ಆ ಭಾಷೆಯಲ್ಲಿ ಯಾವುದೇ ಶಬ್ದ ಹಗುರವೂ ಅಲ್ಲ, ಭಾರವೂ ಅಲ್ಲ. ಅಥವಾ ಅದು ಸಾಮಾನ್ಯವಾದದ್ದು ಹೇಗೋ ಹಾಗೆ ಅಸಾಮಾನ್ಯವಾದದ್ದೂ ಹೌದು. ಇಲ್ಲಿನ ಕವನಗಳಲ್ಲಿ ಆಶಯಕ್ಕೆ ಅನುಗುಣವಾಗಿ ಒದಗಿಬಂದಿರುವ ಶಬ್ದಗಳು ಪ್ರತಿಮೆಗಳಿಗೆ ಜೀವ ತುಂಬುವ ಮೂಲಕ ತಮ್ಮ ಇರವನ್ನು ತಾವೇ ಕಳೆದುಕೊಳ್ಳುತ್ತವೆ.

'ಹಕ್ಕಿ ಆಕಾಶದ್ದು' ಎಂಬ ಮೊದಲ ಕವನವನ್ನೇ ತೆಗೆದುಕೊಳ್ಳಿ. ಇಲ್ಲಿ ಹಕ್ಕಿಯ ಮೂಲಕ ಕವನ ಅಂತರಂಗ ಬಹಿರಂಗಗಳ ಬಗ್ಗೆ, ಕಾಲದ ಬಗ್ಗೆ, ಎಲ್ಲೆ ಮೀರಿ ಬದುಕಬಯಸುವ ಮನುಷ್ಯನ ಮನೋಭಿಲಾಷೆಯ ಬಗ್ಗೆ ಮಾತಾಡುತ್ತದೆ.

ನಿರಂತರ ಬೆಳಗುವ
ಸೂರ್ಯನಂತಲ್ಲ ಇಲ್ಲಿ ಯಾರ ಪ್ರೀತಿ
ಅದು ಗಳಿಗೆ ಮಾತ್ರ
ಉರಿದು ತೀರುವ
ಬರೀ ಒಂದು ಮೇಣದ ಬತ್ತಿ

ಎಂಬ 'ಹೆಬ್ಬಂಡೆ ಮೌನ' ಕವನದ ಈ ಸಾಲುಗಳನ್ನು ಬೇಂದ್ರೆಯವರ 'ನೀ ಕೂತಿ ಬೆಂಕಿಯನು ನಂಬಿ /ಪ್ರೀತಿಯದಕೆಂಬಿ / ಕಪ್ಪುರದ ಗೊಂಬಿ' ಎಂಬ ಸಾಲುಗಳೊಡನೆ ಹೋಲಿಸಿದಾಗ ಪ್ರೀತಿಯ ರೂಪಕದ ಸಾರ್ವತ್ರಿಕತೆಗೂ ವೈಯಕ್ತಿಕತೆಗೂ ಇರುವ ವ್ಯತ್ಯಾಸ ಗೊತ್ತಾಗುತ್ತದೆ.

ದಾಹ ತಣಿಸದ
ಎಲ್ಲ ನದಿಗಳೂ ಹೀಗೆಯೇ
ಬಾಯಾರಿ ಮೊಗೆಯಲೆತ್ನಿಸಿದಾಗ
ನೆರೆಯಾಗಿ ಸಾಗರ ಹೊಕ್ಕು
ಉಪ್ಪು ನೊರೆಯಾಗುತ್ತವೆ (ಹೆಬ್ಬಂಡೆ ಮೌನ).

ಇಲ್ಲಿ ಬಾಯಾರಿ, ನೆರೆ, ಸಾಗರ, ನೊರೆ ಮುಂತಾದ ಶಬ್ದಗಳು ಭಾವವೊಂದನ್ನು ಹೇಗೆ ಅಭಿನಯಿಸಿ ತೋರಿಸುತ್ತಿವೆ ನೋಡಿ. 'ನಾನು ಮತ್ತು ನಾನಲ್ಲ', 'ಅರ್ಥವಾಗದೇ ಹೋದದ್ದು', 'ಸಮಾನಾಂತರ', 'ಪ್ರತಿಮೆಯಾಗೋಣ ಬಾ', 'ಪ್ರಣಯ ಕವಿತೆ', 'ದಾಂಪತ್ಯ', 'ಒಲವಿನ ಒಗರು' ಮುಂತಾದ ಕವನಗಳು ಪ್ರೇಮ, ದಾಂಪತ್ಯ, ಸಹಬಾಳ್ವೆ ಮೊದಲಾದವುಗಳನ್ನು ಹೊಸ ಬಗೆಯಲ್ಲಿ ವ್ಯಾಖ್ಯಾನಿಸುತ್ತವೆ.

ಇಲ್ಲಿನ ಕವನಗಳದು ಒಳಮುಖವಾದ, ವಿಚಾರಶೀಲತೆಯ, ಕೇಳಿಸಿಯೂ ಕೇಳಿಸದಂಥ ಮೃದುವಾದ ಧಾಟಿ. ಅಪಾರವನ್ನು ಸಂಗ್ರಹವಾಗಿ ಹೇಳುವ, ಭಾವನೆಗಳನ್ನು ಹದ್ದುಮೀರದಂತೆ ನಿಯಂತ್ರಿಸುವ, ಅನುಭವವನ್ನು ಹೊಸದೇ ಆಕೃತಿಯಲ್ಲಿ ಹಿಡಿದುಕೊಡುವ ಈ ಧಾಟಿಯಿಂದಾಗಿ ಕವನಗಳು ಬಹುಮಟ್ಟಿಗೆ ನೇರವಾಗಿ ಹೃದಯದಿಂದಲೇ ಮೂಡಿಬಂದಂತಿವೆ; ಸ್ವಚ್ಛಂದವಾಗಿದ್ದೂ ಬಂಧ ಲಯಗಳ ಆಸರೆಯನ್ನು ಬಿಟ್ಟುಕೊಡದೆ ಅತ್ಯಂತ ಎಚ್ಚರದಿಂದ ರೂಪುಗೊಂಡಂತಿವೆ. ಇವುಗಳಲ್ಲಿ ಅರ್ಥಾನುಸಂಧಾನವಿದೆ, ಸ್ಪಷ್ಟತೆಯಿದೆ, ಎಲ್ಲಕ್ಕಿಂತ ಮಿಗಿಲಾಗಿ ಮೃದುತ್ವವಿದೆ.

ಇವತ್ತಿನ ವಸ್ತುಸ್ಥಿತಿಯನ್ನು, ವಾಚ್ಯವಾಗಿಯಾದರೂ ಸರಿ, ಪ್ರತಿಬಿಂಬಿಸಿಬಿಡಬೇಕೆಂದು ಹೊರಡುವ ಕವಿ ಒಣ ಹೇಳಿಕೆಗಳನ್ನು ಪೋಣಿಸುವುದಕ್ಕಾಗಿ ಭಾಷೆಯನ್ನೇ ಹಿಂಸಿಸುತ್ತಿರುತ್ತಾನೆ. ಆದರೆ ಮಂಜುಳಾ ಪ್ರಜ್ಞಾಪೂರ್ವಕವಾಗಿ ಸಂಸ್ಕರಿಸಿಕೊಂಡ ತಮ್ಮದೇ ಭಾಷೆಯ ಕೋಮಲತೆಯಲ್ಲಿ ನಂಬಿಕೆಯಿಟ್ಟು ಮನುಷ್ಯ ಜೀವನದ ಅತಾರ್ಕಿಕತೆಯನ್ನೂ ದುರಂತವನ್ನೂ ಭಾವಗೀತಾತ್ಮಕವಾಗಿ ಪಡಿಮೂಡಿಸುವವರು.

ಈ ಸಂಕಲನದ ಎಲ್ಲ ಕವನಗಳೂ ಪರಿಪೂರ್ಣವಾಗಿವೆಯೆಂದು ಹೇಳಲಾರೆ. ಹೆಚ್ಚುಕಡಿಮೆ ಸ್ವಚ್ಛಂದ ಲಯದಲ್ಲೇ ಇರುವ ಇಲ್ಲಿನ ಕೆಲವು ಕವನಗಳಲ್ಲಿ ನಮ್ಮ ಕಾಲದ ಹೊಸ ಕವಿಗಳಲ್ಲಿ ಸಾಮಾನ್ಯವಾಗಿ ಕಾಣುವ 'ಕಣ್ಣೀರನು', 'ಕ್ಷಣದಲಿ', 'ಜ್ವಾಲೆಯಲು' ಮೊದಲಾದ ಪ್ರಯೋಗಗಳಿವೆ. ಕಾವ್ಯಭಾಷೆಯಲ್ಲಿ ಒತ್ತಕ್ಷರಗಳಿಲ್ಲದೆ ಕೊನೆಯಾಗುವ ಇಂಥ ಶಬ್ದಗಳಿರಬೇಕೆಂಬ ನಿಯಮವೇನಿದೆ? 'ಒಂದು ಮಳೆಯನ್ನು ಏನೆಲ್ಲಾ ಮಾಡಬಹುದು' ಎಂಬ ಚಿತ್ರವತ್ತಾದ ಕವನದಲ್ಲಿ ಒಂದೊಂದು ನುಡಿಯೂ 'ಎಂದರ್ಥ' ಎಂದು ಕೊನೆಗೊಳ್ಳುವುದರಿಂದ ಕವನದ ಅರ್ಥಬಾಹುಳ್ಯಕ್ಕೆ ಮಿತಿಯೊಡ್ಡಿದಂತಾಗಿದೆ. 'ಹೆಂಗಸರ ಪದ್ಯ' ಎಂಬ ಕವನದಲ್ಲಿರುವ

ಕಿರುಗುಟ್ಟುವ ತೊಟ್ಟಿಲ ಸದ್ದಿಗೆ
ಎಚ್ಚೆತ್ತು ಬರುವಷ್ಟರಲ್ಲಿ
ರಚ್ಚೆ ಹಿಡಿದ ಮಗಳ
ಹಗುರವಾಗಿ ಮೇಲೆತ್ತಿ
ರಮಿಸಿ, ಮುತ್ತಿಟ್ಟು
ಎದೆಗೆ ಹಾಕಿ
ಹಾಲೂಡಿಸುತ್ತಾ
ಬರೆದ ಸಾಲುಗಳು
ಹೆಂಗಸರು ಬರೆದ ಪದ್ಯಗಳು
ಯಾವಾಗಲೂ
ಅಕ್ಕರೆಯನು ಜಿನುಗಿಸುತ್ತವೆ

ಎಂಬ ಈ ಭಾಗವನ್ನು ಹನ್ನೊಂದು ಸಾಲುಗಳಾಗಿ ವಿಭಾಗಿಸುವ ಅಗತ್ಯವೇನೆಂದು ಗೊತ್ತಾಗುವುದಿಲ್ಲ. ಇರಲಿ, ಇವೇನೂ ಅಷ್ಟು ಗಣನೀಯವಾದ ದೋಷಗಳಂತೂ ಅಲ್ಲವೇ ಅಲ್ಲ. ಮುಖ್ಯವಾದ ಮಾತೆಂದರೆ ಮಂಜುಳಾ ಅವರು ನಿಜವಾದ ಕವಿಯೆನ್ನುವುದು. ಅವರನ್ನು 'ಇವರು ಭರವಸೆ ಹುಟ್ಟಿಸುವ ಕವಿ' ಎಂದರೆ ಅದೊಂದು ಕ್ಲೀಷೆಯಾದೀತಷ್ಟೆ. ❖

ಕಥೆ

ಡಾ.ಬಿ.ಎಲ್.ವೇಣು
ಬರೆದ ಕಥೆ
ನದಿಯಂಥವಳು
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story


ಕವಿತೆ

ಶಂಕರ್ ಸಿಹಿಮೊಗೆ
ಬರೆದ ಕವಿತೆ
ಪ್ರಮಾದ
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ನಾಯಿಯ ಬದುಕಿನ ಯಾನವಷ್ಟೇ ಅಲ್ಲ!

ಬಿ.ಆರ್.ಲಕ್ಷ್ಮಣರಾವ್

ರಾಷ್ಟ್ರ ಕವಿ ಡಾ.ಜಿ.ಎಸ್.ಶಿವರುದ್ರಪ್ಪನವರ ಎರಡನೆಯ ಮಗ ಡಾ.ಜಿ.ಎಸ್.ಶಿವಪ್ರಸಾದ್ ಇಂಗ್ಲೆಂಡಿನ ಚೆಸ್ಟರ್‌ಫೀಲ್ಡ್ ಆಸ್ಪತ್ರೆಯಲ್ಲಿ ಮಕ್ಕಳ ತಜ್ಞರಾಗಿದ್ದಾರೆ. ವೈದ್ಯವೃತ್ತಿಯ ಜೊತೆಗೆ ಸಾಹಿತ್ಯಾಸಕ್ತರೂ ಆದ ಇವರು ಈಗಾಗಲೇ 'ಇಂಗ್ಲೆಂಡಿನಲ್ಲಿ ಕನ್ನಡಿಗ' ಎಂಬ ಕನ್ನಡ ಮತ್ತು ಇಂಗ್ಲಿಷ್ ಕವನಗಳ ಸಂಕಲನವನ್ನು ಹಾಗೂ 'ದಕ್ಷಿಣ ಅಮೆರಿಕಾ ಒಂದು ಸುತ್ತು' ಎಂಬ ಪ್ರವಾಸ ಕಥನವನ್ನು ಪ್ರಕಟಿಸಿದ್ದಾರೆ. 'ಪಯಣ' ಎಂಬ ಕಾದಂಬರಿ ಇವರ ಮೂರನೆಯ ಪ್ರಕಟಿತ ಕೃತಿ.



ಪಯಣ
ಲೇ: ಡಾ.ಜಿ.ಎಸ್.ಶಿವಪ್ರಸಾದ್
ಪ್ರ: ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು-560009
ಸಂ: 40114455
ಪು: 159 ₹100

'ಪಯಣ' ಕಾದಂಬರಿಯ ಮುಖ್ಯ ಪಾತ್ರದಲ್ಲಿರುವುದು ಉತ್ತಮ ತಳಿಯ ಬೀಗಲ್ ಜಾತಿಯ ಒಂದು ನಾಯಿ. ಎರಡು ತಿಂಗಳ ಪುಟ್ಟಮರಿಯಾಗಿ ನಿಖಿಲ್ ಎಂಬ ಯುವ ಚಿತ್ರನಿರ್ದೇಶಕರ ಮನೆಗೆ 'ಸ್ನೂಪಿ' ಎಂಬ ಹೆಸರು ಪಡೆದು ಪ್ರವೇಶ ಪಡೆಯುವ ಘಟನೆಯಿಂದ ಇದರ ಪಯಣ ಆರಂಭ. ಹಲವು ವರ್ಷಗಳಲ್ಲಿ ಹಲವು ಕೈಗಳಿಗೆ ಬದಲಾಗುವ ನಾಟಕೀಯ ತಿರುವುಗಳ ನಂತರ 'ಆರ್ಚಿ' ಎಂಬ ಬದಲಾದ ಹೆಸರಿನಲ್ಲಿ ಪೊಲೀಸ್ ಇಲಾಖೆಗೆ ಸಲ್ಲಿಸಿದ ಅನುಪಮ ಸೇವೆಗಾಗಿ ಸನ್ಮಾನಗೊಂಡು, ಪ್ರಸಿದ್ಧವಾಗುವವರೆಗೆ ಕತೆ ಹಬ್ಬಿದೆ. ನಿವೃತ್ತಿಯ ನಂತರ 'ಆರ್ಚಿ' ಯಾರ ಕೈ ಸೇರಬೇಕು ಎಂಬ ಸೂಕ್ಷ್ಮ ಪ್ರಶ್ನೆಗೂ ಕಾದಂಬರಿಯಲ್ಲಿ ಒಂದು ಅನಿರೀಕ್ಷಿತ ಉತ್ತರವಿದೆ.

ನೇರ ಸರಳಶೈಲಿಯ ಸ್ವಾರಸ್ಯಕರ ಕತೆಗಾರಿಕೆ ಈ ಕಾದಂಬರಿಯ ಎದ್ದುತೋರುವ ಗುಣ. ಹಾಗೆಂದು ಮನರಂಜನೆಗಷ್ಟೇ ಇದು ಸೀಮಿತವಾಗಿಲ್ಲ. ಕತೆಗೆ ಸಂಬಂಧಿಸಿದಂತೆ ಬರುವ ಹಲವಾರು ವಿಷಯಗಳ ಬಗ್ಗೆ, ಉದಾಹರಣೆಗೆ: ಶ್ವಾನಚರಿತ್ರೆ, ಬೀದಿನಾಯಿಗಳ ಸಂತಾನಶಕ್ತಿಹರಣ ಚಿಕಿತ್ಸೆ, ಪೊಲೀಸ್ ಇಲಾಖೆಯಲ್ಲಿ ಶ್ವಾನಗಳ ಕಾರ್ಯವೈಖರಿ, ಹಾಗೆಯೇ ಆಟಿಸಂ ಎಂಬ ವ್ಯಕ್ತಿ ವಿಲಕ್ಷಣತೆಯ ಬಗ್ಗೆ ಉಪಯುಕ್ತ ಮಾಹಿತಿ ಇಲ್ಲಿದೆ.

ಒಳನೋಟ

ಮೇಲ್ವರ್ಗ, ಮಧ್ಯಮವರ್ಗ ಹಾಗೂ ಶ್ರಮಿಕವರ್ಗದ ಇಲ್ಲಿನ ಹಲವು ಸ್ತರದ ಪಾತ್ರಗಳ ಜೀವನ ವಿಧಾನ, ನೋವು ನಲಿವು, ನಂಬಿಕೆ ಆಚರಣೆಗಳನ್ನು ಶಿವಪ್ರಸಾದ್ ಮುಕ್ತಮನಸ್ಸಿನಿಂದ, ಸಹಾನುಭೂತಿಯಿಂದ ಚಿತ್ರಿಸಿದ್ದಾರೆ. ಹೀಗಾಗಿ ಇದೊಂದು ಸಾಕುನಾಯಿಯ ಕತೆಯಾಗಿ ಮಾತ್ರ ಉಳಿಯದೆ ಸಮಕಾಲೀನ ಸಮಾಜದ ಮಾನವೀಯ ಸಂಬಂಧಗಳು ಹಾಗೂ ಮೌಲ್ಯಗಳ ಸಮಗ್ರ ಚಿತ್ರಣವಾಗಿ ತನ್ನ ಪರಿಧಿಯನ್ನು ವಿಸ್ತರಿಸಿಕೊಂಡಿದೆ.


'ಲಿಯೊ' ಎಂಬ ಒಂದು ಸಾಕುನಾಯಿಯು ಪ್ರಧಾನ ಪಾತ್ರವಾಗಿರುವ ರಜನಿ ನರಹಳ್ಳಿ ಅವರ 'ಆತ್ಮ ವೃತ್ತಾಂತ' ಎಂಬ ಕಾದಂಬರಿ ಈಗಾಗಲೇ ಜನಮನ್ನಣೆ ಗಳಿಸಿದೆ. ಆದರೆ, ಅಲ್ಲಿ ಲಿಯೊ ತಾನೇ ತನ್ನ ಕತೆಯನ್ನು ಹೇಳಿಕೊಂಡಿದೆ. ಆದರೆ 'ಪಯಣ'ದಲ್ಲಿ 'ಸ್ನೂಪಿ' ಉರ್ಫ್ 'ಆರ್ಚಿ'ಯ ಕತೆಯನ್ನು ಶಿವಪ್ರಸಾದ್ ನಿರೂಪಿಸಿದ್ದಾರೆ. ಹೀಗೆ ವಿಭಿನ್ನ ಶೈಲಿಯಲ್ಲಿರುವ ಈ ಎರಡೂ ಕೃತಿಗಳು ಮೌಲಿಕವಾಗಿವೆ.

ಈ ಕೃತಿಗೆ ತಲಸ್ಪರ್ಶಿ ಮುನ್ನುಡಿ ಬರೆದಿರುವ ಪ್ರಸಿದ್ಧ ವಿಮರ್ಶಕ ಟಿ.ಪಿ.ಅಶೋಕ ಅವರು ಗುರುತಿಸಿರುವಂತೆ, ವಿವಿಧ ಸಾಮಾಜಿಕ ಮತ್ತು ಔದ್ಯೋಗಿಕ ಹಿನ್ನೆಲೆಗಳಿಂದ ಬಂದ ಲೇಖಕರು ತಮ್ಮ ವೈವಿಧ್ಯಮಯ ಅನುಭವಗಳಿಂದ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಕಳೆದ ಎರಡು ದಶಕಗಳಿಂದ ಇನ್ನಷ್ಟು ಶ್ರೀಮಂತ ಹಾಗೂ ಸಮೃದ್ಧಗೊಳಿಸುತ್ತಿದ್ದಾರೆ. ಇವರಲ್ಲಿ ಕೆಲವರು ಬೇರೆ ಬೇರೆ ದೇಶ/ಪರಿಸರಗಳಲ್ಲಿ ವಾಸಿಸುತ್ತಿದ್ದು ಅಲ್ಲಿನ ಅನುಭವಗಳನ್ನು ಕನ್ನಡದಲ್ಲಿ ನಿರೂಪಿಸುತ್ತಿದ್ದಾರೆ. ಅಂತಹ ಪ್ರತಿಭಾವಂತ ಬರಹಗಾರರಲ್ಲಿ ಶಿವಪ್ರಸಾದ್ ಸಹ ಒಬ್ಬರಾಗಿದ್ದು ಈ ಗಮನಾರ್ಹ ಕಾದಂಬರಿಗಾಗಿ ಅಭಿನಂದನೀಯರಾಗಿದ್ದಾರೆ.

'ಪಯಣ'ವನ್ನು ಓದಿದ ಬಳಿಕ, 'ಸ್ನೂಪಿ' ಉರ್ಫ್ 'ಆರ್ಚಿ' ಎಂಬ ಆ ಮುಗ್ಧಮುಖದ ಮುದ್ದು ಚೂಟಿ ಬೀಗಲ್ ನಾಯಿಯು ಚಿರಕಾಲ ಓದುಗರ ನೆನಪಿನಲ್ಲಿ ಅಚ್ಚಳಿಯದೆ ಉಳಿಯುವುದರಲ್ಲಿ ಸಂದೇಹವಿಲ್ಲ. ❖

ನೆಲೆಮಾವುಮಠದ ಚರಿತ್ರೆಗೊಂದು ಆಕರ

ನಮ್ಮ ದೇಶದ ಸಂಸ್ಕೃತಿಯಲ್ಲಿ ಮಠಮಂದಿರಗಳ ಪಾತ್ರ ದೊಡ್ಡದು. ಅವು ನಮ್ಮ ಜನಜೀವನದ ಮೇಲೆ ಸಾವಿರಾರು ವರ್ಷಗಳಿಂದ ಪ್ರಭಾವವನ್ನು ಮೂಡಿಸುತ್ತ ಬಂದಿವೆ.



ನೆಲೆಮಾವುಮಠದ ಶ್ರೀಗುರುಪರಂಪರೆ
ಲೇ: ಗಣೇಶ ಭಟ್ಟ ಹೋಬಳಿ
ಪ್ರ: ಮಹಾಬಲೇಶ್ವರ ಹೆಗಡೆ
ಮೊಬೈಲ್: 9482233924
ಪು: 294 ₹150


ಶಂಕರಾಚಾರ್ಯರು ದೇಶದ ನಾಲ್ಕು ದಿಕ್ಕುಗಳಲ್ಲೂ ಮಠಗಳನ್ನು ಸ್ಥಾಪಿಸಿ, ಅವುಗಳ ಮೂಲಕ ತಮ್ಮ ಸಿದ್ಧಾಂತದ ಪ್ರಸಾರ ನಿರಂತರವಾಗಿರುವಂಥ ವ್ಯವಸ್ಥೆಯನ್ನು ರೂಪಿಸಿದರು. ಈ ನಾಲ್ಕು ಮಠಗಳ ಜೊತೆಗೆ ಕಾಲಾನಂತರದಲ್ಲಿ ಹಲವು ಮಠಗಳು ಸ್ಥಾಪನೆಯಾದವು; ಅದ್ವೈತದ ಪ್ರಸಾರದಲ್ಲಿ ತೊಡಗಿಕೊಂಡವು. ಇಂಥ ಮಠಗಳಲ್ಲಿ ಒಂದು ನೆಲೆಮಾವುಮಠ.

ನೆಲೆಮಾವು ಮಠ ನಮ್ಮ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ನೆಲೆಮಾವು ಎಂಬ ಊರಿನಲ್ಲಿದೆ. ಈ ಮಠ ಸ್ಥಾಪನೆಯಾಗಿ ಸುಮಾರು ಏಳುನೂರು ವರ್ಷಗಳಾಗಿವೆ; ಈ ಗುರುಪೀಠದಲ್ಲಿ ಇಪ್ಪತ್ತೈದು ಯತಿವರೇಣ್ಯರು ವಿರಾಜಮಾನರಾಗಿದ್ದಾರೆ. ಈ ಮಠದ ಇತಿಹಾಸ ಮತ್ತು ಗುರುಪರಂಪರೆಯ ಬಗ್ಗೆ ಗಣೇಶ ಭಟ್ಟ ಹೋಬಳಿ ಅವರ ಈ ಪುಸ್ತಕ ತುಂಬ ಮಾಹಿತಿಯನ್ನು ನೀಡುತ್ತದೆ. ಕೆಲವರು ಯತಿಗಳ ಬಗ್ಗೆಯೂ ಸಂಕ್ಷಿಪ್ತ ಜೀವನಚರಿತ್ರೆ ಇಲ್ಲಿದೆ; ಐತಿಹಾಸಿಕ ದಾಖಲೆಗಳೂ ಸಾಕಷ್ಟಿವೆ. ಜೊತೆಗೆ ದಕ್ಷಿಣಾಮೂರ್ತಿ ಸ್ತೋತ್ರ, ಲಕ್ಷ್ಮೀನರಸಿಂಹಪಂಚರತ್ನ, ಋಣಮೋಚನನೃಸಿಂಹ ಸ್ತೋತ್ರ, ದೇವೀ ಅಪರಾಧಕ್ಷಮಾಪಣ ಸ್ತೋತ್ರ, ಲಕ್ಷ್ಮೀನರಸಿಂಹಕರುಣಾರಸ ಸ್ತೋತ್ರಗಳ ಪ್ರತಿಪದಾರ್ಥ ಸಹಿತ ಅನುವಾದವನ್ನೂ ನೀಡಲಾಗಿದೆ. ಶಾಂಕರಪೀಠಗಳ ಬಗ್ಗೆ ಕುತೂಹಲಾಸಕ್ತಿ ಇರುವವರೆಲ್ಲರೂ ಗಮನಿಸಬೇಕಾದ ಕೃತಿಯಿದು. ❖

ಮೊದಲ ಓದು

ಮೊದಲ ಪ್ರಧಾನಿಯನ್ನು ಮತ್ತೆ ನೆನೆದು...

ಅತೀ ಹೆಚ್ಚು ಚರ್ಚೆಗೊಳಗಾದ ಭಾರತೀಯ ಪ್ರಧಾನಿ ಎಂದರೆ ಅದು ನಿಸ್ಸಂದೇಹವಾಗಿ ಜವಾಹರಲಾಲ್ ನೆಹರೂ. ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾಗಿದ್ದ ನೆಹರೂ ಅವರ ನೀತಿಗಳು, ಕೈಗೊಂಡ ಕ್ರಮಗಳು, ಆಡಳಿತ ಏಳು-ಬೀಳುಗಳು ಇಂದಿನ ಈ ಕಾಲಘಟ್ಟದಲ್ಲೂ ಚರ್ಚೆಗೆ ಒಳಗಾಗುತ್ತಲೇ ಇವೆ. ಅವರನ್ನು ಎಷ್ಟು ಜನ ಪೂಜಿಸುವವರು ಇದ್ದಾರೋ ಅಷ್ಟೇ ಜನ ಟೀಕಿಸುವವರೂ ಇದ್ದಾರೆ. ಇಂತಹ ಸನ್ನಿವೇಶದಲ್ಲಿ ನೆಹರೂ ಅವರೇ ಬರೆದಿದ್ದ ಹಾಗೂ ಅವರ ಕುರಿತು ಬರೆಯಲಾದ who is Bharat Mata? ಎಂಬ ಕೃತಿ 'ಯಾರು ಭಾರತ ಮಾತೆ?' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಬಂದಿದೆ.



ಯಾರು ಭಾರತ ಮಾತೆ?
ಮೂಲ: ಪುರುಷೋತ್ತಮ ಅಗರವಾಲ್
ಕನ್ನಡಕ್ಕೆ: ಪ್ರೊ. ಕೆ.ಈ. ರಾಧಾಕೃಷ್ಣ
ಪ್ರ: ಸಪ್ನ
ಸಂ: 080 40114455
ಪು: 685 ₹500

ಪುರುಷೋತ್ತಮ ಅಗರವಾಲ್ ಅವರು ಇಂಗ್ಲಿಷ್‌ನಲ್ಲಿ ಸಂಪಾದಿಸಿದ ಕೃತಿಯನ್ನು ಪ್ರೊ. ಕೆ.ಈ. ರಾಧಾಕೃಷ್ಣ ಅವರು ಕನ್ನಡಕ್ಕೆ ತಂದಿದ್ದಾರೆ. ಭಾರತದ ಸ್ವಾತಂತ್ರ್ಯ ಚಳವಳಿಯ ಪ್ರಮುಖ ನೇತಾರರಾದ ನೆಹರೂ, 'ಭಾರತದ ಉದ್ದಗಲಕ್ಕೆ ಹರಡಿಕೊಂಡಿರುವ, ಕೋಟಿಗಟ್ಟಲೆ ಜನರೇ ಭಾರತ ಮಾತೆ, ಅವರ ಜಯವೇ ಭಾರತ ಮಾತೆಯ ಜಯ' ಎಂದೊಮ್ಮೆ ಅಭಿಪ್ರಾಯಪಟ್ಟಿದ್ದರು. ಇಲ್ಲಿನ ಎಲ್ಲ ಬರಹಗಳ ಅಂತಃಸೆಲೆ ಕೂಡ ಅದೇ ಆಗಿದೆ.

ಭಾರತದ ಇತಿಹಾಸ, ಧರ್ಮ, ವಿಜ್ಞಾನ, ಸಂಸ್ಕೃತಿಗಳು ಇಲ್ಲಿನ ಬರಹಗಳಲ್ಲಿ ವಿಸ್ತೃತವಾಗಿ ಚರ್ಚೆಗೆ ಒಳಗಾಗಿವೆ. ನೆಹರೂ ಅವರು ಪ್ರಧಾನಿಯಾಗಿದ್ದಾಗ ಅವರನ್ನು ಆರ್.ಕೆ. ಕಾರಂಜಿಯಾ ಅವರು ನಡೆಸಿದ ಅಪರೂಪದ ಸಂದರ್ಶನ, ನೆಹರೂ ಕುರಿತು ಮಹಾತ್ಮ ಗಾಂಧಿ ಅವರು ಬರೆದ ಬರಹ, ನೆಹರೂ ತೀರಿಹೋದಾಗ ಸಂಸತ್ತಿನಲ್ಲಿ ಶ್ರದ್ಧಾಂಜಲಿ ಅರ್ಪಿಸಿ, ಅಟಲ್ ಬಿಹಾರಿ ವಾಜಪೇಯಿ ಅವರು ಮಾಡಿದ ಭಾಷಣ... ಹೀಗೆ ತುಂಬಾ ವಿಶಿಷ್ಟವಾದ ಲೇಖನಗಳಿಂದ ಕೃತಿ ತನ್ನ ಮೌಲ್ಯವನ್ನು ಹೆಚ್ಚಿಸಿಕೊಂಡಿದೆ.

ಲೇಖಕರೇ ಹೇಳಿರುವಂತೆ ಕಳೆದ ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿ ನೆಹರೂ ಅವರ ವ್ಯಕ್ತಿತ್ವದ ವಿರುದ್ಧ ಅಪಪ್ರಚಾರ ನಡೆಸಲಾಯಿತು. ಅವರ ವ್ಯಕ್ತಿತ್ವಕ್ಕೆ ಕುಂದು ತಂದು ಭಾರತೀಯ ಮನಸ್ಸುಗಳಲ್ಲಿನ ಅವರ ಅಚ್ಚನ್ನು ತೆಗೆದುಹಾಕುವುದೇ ಈ ಪ್ರಚಾರದ ಉದ್ದೇಶವಾಗಿತ್ತು. ಅದಕ್ಕೆ ಪ್ರತಿಯಾಗಿ ನೆಹರೂ ಅಂದರೆ ಯಾರು ಎಂಬುದನ್ನು ತೋರಿಸಿಕೊಡುವುದು ಈ ಕೃತಿಯ ಉದ್ದೇಶ ಎಂದೂ ಅವರು ಸ್ಪಷ್ಟಪಡಿಸುತ್ತಾರೆ.

ನೆಹರೂ ಅವರ ಭಾರತೀಯ ವ್ಯಕ್ತಿತ್ವವನ್ನೂ ಇಲ್ಲಿನ ಬರಹಗಳು ಸಮರ್ಥವಾಗಿ ಎತ್ತಿ ತೋರುತ್ತವೆ. ಅವರ ಬಗೆಗಿನ ಪೂರ್ವಗ್ರಹಗಳನ್ನು ಹೋಗಲಾಡಿಸುವ ಪ್ರಯತ್ನವನ್ನಾಗಿ ಈ ಕೃತಿಯನ್ನು ನೋಡುವಂತೆ ಪ್ರೇರೇಪಿಸುತ್ತವೆ. ಅನುವಾದ ಸಮರ್ಥವಾಗಿ ಮೂಡಿಬಂದಿದೆಯಾದರೂ ಅಲ್ಲಲ್ಲಿ ಕಾಗುಣಿತ ದೋಷಗಳು ಕಾಡುತ್ತವೆ. ❖

ರೈತ ಚಳವಳಿಯ ರಂಗಬಿಂಬ

ನೀಲದರ್ಪಣ

ಪ್ರಕಾಶ ಗರುಡ

ರಂಗಭೂಮಿಯ ಪ್ರಯೋಗಗಳು ಆಯಾ ಕಾಲದ ಸಮಕಾಲೀನ ರಾಜಕೀಯ ಮತ್ತು ಸಾಂಸ್ಕೃತಿಕ ದಾಖಲೆಗಳಾಗಿವೆ. 'ನೀಲದರ್ಪಣ' ನಾಟಕ ಅಂತಹ ಸಾಂಸ್ಕೃತಿಕ ದಾಖಲೆಯ ಒಂದು ಮಹತ್ವದ ಕೃತಿ. ಸ್ವಾತಂತ್ರ್ಯಪೂರ್ವದಲ್ಲಿ ಈ ನಾಟಕದ ರಂಗಪ್ರಯೋಗದಿಂದಾಗಿ, ಬ್ರಿಟಿಷರ ವಿರುದ್ಧ ಬಂಡೆದ್ದ ರೈತ ಚಳವಳಿ ತೀವ್ರಗೊಂಡಿತು. 150 ವರುಷಗಳಷ್ಟು ಹಿಂದೆ ನಡೆದ ರೈತ ಚಳವಳಿಯ ಇತಿಹಾಸವನ್ನು ನೀಲದರ್ಪಣ ನಾಟಕದ ಮೂಲಕ ಅವಲೋಕಿಸುತ್ತಾ ಸ್ವಾತಂತ್ರ್ಯೋತ್ತರದ ಭಾರತದಲ್ಲಿ ಅಷ್ಟೇ ತೀವ್ರವಾಗಿ ಈಗ ನಡೆಯುತ್ತಿರುವ ರೈತ ಚಳವಳಿಗೆ ಈ ಲೇಖನ ಒಬ್ಬ ರಂಗಕರ್ಮಿಯ ಸಹ ಸ್ಪಂದನವಾಗಿದೆ.

> ಬ್ರಿಟಿಷ್ ಆಡಳಿತದ ವೇಳೆಯಲ್ಲಿ ಜಾರಿಯಲ್ಲಿದ್ದ ನೀಲಿಬೆಳೆಯ ಕೃಷಿ ನೀತಿಯನ್ನು ವಿರೋಧಿಸಿ ಬಹುದೊಡ್ಡ ರೈತ ಚಳವಳಿ ರೂಪುಗೊಳ್ಳಲು ಕಾರಣವಾಗಿದ್ದು ಆಗ ಪ್ರದರ್ಶನಗೊಂಡ ನೀಲ ದರ್ಪಣ ನಾಟಕ. ಇಂದಿನ ರೈತ ಚಳವಳಿಯ ಕಾಲಘಟ್ಟದಲ್ಲಿ ಹೆಚ್ಚು-ಕಡಿಮೆ ಎರಡು ಶತಮಾನಗಳಷ್ಟು ಹಿಂದಿನ ಆ ರಂಗ ಪ್ರದರ್ಶನದ ಕುರಿತು ಮಾಡಿಕೊಂಡಿರುವ ನೆನಪನ್ನು ರೈತ ಚಳವಳಿಗೆ ರಂಗಕರ್ಮಿಯೊಬ್ಬನ ಸಹಸ್ಪಂದನವಾಗಿಯೂ ನೋಡಬಹುದು..

ನೀಲಿ (indigofera tinctoria) ಇದೊಂದು ವಿದೇಶಿ ಬೆಳೆ. 1777ರಲ್ಲಿ ಫ್ರಾನ್ಸ್ ದೇಶದ ಲೂಯಿಸ್ ಬೊನಾರ್ಡ್ ಎಂಬಾತ ಭಾರತಕ್ಕೆ ಈ ಬೆಳೆಯನ್ನು ಹೊತ್ತು ತಂದ. ಕೈಗಾರಿಕೆ ಕ್ರಾಂತಿಯ ನಂತರ ಯುರೋಪ್‌ನ ದೊಡ್ಡ ದೊಡ್ಡ ಬಟ್ಟೆ ಗಿರಣಿಗಳಲ್ಲಿ ತಯಾರಾಗುತ್ತಿದ್ದ ಬೃಹತ್ ಪ್ರಮಾಣದ ಬಟ್ಟೆಗೆ ನೀಲಿಬಣ್ಣ ಹಾಕಲು ಬೇಕಾದ ನೀಲಿ ಬಣ್ಣ ಹೊರಡಿಸುವ ನೀಲಿಬೆಳೆಗೆ ಭಾರಿ ಬೇಡಿಕೆ ಇತ್ತು. ಭಾರತದಲ್ಲಿದ್ದ ಬ್ರಿಟಿಷ್ ಪ್ಲಾಂಟರ್‌ಗಳು ಕಡಿಮೆ ಕೂಲಿಯಲ್ಲಿ ಹೆಚ್ಚಿನ ಉತ್ಪನ್ನ ನೀಡುವ ನೀಲಿ ಬೆಳೆಯನ್ನು ಬೆಳೆಯಲು ಇಲ್ಲಿನ ಕೃಷಿಕರ ಮೇಲೆ ಒತ್ತಡ ಹೇರುತ್ತಿದ್ದರು. ಅದು ದಬ್ಬಾಳಿಕೆಯ ರೂಪವನ್ನೂ ಪಡೆದಿತ್ತು. ಆಹಾರ ಬೆಳೆಯುವ ಕೃಷಿ ಭೂಮಿಯಲ್ಲಿ ಬಂಡವಾಳಶಾಹಿಗಳ ಲಾಭ ಮತ್ತು ಒತ್ತಾಯಕ್ಕೆ ನೀಲಿಬೆಳೆಯನ್ನು ಬೆಳೆಯುತ್ತ ಹೋದಂತೆ ಭೂಮಿ ಬರಡಾಗುತ್ತಾ ಹೋಯಿತು. ತಮಗೆ ಬೇಕಾದ ಆಹಾರ ಧಾನ್ಯ ಬೆಳೆಯುವ ಸ್ವಾತಂತ್ರ್ಯವನ್ನೂ ಬಿಹಾರ, ಬಂಗಾಲ ಮತ್ತು ಅದರ ಸುತ್ತಮುತ್ತಲಿನ ಪ್ರಾಂತ್ಯದ ಕೃಷಿ ಕಾರ್ಮಿಕರು ಕಳೆದುಕೊಂಡಿದ್ದರು. ಅವರ ದುಡಿಮೆಗೆ ನ್ಯಾಯವಾಗಿ ಸಿಗಬೇಕಾದ ಕೂಲಿಯೂ ಸಿಗುತ್ತಿರಲಿಲ್ಲ. ಬಡ ಕೃಷಿಕರಿಗೆ ದೊಡ್ಡಮೊತ್ತದ ಬಡ್ಡಿಯಲ್ಲಿ ಸಾಲ ನೀಡಿ ಅವರಿಗೆ ಯಾವತ್ತೂ ಸಾಲದಿಂದ ಮುಕ್ತಿ ಸಿಗದಂತೆ ಮಾಡಿ, ನೀಲಿಬೆಳೆಯನ್ನೇ ಬೆಳೆಯುವ ಅನಿವಾರ್ಯತೆಗೆ ನೂಕಿ ಶೋಷಿಸಲಾಗುತ್ತಿತ್ತು.

1833ರಲ್ಲಿ ಈಸ್ಟ್ ಇಂಡಿಯಾ ಕಂಪನಿಯವರು ಮಾಡಿದ ಒಂದು ಕೃಷಿ ಕಾಯ್ದೆಯಿಂದಾಗಿ ನೀಲಿ ಪ್ಲಾಂಟರ್‌ಗಳಿಗೆ ಬೆಳೆಗಾರರನ್ನು ಇನ್ನಷ್ಟು ಶೋಷಿಸಲು ಹಸಿರು ನಿಶಾನೆ ಸಿಕ್ಕಂತಾಯಿತು. ನೀಲಿ ಬೆಳೆಯ ಹಿಂದಿರುವ ಈ ಲಾಭಕೋರತನದ ರಾಜಕೀಯ ಮತ್ತು ಅವೈಜ್ಞಾನಿಕತೆಯನ್ನು ಅರಿತ ಶೋಷಿತ ಕೃಷಿಕರು ನೀಲಿ ಬೆಳೆ ಬೆಳೆಯಬೇಕೆಂದು ಒತ್ತಾಯಿಸುತ್ತಿದ್ದ ಬ್ರಿಟಿಷ್ ಪ್ಲಾಂಟರ್‌ಗಳ ವಿರುದ್ಧ ಬಂಡೆದ್ದರು. 1859ರಲ್ಲಿ ಬಂಗಾಲದ ಗೋಬಿಂದಾಪುರ ಚುಗಚಾ, ಕೃಷ್ಣಾನಗರ, ನಡಿಯಾ ಜಿಲ್ಲೆಗಳ ಹಳ್ಳಿಗಳಲ್ಲಿ ನೀಲಿ ಬೆಳೆಯನ್ನು ಬೆಳೆಯುವುದನ್ನು ವಿರೋಧಿಸಿ ನೀಲಿ ಪ್ಲಾಂಟರ್‌ಗಳ ವಿರುದ್ಧ ಚಳವಳಿ ಆರಂಭವಾಯಿತು. ಬಿಶ್ಣುಚರಣ ಬಿಶ್ವಾಸ್ ಮತ್ತು ದಿಗಂಬರ ಬಿಶ್ವಾಸ್ ಎಂಬುವವರು ಇದರ ಮುಂಚೂಣಿಯಲ್ಲಿದ್ದರು. ಚಳವಳಿ ಬಂಗಾಲ ಮತ್ತು ಬಿಹಾರದ ಹಲವಾರು ಪ್ರಾಂತಗಳಲ್ಲಿ ಬಹುಬೇಗ ತೀವ್ರ ಸ್ವರೂಪವನ್ನು ಪಡೆಯಿತು. ನೂರಾರು ರೈತರನ್ನು ಮಿಲಿಟರಿ ಮತ್ತು ಪೊಲೀಸ್ ಕಾರ್ಯಾಚರಣೆಯಲ್ಲಿ ಕೊಲ್ಲಲಾಯಿತು. ಚಳವಳಿ ತೀವ್ರ ಸ್ವರೂಪ ಪಡೆಯುತ್ತಿರುವ ಕಾಲದಲ್ಲೇ ಬಂಗಾಲಿ ಲೇಖಕ ದೀನಬಂಧು ಮಿತ್ರ (1830-1873) 'ನೀಲದರ್ಪಣ' ನಾಟಕ ರಚಿಸಿದರು. ಬಂಗಾಲಿ ಭಾಷೆಯಲ್ಲಿ ಬರೆದ ಈ ನಾಟಕವೇ ಭಾರತೀಯ ನಾಟಕ ಸಾಹಿತ್ಯದ ಇತಿಹಾಸದಲ್ಲಿ ಸಮಕಾಲೀನ ರಾಜಕೀಯ ವಸ್ತುವನ್ನು ಇಟ್ಟುಕೊಂಡು ಬರೆದ ಮೊದಲ ವಾಸ್ತವವಾದಿ ಸಾಮಾಜಿಕ ನಾಟಕ. ಅಲ್ಲದೆ ನಾಟಕದ ಪ್ರದರ್ಶನವನ್ನು ಪ್ರವೇಶಧನ ನೀಡಿ ನೋಡುವ ರೂಢಿ ಈ ನಾಟಕದ ಪ್ರದರ್ಶನದಿಂದಲೇ ಪ್ರಾರಂಭವಾಯಿತು. ಹೀಗಾಗಿ ಭಾರತದಲ್ಲಿ ನಡೆದ ಪ್ರಥಮ ಕೃಷಿ ಚಳವಳಿಗೆ ರಂಗಕನ್ನಡಿ ಹಿಡಿದ ಒಂದು ಪ್ರಮುಖ ದಾಖಲೆಯ ಕೃತಿ ಇದಾಗಿದೆ.

ಕೃಷಿ ಚಳವಳಿ ಜೋರಾಗಿದ್ದ ಆ ಕಾಲಘಟ್ಟದಲ್ಲಿ ಬಂಗಾಲದ ಎಲ್ಲ ಪ್ರದೇಶಗಳಲ್ಲಿ ಈ ನಾಟಕ ಪ್ರದರ್ಶನಗೊಂಡಿತು. ಚಳವಳಿ ತೀವ್ರವಾಗಲು ಈ ನಾಟಕವೇ ಕಾರಣ. ಹೀಗಾಗಿ ಆಗಿನ ಬ್ರಿಟಿಷ್ ಸರ್ಕಾರ ಈ ನಾಟಕದ ಪ್ರದರ್ಶನವನ್ನು ರದ್ದುಮಾಡಿತು. ಈ ನಾಟಕದ ಪ್ರದರ್ಶನದಿಂದಾಗಿಯೇ ಪ್ರದರ್ಶಕ ಕಲೆಗಳನ್ನು ಸೆನ್ಸಾರ್ ಮಾಡಲು ಬ್ರಿಟಿಷ್ ಸರ್ಕಾರ 1876ರಲ್ಲಿ ಡ್ರಾಮೆಟಿಕ್ ಪರ್ಫಾರ್ಮಿಂಗ್ ಆ್ಯಕ್ಟ್ ಜಾರಿಮಾಡಿತು. ರಂಗಭೂಮಿಯ ಪ್ರದರ್ಶನಗಳ ಮೇಲೆ ಬಿಗಿಹಿಡಿತ ಸಾಧಿಸಲು ಸರ್ಕಾರ ಈಗಲೂ ಆ ಕಾಯ್ದೆಯಲ್ಲಿ ಅಲ್ಪಸ್ವಲ್ಪ ತಿದ್ದುಪಡಿ ತಂದು ಮುಂದುವರಿಸಿದೆ. 'ನೀಲದರ್ಪಣ' ನಾಟಕದ ಪ್ರವೇಶದಿಂದಾಗಿ ನೀಲಿಬೆಳೆಯ ಚಳವಳಿಯಿಂದ ಆವರೆಗೆ ನಿರ್ಲಿಪ್ತರಾಗಿದ್ದ ಸಾಹಿತಿಗಳು, ಆಂದೋಲನಕಾರರು ಕೃಷಿ ಚಳವಳಿಯಲ್ಲಿ ಸಕ್ರಿಯರಾದರು.

'ನೀಲದರ್ಪಣ' ನಾಟಕದ ಪಾತ್ರ ಮತ್ತು ಅದರ ಸ್ವರೂಪ ಇತ್ಯಾದಿ ಅಂಶಗಳ ಚರ್ಚೆ ವ್ಯಾಪಕವಾದದ್ದು. ಸುಮಾರು 20 ವಿಭಿನ್ನ ಪಾತ್ರಗಳುಳ್ಳ ಐದು ಅಂಕಗಳ ಪೂರ್ಣಾವಧಿ ಮೆಲೊಡ್ರಾಮಾ ಮತ್ತು ಬ್ಲ್ಯಾಕ್ ಕಾಮಿಡಿ ನಾಟಕ ಇದಾಗಿದೆ. ಅದರ ವಿವರವಾದ ಚರ್ಚೆ ಈ ಲೇಖನದ ವ್ಯಾಪ್ತಿಯಲ್ಲಿ ಅಸಾಧ್ಯ. ಆದರೆ ನಾಟಕ ಮತ್ತು ಅದು ಆಗ ಜನತೆಯಲ್ಲಿ ಸೃಷ್ಟಿಸಿದ ಸಾಮಾಜಿಕ ಎಚ್ಚರ, ಮೂಡಿಸಿದ ಸಂಚಲನದ ಇತಿಹಾಸವನ್ನು ಅವಲೋಕಿಸಿದಾಗ ನಾಟಕಕಾರನ ಉದ್ದೇಶ ಸ್ಪಷ್ಟ; ಆತ ತನ್ನ ಈ ನಾಟಕ ಕೃತಿಯಿಂದ ಶೋಷಿತ ನೀಲಿ ಬೆಳೆಗಾರರ ಕೃಷಿ ಚಳವಳಿಯನ್ನು ಬೆಂಬಲಿಸುತ್ತಾನೆ ಮತ್ತು ಶೋಷಣೆ ಮಾಡುತ್ತಿರುವ ಆಗಿನ ಬ್ರಿಟಿಷರ ಆಕ್ರಮಣಕಾರಿ ಮನೋಧರ್ಮದ ವ್ಯವಸ್ಥೆಯನ್ನು ಎಚ್ಚರಿಸುತ್ತಾನೆ. ಮತ್ತು ಆತನ ಉದ್ದೇಶ ಸಫಲವೂ ಆಗಿದೆ.

ಈ ನಾಟಕವನ್ನು ಬಂಗಾಲದ ಇನ್ನೊಬ್ಬ ಪ್ರಸಿದ್ಧ ನಾಟಕಕಾರ ಮೈಕೆಲ್ ಮಧುಸೂದನ್ ದತ್ತ ಇಂಗ್ಲಿಷಿಗೆ ಅನುವಾದಿಸಿದ್ದಾರೆ. ರೆವರೆಂಡ್ ಜೇಮ್ಸ್ ಲಾಂಗ್ ಅವರು ಅದನ್ನು ಪ್ರಕಟಿಸಿದರು. ಬ್ರಿಟಿಷ್ ವ್ಯಾಪಾರ ಸಮುದಾಯ ಮತ್ತು ಸರ್ಕಾರವು ಅನ್ಯಾಯವಾಗಿ ಮತ್ತು ದಬ್ಬಾಳಿಕೆಯಿಂದ ಇಂಡಿಗೊ ಕೃಷಿಕರನ್ನು ಶೋಷಿಸುತ್ತಿದೆ ಎಂದು ಜೇಮ್ಸ್ ಲಾಂಗ್ ನಂಬಿದ್ದರು. ಈ ನಾಟಕದ ಪ್ರದರ್ಶನ ಸೃಷ್ಟಿಸಿದ ಸಂಚಲನದಿಂದಾಗಿ ಇಂಗ್ಲೆಂಡಿನ ಸಭ್ಯ ಜನತೆ ಭಾರತದಲ್ಲಿ ತಮ್ಮ ಸರ್ಕಾರದಿಂದ ನೀಲಿ ಬೆಳೆಗಾರರ ಮೇಲೆ ಆಗುತ್ತಿರುವ ದಬ್ಬಾಳಿಕೆಗಾಗಿ ನೊಂದುಕೊಂಡರು ಮತ್ತು ಸರ್ಕಾರವನ್ನು ಖಂಡಿಸಿದರು. ಇದನ್ನು ಪ್ರಕಟಿಸಿದ್ದಕ್ಕಾಗಿ ರೆವರೆಂಡ್ ಜೇಮ್ಸ್ ಲಾಂಗ್ ಅವರಿಗೆ ದೇಶದ್ರೋಹದ ಆರೋಪ ಹೊರಿಸಿ ಜೈಲುಶಿಕ್ಷೆ ವಿಧಿಸಲಾಯಿತು.

ಕುತೂಹಲದ ಅಂಶವೆಂದರೆ ಆಗಿನ ನೀಲಿಬೆಳೆಗಾರರ ಚಳವಳಿ ಅಹಿಂಸಾತ್ಮಕವಾಗಿತ್ತು. ಗಾಂಧೀಜಿಯವರಿಗೆ ತಮ್ಮ ಮುಂದಿನ ಅಹಿಂಸಾತ್ಮಕ ಚಳವಳಿಗೆ ಬಂಗಾಲದಲ್ಲಿ ನಡೆದ ರೈತರ ಈ ಚಳವಳಿ ಪ್ರೇರಣೆ ನೀಡಿದೆಯಂತೆ. ಈ ನಾಟಕದಿಂದಾಗಿ ಸ್ವದೇಶದಲ್ಲಿ ಮತ್ತು ಇಂಗ್ಲೆಂಡಿನಲ್ಲಿ ಬ್ರಿಟಿಷರ ಕೃಷಿನೀತಿಯ ವಿರುದ್ಧ ಜೋರು ಚರ್ಚೆ ನಡೆದು ಕೊನೆಗೆ ಈ ಸಮಸ್ಯೆ ಬಗೆಹರಿಸಲು ಬಂಗಾಲದ ಸಾಮಾಜಿಕ ಕಾರ್ಯಕರ್ತ ಮತ್ತು ಶಿಕ್ಷಣತಜ್ಞ, ಇಂಡಿಗೊ ಬೆಳೆಯುವ ರೈತರ ಸಮಸ್ಯೆ ಅರಿತ ನವಾಬ್ ಅಬ್ದುಲ್ ಲತೀಫ್ ಎಂಬುವವರ ಸಲಹೆ ಮೇರೆಗೆ ಬ್ರಿಟಿಷ್ ಸರ್ಕಾರ 1860ರಲ್ಲಿ ಇಂಡಿಗೊ ಕಮಿಶನ್ ಎಂಬ ಒಂದು ಸಮಿತಿ ರಚಿಸಿತು. ಸಮಿತಿಯ ವರದಿಯಲ್ಲಿ ಇಎಮ್‌ಐ ಟವರ್ ಎಂಬಾತ 'ಮನುಷ್ಯನ ರಕ್ತಸಿಕ್ತವಾಗದೇ ಇಂಗ್ಲೆಂಡಿಗೆ ನೀಲಿಬೆಳೆಯ ಯಾವ ಪೆಟ್ಟಿಗೆಯೂ ಬಂದಿಲ್ಲ' ಎಂದು ತಿಳಿಸುತ್ತಾನೆ. ಈ ವರದಿಯಿಂದ ಎಚ್ಚೆತ್ತ ಬ್ರಿಟಿಷ್ ಸರ್ಕಾರ ಭಾರತದಲ್ಲಿ ಇಂಡಿಗೊ ಪ್ಲಾಂಟರ್‌ಗಳು ರೈತರ ಮೇಲೆ ಮಾಡುತ್ತಿರುವ ದಬ್ಬಾಳಿಕೆ ಅಪರಾಧ ಎಂದು ಅರಿತುಕೊಂಡು ನೀಲಿ ಬೆಳೆಯನ್ನು ಕಡ್ಡಾಯವಾಗಿ ಬೆಳೆಯಲು ರೈತರ ಮೇಲೆ ಹೇರಿದ ಒತ್ತಾಯದ ನೀತಿಯನ್ನು ಹಿಂತೆಗೆದುಕೊಳ್ಳುತ್ತದೆ.

'ನೀಲದರ್ಪಣ' ನಾಟಕದಿಂದ ಪ್ರೇರಣೆ ಪಡೆದು ಮುಂದೆ ಬಂಗಾಲಿಯಲ್ಲಿ ಹಲವು ದರ್ಪಣ ನಾಟಕಗಳು ರಚನೆಗೊಂಡವು. ಉದಾಹರಣೆಗೆ ಪ್ರಸನ್ನ ಮುಖ್ಯೋಪಾಧ್ಯಾಯರ ಪಲ್ಲಿಗ್ರಾಮ ದರ್ಪಣ (ಗ್ರಾಮೀಣ ಜೀವನದ ಕನ್ನಡಿ 1873), ಮೀರ್ ಮುಷರಫ್ ಹುಸೈನ್ ಅವರ ಜಮೀನ್ದಾರರ ದರ್ಪಣ (ಜಮೀನ್ದಾರರ ಕನ್ನಡಿ 1873), ಜೋಗೇಂದ್ರ ಘೋಶ್ ಅವರ ಕೆರಾನಿ ದರ್ಪಣ (ಕಾರಕೂನನ ಕನ್ನಡಿ 1873,). ದಕ್ಷಿಣಾಚಾರ್ ಚಟ್ಟೋಪಾಧ್ಯಾಯರ ಜೈಲು ದರ್ಪಣ (1876) ಇವೆಲ್ಲ ಒಂದಲ್ಲಾ ಒಂದುರೀತಿ ಶೋಷಿತ ವರ್ಗದ ಪರ ಮತ್ತು ಬ್ರಿಟಿಷ್ ಆಡಳಿತದ ವಿರುದ್ಧ ದನಿಎತ್ತಿದ ನಾಟಕಗಳು.


ಸರ್ಕಾರವು ರೂಪಿಸಿದ ಒಂದು ನೀತಿಯನ್ನು ಜನರು ಪ್ರಶ್ನಿಸಿ ಅದು ಚಳವಳಿಯ ರೂಪ ಪಡೆದಾಗ ಸರ್ಕಾರವು ಆ ನೀತಿಯ ಬಗ್ಗೆ ಜನರಿಗೆ ಇರುವ ಅನುಮಾನವನ್ನು ನಿವಾರಿಸಿ ವ್ಯಾಪಕ ಅರಿವು ಮೂಡಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಪೇಕ್ಷಣೀಯ. ಅದರಲ್ಲೂ ಕೃಷಿ ನೀತಿಯನ್ನು ರೂಪಿಸುವಾಗ ಗ್ರಾಮೀಣ ಮಟ್ಟದಲ್ಲೂ ಚರ್ಚೆ ನಡೆಯಬೇಕಾಗುತ್ತದೆ. ಸರ್ಕಾರವು ಜಾರಿಗೆ ತರುವ ನೀತಿಗಳು ಜನತೆಗೆ ಒಳಿತು ಮಾಡುತ್ತವೆ ಅಂದುಕೊಂಡರೂ ಅವನ್ನು ಜಾರಿಗೆ ತರುವಾಗ ಅಹಂಕಾರದ ವರ್ತನೆ ಸಲ್ಲದು. ಕಾರ್ನಾಡರ ತುಘಲಕ್ ನಾಟಕದ ನಾಯಕ ತುಘಲಕ್ ದಿಲ್ಲಿಯಿಂದ ದೌಲತಾಬಾದಿಗೆ ತನ್ನ ರಾಜಧಾನಿಯನ್ನು ವರ್ಗಾಯಿಸಲು ಎಷ್ಟೇ ಸಮಂಜಸ ಕಾರಣ ನೀಡಿದರೂ ಅದು ಆತನ ಕನಸಿನ ಮಟ್ಟಿಗೆ ಮಾತ್ರ ಉಳಿಯುತ್ತದೆ. ತಾನು ಮಾಡಿದ ಕಾನೂನನ್ನು ಜನರಿಗೆ ಮನವರಿಕೆ ಮಾಡಿಕೊಡುವುದರಲ್ಲಿ ವಿಫಲನಾಗುತ್ತಾನೆ. ಮುಂದೆ ಒತ್ತಾಯದಿಂದ ದೌಲತಾಬಾದಿಗೆ ರಾಜಧಾನಿಯನ್ನು ವರ್ಗಾಯಿಸಿದಾಗ ಮಾರ್ಗದುದ್ದಕ್ಕೂ ಕೊಲೆಸುಲಿಗೆಗಳು ನಡೆದು ಆತನ ಕಾನೂನು ಅಮಾಯಕರನ್ನು ಶೋಷಿಸಲು ಭ್ರಷ್ಟರಿಗೆ ದಾರಿ ಮಾಡಿಕೊಡುತ್ತದೆ. ದುರಹಂಕಾರವೇ ಅವನ ಆಡಳಿತದ ದುರಂತಕ್ಕೆ ಕಾರಣವಾಗುತ್ತದೆ.

ಶೇಕ್ಸ್‌ಪಿಯರನ ಕೋರಿಯೊಲೊನಸ್ ನಾಟಕದ ನಾಯಕ ಕೋರಿಯೊಲನಸ್ ರೋಮ್ ದೇಶದ ಭಕ್ತನಾಗಿ ದೇಶಕ್ಕಾಗಿ ಎಷ್ಟೇ ಯುದ್ಧ ಮಾಡಿದ್ದರೂ ಆತನಿಗೆ ಬಡಜನರ ಹಸಿವನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ. ಅಪ್ಪಟ ದೇಶಪ್ರೇಮಿ ಎಂದೆನಿಸಿಕೊಂಡಾತ ದುರಹಂಕಾರದ ಪ್ರವೃತ್ತಿಯಿಂದಾಗಿಯೇ ದೇಶಭ್ರಷ್ಟನಾಗುವ ದಾರಿಯನ್ನು ಆಯ್ದುಕೊಂಡು ದುರಂತ ನಾಯಕನಾಗುತ್ತಾನೆ. ಕೋರಿಯೊಲನಸ್, ಸೀಜರ್ ಇವರೆಲ್ಲ ಬಹು ಜನಪ್ರಿಯ ನಾಯಕರೇ. ರಾಜಕೀಯ ನಾಯಕರು ಪಡೆಯುವ ಜನಪ್ರಿಯತೆ, ಬಹುಮತ ಎಂಬ ಅಮಲಿನಿಂದ ಅವರಲ್ಲಿ ದುರಹಂಕಾರದ ದೋಷ ಸೇರಿಕೊಂಡು ಜನ ವಿರೋಧಿಗಳಾಗುತ್ತಾರೆ. ಅಂದರೆ ನೀಲಿ ರಕ್ತದವರಾಗುತ್ತಾರೆ. ನೀಲಿ ಬೆಳೆಗಾರರ ಸಮಸ್ಯೆಗೆ ರಂಗಕನ್ನಡಿ ಹಿಡಿಯುತ್ತಲೇ ನೀಲಿ ರಕ್ತದ ಅರ್ಥಾತ್ ಉಚ್ಚತನ, ಶ್ರೇಷ್ಠತೆಯ ಅಮಲಿನಿಂದಾಗುವ ದಬ್ಬಾಳಿಕೆಯನ್ನು ನೀಲದರ್ಪಣ ನಾಟಕ ಧ್ವನಿಸುತ್ತದೆ.


ಕನ್ನಡದಲ್ಲಿ ರೈತರ ಸಮಸ್ಯೆ, ಅವರ ಬವಣೆಯ ಹಿನ್ನೆಲೆ ವಸ್ತು ಇಟ್ಟುಕೊಂಡು ಹಲವಾರು ನಾಟಕಗಳು ಬಂದಿವೆ. ರೈತರ ಆತ್ಮಹತ್ಯೆ ಕುರಿತು ಬೀದಿ ನಾಟಕಗಳನ್ನೂ ಆಡಿದ್ದಾರೆ. ಪಿ ಸಾಯಿನಾಥ ಅವರು ರೈತರ ಆತ್ಮಹತ್ಯೆ ಕುರಿತಾದ ಲೇಖನಗಳನ್ನು ಇಟ್ಟುಕೊಂಡು ನಾಟಕಮಾಡಿದ್ದಾರೆ. ನಾಟಕಕಾರ ಡಿ.ಎಸ್. ಚೌಗಲೆ ದಶಕದ ಹಿಂದೆ ಬರೆದ 'ಉದ್ವಸ್ಥ' ಎಂಬ ನಾಟಕದಲ್ಲಿ ಬಹುರಾಷ್ಟ್ರೀಯ ಕಂಪನಿಗಳು ರೈತರ ಭೂಮಿಯನ್ನು ಕಬಳಿಸುವ ಚಿತ್ರಣವನ್ನೂ ರೈತ ಸಿಡಿದೇಳುವುದನ್ನೂ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಅದರೆ ಈ ತರಹದ ನಾಟಕಗಳಾಗಲಿ ರಂಗ ಪ್ರಯೋಗಗಳಾಗಲಿ ಸರ್ಕಾರವು ರೈತರಿಗಾಗಿ ಮಾಡಿದ ಒಂದು ನೀತಿ, ಕಾನೂನನ್ನು ನೇರವಾಗಿ ವಸ್ತುವಾಗಿ ಮಾಡಿಕೊಂಡವುಗಳಲ್ಲ. 'ನೀಲದರ್ಪಣ' ನಾಟಕ ಬ್ರಿಟಿಷ್ ಸರ್ಕಾರದ ಕೃಷಿ ನೀತಿಯನ್ನೇ ಪ್ರಶ್ನಿಸುವ ವಸ್ತು ಹೊಂದಿದೆ.

ಒಮ್ಮೆ ಜರ್ಮನ್ ಅಧಿಕಾರಿಯೊಬ್ಬ ಎರಡನೆಯ ಮಹಾಯುದ್ಧದ ಸಮಯದಲ್ಲಿ ಮಹಾನ್ ಚಿತ್ರಕಾರ ಪ್ಯಾಬ್ಲೊ ಪಿಕಾಸೊನ ಸ್ಟುಡಿಯೊಕ್ಕೆ ಆತನ ಚಿತ್ರಗಳನ್ನು ನೋಡಲು ಭೇಟಿ ಕೊಟ್ಟಿದ್ದನಂತೆ. ಆತ ಪಿಕಾಸೊನ ಪ್ರಸಿದ್ಧ ತೈಲಚಿತ್ರ ಗುರ್ನಿಕಾ ಎಂಬುದನ್ನು ನೋಡಿ ಅದರ ಸ್ಪಷ್ಟ ಪ್ರತಿನಿಧೀಕರಣಕ್ಕೆ ಗಾಬರಿಯಾದನಂತೆ. ಏಕೆಂದರೆ ಆಗತಾನೆ ಜರ್ಮನ್ನರು ಗುರ್ನಿಕಾ ಪ್ರದೇಶದ ಮೇಲೆ ಬಾಂಬ್ ಹಾಕಿದ್ದರಂತೆ. ಆಗ ಆ ಜರ್ಮನ್ ಅಧಿಕಾರಿ ಸ್ವಲ್ಪ ಅಸಮಾಧಾನದಿಂದಲೇ ಪಿಕಾಸೊನನ್ನು 'ಈ ಚಿತ್ರವನ್ನು ನೀವು ಮಾಡಿದಿರಾ' ಎಂದು ಕೇಳಿದನಂತೆ. ಆಗ ಪಿಕಾಸೊ 'ಇಲ್ಲ, ಇದನ್ನು ನೀವೇ ಮಾಡಿದ್ದು' ಎಂದನಂತೆ. ವ್ಯವಸ್ಥೆಯಲ್ಲಿ ನಡೆಯುವ ವಿದ್ಯಮಾನಗಳು ಸಾಹಿತ್ಯ ಮತ್ತು ಕಲಾಕೃತಿಗಳಲ್ಲಿ ಹೀಗೆ ಪ್ರತಿನಿಧೀಕರಣದ ರಾಜಕೀಯಕ್ಕೆ ಒಳಪಟ್ಟಿರುತ್ತವೆ. ಹಾಗೆ 'ನೀಲದರ್ಪಣ' ಕೂಡ ಅಂತಹ ಒಂದು ರಾಜಕೀಯ ನಾಟಕ ಕೃತಿ.

ಪೂರಕ ಮಾಹಿತಿ: ಸುದೀಪ್ ಚಟರ್ಜಿ ಅವರ 'ದಿ ಥಿಯೇಟರ್ ಇನ್ ಕೊಲೊನಿಯಲ್ ಸ್ಟೇಜ್', ನಂದಿ ಭಾಟಿಯಾ ಅವರ 'ಮಾಡರ್ನ್ ಇಂಡಿಯನ್ ಥಿಯೇಟರ್'



ಬಂಗಾಳದ ವಿಲಿಯಂ ಸಿಂಪ್ಸನ್ ಇಂಡಿಗೊ ಫ್ಯಾಕ್ಟರಿಯ ನೋಟ... ಚಿತ್ರಕೃಪೆ: ವಿಕಿಕಾಮನ್ಸ್




ಬ್ರಿಟಿಷರು, ಭಾರತೀಯ ರೈತರ ಮೇಲೆ ಒತ್ತಡ ಹೇರಿ ನೀಲಿ ಬೆಳೆಯನ್ನು ಬೆಳೆಸುತ್ತಿದ್ದ ಪರಿ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ದಡ್ಡ ಚಿಕ್ಕ ಶೇಖರಪ್ಪ ಕಥೆಯ ಸಿದ್ಧ ಕವಲೂರಿಗೆ ಹೋಗಿಬಂದ!


• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಒಂದೂರಿನಲ್ಲಿ ಸಿದ್ಧ ಎಂಬ ಬಾಲಕನಿದ್ದ. ಪ್ರತಿದಿನ ಎಮ್ಮೆಗಳನ್ನು ಮೇಯಿಸಿಕೊಂಡು ಬರುತ್ತಿದ್ದ ಆತ, ಹಾಯಾಗಿದ್ದ



ಸೋಮಾರಿತನದಲ್ಲಿ ಸಿದ್ಧನದು ಎತ್ತಿದ ಕೈ. ಗೆಳೆಯರು ಆಡುತ್ತಿದ್ದರೂ ಸದಾ ಕಟ್ಟೆಯಲ್ಲೇ ಕುಳಿತು ತೂಕಡಿಸುತ್ತಿದ್ದ




ಕಟ್ಟೆಯಲ್ಲಿ ಒಟ್ಟಿದ ಚೀಲಗಳ ಮೇಲೆ ಹೊತ್ತು ಗೊತ್ತಿಲ್ಲದಂತೆ ಮಲಗಿ ನಿದ್ರಿಸುತ್ತಿದ್ದ. ಸುತ್ತಲಿನ ಪರಿವೆಯೇ ಅವನಿಗೆ ಇರುತ್ತಿರಲಿಲ್ಲ



ಸಿದ್ಧನನ್ನು ಕವಲೂರಿಗೆ ಕಳುಹಿಸಬೇಕು ಎಂದು ಅಪ್ಪ-ಅಮ್ಮ ಒಂದುದಿನ ರಾತ್ರಿ ಹೇಳುವುದನ್ನು ಆತ ಕೇಳಿಸಿಕೊಂಡ



ಅಪ್ಪ-ಅಮ್ಮನಿಗೆ ಶಾಕ್ ನೀಡಲು ರಾತ್ರಿಯೇ ಎದ್ದು ಕವಲೂರಿಗೆ ಹೋಗಿಬಂದ. ಆದರೆ, ಹೋಗುವ ಉದ್ದೇಶವನ್ನೇ ಮರೆತ



ಬೆಳಿಗ್ಗೆ ಎದ್ದೊಡನೆ ಅಪ್ಪ-ಅಮ್ಮನಿಗೆ ನಾನು ಕವಲೂರಿಗೆ ಹೋಗಿಬಂದೆ ಎಂದು ಹೇಳಿದ. ಹೋದ ಕೆಲಸ ಏನಾಯಿತು ಎಂದು ಕೇಳಿದಾಗ ಬೆಪ್ಪನಾಗಿ ನಿಂತ. ಅಂದಿನಿಂದ ಉದ್ದೇಶ ಈಡೇರಿಸದೆ ಮಾಡುವ ಕೆಲಸಕ್ಕೆ ಸಿದ್ಧ ಕವಲೂರಿಗೆ ಹೋಗಿಬಂದ ಎಂಬ ಆಡುಮಾತು ಸೃಷ್ಟಿಯಾಯಿತು

ಮಜ ಮಜ ಮಜಕೂರದ ಫೆ. 21ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತದಲ್ಲಿ ಗರ್ದಿ ಗಮ್ಮತ್ತು

ಕ್ರಮವಾಗಿರುವ 10 ಸಂಖ್ಯೆಗಳನ್ನು ಬರೆದುಕೊಂಡರೆ ನೀವು ಅವುಗಳನ್ನು ಕೂಡಿಸುವ ಮೊದಲೇ ನಾನು ಅದರ ಉತ್ತರವನ್ನು ತಕ್ಷಣ ಹೇಳುತ್ತೇನೆ.

ಅದು ಹೇಗೆ?

ಗುಟ್ಟು ರಟ್ಟು: ನೀನು ಬರೆದುಕೊಂಡ ಸಂಖ್ಯೆಗಳ ಮೇಲಿನಿಂದ ಐದನೇ ಕ್ರಮ ಸಂಖ್ಯೆಯ ಮುಂದೆ 5 ಸೇರಿಸಿದರೆ ಉತ್ತರ ಅದೇ ಆಗಿರುತ್ತದೆ.

ಉದಾ:
26
27
28
29
30 -5
31
32
33
34
35
305

{ ಇಲ್ಲಿ ಐದನೇ ಕ್ರಮಸಂಖ್ಯೆ **30** ಇದೆ. ಅದರ ಮುಂದೊಂದು **5** ಸೇರಿಸಿದರೆ **305** ಕೂಡಿಸಿದಾಗ ಉತ್ತರ ಅದೇ ಆಗಿರುತ್ತದೆ. }

ಶಬ್ದಗಳಲ್ಲಿ ಸರಸ

ಇಲ್ಲಿ ಎಡ ಭಾಗದ ಶಬ್ದಗಳ ಅಕ್ಷರಗಳೇ ಬಲ ಭಾಗದ ಶಬ್ದದಲ್ಲಿ ಬಂದಿರುವ ಚಿಕ್ಕ ವಾಕ್ಯಗಳು.

ಬಹಳ/ಹಳಬ
ಪ್ರಥಮ/ಪ್ರಮಥ
ಮಗನ/ಗಮನ
ಆಮಗನ/ಆಗಮನ
ಮಾನವರ/ವರಮಾನ
ಸರಿಹೋದ/ಸಹೋದರಿ

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಜೋಡಿ ಪದಗಳನ್ನು ಹೊಂದಿಸಿ.

1.	MAN	A.	SOME
2.	OFF	B.	AT
3.	GO	C.	AGE
4.	DO	D.	DOWN
5.	DAM	E.	GO
6.	SO	F.	AM
7.	IN	G.	ON
8.	DON	H.	KEY
9.	HE	I.	AN
10.	MAD	J.	COME
11.	LOT	K.	OR
12.	ME	L.	FORD
13.	BUD	M.	GET
14.	FOR	N.	US
15.	HAND	O.	ICE
16.	OX	P.	WARD
17.	BAN	Q.	KING
18.	MY	R.	LAND
19.	TO	S.	DAY
20.	IS	T.	SORE

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಕು ಮ ತು ದು ಭ
ಗೆ ಗ ಕು ಸ ಕು

◯ ಂ ◯ ಕೊಡ
◯ ಂ ◯ ಕುಗ್ಗು, ಕ್ಷೀಣಿಸು
◯ ಂ ◯ ಗೆಳೆತನ
◯ ಂ ◯ ಒಂದು ನದಿಯ ಹೆಸರು
◯ ಂ ◯ ಮಬ್ಬು

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ
1-ಬಿಂಕ, 2-ತಿಂಡಿ, 3-ತಂತಿ, 4-ಬೂಂದಿ, 5-ಅಂದ

ಟ್ವೆಂಟಿ-20 ಮ್ಯಾಚ್
1-R, 2-P, 3-G, 4-C, 5-O, 6-F, 7-B, 8-E, 9-H, 10-A, 11-D, 12-S, 13-T, 14-I, 15-K, 16-L, 17-J, 18-N, 19-M, 20-Q.

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ವಸುಧಾ ವಿ. ಕುಲಕರ್ಣಿ
ಗಂಗಾವತಿ



ಲಿಖಿತ್ ಎಸ್ ಗೌಡ
ಹಿರಿಯೂರು



ಪ್ರಣವ್ ಎಂ.
ಶಿವಮೊಗ್ಗ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್: ಕರ್ನಾಟಕ – ರೈಲ್ವೆ ಪಂದ್ಯ ಇಂದು; ಎದುರಾಳಿಗಳಿಗೆ ದೇವದತ್ತ ಭಯ

ಎಂಟರ ಘಟ್ಟದ ಮೇಲೆ ಸಮರ್ಥ್ ಬಳಗದ ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಸಲದ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ನೇರವಾಗಿ ಲಗ್ಗೆ ಹಾಕಲು ಸಿ ಗುಂಪಿನಲ್ಲಿ ಮೂರು ತಂಡಗಳು ಕಣ್ಣಿಟ್ಟಿವೆ. ಈ ತುರುಸಿನ ಸ್ಪರ್ಧೆಯಲ್ಲಿ ಆರ್. ಸಮರ್ಥ್ ನಾಯಕತ್ವದ ಕರ್ನಾಟಕವೂ ಇದೆ.

ಗುಂಪಿನ ಪಾಯಿಂಟ್ ಪಟ್ಟಿಯಲ್ಲಿ ಸದ್ಯ ಕರ್ನಾಟಕ, ಕೇರಳ ಮತ್ತು ಉತ್ತರ-ಪ್ರದೇಶ ತಂಡಗಳು ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿವೆ. ಈ ತಂಡಗಳು ತಲಾ 12 ಅಂಕಗಳನ್ನು ಹೊಂದಿವೆ. ಉತ್ತಮ ರನ್‌ರೇಟ್ ಆಧಾರದಲ್ಲಿ ಕರ್ನಾಟಕ ಅಗ್ರಸ್ಥಾನ ಪಡೆದಿದೆ. ಭಾನುವಾರ ನಡೆಯಲಿರುವ ಗುಂಪಿನ ಕೊನೆಯ ಸುತ್ತಿನಲ್ಲಿ ಕರ್ನಾಟಕ ತಂಡವು ರೈಲ್ವೆಸ್, ಕೇರಳ ತಂಡವು ಬಿಹಾರ ಮತ್ತು ಒಡಿಶಾ ತಂಡವು ಉತ್ತರಪ್ರದೇಶ ತಂಡವನ್ನು ಎದುರಿಸಲಿವೆ.

ಪ್ರಸ್ತುತ ನಿಯಮಾವಳಿಯ ಪ್ರಕಾರ ಪ್ರತಿಯೊಂದು ಗುಂಪಿನಲ್ಲಿ ಅಗ್ರಸ್ಥಾನ ಗಳಿಸುವ ತಂಡವು ಎಂಟರ ಘಟ್ಟಕ್ಕೆ ನೇರ ಪ್ರವೇಶ ಗಿಟ್ಟಿಸಲಿವೆ. ಉಳಿದಂತೆ ರನ್‌ರೇಟ್ ಮತ್ತು ಪಾಯಿಂಟ್ಸ್ ಗಳಿಕೆಯ ಲೆಕ್ಕಾಚಾರದಲ್ಲಿ ಉಳಿದ ತಂಡಗಳು ಆಯ್ಕೆಯಾಗುತ್ತವೆ. ಈ ಗೊಂದಲವನ್ನು ತಪ್ಪಿಸಿಕೊಳ್ಳಲು ಕೊನೆಯ ಸುತ್ತಿನಲ್ಲಿ ಉತ್ತಮ ರನ್‌ರೇಟ್‌ನೊಂದಿಗೆ ಗೆಲುವು ಸಾಧಿಸುವತ್ತ ಸಮರ್ಥ್ ಪಡೆ ಚಿತ್ತ ನೆಟ್ಟಿದೆ.

ಶುಕ್ರವಾರ ಬಲಿಷ್ಠ ಕೇರಳ ತಂಡವನ್ನು ಮಣಿಸಿರುವ ತಂಡವು ಭರ್ತಿ ಆತ್ಮವಿಶ್ವಾಸದಲ್ಲಿದೆ. ಸತತ ಎರಡು ಪಂದ್ಯಗಳಲ್ಲಿ ಶತಕ ಬಾರಿಸಿರುವ ದೇವದತ್ತ ಪಡಿಕ್ಕಲ್ ಮತ್ತು ಉತ್ತಮ ಫಾರ್ಮ್‌ನಲ್ಲಿರುವ ನಾಯಕ ಸಮರ್ಥ್ ತಂಡಕ್ಕೆ ಒಳ್ಳೆಯ ಆರಂಭ ನೀಡುತ್ತಿದ್ದಾರೆ. ಕೆ.ವಿ. ಸಿದ್ಧಾರ್ಥ್ ಕೂಡ ಇನಿಂಗ್ಸ್‌ಗೆ ಸ್ಥಿರತೆ ಒದಗಿಸಿದ್ದಾರೆ. ಕರುಣ್ ನಾಯರ್ ಲಯ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಕೆಳ ಕ್ರಮಾಂಕದಲ್ಲಿ ರನ್‌ಗಳ ಕಾಣಿಕೆ ನೀಡುತ್ತಿರುವ ಅಭಿಮನ್ಯು ಮಿಥುನ್, ಬೌಲಿಂಗ್‌ನಲ್ಲಿಯೂ ಮಿಂಚುತ್ತಿದ್ದಾರೆ. ಶ್ರೇಯಸ್ ಗೋಪಾಲ್, ಅನಿರುದ್ಧ ಜೋಶಿ ಕೂಡ ಉತ್ತಮವಾಗಿ ಆಡಿದ್ದಾರೆ.

ಆದರೆ ರೈಲ್ವೆಸ್ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಎಂಟು ಪಾಯಿಂಟ್ಸ್‌ಗಳಿಸಿ ನಾಲ್ಕನೇ ಸ್ಥಾನದಲ್ಲಿರುವ ತಂಡದಲ್ಲಿರುವ ಕನ್ನಡಿಗ, ಮಧ್ಯಮವೇಗಿ ಟಿ. ಪ್ರದೀಪ್ ಇದುವರೆಗೆ ಉತ್ತಮವಾಗಿ ಬೌಲಿಂಗ್ ಮಾಡಿದ್ದಾರೆ. ತಂಡದ ಬ್ಯಾಟ್ಸ್‌ಮನ್‌ಗಳಾದ ಮೃಣಾಲ್ ದೇವಧರ್, ಪ್ರಥಮ್ ಸಿಂಗ್, ಶಿವಂ ಚೌಧರಿ ಚೆನ್ನಾಗಿ ಆಡುವ ಸಮರ್ಥರು. ಅವರನ್ನು ಕಟ್ಟಿಹಾಕುವಲ್ಲಿ ಆತಿಥೇಯ ಬೌಲರ್‌ಗಳು ಯಶಸ್ವಿಯಾದರೆ, ಗೆಲುವಿನ ಹಾದಿ ಸುಗಮವಾಗಬಹುದು.


ಅಭಿಮನ್ಯು ಮಿಥುನ್

ತಂಡಗಳು: ಕರ್ನಾಟಕ: ಆರ್. ಸಮರ್ಥ್ (ನಾಯಕ), ದೇವದತ್ತ ಪಡಿಕ್ಕಲ್, ಕೆ.ವಿ. ಸಿದ್ಧಾರ್ಥ್, ಕರುಣ್ ನಾಯರ್, ಅನಿರುದ್ಧ ಜೋಶಿ, ಬಿ.ಆರ್. ಶರತ್ (ವಿಕೆಟ್‌ಕೀಪರ್), ಅಭಿಮನ್ಯು ಮಿಥುನ್, ಶ್ರೇಯಸ್ ಗೋಪಾಲ್, ಜೆ. ಸುಚಿತ್, ವೈಶಾಖ ವಿಜಯಕುಮಾರ್, ಪ್ರಸಿದ್ಧಕೃಷ್ಣ, ರೋನಿತ್ ಮೋರೆ, ಕೆ. ಗೌತಮ್, ಡಿ. ನಿಶ್ಚಲ್, ರೋಹನ್ ಕದಂ, ಆದಿತ್ಯ ಸೋಮಣ್ಣ, ಎಂ.ಬಿ. ದರ್ಶನ್, ನಿಕಿನ್ ಜೋಸ್, ಎಸ್. ರಕ್ಷಿತ್, ಕೆ.ಎಲ್. ಶ್ರೀಜಿತ್, ಮನೋಜ್ ಭಾಂಡಗೆ, ಶುಭಾಂಗ್ ಹೆಗಡೆ.

ರೈಲ್ವೆಸ್: ಕರ್ಣ ಶರ್ಮಾ (ನಾಯಕ), ಮೃಣಾಲ್ ದೇವಧರ್, ಪ್ರಥಮ್ ಸಿಂಗ್, ಶಿವಂ ಚೌಧರಿ, ಅರಿಂದಮ್ ಘೋಷ್, ದಿನೇಶ್ ಮೋರ್ (ವಿಕೆಟ್‌ಕೀಪರ್), ಸೌರಭ್ ಸಿಂಗ್, ಹರ್ಷ ತ್ಯಾಗಿ, ಟಿ. ಪ್ರದೀಪ್, ಅಮಿತ್ ಮಿಶ್ರಾ, ಅನಂತ್ ಸಹಾ, ಶಿವೇಂದ್ರ ಸಿಂಗ್, ಅಮಿತ್ ಕುಲಿಯಾ, ಮನೀಷ್ ರಾವ್, ವಿಕ್ರಾಂತ್ ರಜಪೂತ್, ಹಿಮಾಂಶು ಸಂಗ್ವಾನ್, ದೃಷ್ಯಂತ್ ಸೋನಿ, ಅವಿಜಿತ್ ಸಿಂಗ್, ಯುವರಾಜ್ ಸಿಂಗ್, ಅಭಿಷೇಕ್ ಪಾಂಡೆ, ಆಕಾಶ್ ಪಾಂಡೆ.

ಸಿ ಗುಂಪಿನ ಪಂದ್ಯಗಳು

ಒಡಿಶಾ–ಉತ್ತರಪ್ರದೇಶ (ಜಸ್ಟ್ ಕ್ರಿಕೆಟ್ ಮೈದಾನ)

ಕೇರಳ–ಬಿಹಾರ (ಆಲೂರು ಕೆಎಸ್‌ಸಿಎ ಕ್ರೀಡಾಂಗಣ)

ಪಂದ್ಯಗಳ ಆರಂಭ: ಬೆಳಿಗ್ಗೆ 9

ಪ್ರೇರಕ್ ಮಂಕಡ್, ಶ್ರೇಯಸ್ ಅಯ್ಯರ್ ಶತಕ

ಕೋಲ್ಕತ್ತ (ಪಿಟಿಐ): ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಪ್ರೇರಕ್ ಮಂಕಡ್ ಗಳಿಸಿದ ಅಮೋಘ ಶತಕದ ನೆರವಿನಿಂದ ಸೌರಾಷ್ಟ್ರ ತಂಡ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಚಂಡೀಗಢವನ್ನು 62 ರನ್‌ಗಳಿಂದ ಮಣಿಸಿತು.

ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಪಂದ್ಯದಲ್ಲಿ ಪ್ರೇರಕ್ ಆರು ಸಿಕ್ಸರ್ ಮತ್ತು 16 ಬೌಂಡರಿಗಳೊಂದಿಗೆ 130 ಎಸೆತಗಳಲ್ಲಿ 174 ರನ್ ಕಲೆ ಹಾಕಿದರು. ಇದರಿಂದ 7ಕ್ಕೆ 388 ರನ್ ಗಳಿಸಿದ ಸೌರಾಷ್ಟ್ರ ಎದುರಾಳಿಗಳನ್ನು 326 ರನ್‌ಗಳಿಗೆ ನಿಯಂತ್ರಿಸಿತು.

ಶ್ರೇಯಸ್ ಅಯ್ಯರ್ ಶತಕ: ಜೈಪುರದಲ್ಲಿ ನಡೆದ ಪಂದ್ಯದಲ್ಲಿ ನಾಯಕ ಶ್ರೇಯಸ್ ಅಯ್ಯರ್ (116; 103 ಎಸೆತ, 11 ಬೌಂಡರಿ, 3 ಸಿಕ್ಸರ್) ಅವರ ಅಮೋಘ ಶತಕ ಮತ್ತು ವೇಗಿ ಶಾರ್ದೂಲ್ ಠಾಕೂರ್ ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಮುಂಬೈ ತಂಡ ರಾಜಸ್ಥಾನವನ್ನು 67 ರನ್‌ಗಳಿಂದ ಮಣಿಸಿತು.

ಚೆನ್ನೈನಲ್ಲಿ ನಡೆದ ಪಂದ್ಯಲ್ಲಿ ಲೆಗ್ ಸ್ಪಿನ್ನರ್ ದಿಕ್ಷಾಂಶು ನೇಗಿ ಅವರ ದಾಳಿಗೆ ನಲುಗಿದ ಮಿಜೋರಾಂ ತಂಡ ಉತ್ತ-ರಾಖಂಡಕ್ಕೆ ಎಂಟು ವಿಕೆಟ್‌ಗಳಿಂದ ಮಣಿಯಿತು.


ಶ್ರೇಯಸ್ ಅಯ್ಯರ್


ಪ್ರೇರಕ್ ಮಂಕಡ್

ಸಂಕ್ಷಿಪ್ತ ಸ್ಕೋರು: ಸೌರಾಷ್ಟ್ರ: 50 ಓವರ್‌ಗಳಲ್ಲಿ 7ಕ್ಕೆ 388 (ಪ್ರೇರಕ್ ಮಂಕಡ್ 174, ವಿಶ್ವರಾಜ್ ಜಡೇಜ 50; ಜಸ್‌ಕರಣ್ ಸಿಂಗ್ 60ಕ್ಕೆ4); **ಚಂಡೀಗಢ:** 50 ಓವರ್‌ಗಳಲ್ಲಿ 7ಕ್ಕೆ 326 (ಅಂಕಿತ್ ಕೌಶಿಕ್ 54, ಮನನ್ ವೊಹ್ರಾ 50, ಗೌರವ್ ಗಂಭೀರ್ ಔಟಾಗದೆ 40). **ಫಲಿತಾಂಶ:** ಸೌರಾಷ್ಟ್ರಕ್ಕೆ 62 ರನ್‌ಗಳ ಜಯ.

ಮುಂಬೈ: 50 ಓವರ್‌ಗಳಲ್ಲಿ 7ಕ್ಕೆ 317 (ಶ್ರೇಯಸ್ ಅಯ್ಯರ್ 116, ಯಶಸ್ವಿ ಜೈಸ್ವಾಲ್ 38; ಶುಭಂ ಶರ್ಮಾ 59ಕ್ಕೆ3, ಅಭಿಮನ್ಯು ಲಾಂಬ 66ಕ್ಕೆ2); **ರಾಜಸ್ಥಾನ:** 42.2 ಓವರ್‌ಗಳಲ್ಲಿ 250 (ಮಹಿಪಾಲ್ ಲಮ್ರೊರ್ 76; ಶಾರ್ದೂಲ್ ಠಾಕೂರ್ 50ಕ್ಕೆ4, ಧವಳ್ ಕುಲಕರ್ಣಿ 26ಕ್ಕೆ3). **ಫಲಿತಾಂಶ:** ಮುಂಬೈಗೆ 67 ರನ್‌ಗಳ ಜಯ.

ಮಿಜೋರಾಂ: 38.3 ಓವರ್‌ಗಳಲ್ಲಿ 117 (ತರುವರ್ ಕೊಹ್ಲಿ 62, ಕೆ.ಬಿ.ಪವನ್ 28; ದಿಕ್ಷಾಂಶು ನೇಗಿ 21ಕ್ಕೆ6); **ಉತ್ತರಾಖಂಡ:** 10.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 118 (ಕಮಲ್ ಸಿಂಗ್ ಔಟಾಗದೆ 40, ಕುನಾಲ್ ಚಂಡೇಲ 58). **ಫಲಿತಾಂಶ:** ಉತ್ತರಾಖಂಡಕ್ಕೆ 8 ವಿಕೆಟ್‌ಗಳ ಗೆಲುವು.


ನಗರದಲ್ಲಿ ಶನಿವಾರ ನಡೆದ ಬೆಂಗಳೂರು ರೇಸ್‌ನಲ್ಲಿ ಗೆದ್ದ ಕುದುರೆ ಕೆವಾಲಿನಿಯ ತರಬೇತುದಾರ ಇರ್ಫಾನ್ ಘಟಾಲ ಅವರಿಗೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸ್ಮಾರಕ ಟ್ರೋಫಿಯನ್ನು ಪ್ರಮೋದಾದೇವಿ ಒಡೆಯರ್ ಪ್ರದಾನ ಮಾಡಿದರು. ಬೆಂಗಳೂರು ಟರ್ಫ್ ಕ್ಲಬ್ ವ್ಯವಸ್ಥಾಪನಾ ಸಮಿತಿ ಸದಸ್ಯ ಜೆ.ಶಿವಕುಮಾರ್, ಅಧ್ಯಕ್ಷ ಡಿ.ವಿನೋದ್ ಶಿವಪ್ಪ, ವಿ.ಹರಿಮೋಹನ್ ನಾಯ್ಡು, ರಾಜೀವ್ ಹಾಗೂ ಶಿವಕುಮಾರ್ ಖೇಣಿ ಇದ್ದಾರೆ –ಪ್ರಜಾವಾಣಿ ಚಿತ್ರ

ಟೇಬಲ್ ಟೆನಿಸ್: ಮುಖ್ಯ ಸುತ್ತಿಗೆ ತೃಪ್ತಿ, ಸಾನ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ತೃಪ್ತಿ ಪುರೋಹಿತ್ ಮತ್ತು ಸಾನ್ವಿ ಮಂಡೇಕರ್, ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕಿಯರ ಸಬ್ ಜೂನಿಯರ್ ಮತ್ತು ಕೆಡೆಟ್ ವಿಭಾಗದ ಮುಖ್ಯ ಸುತ್ತು ಪ್ರವೇಶಿಸಿದರು.

ದೇಶ್ನಾ ವಂಶಿಕಾ, ನಿಹಾರಿಕಾ ಮತ್ತು ಸಹನಾಮೂರ್ತಿ ಕೂಡ ಸಬ್ ಜೂನಿಯರ್ ವಿಭಾಗದ ಮುಖ್ಯ ಸುತ್ತಿಗೆ ಲಗ್ಗೆ ಇಟ್ಟರು.

ಅರ್ಹತಾ ಸುತ್ತಿನಲ್ಲಿ ತೃಪ್ತಿ ಪುರೋಹಿತ್ ಉತ್ತರಪ್ರದೇಶದ ಕೆ.ದಿಶಾ ವಿರುದ್ಧ ಮತ್ತು ಪಂಜಾಬ್‌ನ ಏಕ್ತಾ ವಿರುದ್ಧ ಜಯ ಗಳಿಸಿದರು. ದೇಶ್ನಾ ಕೇರಳದ ಕೃಷ್ಣಾ ಸ್ಮೃತಿ ವಿರುದ್ಧ ಹಾಗೂ ಜಾರ್ಖಂಡ್‌ನ ರಚಿತಾ ಡೇ ವಿರುದ್ಧ ಗೆದ್ದರು.

ನಿಹಾರಿಕಾ ತೆಲಂಗಾಣದ ಮರ್ಸಿ ಅವರನ್ನು ಮತ್ತು ಪಶ್ಚಿಮ ಬಂಗಾಳದ ದೇಶುತಾ ಡೇ ಅವರನ್ನು ಸೋಲಿಸಿದರು. ಸಹನಾ ಮೂರ್ತಿ ರಾಜಸ್ಥಾನದ ಅನನ್ಯ ಸಿನ್ಹಾ ವಿರುದ್ಧ ಮತ್ತು ತಮಿಳುನಾಡಿನ ಅಮೃತಾ ವಿರುದ್ಧ ಗೆಲುವು ಸಾಧಿಸಿದರು.

ಕೆಡೆಟ್ ವಿಭಾಗದಲ್ಲಿ ಸಾನ್ವಿ ಮಹಾರಾಷ್ಟ್ರದ ಸ್ವರ ವಿರುದ್ಧ, ತೆಲಂಗಾಣದ ಭುವನಿಧಾ ವಿರುದ್ಧ ಮತ್ತು ರಾಜಸ್ಥಾನದ ಭೂಮಿ ವಿರುದ್ಧ ಅಮೋಘ ಜಯ ಗಳಿಸಿ ಮುಖ್ಯ ಸುತ್ತು ಪ್ರವೇಶಿಸಿದರು.

ಮೊಟೇರಾ ಅಂಗಣದ ಕುರಿತ ಟೀಕೆಗೆ ಭಾರತದ ಆಫ್ ಸ್ಪಿನ್ನರ್ ತಿರುಗೇಟು

ಒಳ್ಳೆಯ ಕ್ರಿಕೆಟ್ ಪಿಚ್ ಯಾವುದು: ಅಶ್ವಿನ್

ಪ್ರಜಾವಾಣಿ ವಾರ್ತೆ

ಅಹಮದಾಬಾದ್: 'ಒಳ್ಳೆಯ ಕ್ರಿಕೆಟ್ ಪಿಚ್ ಅಂದರೆ ಯಾವುದು? ಅದು ಹೇಗಿರುತ್ತೆ?'–

ಭಾರತ ಕ್ರಿಕೆಟ್ ತಂಡದ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಪತ್ರಕರ್ತರಿಗೆ ಕೇಳಿದ ಮರುಪ್ರಶ್ನೆ ಇದು.

ಹೋದ ಗುರುವಾರ ಮೊಟೇರಾ ಅಂಗಳದಲ್ಲಿ ಇಂಗ್ಲೆಂಡ್ ಎದುರಿನ ಹಗಲು ರಾತ್ರಿ ಪಂದ್ಯವು ಎರಡೇ ದಿನದಲ್ಲಿ ಮುಗಿದಿತ್ತು. ಅದರಿಂದಾಗಿ ಇಂಗ್ಲೆಂಡ್‌ನ ಕೆಲವು ಮಾಧ್ಯಮಗಳು ಮತ್ತು ಮಾಜಿ ಕ್ರಿಕೆಟಿಗರು ಪಿಚ್ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಟೆಸ್ಟ್ ಕ್ರಿಕೆಟ್‌ಗೆ ಸೂಕ್ತವಲ್ಲದ ಪಿಚ್ ಎಂದು ಟೀಕಿಸಿದರು.

ಈ ಟೀಕೆಗಳ ಕುರಿತು ಅಶ್ವಿನ್ ಶುಕ್ರವಾರ ಸರಣಿ ಟ್ವೀಟ್ ಮಾಡಿದ್ದರು.

ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಈ ವಿಷಯದ ಕುರಿತು,'ಮೂರನೇ ಪಂದ್ಯ ನಡೆದ ಮೊಟೇರಾದ ಪಿಚ್ ಟೆಸ್ಟ್ ಕ್ರಿಕೆಟ್‌ಗೆ ಯೋಗ್ಯವೇ' ಎಂದು ಬ್ರಿಟಿಷ್ ಪತ್ರಕರ್ತರೊಬ್ಬರು ಪ್ರಶ್ನೆ ಕೇಳಿದರು.

'ಅದೇ ಪ್ರಶ್ನೆಯನ್ನು ನಾನು ನಿಮಗೆ ಮರಳಿಕೇಳುತ್ತೇನೆ. ಉತ್ತಮ ಕ್ರಿಕೆಟ್ ಅಂಗಣವೆಂದರೆ ಯಾವುದು?' ಎಂದರು.

ಅದಕ್ಕೆ ಪತ್ರಿಕ್ರಿಯಿಸಿದ ಮಾಧ್ಯ-ಮಪ್ರತಿನಿಧಿಯು, 'ಬ್ಯಾಟ್ ಮತ್ತು ಚೆಂಡಿನ ನಡುವೆ ಉತ್ತಮ ಪೈಪೋಟಿ ಏರ್ಪಡುವಂತಹ ಪಿಚ್ ಆಗಿದೆಯೇ ಇದು' ಎಂದರು.


ಆರ್. ಅಶ್ವಿನ್

'ಒಳ್ಳೆಯ ಪಿಚ್ ಹೇಗಿರಬೇಕು ಎಂಬುದರ ಕುರಿತು ಯಾರು ವ್ಯಾಖ್ಯಾನ ಬರೆದಿದ್ದಾರೆ? ಟೆಸ್ಟ್ ಪಂದ್ಯದ ಮೊದಲ ದಿನ ವೇಗದ ಬೌಲರ್‌ಗಳಿಗೆ ನೆರವು, ನಂತರ ಬ್ಯಾಟಿಂಗ್‌ಗೆ ಅನುಕೂಲ ಮತ್ತು ಕೊನೆಯ ಎರಡು ದಿನ ಸ್ಪಿನ್ ಬೌಲಿಂಗ್ ಸ್ನೇಹಿ ಆಗಿ ಇರಬೇಕೆಂಬ ನಿಯಮವಿದೆಯೇ? ಇಂತಹ ಇಲ್ಲದ ನಿಯಮಗಳ ಮನೋಭಾವದಿಂದ ಹೊರಬರಬೇಕಿದೆ. ಇದರ ಬಗ್ಗೆ ಹೆಚ್ಚು ಮಾತನಾಡುವುದು ಸರಿಯಲ್ಲ. ನಿಮಗೆ ಬೇಕಾದಂತಹ ಬಣ್ಣವನ್ನು ಬಳಿದು ಚಿತ್ರ ರಚಿಸಿ' ಎಂದು ಅಶ್ವಿನ್ ವ್ಯಂಗ್ಯವಾಗಿ ಹೇಳಿದರು.

'ಇದು ಯೋಗ್ಯ ಪಿಚ್ ಹೌದೋ ಅಲ್ಲವೋ ಎಂದು ನೀವು ಪ್ರಶ್ನಿಸುತ್ತಿದ್ದೀರಿ. ಆದರೆ, ಇಂಗ್ಲೆಂಡ್ ತಂಡದ ಯಾವುದೇ ಆಟಗಾರರು ಈ ಬಗ್ಗೆ ಚಕಾರವೆತ್ತಿಲ್ಲ. ಅವರು ತಮ್ಮ ಆಟದ ಮಟ್ಟವನ್ನು ವರ್ಧಿಸಿಕೊಳ್ಳುವತ್ತ ಪ್ರಯತ್ನಿಸುತ್ತಿದ್ದಾರೆ. ಅವರು ಉತ್ತಮ ಸ್ಪರ್ಧೆ ಒಡ್ಡುವ ಪ್ರಯತ್ನದಲ್ಲಿದ್ದಾರೆ' ಎಂದರು.

'ಮುಂದಿನ ಪಂದ್ಯದಲ್ಲಿಯೂ ಇಂತಹದೇ ಪಿಚ್ ಇರುವ ನಿರೀಕ್ಷೆ ನಿಮ್ಮದಾಗಿದೆಯೇ' ಎಂಬ ಪ್ರಶ್ನೆಗೆ ಉತ್ತರಿಸಿದ ಅಶ್ವಿನ್, 'ನೀವೇನು ನಿರೀಕ್ಷಿಸುತ್ತಿದ್ದೀರೊ ಗೊತ್ತಿಲ್ಲ. ಆದರೆ ಮುಂದಿನ ಪಂದ್ಯದಲ್ಲಿ ಉತ್ತಮವಾದ ಕ್ರಿಕೆಟ್ ಆಟ ನಡೆಯುವ ನಿರೀಕ್ಷೆ ನನಗಿದೆ' ಎಂದರು.

'ನಮ್ಮ ತಂಡವು ಮೂರು ಪಿಂಕ್ ಬಾಲ್ ಟೆಸ್ಟ್‌ಗಳನ್ನು ಆಡಿದೆ. ಅವೆಲ್ಲವೂ ಮೂರು ದಿನಗಳೊಳಗೆ ಮುಕ್ತಾಯವಾಗಿವೆ. ಆದರೆ ಪಿಂಕ್‌ಬಾಲ್ ಟೆಸ್ಟ್ ಆಡಿದ ಅನುಭವ ಇಲ್ಲದವರೇ ಪಿಚ್‌ಗಳ ಕುರಿತು ಹೆಚ್ಚು ಮಾತನಾ-ಡುತ್ತಿದ್ದಾರೆ. ಅವರಿಗೆ ಆಟದೊಳಗಿನ ವಿಷಯಅರ್ಥವಾಗುವುದಿಲ್ಲ' ಎಂದರು.

ಐಸಿಸಿ ಕೆಂಗಣ್ಣಿಂದ ಪಾರಾಗಲಿದೆಯೇ ಮೊಟೇರಾ?

ನವದೆಹಲಿ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಕೊನೆಯ ಟೆಸ್ಟ್ ಪಂದ್ಯಕ್ಕೆ ಬ್ಯಾಟಿಂಗ್ ಪಿಚ್ ಸಿದ್ಧಗೊಳಿಸುವ ಮೂಲಕ ಅಂತ-ರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಕೆಂಗಣ್ಣಿನಿಂದ ಬಿಸಿಸಿಐ ಪಾರಾಗುವ ಸಾಧ್ಯತೆ ಇದೆ.

ಇಲ್ಲಿ ನಡೆದ ಮೂರನೇ ಟೆಸ್ಟ್ ಎರಡನೇ ದಿನವೇ ಮುಕ್ತಾಯವಾಗಿತ್ತು. ಆದ್ದರಿಂದ ಇಲ್ಲಿಯ ಪಿಚ್ ಕುರಿತು ಅಪಾರ ಟೀಕೆಗಳು ಕೇಳಿಬಂದಿದ್ದವು. ಈ ಹಿನ್ನೆಲೆಯಲ್ಲಿ ಪಿಚ್ ಕುರಿತು ಐಸಿಸಿಯು ಕ್ರಮ ಕೈಗೊಳ್ಳುವ ನಿರೀಕ್ಷೆ ಇತ್ತು.

'ಮುಂದಿನ ಪಂದ್ಯಕ್ಕೆ ತುಸು ಕಠಿಣ ಮೇಲ್ಮೈನ ಪಿಚ್ ಒದಗಿಸಲು ಸಿದ್ಧತೆ ಮಾಡಲಾಗುತ್ತಿದೆ. ಚೆಂಡು ಹದವಾಗಿ ಪುಟಿಯುವ ಮತ್ತು ಬ್ಯಾಟ್ಸ್‌ಮ-ನ್‌ಗಳಿಗೆ ಯೋಗ್ಯವಾಗುವ ಪಿಚ್ ಆಗುವ ಸಾಧ್ಯತೆ ಇದೆ' ಎಂದು ಬಿಸಿಸಿಐನ ಉನ್ನತ ಅಧಿಕಾರಿ-ಯೊಬ್ಬರು ತಿಳಿಸಿದ್ದಾರೆ.

ನಾಲ್ಕನೇ ಟೆಸ್ಟ್‌ಗೆ ಬೂಮ್ರಾ ಅಲಭ್ಯ


ಜಸ್‌ಪ್ರೀತ್ ಬೂಮ್ರಾ

ಅಹಮದಾಬಾದ್(ಪಿಟಿಐ): ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರು ವೈಯಕ್ತಿಕ ಕಾರಣಗಳಿಂದಾಗಿ ಮನೆಗೆ ಮರಳಿದ್ದಾರೆ. ಅವರು ಮೊಟೇರಾದಲ್ಲಿ ನಡೆಯಲಿರುವ ನಾಲ್ಕನೇ ಟೆಸ್ಟ್‌ನಲ್ಲಿ ಆಡುವುದಿಲ್ಲ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

'ಮನೆಗೆ ಮರಳು ಬೂಮ್ರಾ ತಂಡದ ವ್ಯ-ವಸ್ಥಾಪಕರಿಗೆ ಮನವಿ ಸಲ್ಲಿಸಿದ್ದರು. ವೈಯಕ್ತಿಕ ಕಾರಣಗಳಿಗಾಗಿ ತೆರಳುತ್ತಿರುವುದಾಗಿ ತಿಳಿಸಿದ್ದಾರೆ. ಆದ್ದರಿಂದ ಅವರಿಗೆ ಅನುಮತಿ ನೀಡಲಾಗಿದೆ. ಅವರ ಬದಲಿಗೆ ತಂಡಕ್ಕೆ ಯಾರನ್ನೂ ಸೇರ್ಪಡೆ ಮಾಡಿಕೊಂಡಿಲ್ಲ' ಎಂದು ಶನಿವಾರ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಟಿ20 ಮತ್ತು ಏಕದಿನ ಕ್ರಿಕೆಟ್ ಸರಣಿಗಳಿಂದ ಬೂಮ್ರಾ ಅವರಿಗೆ ಈ ಮೊದಲೇ ವಿಶ್ರಾಂತಿ ನೀಡಲಾಗಿತ್ತು. ಬೌಲರ್‌ಗಳ ಕಾರ್ಯಭಾರ ನಿರ್ವಹಣೆಯ ಅಂಗವಾಗಿ ಈ ಕ್ರಮ ಕೈಗೊಳ್ಳಲಾಗಿ-ತ್ತು. ಮಾರ್ಚ್ 4ರಿಂದ ನಡೆಯಲಿರುವ ಕೊನೆಯ ಟೆಸ್ಟ್‌ನಲ್ಲಿ ಬೂಮ್ರಾ ಬದಲಿಗೆ ಮೊಹಮ್ಮದ್ ಸಿರಾಜ್ ಕಣಕ್ಕಿಳಿಯುವ ಸಾಧ್ಯತೆ ಇದೆ.

ಗಫ್ ಮೆಚ್ಚುಗೆ

ಲಂಡನ್ (ಪಿಟಿಐ): ಈಗಿನ ಭಾರತ ತಂಡವು 90ರ ದಶಕದಲ್ಲಿದ್ದ ಆಸ್ಟ್ರೇಲಿಯಾ ತಂಡದಂತೆ ಇದೆ ಎಂದು ಇಂಗ್ಲೆಂಡ್ ತಂಡದ ಮಾಜಿ ಬೌಲರ್ ಡರೆನ್ ಗಫ್ ಅಭಿಪ್ರಾಯ-ಪಟ್ಟಿದ್ದಾರೆ. 'ಸದ್ಯ ವಿರಾಟ್ ಕೊಹ್ಲಿ ನೇತೃತ್ವದ ತಂಡದಲ್ಲಿ 90ರ ದಶಕದಲ್ಲಿದ್ದ ಆಸ್ಟ್ರೇಲಿಯಾ ಆಟಗಾರರ ಮನೋಭಾವ ಕಾಣುತ್ತಿದೆ. ಶತಾಯ ಗತಾಯ ಜಯಿಸುವ ಮನೋಭಾವ ಅದು' ಎಂದು ಪಿಎ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮಹಿಳಾ ಹಾಕಿ ತಂಡಕ್ಕೆ ಆಘಾತ

ಡಸೆಲ್‌ಡಾರ್ಫ್ (ಪಿಟಿಐ): ಭರವಸೆಯಿಂದ ಜರ್ಮನಿ ಪ್ರವಾಸ ಕೈಗೊಂಡಿರುವ ಭಾರತ ಮಹಿಳಾ ಹಾಕಿ ತಂಡ ಮೊದಲ ಪಂದ್ಯದಲ್ಲೇ ಆಘಾತ ಅನುಭವಿಸಿದೆ. ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಜರ್ಮನಿ ವಿರುದ್ಧ ಶನಿವಾರ ನಡೆದ ಹಣಾಹಣಿಯಲ್ಲಿ ಭಾರತ 0–5ರಿಂದ ಸೋಲು ಕಂಡಿತು.

10 ಮತ್ತು 14ನೇ ನಿಮಿಷಗಳಲ್ಲಿ ಗೋಲು ಗಳಿಸಿದ ಫಾರ್ವರ್ಡ್ ಆಟಗಾರ್ತಿ ಪಿಯಾ ಮಾರ್ಟೆನ್ಸ್ ಜರ್ಮನಿಗೆ ಆರಂಭದಲ್ಲೇ ಮುನ್ನಡೆ ಗಳಿಸಿಕೊಟ್ಟರು.

ಲೀನಾ ಮೈಕೆಲ್ 20ನೇ ನಿಮಿಷದಲ್ಲಿ, ಪೌಲಿನ್ ಹೆನ್ಸ್ 28ನೇ ನಿಮಿಷದಲ್ಲಿ ಮತ್ತು ಲಿಸಾ ಆಲ್ಟೆನ್‌ಬರ್ಗ್ 41ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿದರು.

ಮೊದಲ ಕ್ವಾರ್ಟರ್‌ನಲ್ಲಿ ಎರಡು ಗೋಲುಗಳ ಮುನ್ನಡೆ ಗಳಿಸಿದ ಜರ್ಮನಿ ಎರಡನೇ ಕ್ವಾರ್ಟರ್‌ನ-ಲ್ಲಿ ಇನ್ನಷ್ಟು ಆಕ್ರಮಣಕಾರಿ ಆಟಕ್ಕೆ ಅಣಿಯಾಯಿತು.

ಮುಂಬೈ ರೇಸ್

'ಗಿನ್ಸ್‌ಬರ್ಗ್' ಗೆಲ್ಲುವ ನಿರೀಕ್ಷೆ

'ವೈ.ಎಂ ಚೌಧ್ರಿ ಟ್ರೋಫಿ' ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆ-ಯಾಗಿದ್ದು ಈ ರೇಸ್‌ನಲ್ಲಿ 'ಗಿನ್ಸ್‌ಬರ್ಗ್' ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 3.30ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ದಿ ಬಾವಾಜಿ 2, ಟಚ್ ಆಫ್ ಫೈತ್ 6, ಸೊಫಿಸ್ಟೊಕ್ರಾಟ್ 1

2ನೇ ರೇಸ್: ವಿಕ್ಟೋರಿಯಸ್ ಸೆರ್ಮನ್ 5, ಅಗಸ್ಟಸ್ ಸೀಸರ್ 1, ಫ್ಲೈಯಿಂಗ್ ವಿಸಿಟ್ 3

3ನೇ ರೇಸ್: ರಾಮ್‌ಬಂಕ್ಷಿಯಸ್ 7, ಮೌಂಟ್ ಮೊರಯ್ಯ 2, ಡ್ಯಾಡಿಸ್ ಪ್ರೈಡ್ 3

4ನೇ ರೇಸ್: ಮಿಸ್ ಬಾಸ್ 1, ಬೆಲೆನಸ್ 3, ವೈಲ್ಡ್ ಫೈರ್ 2

5ನೇ ರೇಸ್: ಗಿನ್ಸ್‌ಬರ್ಗ್ 7, ಫ್ಲೈಯಿಂಗ್ ಸ್ಪಾರ್ಟ್ಸ್‌ಮ್ಯಾನ್ 2, ಮೆಡೊರಾ 8

6ನೇ ರೇಸ್: ವಿನ್ಸೆನ್‌ಜೊ 6, ಫರರ್ 7, ಕ್ವಾರೆನ್ಸಿಯ 5

ಉತ್ತಮ ಬೆಟ್: ದಿ ಬಾವಾಜಿ

ಜಾಕ್‌ಪಾಟ್	ಟ್ರಿಬಲ್
3,4,5,6	4,5,6

ಪುಣೆ: ಏಕದಿನ ಪಂದ್ಯಗಳಿಗೆ ಪ್ರವೇಶವಿಲ್ಲ

ಪುಣೆ (ಪಿಟಿಐ): ಭಾರತ ಮತ್ತು ಇಂಗ್ಲೆಂಡ್ ನಡುವಣ ಪುಣೆಯಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ಪಂದ್ಯಗಳಿಗೆ ಪ್ರೇಕ್ಷಕರಿಗೆ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಮಹಾರಾಷ್ಟ್ರ ರಾಜ್ಯ ಕ್ರಿಕೆಟ್ ಸಂಸ್ಥೆ ತಿಳಿಸಿದೆ.

ಪುಣೆಯ ಎಂಸಿಎ ಕ್ರೀಡಾಂಗಣ-ದಲ್ಲಿ ಮಾರ್ಚ್ 23 ರಿಂದ 28ವರೆಗೆ ಮೂರು ಏಕದಿನ ಪಂದ್ಯಗಳನ್ನು ಆಯೋಜಿಸಲಾಗಿದೆ.

'ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿವೆ. ಆದ್ದರಿಂದ ಪಂದ್ಯಗಳನ್ನು ಖಾಲಿ ಕ್ರೀಡಾಂಗಣದಲ್ಲಿ ನಡೆಸಲು ನಿರ್ಧರಿಸಲಾಗಿದೆ' ಎಂದು ಎಂಸಿಎ ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕ ತಂಡಕ್ಕೆ ರಕ್ಷಿತಾ ನಾಯಕಿ

ಬೆಂಗಳೂರು: ರಕ್ಷಿತಾ ಅವರನ್ನು ಕರ್ನಾಟಕ ಮಹಿಳಾ ಕ್ರಿಕೆಟ್ ತಂಡದ ನಾಯಕಿಯನ್ನಾಗಿ ನೇಮಕ ಮಾಡಲಾಗಿದೆ. ಮಾರ್ಚ್ 13ರಿಂದ 21ರವರೆಗೆ ಚೆನ್ನೈನಲ್ಲಿ ನಡೆಯಲಿರುವ ರಾಷ್ಟ್ರೀಯ ಸೀನಿಯರ್ ಮಹಿಳಾ ಕ್ರಿಕೆಟ್ ಟೂರ್ನಿಯಲ್ಲಿ ತಂಡವು ಆಡಲಿದೆ.

ತಂಡ: ರಕ್ಷಿತಾ (ನಾಯಕಿ), ವೇದಾ ಕೃಷ್ಣಮೂರ್ತಿ (ಉಪನಾಯಕಿ), ದಿವ್ಯ-ಜ್ಞಾನಾನಂದ, ಶೋಭಾ ಸತೀಶ್, ವಿ.ಆರ್. ವನಿತಾ, ಪ್ರತ್ಯೂಷಾ ಕುಮಾರ್ (ವಿಕೆಟ್‌ಕೀಪರ್), ಸಂಜನಾ ಬಾಟ್ನಿ (ವಿಕೆಟ್‌ಕೀಪರ್), ವೃಂದಾ ದಿನೇಶ್, ಆಕಾಂಕ್ಷಾ ಕೊಹ್ಲಿ, ನಿಕ್ಕಿ ಪ್ರಸಾದ್, ರಾಮೇಶ್ವರಿ ಗಾಯಕವಾಡ, ಪುಷ್ಪಾ ಕಿರೇಸೂರ, ಸಹನಾ ಪವಾರ್, ವಿ. ಚಂದು, ಅನಘಾ ಮುರಳಿ, ಶಿಶಿರಾ, ಪ್ರೇರಣಾ, ಮಿಥಿಲಾ ವಿನೋದ್, ರೋಷನಿ ಕಿರಣ್, ಚಾಂದಸಿ ಕೃಷ್ಣ ಮೂರ್ತಿ, ಪೂಜಾಕುಮಾರಿ, ಪೂಜಾ. **ಕೋಚ್:** ಮಮತಾ ಮಾಬೆನ್, ಲಕ್ಷ್ಮೀ ಹರಿಹರನ್, **ಮ್ಯಾನೇಜರ್:** ರಚೆಲ್ ವಿನೋದ್ ಶೆಟ್ಟಿ, **ಫಿಸಿಯೊ:** ಎನ್. ಸಿಂಧು, **ಟ್ರೇನರ್:** ಹಿತೈಷಿ.

ದಕ್ಷಿಣ ಆಫ್ರಿಕಾ ಎದುರಿನ ಸರಣಿಗೆ ಭಾರತ ತಂಡ; ಮಿಥಾಲಿ ರಾಜ್ ನಾಯಕಿ

ಬೆಂಗಳೂರಿನ ಪ್ರತ್ಯೂಷಾ, ಮೋನಿಕಾಗೆ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸಿ. ಪ್ರತ್ಯೂಷಾ ಮತ್ತು ಮೋನಿಕಾ ಪಟೇಲ್ ಅವರು ಭಾರತ ಮಹಿಳಾ ಕ್ರಿಕೆಟ್ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ಮಾರ್ಚ್ ಏಳರಿಂದ ಲಖನೌನಲ್ಲಿ ದಕ್ಷಿಣ ಆಫ್ರಿಕಾ ಮಹಿಳಾ ತಂಡದ ವಿರುದ್ಧ ನಡೆಯಲಿರುವ ಏಕದಿನ ಮತ್ತು ಟಿ20 ಸರಣಿಗಳಲ್ಲಿ ಅವರು ಆಡಲಿದ್ದಾರೆ.

ಏಕದಿನ ಕ್ರಿಕೆಟ್ ತಂಡಕ್ಕೆ ಮಿಥಾಲಿ ರಾಜ್ ಮತ್ತು ಟಿ20 ಬಳಗಕ್ಕೆ ಹರ್ಮನ್‌ಪ್ರೀತ್ ಕೌರ್ ನಾಯಕತ್ವ ವಹಿಸಲಿದ್ದಾರೆ.

ಅನುಭವಿ ಮಧ್ಯಮವೇಗಿ ಶಿಖಾ ಪಾಂಡೆ ಮತ್ತು ವಿಕೇಟ್‌ಕೀಪರ್ ತಾನ್ಯಾ ಭಾಟಿಯಾ ಅವರನ್ನು ಆಯ್ಕೆ ಮಾಡಿಲ್ಲ. ಕೀಪರ್ ಶ್ವೇತಾ ವರ್ಮಾ, ಸುಷ್ಮಾ ವರ್ಮಾ ಅವರಿಗೆ ಸ್ಥಾನ ನೀಡಲಾಗಿದೆ.

ಶೆಫಾಲಿ ವರ್ಮಾ ಟಿ20 ತಂಡದ-ಲ್ಲಿದ್ದಾರೆ. ವಿಜಯಪುರದ ರಾಜೇಶ್ವರಿ ಎರಡೂ ತಂಡಗಳಲ್ಲಿ ಸ್ಥಾನ ಗಳಿಸಿದ್ದಾರೆ.


ಸಿ. ಪ್ರತ್ಯೂಷಾ


ಮೋನಿಕಾ ಪಟೇಲ್

ಹೆರಾನ್ಸ್ ಹುಡುಗಿಯರು: ಎಡಗೈ ಮಧ್ಯಮವೇಗಿ ಮೋನಿಕಾ ಮತ್ತು ಆಲ್‌ರೌಂಡರ್ ಪ್ರತ್ಯೂಷಾ ಬೆಂಗಳೂರಿನ ಹೆರಾನ್ಸ್ ಕ್ಲಬ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ.

'ರಾಷ್ಟ್ರೀಯ ತಂಡದಲ್ಲಿ ಆಡುವ ಅವಕಾಶವು ಇದೇ ಮೊದಲ ಬಾರಿಗೆ ಪ್ರತ್ಯೂಷಾ ಹಾಗೂ ಮೋನಿಕಾಗೆ ಲಭಿಸಿದೆ. ರಾಜೇಶ್ವರಿ ಈಗಾಗಲೇ ಗಮನ ಸೆಳೆದಿದ್ದಾರೆ. ಅವರು ಇನ್ನೂ ಉತ್ತಮ ಸಾಧನೆ ಮಾಡುವುದರಲ್ಲಿ ಸಂದೇಹವೇ ಇಲ್ಲ. ಮಹಿಳಾ ಕ್ರಿಕೆಟ್‌ಗೆ ಉತ್ತೇಜನ ಸಿಗಬೇಕು. ಈ ರೀತಿ ಅವಕಾಶಗಳು ಸಿಕ್ಕಾಗ ಉಳಿದವರಿಗೂ ಪ್ರೇರಣೆ-ಯಾಗುತ್ತದೆ' ಎಂದು ಹೆರಾನ್ಸ್ ಕ್ಲಬ್‌ನ ಹಿರಿಯ ಕೋಚ್ ಕೆ. ಮುರಳೀಧರ 'ಪ್ರಜಾವಾಣಿ'ಗೆ ಹೇಳಿದರು.

ತಂಡಗಳು: ಏಕದಿನ ಕ್ರಿಕೆಟ್: ಮಿಥಾಲಿ ರಾಜ್ (ನಾಯಕಿ), ಸ್ಮೃತಿ ಮಂದಾನಾ, ಜೆಮಿಮಾ ರಾಡ್ರಿಗಸ್, ಪೂನಮ್ ರಾವತ್, ಪ್ರಿಯಾ ಪೂನಿಯಾ, ಯಷ್ಟಿಕಾ ಭಾಟಿಯಾ, ಹರ್ಮನ್‌ಪ್ರೀತ್ ಕೌರ್, ದೀಪ್ತಿ ಶರ್ಮಾ, ಸುಷ್ಮಾ ವರ್ಮಾ (ವಿಕೆಟ್‌ಕೀಪರ್), ಶ್ವೇತಾ ವರ್ಮಾ (ವಿಕೆಟ್‌ಕೀಪರ್), ರಾಧಾ ಯಾದವ್, ರಾಜೇಶ್ವರಿ ಗಾಯಕವಾಡ್, ಜೂಲನ್ ಗೋಸ್ವಾಮಿ, ಮಾನಸಿ ಜೋಶಿ, ಪೂನಂ ಯಾದವ್, ಸಿ. ಪ್ರತ್ಯೂಷಾ, ಮೋನಿಕಾ ಪಟೇಲ್.


ರಾಜೇಶ್ವರಿ ಗಾಯಕವಾಡ್

ಟಿ20 ತಂಡ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನಾ (ಉಪನಾಯಕಿ), ಶಫಾಲಿ ವರ್ಮಾ, ಜೆಮಿಮಾ ರಾಡ್ರಿಗಸ್, ದೀಪ್ತಿ ಶರ್ಮಾ, ರಿಚಾ ಘೋಷ್, ಹರ್ಲಿನ್ ಡಿಯೋಲ್, ಸುಷ್ಮಾ ವರ್ಮಾ (ವಿಕೆಟ್‌ಕೀಪರ್), ನುಝ್ಹಾತ್ ಪರ್ವೀನ್ (ವಿಕೆಟ್‌ಕೀಪರ್), ಆಯುಷಿ ಸೋನಿ, ಅರುಂಧತಿ ರೆಡ್ಡಿ, ರಾಧಾ ಯಾದವ್, ರಾಜೇಶ್ವರಿ ಗಾಯಕವಾಡ್, ಪೂನಂ ಯಾದವ್, ಮಾನಸಿ ಜೋಶಿ, ಮೋನಿಕಾ ಪಟೇಲ್, ಸಿ. ಪ್ರತ್ಯೂಷಾ, ಸಿಮ್ರನ್ ದಿಲ್ ಬಹಾದ್ದೂರ್.